ಭಾನುವಾರ, ಮೇ 7, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ವೆಬ್ ಸರಣಿಗಳ ಭರಾಟೆ, ಒಟಿಟಿ ಒಡ್ಡಿರುವ ಆಯ್ಕೆಗಳ ನಡುವೆ ಧಾರಾವಾಹಿಗಳ ಭವಿಷ್ಯವೇನು?

ರಾಜ್ಯವನ್ನು ಲೂಟಿ ಮಾಡಿದ್ದಾರೆ, ನಿಮ್ಮ ಉಳಿತಾಯವನ್ನೂ ಕದ್ದಿದ್ದಾರೆ!

	2014	2023
ಪೆಟ್ರೋಲ್	~~₹68~~	₹102
ಡೀಸೆಲ್	~~₹55~~	₹88
ಎಲ್‌ಪಿಜಿ	~~₹413~~	₹1105
ಕಡಲೆಕಾಯಿ ಎಣ್ಣೆ	~~₹80~~	₹180
ಅಡುಗೆ ಎಣ್ಣೆ	~~₹60~~	₹210
ಅಕ್ಕಿ	~~₹30~~	₹70
ತೊಗರಿ ಬೇಳೆ	~~₹70~~	₹130
ಉದ್ದಿನ ಬೇಳೆ	~~₹71~~	₹190
ಕಡಲೆಬೇಳೆ	~~₹90~~	₹116
ಸಕ್ಕರೆ	~~₹29~~	₹42
ಹಾಲು	~~₹28~~	₹39
ರಾಗಿ	~~₹20~~	₹45
ಜೋಳ	~~₹26~~	₹46
ಮೊಟ್ಟೆ	~~₹42~~	₹75
ಗೋಧಿ ಹಿಟ್ಟು	~~₹24~~	₹42
ಅರಿಶಿನ	~~₹13~~	₹35

ನಿಮ್ಮ ಕುಟುಂಬದ ಆದಾಯಕ್ಕೆ ಕೊಳ್ಳಿ ಇಟ್ಟಿದೆ ಡಬಲ್ ಇಂಜಿನ್ ಸರ್ಕಾರ.
ಡಬಲ್ ಇಂಜಿನ್ ಅಂದ್ರೆ ಡಬಲ್ ದ್ರೋಹ. ವಿವೇಚನೆಯಿಂದ ಆಯ್ಕೆ ಮಾಡಿ.

ಕಾಂಗ್ರೆಸ್‌ಗೆ ಮತ ನೀಡಿ.

ಕೈ ಬಟನ್ ಒತ್ತಿ ಕಾಂಗ್ರೆಸ್ ಗೆಲ್ಲಿಸಿ

ಗೃಹಲಕ್ಷ್ಮಿ — ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000

ಗೃಹ ಜ್ಯೋತಿ — ನಿಮ್ಮ ಮನೆಗೆ 200 ಯೂನಿಟ್ ವಿದ್ಯುತ್ ಪ್ರತಿ ತಿಂಗಳು ಉಚಿತ

ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ | ₹1500 ಡಿಪ್ಲೊಮಾ ಪದವೀಧರರಿಗೆ

ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು ತಲಾ 10kg ಅಕ್ಕಿ ಉಚಿತ

ಉಚಿತ ಪ್ರಯಾಣ ನಮ್ಮ ಪ್ರಮಾಣ — ಮಹಿಳೆಯರಿಗೆ ಬಸ್ ಸಂಚಾರ ಉಚಿತ

1. ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿನ ಜೆ.ಪಿ.ನಗರದಲ್ಲಿ ರೋಡ್ ಶೋ ವೇಳೆ ಜನರತ್ತ ಕೈಬೀಸಿದರು –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ. 2. ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ರಾಜಗೋಪಾಲ ರೆಡ್ಡಿ ಪರ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರು ವಸಂತಪುರದಲ್ಲಿ ಶನಿವಾರ ಪ್ರಚಾರ ನಡೆಸಿದರು 3. ಹುಬ್ಬಳ್ಳಿಯಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಸೋನಿಯಾ ಗಾಂಧಿ ಅವರಿಗೆ ಬಸವೇಶ್ವರ ಮೂರ್ತಿ ನೀಡಿ ಸನ್ಮಾನಿಸಲಾಯಿತು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತಿತರರು ಇದ್ದಾರೆ –ಪ್ರಜಾವಾಣಿ ಚಿತ್ರಗಳು

ಬೆಂಗಳೂರು: 26 ಕಿ.ಮೀ ಪ್ರಧಾನಿ ಮಿಂಚಿನ ಸಂಚಾರ • 13 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಚಾರ

ಮೋದಿ ಅಬ್ಬರದ ರೋಡ್ ಶೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣಾ ಪ್ರಚಾರ ಮುಕ್ತಾಯಕ್ಕೆ ಇನ್ನು ಎರಡು ದಿನಗಳು ಬಾಕಿ ಇರುವಾಗಲೇ ರಾಜಧಾನಿಯ 13 ವಿಧಾನಸಭಾ ಕ್ಷೇತ್ರಗಳಲ್ಲಿ ಭರ್ಜರಿ ರೋಡ್ ಶೋ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಪಕ್ಷದ ಹುರಿಯಾಳುಗಳ ಪರ ಅಲೆ ಎಬ್ಬಿಸುವ ಯತ್ನ ಮಾಡಿದರು. ಪ್ರಧಾನಿ ಸಾಗುವ ಮಾರ್ಗದ ಇಕ್ಕೆಲಗಳಲ್ಲೂ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರು, ನಾಗರಿಕರು ಜೈಕಾರ ಕೂಗಿದರು.

ಜೆ.ಪಿ.ನಗರದ ಸೋಮೇಶ್ವರ ಸಭಾ ಭವನದಿಂದ ಬೆಳಿಗ್ಗೆ 10.20ರ ಸುಮಾರಿಗೆ ಆರಂಭಗೊಂಡ ರೋಡ್ ಶೋ ಮಧ್ಯಾಹ್ನ 1.15 ರ ವೇಳೆಗೆ ಮಲ್ಲೇಶ್ವರದಲ್ಲಿ ಮುಕ್ತಾಯವಾಯಿತು. ರೋಡ್ ಶೋ ಸುಮಾರು 26 ಕಿ.ಮೀ.ಗಳಷ್ಟು ದೂರ ಕ್ರಮಿಸಿತು. ಮೋದಿ ಅವರನ್ನು ಹತ್ತಿರದಿಂದ ಕಣ್ತುಂಬಿಕೊಳ್ಳಲು ಒಂದರಿಂದ ಎರಡು ಗಂಟೆ ಮೊದಲೇ ಹಿರಿಯ ನಾಗರಿಕರು, ಮಹಿಳೆಯರು, ಮಕ್ಕಳು ಹಾದಿಯುದ್ದಕ್ಕೂ ಭಾರಿ ಸಂಖ್ಯೆಯಲ್ಲಿ ಸೇರಿದ್ದರು. ಅತ್ತಿತ್ತ ಕೈಬೀಸುತ್ತಾ ಹೂ ಚೆಲ್ಲುತ್ತಾ ಸಾಗಿದ ಮೋದಿಯವರು ಜನೋತ್ಸಾಹದ ಸಡಗರವನ್ನೂ ಕಂಡರು.

ಮೋದಿ ಅವರು ನಿಂತಿದ್ದ ತೆರೆದ ಜೀಪಿನ ಮೇಲೆ ಹೂವಿನ ಪಕಳೆಗಳನ್ನು ಎರಚಿ, 'ಭಾರತ್ ಮಾತಾಕೀ ಜೈ', 'ಮೋದಿ–ಮೋದಿ' ಎಂದು ಘೋಷಣೆಗಳನ್ನು ಕೂಗುತ್ತಾ ಜನ ಜೈಕಾರ ಹಾಕಿದರು. ಪ್ರಮುಖ ಸ್ಥಳಗಳಲ್ಲಿ ಕಲಾ ತಂಡಗಳೂ ತಮ್ಮ ಕಲಾ ಪ್ರಕಾರದ ಪ್ರದರ್ಶಿಸುವ ಮೂಲಕ ಮೋದಿಯವರನ್ನು ಸ್ವಾಗತಿಸಿದರು.

ರೋಡ್ ಶೋ ಜೆ.ಪಿ.ನಗರ, ಜಯನಗರ, ಸೌತ್ ಎಂಡ್ ಸರ್ಕಲ್, ಮಾಧವರಾವ್ ವೃತ್ತ, ರಾಮಕೃಷ್ಣ ಆಶ್ರಮ, ಉಮಾ ಥಿಯೇಟರ್, ಮೈಸೂರು ಸಿಗ್ನಲ್, ಟೋಲ್ ಗೇಟ್ ಸಿಗ್ನಲ್, ಗೋವಿಂದರಾಜ ನಗರ, ಮಾಗಡಿ ರೋಡ್ ಜಂಕ್ಷನ್, ಶಂಕರಮಠ ಸರ್ಕಲ್, ನವರಂಗ್, ಮಲ್ಲೇಶ್ವರ ಸರ್ಕಲ್ ಮೂಲಕ ಬಂದು ಸಂಪಿಗೆ ರಸ್ತೆಯ 18ನೇ ಅಡ್ಡ ರಸ್ತೆಯ ಜಂಕ್ಷನ್‌ನಲ್ಲಿ ಮುಕ್ತಾಯವಾಯಿತು.

ಜಯನಗರದ ರಾಘವೇಂದ್ರ ಸ್ವಾಮಿ ಮಠದಲ್ಲಿ ಮೊಕ್ಕಾಂ ಹೂಡಿದ್ದ ಮಂತ್ರಾಲಯದ ಸುಬುಧೇಂದ್ರತೀರ್ಥ ಸ್ವಾಮೀಜಿ, ರಾಮಕೃಷ್ಣಾಶ್ರಮ ದಲ್ಲಿ ಅಲ್ಲಿನ ಸ್ವಾಮೀಜಿಗಳು ಪ್ರಧಾನಿಯವರನ್ನು ನೋಡಿ ದೂರದಿಂದಲೇ ಆಶೀರ್ವದಿಸಿದರು. ಮೋದಿಯವರು ಎರಡೂ ಕಡೆ ಸ್ವಾಮೀಜಿಗಳಿಗೆ ತಲೆಬಾಗಿ ನಮಸ್ಕರಿಸಿ ಮುಂದೆ ಸಾಗಿದರು. ಜಯನಗರದಲ್ಲಿ ಪುರೋಹಿತರು ವೇದ ಮಂತ್ರಗಳನ್ನು ಪಠಿಸಿದರೆ, ಮಹಿಳೆಯರು ರಸ್ತೆಯಲ್ಲಿ ರಂಗೋಲಿ ಹಾಕಿದ್ದರು.

ಹಲವು ಕಡೆಗಳಲ್ಲಿ ಶ್ರೀರಾಮ, ಆಂಜನೇಯರ ಚಿತ್ರಗಳು ರಾರಾಜಿಸುತ್ತಿದ್ದವು. ಜೈ ಶ್ರೀರಾಮ್, ಜೈ ಬಜರಂಗ ಬಲಿ ಘೋಷಣೆಗಳೂ ಮೊಳಗಿದವು. ರಸ್ತೆ ಉದ್ದಕ್ಕೂ ಹೂವಿನ ಪಕಳೆಗಳನ್ನು ಮೋದಿಯವರ ವಾಹನದ ಮೇಲೆ ಚೆಲ್ಲಿದ್ದರಿಂದಾಗಿ ಹೂವಿನಿಂದ ಮುಚ್ಚಿ ಹೋಗಿತ್ತು.

ರೋಡ್ ಶೋ ಕೊನೆಯಲ್ಲಿ ಮಲ್ಲೇಶ್ವರದ ಕಾಡು ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಮೋದಿ ಅವರಿಂದ ಪೂಜೆ ಸಲ್ಲಿಕೆ ಕಾರ್ಯಕ್ರಮವನ್ನು ಬಿಜೆಪಿ ಆಯೋಜಿಸಿತ್ತು. ಸಮನ್ವಯದ ಕೊರತೆಯಿಂದ ಅದು ಸಾಧ್ಯವಾಗಲಿಲ್ಲ. ಮೋದಿಯವರನ್ನು ಕರೆದೊಯ್ಯುತ್ತಿದ್ದ ಎಸ್‌ಪಿಜಿ ತಂಡಕ್ಕೆ ಅದರ ಮಾಹಿತಿ ಇರದೇ ಇದ್ದುದರಿಂದ ಅಲ್ಲಿ ವಾಹನ ನಿಲ್ಲಿಸಲಿಲ್ಲ ಎಂದು ಮೂಲಗಳು ಹೇಳಿವೆ.

ರೋಡ್ ಶೋ ಮುಕ್ತಾಯಗೊಂಡ ಮಲ್ಲೇಶ್ವರದ ಸರ್ಕಲ್ ಮಾರಮ್ಮ ದೇವಸ್ಥಾನಕ್ಕೆ ಮೋದಿಯವರು ಭೇಟಿ ನೀಡಿ, ಪೂಜೆ ಸಲ್ಲಿಸುತ್ತಾರೆ ಎಂದು ಹೇಳಲಾಗಿತ್ತು. ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ರಾಜ್ಯ ಚುನಾವಣಾ ಸಹ ಉಸ್ತುವಾರಿ ಅಣ್ಣಾಮಲೈ ಮೊದಲಾದವರು ಅಲ್ಲಿ ಕಾಯುತ್ತಲೇ ಇದ್ದರು. ಅಲ್ಲಿಯೂ ವಾಹನ ನಿಲ್ಲಿಸದ ಎಸ್‌ಪಿಜಿ ತಂಡ, ವೇಗವಾಗಿ ಮುಂದೆ ಸಾಗಿತು.

ಸಂಸದರಿಗಷ್ಟೇ ಅವಕಾಶ: ಮೋದಿಯವರ ರೋಡ್ ಶೋಗಾಗಿ ಸಿದ್ಧಪಡಿಸಿದ್ದ ವಾಹನದಲ್ಲಿ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಹಾಗೂ ಕೇಂದ್ರ ಸಂಸದ ಪಿ.ಸಿ. ಮೋಹನ್ ಅವರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. 13 ಕ್ಷೇತ್ರಗಳುದ್ದಕ್ಕೂ ಸಾಗಿದ ವೇಳೆ, ಆಯಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಗಳು ರಸ್ತೆಯ ಪಕ್ಕದಲ್ಲಿ ನಿಂತು ಕೈಮುಗಿದರು.

ಇಂದು 6 ಕ್ಷೇತ್ರಗಳಲ್ಲಿ ಪ್ರದರ್ಶನ

ಪ್ರಧಾನಿ ನರೇಂದ್ರ ಮೋದಿ ಭಾನುವಾರ ಮಹದೇವಪುರ, ಕೆ.ಆರ್.ಪುರ, ಸಿ.ವಿ. ರಾಮನ್ ನಗರ, ಸರ್ವಜ್ಞ ನಗರ, ಶಿವಾಜಿನಗರ ಮತ್ತು ಶಾಂತಿನಗರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ರೋಡ್ ಶೋ ನಡೆಸಲಿದ್ದಾರೆ. ಕೆಂಪೇಗೌಡ ಪ್ರತಿಮೆಯಿಂದ ಬೆಳಿಗ್ಗೆ 9.30ಕ್ಕೆ ರೋಡ್ ಶೋ ಆರಂಭವಾಗಲಿದೆ. ನ್ಯೂತಿಪ್ಪಸಂದ್ರ ರಸ್ತೆ, ಬೆಮೆಲ್‌ಗೇಟ್, 80 ಅಡಿ ರಸ್ತೆ, ಇಎಸ್‌ಐ ಆಸ್ಪತ್ರೆ, ದೊಮ್ಮಲೂರು 12ನೇ ಮುಖ್ಯರಸ್ತೆ, ಜೋಗುಪಾಳ್ಯ, ಚಿನ್ಮಯಮಿಷನ್ ಆಸ್ಪತ್ರೆ, ಲಕ್ಷ್ಮೀಪುರ,ಹಲಸೂರು, ಟ್ರಿನಿಟಿ ಜಂಕ್ಷನ್‌ನಲ್ಲಿ ಕೊನೆಗೊಳ್ಳಲಿದೆ.

ಕಾರ್ಯಕ್ರಮಕ್ಕೆ ಮಾಡಿದ ಖರ್ಚೆಷ್ಟು?

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ರೋಡ್ ಶೋ ಅತ್ಯಂತ ಕಡಿಮೆ ಖರ್ಚಿನಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ನಡೆಯುವ ಚುನಾವಣಾ ಪ್ರಚಾರ. ರಸ್ತೆಯ ಇಕ್ಕೆಲಗಳಲ್ಲಿ ಬ್ಯಾರಿಕೇಡ್, ಬಾವುಟ, ಹೂವು, ಕಟೌಟ್‌ಗಳನ್ನು ಹಾಕುವುದಕ್ಕೆ ಹಣ ವ್ಯಯ ಮಾಡಲಾಗುತ್ತದೆ.

'ಸುಮಾರು 1 ಕಿ.ಮೀ.ಗೆ ಬ್ಯಾರಿಕೇಡ್, ಬಾವುಟ, ಬಂಟಿಂಗ್, ಕಟೌಟ್, ಹೂವು ಸೇರಿ ಅಂದಾಜು ₹5 ಲಕ್ಷದವರೆಗೆ ವೆಚ್ಚ ಆಗಬಹುದು. ಬೆಂಗಳೂರಿನಲ್ಲಿ ಶನಿವಾರ 26 ಕಿ.ಮೀ ಹಾಗೂ ಭಾನುವಾರ 6 ಕಿ.ಮೀ ಉದ್ದ ಮೋದಿ ರೋಡ್ ಶೋ ನಡೆಸಲಿದ್ದಾರೆ. ಅಂದಾಜು ₹1.60 ಕೋಟಿ ವೆಚ್ಚವಾಗಬಹುದು. ಈ ವೆಚ್ಚವನ್ನು ಪಕ್ಷದ ವೆಚ್ಚಕ್ಕೆ ಸೇರಿಸುವುದಿಲ್ಲ. ಸ್ಥಳೀಯ ಕಾರ್ಯಕರ್ತರು ವೈಯಕ್ತಿಕ ನೆಲೆಯಲ್ಲಿ ಭರಿಸುತ್ತಾರೆ' ಎಂದು ಬಿಜೆಪಿ ನಾಯಕರೊಬ್ಬರು ತಿಳಿಸಿದರು.

'ಸಾರ್ವಜನಿಕ ಸಭೆಗಳು ಮತ್ತು ರ್‍ಯಾಲಿಗಳಿಗಿಂತ ರೋಡ್ ಶೋಗಳಲ್ಲಿ ಜನರನ್ನು ಹತ್ತಿರದಿಂದ ನೋಡಲು ಸಾಧ್ಯ ಮತ್ತು ಹೆಚ್ಚು ಜನರನ್ನು ಸೆಳೆಯಲು ಆಗಲು ಸಾಧ್ಯ ಎಂಬ ಕಾರಣಕ್ಕೆ ಬಹುತೇಕ ಎಲ್ಲ ರಾಜ್ಯಗಳ ಚುನಾವಣೆಗಳು ಮತ್ತು ಲೋಕಸಭಾ ಚುನಾವಣೆಯಲ್ಲಿ ಮೋದಿ ಇದೇ ವಿಧಾನ ಅನುಸರಿಸುತ್ತಾರೆ' ಎಂದರು.

'ರೋಡ್ ಶೋನಲ್ಲಿ ಪ್ರಧಾನಿ ಜತೆಗೆ ಅಭ್ಯರ್ಥಿ ನಿಂತುಕೊಂಡರೆ ಆಗ ಅದು ಪ್ರಚಾರವಾಗುತ್ತದೆ. ಹೀಗಾಗಿ ಮೋದಿಯವರು ಅಭ್ಯರ್ಥಿಗಳನ್ನು ತಮ್ಮ ಜತೆಗೆ ನಿಲ್ಲಿಸಿಕೊಳ್ಳುವುದಿಲ್ಲ ಮತ್ತು ಮತ ಕೇಳಿ ಭಾಷಣವನ್ನೂ ಮಾಡುವುದಿಲ್ಲ' ಎಂದು ಬಿಜೆಪಿ ಮುಖಂಡರೊಬ್ಬರು ತಿಳಿಸಿದರು.

ಅಯಕಟ್ಟಿನ ಜಾಗದಲ್ಲಿ ಪೊಲೀಸರು ಬ್ಯಾರಿಕೇಡ್ ಹಾಕಿದರೆ, ಉಳಿದ ಕಡೆಗಳಲ್ಲಿ ಪಕ್ಷ ಅಥವಾ ಕಾರ್ಯಕರ್ತರು ಬ್ಯಾರಿಕೇಡ್‌ಗಳನ್ನು ಹಾಕುತ್ತಾರೆ. ಉದ್ದಕ್ಕೂ ಹಾಕುವ ಪಕ್ಷದ ಧ್ವಜ, ಕಟೌಟ್‌ಗಳು, ಹೂವಿನ ವೆಚ್ಚವನ್ನು ಪಕ್ಷದ ಸ್ಥಳೀಯ ಮುಖಂಡರೇ ಭರಿಸುತ್ತಾರೆ ಅವರು ತಿಳಿಸಿದರು.

'ಪ್ರಧಾನಿಗೆ ಭದ್ರತೆ ನೀಡುವುದು ಪೊಲೀಸ್ ಇಲಾಖೆಯ ಹೊಣೆಗಾರಿಕೆ. ಎಸ್‌ಪಿಜಿ ಸೂಚನೆ ಅನ್ವಯ ಅವರು ರೋಡ್ ಶೋ ಮಾಡುವ ಕಡೆಗಳಲ್ಲಿ ಭದ್ರತೆ ನೀಡಲಾಗುತ್ತದೆ. ಇದರ ವೆಚ್ಚವನ್ನು ಇಲಾಖೆಯೇ ನೋಡಿಕೊಳ್ಳುತ್ತದೆ' ಎಂದು ಪೊಲೀಸ್ ಇಲಾಖೆ ಮೂಲಗಳು ಹೇಳಿವೆ.

ಪ್ರಚಾರಕ್ಕಾಗಿ ವೇದಿಕೆ ಹತ್ತಿದಾಗ ಪ್ರಧಾನಿ ಜತೆ ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಇದ್ದರೆ ಅದರ ವೆಚ್ಚವನ್ನು ಅಭ್ಯರ್ಥಿಗಳು ಸಮಾನವಾಗಿ ಭರಿಸಬೇಕಾಗುತ್ತದೆ ಎಂದು ಚುನಾವಣಾ ಆಯೋಗದ ಮೂಲಗಳು ಹೇಳಿವೆ.

'ದುರಹಂಕಾರಿ ಸರ್ಕಾರ ಹೊರದಬ್ಬಿ'

ಬಿಜೆಪಿ ವಿರುದ್ಧ ಸೋನಿಯಾ ಗಾಂಧಿ ಟೀಕಾಪ್ರಹಾರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಚುನಾವಣೆಯಲ್ಲಿ ಬಿಜೆಪಿ ಗೆಲ್ಲದಿದ್ದರೆ ಮೋದಿ ಆಶೀರ್ವಾದ ಸಿಗುವುದಿಲ್ಲವೆಂದು ಬಹಿರಂಗವಾಗಿ ಧಮ್ಕಿ ಹಾಕುತ್ತಿರುವವರಿಗೆ ನಾನು ಹೇಳಲು ಬಯಸುತ್ತೇನೆ, ಕರ್ನಾಟಕದ ಜನ ಅಸಹಾಯಕರು– ನಿಷ್ಪ್ರಯೋಜಕರು ಎಂದುಕೊಳ್ಳಬೇಡಿ. ಅವರು ಅಂಜುಬುರುಕರಲ್ಲ, ಆಸೆಬುರುಕರಲ್ಲ, ಅವರು ಎಂತಹವರು ಎನ್ನುವುದನ್ನು ಮೇ 10ರಂದು ನಿಮಗೆ ತಿಳಿಸಲಿದ್ದಾರೆ' ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಖಡಕ್ಕಾಗಿ ಹೇಳಿದರು.

ನಾಲ್ಕು ವರ್ಷಗಳ ನಂತರ ಇದೇ ಮೊದಲ ಬಾರಿಗೆ ಅವರು ಇಲ್ಲಿನ ಮಂಟೂರು ರಸ್ತೆಯಲ್ಲಿ ನಡೆದ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಕೇವಲ 13 ನಿಮಿಷಗಳ ತಮ್ಮ ಚುಟುಕು ಭಾಷಣದಲ್ಲಿ ಬಿಜೆಪಿ ವಿರುದ್ಧ ತೀಕ್ಷ್ಣವಾಗಿ ಹರಿಹಾಯ್ದರು.

'ಕರ್ನಾಟಕದ ಜನರು ಯಾರ ಆಶೀರ್ವಾದದ ಮೇಲಲ್ಲ, ತಮ್ಮ ಶ್ರಮ ಹಾಗೂ ಸಂಕಲ್ಪದ ಮೇಲೆ ವಿಶ್ವಾಸ ವಿಟ್ಟಿದ್ದಾರೆ. ಅವರನ್ನು ಉದ್ರೇಕಗೊಳಿಸಬೇಕಾಗಿಲ್ಲ. ಈ ಸರ್ಕಾರಕ್ಕೆ ಎಷ್ಟೊಂದು ದುರಹಂಕಾರವಿದೆ ಎಂದರೆ, ಯಾವ ಪ್ರಶ್ನೆಗಳಿಗೂ, ಪತ್ರಗಳಿಗೂ ಉತ್ತರಿಸುತ್ತಿಲ್ಲ. ಸಾಂವಿಧಾನಿಕ ಸಂಸ್ಥೆಗಳು ತಮ್ಮ ಜೇಬಿನಲ್ಲಿವೆ ಅಂದುಕೊಂಡಿದ್ದಾರೆ. ಇಂತಹ ನಿರಂಕುಶ ಅಧಿಕಾರದ ನಡವಳಿಕೆಯನ್ನು ಹಿಂದೆ ಯಾವತ್ತಾದರೂ ನೀವು ನೋಡಿದ್ದೀರಾ? ಈ ರೀತಿಯಾಗಿ ಪ್ರಜಾತಂತ್ರ ನಡೆಯುತ್ತದೆಯೇ? ಇಲ್ಲ, ಈ ರೀತಿ ನಡೆಯಲ್ಲ' ಎಂದು ಖಡಾಖಂಡಿತವಾಗಿ ಹೇಳಿದರು.

'2018ರಲ್ಲಿ ಇವರಿಗೆ ನೀವು ಅಧಿಕಾರ ನೀಡಿರಲಿಲ್ಲ. ಆದರೆ, ಇವರು ಆಕ್ರಮಣದಿಂದ ಸರ್ಕಾರವನ್ನು ವಶಪಡಿಸಿಕೊಂಡರು. ನಂತರ ಬಂದ ಅವರ ಶೇ 40 ಕಮಿಷನ್ ಸರ್ಕಾರ, ನಿಮ್ಮನ್ನು ಲೂಟಿ ಮಾಡಲು ಇಳಿಯಿತು' ಎಂದರು.

'ರೈತರು, ಹಾಲು ಉತ್ಪಾದಕರ ಹಿತವನ್ನು ಕಡೆಗಣಿಸಿ, ನಂದಿನಿಯಂತಹ ಉತ್ತಮ ಸಂಸ್ಥೆಯನ್ನು ಮುಚ್ಚುವ ಷಡ್ಯಂತ್ರ ಸಾಕಾರಗೊಳ್ಳದೆಂದು ಇವರಿಗೆ ಹೇಳಬೇಕಾದ ಸಮಯ ಬಂದಿದೆ. ರಾಜಕೀಯ ಮುಖಂಡರ ಭಾಗ್ಯವು ಜನರ ಆಶೀರ್ವಾದಿಂದ ನಿರ್ಧಾರವಾಗುತ್ತದೆ, ಹೊರತು, ಜನರ ಭಾಗ್ಯವು ಯಾವುದೇ ಮುಖಂಡರಿಂದ ಅಲ್ಲ. ಜನರು ತಮ್ಮ ಭಾಗ್ಯವನ್ನು ತಾವೇ ಬರೆಯಲಿದ್ದಾರೆ' ಎಂದು ಹೇಳಿದರು.

'ಕರ್ನಾಟಕ ಭಗವಾನ್ ಬಸವಣ್ಣನ ಪವಿತ್ರ ಭೂಮಿಯಾಗಿದೆ. ಎಲ್ಲರಿಗೂ ಸಮಾನ ಅವಕಾಶ ಎನ್ನುವ ಸಂದೇಶವನ್ನು ಅವರು ಕೊಟ್ಟಿದ್ದಾರೆ. ಮಹಾಕವಿ ಕುವೆಂಪು ಅವರ ನೆಲವೂ ಇದೆ ಆಗಿದೆ. ಅವರ ಭಾವನೆಗಳನ್ನು ಬಿಜೆಪಿ ಪ್ರತಿದಿನ ಅಪಮಾನ ಮಾಡುತ್ತಿದೆ. ದೇಶದ ಇತಿಹಾಸ ಹಾಗೂ ಶತಮಾನಗಳಷ್ಟು ಹಳೆಯದಾದ ಕರ್ನಾಟಕದ ಸಾಮಾಜಿಕ ನ್ಯಾಯ ಪರಿಕಲ್ಪನೆ ಜೊತೆ ಚೆಲ್ಲಾಟವಾಡಬೇಡಿ' ಎಂದು ನುಡಿದರು.

'ಲೂಟಿಕೋರ ಹಾಗೂ ಕಮಿಷನ್ ಮುಕ್ತ ಸರ್ಕಾರ ರಚಿಸಲು ನೀವು ಯಾರ ಮೇಲೆ ಭರವಸೆ ಇಡುತ್ತೀರಿ? ಸಾಮಾಜಿಕ ನ್ಯಾಯ, ಸದ್ಭಾವನಾ ಪರಂಪರೆಯನ್ನು ಉಳಿಸಿಕೊಳ್ಳಲು ನೀವು ಯಾರ ಮೇಲೆ ಭರವಸೆ ಇಡುತ್ತೀರಿ? ಉತ್ತರ ನೀಡಿ. ಕಾಂಗ್ರೆಸ್ ಸರ್ಕಾರದ ಮೇಲೆ ಅಲ್ಲವೇ?' ಎಂದು ಕೇಳಿದರು. ಇದಕ್ಕೆ ಜನರೆಲ್ಲ, 'ಕಾಂಗ್ರೆಸ್... ಕಾಂಗ್ರೆಸ್' ಎಂದು ಕೂಗಿ ತಮ್ಮ ಬೆಂಬಲ ವ್ಯಕ್ತಪಡಿಸಿದರು.

'ಕಾಂಗ್ರೆಸ್ ಇತಿಹಾಸದಲ್ಲಿ ಕರ್ನಾಟಕಕ್ಕೆ ವಿಶೇಷ ಸ್ಥಾನವಿದೆ. ಇಲ್ಲಿನವರಾದ ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್ ಪಕ್ಷದ ನೇತೃತ್ವ ವಹಿಸಿರುವುದು ಗೌರವದ ವಿಷಯವಾಗಿದೆ. 1978ರಲ್ಲಿ ಇಂದಿರಾ ಗಾಂಧಿ ಅವರಿಗೆ ಚಿಕ್ಕಮಗಳೂರು ಜನರು ಪೂರ್ಣ ಬೆಂಬಲ ಕೊಟ್ಟಿದ್ದರು. ನನಗೂ ಬಳ್ಳಾರಿ ಜನರ ವಿಶ್ವಾಸ ಸಿಕ್ಕಿತ್ತು' ಎಂದರು.

'ಕರ್ನಾಟಕಕ್ಕೆ ಮೋದಿ ಕೊಡುಗೆ ಏನು?'

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ: ಕರ್ನಾಟಕಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಕೊಡುಗೆ ಏನು ಎಂದು ಜೆಡಿಎಸ್ ವರಿಷ್ಠ ಎಚ್. ಡಿ.ದೇವೇಗೌಡ ಪ್ರಶ್ನಿಸಿದ್ದಾರೆ.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು- ,ಕರ್ನಾಟಕದ ಜನರು ಪ್ರಬುದ್ಧರು. ಅವರನ್ನು ಅಷ್ಟು ಸುಲಭವಾಗಿ ಮರುಳು ಮಾಡಲು ಸಾಧ್ಯವಿಲ್ಲ. ಅವರಿಗೆ ಸರಿಯಾದ ತೀರ್ಮಾನ ಮಾಡುವ ರಾಜಕೀಯ ಪ್ರಬುದ್ಧತೆ ಇದೆ ಎಂದರು.

ರಾಜ್ಯದಲ್ಲಿ ಲೋಕಸಭೆ ಚುನಾವಣೆ ನಡೆಯುತ್ತಿಲ್ಲ. ಆದರೂ ಪ್ರಧಾನಿ ನಿತ್ಯ ಪ್ರಚಾರ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿ ಶಕ್ತಿ ಕುಂದಿದೆ ಎನ್ನುವ ಅರಿವು ಮೋದಿ ಅವರಿಗೆ ಆಗಿದೆ. ಆ ಪಕ್ಷಕ್ಕೆ ಯಾವ ಸ್ಥಿತಿ ಬಂದಿದೆ ಎಂಬುದು ಇದರಿಂದ ಅರ್ಥವಾಗುತ್ತದೆ ಎಂದರು.

ಕಮಲದ 'ಕೊಳ'ದಲ್ಲಿ ಕಂಪನ

'ಅವಮಾನ'ದ ಅಸ್ತ್ರ ಬಳಸಿ ಬಿಜೆಪಿಗೆ ಸಡ್ಡು ಹೊಡೆದ ಶೆಟ್ಟರ್ ಭವಿಷ್ಯ ಪಣಕ್ಕೆ!

• ಶ್ರೀಕಾಂತ ಕಲ್ಲಮ್ಮನವರ

ಹು–ಧಾ ಸೆಂಟ್ರಲ್ ಗಮನ ಸೆಳೆದ ಕಣ

ಸಾಕ್ಷಾತ್ ಸಮೀಕ್ಷೆ

ಹುಬ್ಬಳ್ಳಿ: ಅದು 1990ರ ಅಕ್ಟೋಬರ್ ಸಮಯ. ಅಂದಿನ ಮುಖ್ಯಮಂತ್ರಿ, ಕಾಂಗ್ರೆಸ್‌ನ ವೀರೇಂದ್ರ ಪಾಟೀಲ ಅವರನ್ನು ಪ್ರಧಾನಿ ರಾಜೀವ್ ಗಾಂಧಿ ಏಕಾಏಕಿ ಪದಚ್ಯುತಗೊಳಿಸಿದ್ದರು. ಇದು 'ಸಮುದಾಯಕ್ಕೆ ಮಾಡಿದ ಅವಮಾನ'ವೆಂದು ಲಿಂಗಾಯತರು ಸಿಡಿದೆದ್ದು, ಬೇರೆ ಪಕ್ಷಗಳೆಡೆ ವಾಲಿದರು...

ಇಂತಹದ್ದೇ ವಾತಾವರಣವನ್ನು ಪುನರ್‌ಸೃಷ್ಟಿಸಲು ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಿಂಗಾಯತ ಸಮುದಾಯದ ಜಗದೀಶ ಶೆಟ್ಟರ್ ಯತ್ನಿಸುತ್ತಿದ್ದಾರೆ. 'ಅವಮಾನ'ದ ಅಸ್ತ್ರ ಬಳಸಿ ಲಿಂಗಾಯತ ಸಮುದಾಯವನ್ನು ಬಿಜೆಪಿಯಿಂದ ಪುನಃ ಕಾಂಗ್ರೆಸ್ ಕಡೆ ಕರೆತರಲು ಹೊರಟಿದ್ದಾರೆ. ಇದರಿಂದಾಗಿ ಕ್ಷೇತ್ರವು ರಾಜ್ಯ, ರಾಷ್ಟ್ರದ ಗಮನ ಸೆಳೆದಿದೆ.

ಇದಕ್ಕೂ ಮುಂಚೆ ಅವರು ಆರು ಸಲ ಸತತವಾಗಿ ಬಿಜೆಪಿಯಿಂದ ಆಯ್ಕೆಯಾಗಿದ್ದರು. ಏಳನೇ ಬಾರಿಗೆ ಸ್ಪರ್ಧಿಸಲು ಅವಕಾಶ ನೀಡುವಂತೆ ಕೋರಿಕೊಂಡರು. ಆದರೆ, ಬಿಜೆಪಿ ವರಿಷ್ಠರು ಟಿಕೆಟ್ ನಿರಾಕರಿಸಿದರು. 'ಇದು ತಮಗಲ್ಲ, ಸಮುದಾಯಕ್ಕೆ ಮಾಡಿದ ಅನ್ಯಾಯ. ಬಿ.ಎಸ್. ಯಡಿಯೂರಪ್ಪ ಅವರನ್ನು ಸಿ.ಎಂ. ಸ್ಥಾನದಿಂದ ಕೆಳಗಿಳಿಸಲಾಗಿದೆ. ಪಕ್ಷದಲ್ಲಿ ಲಿಂಗಾಯತ ಸಮುದಾಯವನ್ನು ಮೂಲೆಗುಂಪು ಮಾಡಲಾಗುತ್ತಿದೆ' ಎಂದು ಜನಾಭಿಪ್ರಾಯ ರೂಪಿಸಲು ಅವರು ಯತ್ನಿಸುತ್ತಿದ್ದಾರೆ.

ಇದಕ್ಕೆ ತಡೆಯೊಡ್ಡಲು ಪ್ರತಿಸ್ಪರ್ಧಿ ಬಿಜೆಪಿ ಹಲವು ತಂತ್ರ ಹೂಡಿದೆ. ಶೆಟ್ಟರ್ ಅವರ ಸಮುದಾಯಕ್ಕೆ ಸೇರಿದ ಮಹೇಶ ಟೆಂಗಿನಕಾಯಿ ಅವರನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದೆ. ಎಲ್ಲ ಅಧಿಕಾರ ಅನುಭವಿಸಿ, ಪಕ್ಷದಿಂದ ಹೊರಹೋಗುವ ಮೂಲಕ ಶೆಟ್ಟರ್ ದ್ರೋಹ ಬಗೆದಿದ್ದಾರೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಯಾವುದೇ ಪರಿಸ್ಥಿತಿಯಲ್ಲಿ ಶೆಟ್ಟರ್ ಗೆಲ್ಲಬಾರದು ಎಂದು ಅಮಿತ್ ಶಾ, ಜೆ.ಪಿ. ನಡ್ಡಾ ಫರ್ಮಾನು ಹೊರಡಿಸಿದ್ದಾರೆ. ಇದು ಶೆಟ್ಟರ್ ವರ್ಸಸ್ ಬಿಜೆಪಿ ಕಣವಾಗಿ ಮಾರ್ಪಟ್ಟಿದೆ.

ಲಿಂಗಾಯತ ಸಮುದಾಯದ ಅಗ್ರಗಣ್ಯ ನಾಯಕರೆನಿಸಿದ ಬಿ.ಎಸ್. ಯಡಿಯೂರಪ್ಪ ಅವರನ್ನೂ ಶೆಟ್ಟರ್ ವಿರುದ್ಧ ಪ್ರಚಾರ ನಡೆಸಲು ಬಳಸಿಕೊಂಡಿದೆ. ಯಡಿಯೂರಪ್ಪ ಅವರ ಟೀಕೆಯನ್ನು ಆಶೀರ್ವಾದವೆಂದು ಸ್ವೀಕರಿಸುವೆ ಎಂದು ಹೇಳಿ ಶೆಟ್ಟರ್ ಜಾಣ ನಡೆ ಪ್ರದರ್ಶಿಸಿದ್ದಾರೆ. ಸಮಾಜದಲ್ಲಿರುವ ಲಿಂಗಾಯತ ಮತಗಳು ವಿಭಜನೆಯಾಗದಂತೆ ತಡೆಯುವ ತಂತ್ರ ಇದಾಗಿದೆ. ಮೋದಿ ವಿರುದ್ಧ ಕೂಡ ಒಂದೂ ಮಾತನಾಡದಿರುವುದು ಗಮನಾರ್ಹ.

ಕಾಂಗ್ರೆಸ್‌ಗೆ ಆನೆಬಲ: ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾದ ರಜತ್ ಉಳ್ಳಾಗಡ್ಡಿಮಠ, ಅನಿಲಕುಮಾರ ಪಾಟೀಲ ಸೇರಿದಂತೆ ಹಲವರು ಶೆಟ್ಟರ್ ಸೇರ್ಪಡೆಯನ್ನು ಸ್ವಾಗತಿಸಿದ್ದು, ಅವರ ಪರ ಪ್ರಚಾರ ಕೂಡ ಮಾಡುತ್ತಿದ್ದಾರೆ. ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಾಗೇಶ ಕಲಬುರ್ಗಿ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ಮಂಡಳಿಯ ಮಾಜಿ ನಿರ್ದೇಶಕ ಮಲ್ಲಿಕಾರ್ಜುನ ಸಾವಕಾರ, ವಿಶ್ವ ಹಿಂದೂ ಪರಿಷತ್‌ನ ಉತ್ತರ ಕರ್ನಾಟಕ ಪ್ರಾಂತದ ಉಪಾಧ್ಯಕ್ಷ ಶಾಂತಣ್ಣ ಕಡಿವಾಳ ಅವರನ್ನು ಶೆಟ್ಟರ್ ಕಾಂಗ್ರೆಸ್‌ಗೆ ಕರೆತಂದಿದ್ದಾರೆ. ಇದು ಕಾಂಗ್ರೆಸ್‌ಗೆ ಆನೆ ಬಲ ತಂದುಕೊಟ್ಟಂತಾಗಿದೆ.

ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳಾದ ದಲಿತರು, ಮುಸ್ಲಿಮರು, ಕ್ರೈಸ್ತರು, ಕುರುಬರ ಜೊತೆ ಲಿಂಗಾಯತ ಸಮುದಾಯದ ಮತಗಳು ಸೇರಿಕೊಂಡರೆ ಶೆಟ್ಟರ್ ಸುಲಭವಾಗಿ ದಡ ಸೇರಬಹುದು. ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ (ಎಸ್.ಎಸ್.ಕೆ) ಸಮಾಜದ ಮತದಾರರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಇವರಲ್ಲಿ ಬಹುತೇಕರು ಬಿಜೆಪಿ ಬೆಂಬಲಿಗರಾಗಿದ್ದಾರೆ. ಇವರನ್ನು ತಮ್ಮ ಕಡೆ ಸೆಳೆಯಲು ಶೆಟ್ಟರ್ ಬೆವರು ಹರಿಸುತ್ತಿದ್ದಾರೆ.

ಕಳೆದ ಮೂರು ಚುನಾವಣೆಯಲ್ಲಿ ಕಾಂಗ್ರೆಸ್ ಮತ ಗಳಿಕೆ ಪ್ರಮಾಣ ಏರಿಕೆಯಾಗಿದೆ. 2008ರಲ್ಲಿ ಶಂಕರಣ್ಣ ಮುನವಳ್ಳಿ 32,738 (ಶೇ 30.51), 2013ರಲ್ಲಿ ಡಾ. ಮಹೇಶ ನಾಲವಾಡ 40,447 (ಶೇ 34.48), 2018ರಲ್ಲಿ ಡಾ.ಮಹೇಶ ನಾಲವಾಡ 54,488 (ಶೇ 36.89) ಮತ ಪಡೆದಿದ್ದರು. ಇದೇ ಟ್ರೆಂಡ್ ಮುಂದುವರಿದರೆ ಶೆಟ್ಟರ್‌ಗೆ 'ಪ್ಲಸ್ ಪಾಯಿಂಟ್' ಆಗಲಿದೆ.

ಇದೇ ಮೊದಲ ಬಾರಿಗೆ ಚುನಾವಣಾ ಕಣಕ್ಕಿಳಿದಿರುವ ಬಿಜೆಪಿಯ ಮಹೇಶ ಟೆಂಗಿನಕಾಯಿ ಅವರು ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ, ಬಿ.ಎಸ್. ಯಡಿಯೂರಪ್ಪ, ಪ್ರಲ್ಹಾದ ಜೋಶಿ, ಬಸವರಾಜ ಬೊಮ್ಮಾಯಿ ಅವರನ್ನು ನೆಚ್ಚಿಕೊಂಡಿದ್ದಾರೆ. ಪಕ್ಷದ ಸಂಘಟನೆ ಹಾಗೂ ಕಾರ್ಯಕರ್ತರ ಪಡೆಯನ್ನು ಅವಲಂಬಿಸಿದ್ದಾರೆ. ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿಗೆ ರಾಜ್ಯ ಹಾಗೂ ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಕಾರಣವೆಂದು ಮತದಾರರನ್ನು ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ. ವ್ಯಕ್ತಿಗಿಂತ ಪಕ್ಷ ಮುಖ್ಯ ಎನ್ನುವ ಕಟ್ಟಾ ಬಿಜೆಪಿ ಬೆಂಬಲಿಗರು ಲಿಂಗಾಯತ ಸಮುದಾಯದಲ್ಲಿದ್ದಾರೆ. ಇವರು ಎಷ್ಟರ ಮಟ್ಟಿಗೆ ಕೈಹಿಡಿಯುತ್ತಾರೆ ಎನ್ನುವುದರ ಮೇಲೆ ಟೆಂಗಿನಕಾಯಿ ಭವಿಷ್ಯ ನಿರ್ಧಾರವಾಗಲಿದೆ.

ಶೆಟ್ಟರ್, ಮೆಣಸಿನಕಾಯಿ ಜೊತೆ ಕಣದಲ್ಲಿ 16 ಅಭ್ಯರ್ಥಿಗಳಿದ್ದಾರೆ. ಬಿಜೆಪಿ- ಕಾಂಗ್ರೆಸ್ ನಡುವೆ ನೇರ ಪೈಪೋಟಿ ಇದೆ.



ಪಕ್ಷವಾರು ಮತಗಳಿಕೆ ಪ್ರಮಾಣ

ಪಕ್ಷ	2018	2013
ಬಿಜೆಪಿ	75,794	58,201
ಕಾಂಗ್ರೆಸ್	54,488	40,447
ಜೆಡಿಎಸ್	10,754	7,898

ಶೆಟ್ಟರ್ (ಬಿಜೆಪಿಯಲ್ಲಿದ್ದಾಗ) ನಡೆದು ಬಂದ ದಾರಿ

ವರ್ಷ	ಪಡೆದ ಮತ	ಪ್ರತಿಶತ
1994	42,768	39.86
1999	62,621	53
2004	58,501	43.66
2008	58,747	54.75
2013	58,201	49.61
2018	75,794	51.31

ಜಗದೀಶ ಶೆಟ್ಟರ್

ಮಹೇಶ ಟೆಂಗಿನಕಾಯಿ

ಜಾಲತಾಣದಲ್ಲಿ ಹರಿದಾಡಿದ ಮಣಿಕಂಠ ಆಡಿಯೊ; ದೂರು ದಾಖಲು

'ಖರ್ಗೆ ಹೆಂಡ್ತಿ, ಮಕ್ಕಳನ್ನು ಸಾಫ್ ಮಾಡ್ತೀನಿ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಖರ್ಗೆ ಹೆಂಡರು, ಮಕ್ಕಳನ್ನು ಸಾಫ್ (ಮುಗಿಸುತ್ತೇನೆ) ಮಾಡುತ್ತೇನೆ' ಎಂದು ಚಿತ್ತಾಪುರ ಎಸ್‌ಸಿ ಮೀಸಲು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಠೋಡ ಹೇಳಿದ್ದಾರೆ ಎನ್ನಲಾದ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಬಿಜೆಪಿ ಮುಖಂಡ ಎನ್ನಲಾದ ವ್ಯಕ್ತಿಯ ಜತೆ 40 ಸೆಕೆಂಡ್ ಅವಧಿಯ ಫೋನ್ ಸಂಭಾಷಣೆ ನಡೆದಿದೆ ಎನ್ನಲಾಗಿದ್ದು, ಇದಕ್ಕೆ ವಿರೋಧ ವ್ಯಕ್ತವಾಗಿದೆ. 'ಆಡಿಯೊ ಸಂಬಂಧ ಚುನಾವಣೆ ಅಧಿಕಾರಿಗಳು ನೀಡಿದ ದೂರಿನನ್ವಯ ಎಫ್‌ಐಆರ್ ದಾಖಲಿಸಲಾಗಿದೆ. ಪೊಲೀಸರು ತನಿಖೆ ನಡೆಸುವರು' ಎಂದು ಜಿಲ್ಲಾ ಚುನಾವಣಾ ಅಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಯಶವಂತ ಗುರುಕರ್ 'ಪ್ರಜಾವಾಣಿ'ಗೆ ತಿಳಿಸಿದರು. ಚುನಾವಣಾ ಅಧಿಕಾರಿಯು ಚಿತ್ತಾಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

'ಆಡಿಯೊದಲ್ಲಿ ಇರುವುದು ನನ್ನ ಧ್ವನಿಯಲ್ಲ. ಇದು ನೂರರಕ್ಕೆ ನೂರರಷ್ಟು ಸುಳ್ಳು. ಈ ಹಿಂದೆಯೂ ಇಂತಹ ಹುಸಿ ಪ್ರಕರಣಗಳನ್ನು ದಾಖಲಿಸಿದ್ದರು. ಇಂತಹ ಆಡಿಯೊ ಹರಿಬಿಟ್ಟು ಜನರನ್ನು ಬೇರೆ ಕಡೆಗೆ ಸೆಳೆಯುತ್ತಿದ್ದಾರೆ. ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗಿದೆ' ಎಂದು ಮಣಿಕಂಠ ರಾಠೋಡ 'ಪ್ರಜಾವಾಣಿ'ಗೆ ತಿಳಿಸಿದರು.

ಆಡಿಯೊದಲ್ಲಿ ಏನಿದೆ?

ಮಣಿಕಂಠ ರಾಠೋಡ

ಬಿಜೆಪಿ ಮುಖಂಡ: ಮತ್ತೆ ಎಷ್ಟು ಕೇಸ್ ಇವೆ?

ಮಣಿಕಂಠ ರಾಠೋಡ: ಯಾವ ಮಗ ಅಂದನಲ್ಲ ಅವನಿಗೆ ಕೇಳಿ, ನಲವತ್ತು ನಾಲ್ಕು ಕೇಸ್ ಲಿಸ್ಟ್ ಕೊಡು ಅಂತ. ಮಣಿಕಂಠ ಕೇಳುತ್ತಿದ್ದಾನೆ ಅಂತ ಕೇಳು.

ಬಿಜೆಪಿ ಮುಖಂಡ: ಖರ್ಗೆ ಕಡೆಯವರು ಮಾಡುತ್ತಾರೆ. ನಾವ್ಯಾರೂ ಮಾಡಲ್ಲ

ಮಣಿಕಂಠ ರಾಠೋಡ: ಖರ್ಗೆ ಕಡೆಯಿಂದ ಕೇಳು

ಬಿಜೆಪಿ ಮುಖಂಡ: ಅವರದ್ದು ಫೋನ್ ನಂಬರ್ ಕೊಡು, ನಾನು ನಿನ್ನ ಅಭಿಮಾನಿ ಇದ್ದೇನೆ, ಈ ರೀತಿ ಯಾಕೆ ಮಾತನಾಡುತ್ತೀರಾ ಅಂತ ಕೇಳುತ್ತೇನೆ.

ಮಣಿಕಂಠ ರಾಠೋಡ: ನನ್ನ ಬಳಿ ಫೋನ್ ನಂಬರ್ ಇದ್ದರೆ, ಅವರ ಎಲ್ಲ ಹೆಂಡರು, ಮಕ್ಕಳನ್ನು ಸಾಫ್ ಮಾಡುತ್ತೇನೆ. ಅದಕ್ಕೆ ನನ್ನ ಬಳಿ ಅವರ ನಂಬರ್ ಇಲ್ಲ.

ಬಿಜೆಪಿ ಮುಖಂಡ: ಯಾರ ಹೆಂಡರು, ಮಕ್ಕಳು?

ಮಣಿಕಂಠ ರಾಠೋಡ: ಯಾರದು ಹೆಸರು ತಗೊಂಡಿ ಈಗ?

ಬಿಜೆಪಿ ಮುಖಂಡ: ನಾನು ಖರ್ಗೆ ಅವರದ್ದು ಅಣ್ಣ

ಮಣಿಕಂಠ ರಾಠೋಡ: ನನ್ನ ಬಳಿ ಫೋನ್ ನಂಬರ್ ಇದ್ದರೇ ಅವರ ಎಲ್ಲ ಹೆಂಡರ, ಮಕ್ಕಳ ಸಾಫ್ ಮಾಡುತ್ತೇನೆ, ಅದಕ್ಕೆ ನನ್ನ ಬಳಿ ಅವರ ನಂಬರ್ ಇಲ್ಲ.

ಸಿ.ಎಂ ನೀಲಿ ಕಂಗಳ ಹುಡುಗನಿಂದ ಬೆದರಿಕೆ: ಸುರ್ಜೇವಾಲಾ ಆಕ್ರೋಶ

ಬೆಂಗಳೂರು: 'ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜನ ಸಂಪೂರ್ಣ ಬೆಂಬಲ ತೋರಿಸುತ್ತಿರುವುದರಿಂದ ಕಂಗೆಟ್ಟಿರುವ ಬಿಜೆಪಿ, ಮಲ್ಲಿಕಾರ್ಜುನ ಖರ್ಗೆ, ಅವರ ಪತ್ನಿ ಸೇರಿದಂತೆ ಇಡೀ ಕುಟುಂಬದ ಹತ್ಯೆಗೆ ಸಂಚು ರೂಪಿಸಿದೆ' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಗಂಭೀರ ಆರೋಪ ಮಾಡಿದರು.

ಚಿತ್ತಾಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಥೋಡ್ ಮಾತನಾಡಿದ್ದು ಎನ್ನಲಾದ ಆಡಿಯೊವನ್ನು ಸುದ್ದಿಗೋಷ್ಠಿಯಲ್ಲಿ ಶನಿವಾರ ಬಿಡುಗಡೆ ಮಾಡಿ ಮಾತನಾಡಿದ ಸುರ್ಜೇವಾಲಾ, 'ಹತ್ಯೆಗೆ ಸಂಚು ನಡೆದಿರುವುದು ಆಡಿಯೊದಲ್ಲಿ ಸ್ಪಷ್ಟವಾಗಿದ್ದರೂ, ಮೋದಿ ಮತ್ತು ಬಿಜೆಪಿ ನಾಯಕರು ಮೌನಕ್ಕೆ ಶರಣಾಗಿದ್ದಾರೆ' ಎಂದರು.

'ಬಿಜೆಪಿ ವಿರುದ್ಧ ಇದೊಂದು ಗಂಭೀರ ಆರೋಪವಾಗಿದ್ದು, ಈ ಆಡಿಯೊದ ಸತ್ಯಾಸತ್ಯತೆ ಏನು' ಎಂಬ ಪ್ರಶ್ನೆಗೆ, 'ಮಲ್ಲಿಕಾರ್ಜುನ ಖರ್ಗೆ, ಅವರ ಪತ್ನಿ ಮತ್ತು ಮಕ್ಕಳ ಹತ್ಯೆಗೆ ಸಂಚು ರೂಪಿಸಿರುವುದನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಈ ಬೆದರಿಕೆ ಹಾಕಿರುವುದು ಬೇರೆ ಯಾರೂ ಅಲ್ಲ, ಚಿತ್ತಾಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ. ಈತ ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿಯ ನೀಲಿ ಕಂಗಳ ಹುಡುಗ' ಎಂದರು.

ಖರ್ಗೆ ಮಾಡಿದ ತಪ್ಪೇನು: ಪ್ರಿಯಾಂಕ್

ಪ್ರಿಯಾಂಕ್ ಖರ್ಗೆ

ಕಲಬುರಗಿ: 'ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಾಯಿಸುವಂತಹ ತಪ್ಪು ಏನಾಗಿದೆ? ನಮ್ಮ ತಾಯಿ, ಹೆಂಡತಿ, ಮಕ್ಕಳು ಏನು ತಪ್ಪು ಮಾಡಿದ್ದಾರೆ? 50 ವರ್ಷ ರಾಜಕೀಯ ಜೀವನದಲ್ಲಿ ಖರ್ಗೆ ಅವರು ಕಲಬುರಗಿ ಜನರಿಗಾಗಿ ದುಡಿದಿದ್ದಾರೆ. ಅಂತಹವರನ್ನು ಸಾಯಿಸುವುದಾಗಿ ಹೇಳಿಕೆ ಕೊಡಲಾಗುತ್ತಿದೆ' ಎಂದು ಚಿತ್ತಾಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಶಾಸಕ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಚಿತ್ತಾಪುರ ತಾಲ್ಲೂಕಿನ ಕಲಗುರ್ತಿ ಗ್ರಾಮದಲ್ಲಿ ಶನಿವಾರ ಪ್ರಚಾರ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ಇವರ ವಿರುದ್ಧ ಮಾತನಾಡುವವರನ್ನು ಸಾಫ್ ಮಾಡುತ್ತಾನಾ? ಚಿತ್ತಾಪುರದ ಮೊಮ್ಮಗ ಇನ್ನೂ ಜೀವಂತ ಇದ್ದಾನೆ. ಮಣಿಕಂಠ ರಾಠೋಡಗೆ ಚಿತ್ತಾಪುರ ಅಲುಗಾಡಿಸಲು ಆಗಲ್ಲ. ಇಂತಹವರ ದಾದಾಗಿರಿ ಇಲ್ಲಿ ನಡೆಯುವುದಿಲ್ಲ' ಎಂದರು.

'ನಾವು ದಾದಾಗಿರಿಗೆ ಇಳಿದರೆ ಕಾಂಗ್ರೆಸಿಗರು ಮನೆಯಿಂದ ಹೊರ ಬರುವುದಿಲ್ಲ' ಎಂದು ಮರಗೋಳದಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಇಂತಹ (ಮಣಿಕಂಠ) ನೂರು ಜನರನ್ನು ನೋಡಿದ್ದೇನೆ. ಇವರ ಅಪ್ಪಗಳು, ಕೆಲ ಶ್ರೀ ಶ್ರೀಗಳು ಇದ್ದಾರೆ. ನಾನು ಜಿಲ್ಲಾ ಉಸ್ತುವಾರಿ ಸಚಿವ ಆಗಿದ್ದಾಗ ಯಾದಗಿರಿ ಮತ್ತು ಕಲಬುರಗಿಯಿಂದ ಒದ್ದು ಹೊರಗೆ ಹಾಕಿದ್ದೆ' ಎಂದು ಹೇಳಿದರು.

ಖರ್ಗೆ ಆರೋಪ 'ಕಟ್ ಅಂಡ್ ಪೇಸ್ಟ್': ಬಿಜೆಪಿ ಟೀಕೆ

ಬೆಂಗಳೂರು: 'ಮಣಿಕಂಠ ರಾಥೋಡ್ ಅವರು ಮಲ್ಲಿಕಾರ್ಜುನ ಖರ್ಗೆ ಕುಟುಂಬದವರ ಹತ್ಯೆಗೆ ಸಂಚು ರೂಪಿಸಿದ್ದಾರೆ ಎಂಬ ಕಾಂಗ್ರೆಸ್ ಆರೋಪ, ಆಡಿಯೊದ ಕಟ್ ಅಂಡ್ ಪೇಸ್ಟ್' ಎಂದು ರಾಜ್ಯ ಬಿಜೆಪಿ ಚುನಾವಣಾ ಸಹ ಉಸ್ತುವಾರಿ ಕೆ.ಅಣ್ಣಾಮಲೈ ಹೇಳಿದ್ದಾರೆ.

ಬಿಜೆಪಿ ಮಾಧ್ಯಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಧಾನಿಯವರ ಪ್ರಚಾರ ಆರಂಭವಾದ ಮೇಲೆ ರಾಜ್ಯದಲ್ಲಿ ಬಿಜೆಪಿ ಪರ ಅಲೆ ಹೆಚ್ಚಾಗಿದ್ದು, ಇದರಿಂದ ಹತಾಶೆಗೊಂಡಿರುವ ಕಾಂಗ್ರೆಸ್ ನಾಯಕರು ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದಾರೆ' ಎಂದರು.

ಚುನಾವಣೆಯಲ್ಲಿ ಸೋಲುವ ಭಯದಿಂದ ಬಣ್ಣ ಬಣ್ಣದ ಕತೆಗಳನ್ನು ಆವಿಷ್ಕರಿಸುತ್ತಿದ್ದಾರೆ. ಕಾಂಗ್ರೆಸ್ ಈ ಆರೋಪದ ಕಥೆಯನ್ನು ಕೇಳಿದರೆ, ಸಣ್ಣ ಮಕ್ಕಳೂ ನಗುತ್ತಾರೆ. ಬಿಜೆಪಿ ಅಭ್ಯರ್ಥಿಯ ಮೇಲೆ ಖರ್ಗೆ ಕುಟುಂಬಕ್ಕೆ ಏಕೆ ಸಿಟ್ಟು? ಅವರ ವಿರುದ್ಧ ಏಕೆ ಅಪಪ್ರಚಾರ ಮಾಡುತ್ತಿದ್ದಾರೆ. ಎರಡು ವರ್ಷಗಳಿಂದ ಒಳ್ಳೆಯ ಕೆಲಸಗಳ ಮೂಲಕ ಜನರ ಪ್ರೀತಿ ಗಳಿಸಿರುವ ರಾಥೋಡ್ ಮೇಲೆ ಪ್ರಿಯಾಂಕ್ ಖರ್ಗೆ 40 ಪ್ರಕರಣ ದಾಖಲಿಸಿದ್ದಾರೆ ಎಂದರು.

ಭಾನುವಾರ, ಮೇ 7, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 126 | ಪುಟ 26
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ
ನಿಮ್ಮ ಅಚ್ಚುಮೆಚ್ಚಿನ ಕಲಾವಿದರನ್ನು ಆಯ್ಕೆ ಮಾಡಿ
QR Code ಸ್ಕ್ಯಾನ್ ಮಾಡಿ

ಮಣಿಪುರ ಹಿಂಸಾಚಾರ: 54 ಮಂದಿ ಸಾವು 7
ಚುನಾವಣಾ ವಿಷಯವಾದ 'ಆಪರೇಷನ್ ಕಾವೇರಿ'
ಇದೇ 9–10: ಪ್ರಯಾಣಕ್ಕೆ ಬಸ್ ಅಲಭ್ಯ? 9
ಹಕ್ಕಿಪಿಕ್ಕಿ ಸಮುದಾಯದ ಮತಬೇಟೆ 9

3ನೇ ಚಾರ್ಲ್ಸ್ ಪಟ್ಟಾಭಿಷೇಕ

ಲಂಡನ್: ವೆಸ್ಟ್‌ಮಿನ್‌ಸ್ಟರ್ ಚರ್ಚ್‌ನಲ್ಲಿ ಸಂಪ್ರದಾಯಬದ್ಧವಾಗಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಬ್ರಿಟನ್‌ನ 40ನೇ ರಾಜನಾಗಿ 3ನೇ ಚಾರ್ಲ್ಸ್ ಅವರ ಪಟ್ಟಾಭಿಷೇಕ ಶನಿವಾರ ನೆರವೇರಿತು. 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ವೈಭವೋಪೇತ ಐಪಿಎಲ್ ಕ್ರಿಕೆಟ್‌ನ ಮತ್ತೊಂದು ಕರಾಳ ಮುಖ

ಬೆಟ್ಟಿಂಗ್ ಭೂತದ ತಾಂಡವ

ಒಳನೋಟ

ಬೀದಿಗೆ ಬಿದ್ದ ಕುಟುಂಬಗಳು

ಪ್ರತಿಕ್ರಿಯಿಸಿ: 9606038256
feedback@prajavani.co.in

• ಗಿರೀಶ ದೊಡ್ಡಮನಿ

ಬೆಂಗಳೂರು 2023 (ಜನವರಿ–ಏಪ್ರಿಲ್)		
36 ಪ್ರಕರಣ	160 ಮಂದಿ ಬಂಧನ	₹ 62 ಲಕ್ಷ ನಗದು ಜಪ್ತಿ

ಬೆಂಗಳೂರು: ಕೆಂಗೇರಿ ಸಮೀಪದ ರಾಮೋಹಳ್ಳಿಯ ಅಶ್ವಿನಿಗೆ ಕ್ರಿಕೆಟ್ ಕುರಿತು ಆಸಕ್ತಿಯೇ ಇರಲಿಲ್ಲ. ಯಾವತ್ತೂ ಟೆಲಿವಿಷನ್ ಅಥವಾ ಮೊಬೈಲ್‌ನಲ್ಲಿ ಪಂದ್ಯಗಳನ್ನು ವೀಕ್ಷಿಸಿರಲಿಲ್ಲ. ಆದರೆ ಅದೇ ಆಟದಿಂದಾಗಿ ಅವರ ಸಂಸಾರ ಅಲ್ಲೋಲಕಲ್ಲೋಲವಾಗಿದೆ!

ಓಮ್ನಿ ಕಾರಿನಲ್ಲಿ ಸಂಚಾರಿ ಅಂಗಡಿ ಮಾಡಿಕೊಂಡು ಬಟ್ಟೆ ವ್ಯಾಪಾರ ಮಾಡಿದ ಆದಾಯದಲ್ಲಿ ಗಂಡ, ಹೆಂಡತಿ ಮತ್ತು ಇಬ್ಬರು ಪುಟ್ಟ ಹೆಣ್ಣು ಮಕ್ಕಳಿದ್ದ ಸಂಸಾರ ನೆಮ್ಮದಿಯಿಂದ ಬಾಳುತ್ತಿತ್ತು. ಆದರೆ, ಅಶ್ವಿನಿಯ ಗಂಡ ಆನಂದನ ತಲೆಗೇರಿದ ಕ್ರಿಕೆಟ್ ಬೆಟ್ಟಿಂಗ್ ಅಮಲಿನಿಂದಾಗಿ ಎಲ್ಲವೂ ಡೋಲಾಯಮಾನವಾಯಿತು. 'ಕ್ರಿಕೆಟ್‌ನಿಂದ ನನ್ನ ಸಂಸಾರ ಮತ್ತು ಜೀವನ ಹಾಳಾಗಿಹೋಯಿತು. ಈ ಐಪಿಎಲ್ ಬೆಟ್ಟಿಂಗ್ ಮಾಡಿ 18 ಲಕ್ಷ ರೂಪಾಯಿ ಸಾಲ ಮಾಡಿದ ನನ್ನ ಗಂಡ, ಇದ್ದ ಒಂದು ಸೈಟು ಮತ್ತು ಜೀವನಾಧಾರವಾಗಿದ್ದ ಒಮ್ನಿ ಕಾರನ್ನೂ ಮಾರಿದರು. ಕೆಲವು ದಿನಗಳ ಹಿಂದೆ ಸಾಲಗಾರರ ಕಾಟ ತಾಳದೇ ಕಾಣೆಯಾಗಿಬಿಟ್ಟಿದ್ದಾರೆ. ಮಾರ್ಚ್‌ನಲ್ಲಿ ಬಿಡದಿಯಲ್ಲಿ ಒಂದು ಮದುವೆಗೆ ಹೋಗಿದ್ವಿ. ಅಲ್ಲಿಂದಲೇ ನಾಪತ್ತೆಯಾದರು. ಇನ್ನೂ ಹತ್ತು ಲಕ್ಷ ಸಾಲ ಇದೆ. ಪೊಲೀಸ್ ಕಂಪ್ಲೆಂಟ್ ಕೊಟ್ಟಿದ್ದೇನೆ. ಇದುವರೆಗೂ ಪತ್ತೆಯಾಗಿಲ್ಲ. ಅವರು ಮಾಡಿದ ಸಾಲ ತೀರಿಸಲು ನಾನು ಮತ್ತೆ ಸಾಲ ಮಾಡಿದ್ದೇನೆ' ಎಂದು ಗದ್ಗದಿತರಾದರು ಅಶ್ವಿನಿ.

2008ರಲ್ಲಿ ಆರಂಭವಾದ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿ ಇವತ್ತು ಜಗತ್ತಿನ ಶ್ರೀಮಂತ ಕ್ರೀಡಾ ಲೀಗ್‌ಗಳಲ್ಲಿ ಒಂದು. ಕಳೆದ 16 ವರ್ಷಗಳಲ್ಲಿ ಐಪಿಎಲ್ ಗಳಿಸಿದ ಬ್ರ್ಯಾಂಡ್ ಮೌಲ್ಯ ಅಸಾಧಾರಣವಾದದ್ದು. ಕೇವಲ ಮಾಧ್ಯಮ ಪ್ರಸಾರ ಹಕ್ಕುಗಳೇ ₹ 48 ಸಾವಿರ ಕೋಟಿಗೆ ಹರಾಜಾಗುವಷ್ಟು ಬೆಳೆದಿದೆ. ಆಟಗಾರರು ಮತ್ತು ಆಯೋಜಕರು ಕೋಟಿ ಕೋಟಿ ಹಣ ಗಳಿಸುತ್ತಿದ್ದಾರೆ.

ಝುಗಮಗಿಸುವ ಈ ಟೂರ್ನಿಯ ಬೌಂಡರಿಯಾಚೆ ಅಕ್ರಮ ಬೆಟ್ಟಿಂಗ್‌ನ ಮಾಫಿಯಾ ಬ್ರಹ್ಮರಾಕ್ಷಸನಂತೆ ಬೆಳೆದಿದೆ.

6ನೇ ಪುಟ ನೋಡಿ

ವೈದ್ಯಕೀಯ ಕಾಲೇಜುಗಳ ಪ್ರವೇಶಕ್ಕೆ 'ನೀಟ್' ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ಆಯೋಜಿಸುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಭಾನುವಾರ (ಇದೇ 7ರಂದು) ದೇಶದಾದ್ಯಂತ ನಡೆಯಲಿದ್ದು, ರಾಜ್ಯದ 1.34 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಪಶು ವೈದ್ಯಕೀಯ, ಹೋಮಿಯೊಪಥಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಪ್ರತಿ ವರ್ಷ 'ನೀಟ್' ನಡೆಸುತ್ತದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಪರೀಕ್ಷೆ ತೆಗೆದುಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ 2 ಲಕ್ಷ ಹೆಚ್ಚಳವಾಗಿದೆ. 990 ಹೊಸ ಕೇಂದ್ರಗಳನ್ನು ಆರಂಭಿಸಲಾಗಿದೆ. ಒಟ್ಟು 13 ಭಾಷೆಗಳಲ್ಲಿ 'ನೀಟ್' ಬರೆಯಲು ಅವಕಾಶ ಇದೆ. ಇಂಗ್ಲಿಷ್, ಹಿಂದಿ, ಅಸ್ಸಾಮಿ, ಬೆಂಗಾಲಿ, ಗುಜರಾತಿ, ಮಲಯಾಳ, ಕನ್ನಡ, ಮರಾಠಿ, ಒಡಿಯಾ, ತಮಿಳು, ತೆಲುಗು, ಉರ್ದು ಮತ್ತು ಪಂಜಾಬಿ ಈ 13 ಭಾಷೆಗಳು.

7ನೇ ಪುಟ ನೋಡಿ

20,87,445	ದೇಶದಲ್ಲಿ ಪರೀಕ್ಷೆ ಬರೆಯುವವರು
1,78,484	ಲಭ್ಯವಿರುವ ಒಟ್ಟು ಸೀಟುಗಳು
499	ಪರೀಕ್ಷೆ ನಡೆಯುವ ನಗರಗಳು
14	ಭಾರತದ ಹೊರಗಿನ ನಗರಗಳು
4,560	ಒಟ್ಟು ಪರೀಕ್ಷಾ ಕೇಂದ್ರಗಳು
1,34,379	ಕರ್ನಾಟಕದಲ್ಲಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳು
29	ರಾಜ್ಯದಲ್ಲಿ ಪರೀಕ್ಷೆ ನಡೆಯಲಿರುವ ನಗರಗಳು
81	ರಾಜ್ಯದಲ್ಲಿನ ಪರೀಕ್ಷಾ ಕೇಂದ್ರಗಳು
52	ಬೆಂಗಳೂರಿನ ಪರೀಕ್ಷಾ ಕೇಂದ್ರಗಳು

ಕೋರ್ಸ್‌ಗಳು	ಕಾಲೇಜುಗಳು
ವೈದ್ಯಕೀಯ	645
ದಂತ ವೈದ್ಯಕೀಯ	318
ಆಯುಷ್	914
ಪಶು ವೈದ್ಯಕೀಯ	47

ಯಾವುದೆಲ್ಲ ನಿಷೇಧ?

- ಉದ್ದ ತೋಳಿನ ಉಡುಪು
- ಕ್ಯಾಲ್ಕುಲೇಟರ್
- ಶೂ
- ಆಭರಣಗಳು
- ಪೆನ್ಸಿಲ್ ಬಾಕ್ಸ್
- ಲೋಹದ ವಸ್ತುಗಳು
- ಜಾಮಿಟ್ರಿ
- ಎಲೆಕ್ಟ್ರಾನಿಕ್ ಕೈಗಡಿಯಾರ, ಪೆನ್

ಇವು ಜೊತೆಗಿರಲಿ

- ನೀಟ್ ಪ್ರವೇಶ ಪತ್ರ
- ಭಾವಚಿತ್ರವಿರುವ ಗುರುತಿನ ಪತ್ರ
- (ಆಧಾರ್ ಕಾರ್ಡ್, ಚುನಾವಣಾ ಗುರುತುಪತ್ರ ಇತ್ಯಾದಿಯಲ್ಲಿ ಯಾವುದಾದರೂ ಒಂದು)
- ಸಾಮಾನ್ಯ ಪಾದರಕ್ಷೆ
- ಪಾರದರ್ಶಕ ನೀರಿನ ಬಾಟಲ್

ಪರೀಕ್ಷೆ ನಡೆಯುವ ಸಮಯ: ಮಧ್ಯಾಹ್ನ 2ರಿಂದ ಸಂಜೆ 5.20
ಕೇಂದ್ರಕ್ಕೆ ಪ್ರವೇಶ ಮಧ್ಯಾಹ್ನ: 1.30,
ಮಾಹಿತಿಗೆ: nta.neet.nic.in

ಭಾನುವಾರದ ಉಷ್ಣಾಂಶ: 29° ಗರಿಷ್ಠ, 22° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಮಳೆ ಸುರಿಯುವ ಸಾಧ್ಯತೆ

ಹವಾಮಾನ: ಸೋಮವಾರ 30° 22° | ಮಂಗಳವಾರ 30° 22° | ಬುಧವಾರ 30° 22°

ಮೋದಿ ಸಾಗಿದ ಹಾದಿಯಲ್ಲಿ ಮರಗಳಿಗೆ ಕೊಡಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ರೋಡ್ ಶೋ ತೆರಳುವ ರಸ್ತೆಗಳಲ್ಲಿ ಉದ್ದಕ್ಕೂ ಮರಗಳ ಟೊಂಗೆ ಕತ್ತರಿಸಲಾಗಿದ್ದು, ಇದರ ವಿರುದ್ಧ ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು ನೀಡಿದೆ.

ರೋಡ್ ಶೋ ನಡೆಸುವ ರಸ್ತೆಗಳು, ವಾಸ್ತವ್ಯ ಹೂಡುವ ರಾಜಭವನ, ಹೆಲಿಪ್ಯಾಡ್‌ಗಳಲ್ಲಿ ಒಣಗಿರುವ ಮರ, ಅಡ್ಡಲಾಗಿರುವ ರೆಂಬೆಗಳನ್ನು ತೆರವುಗೊಳಿಸಲು ಬಿಬಿಎಂಪಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಮೇ 2ರಂದೇ ಆದೇಶ ಹೊರಡಿಸಿದ್ದರು. ಅದರಂತೆ ಬಿಬಿಎಂಪಿ ಸಿಬ್ಬಂದಿ ಮರಗಳ ಟೊಂಗೆಗಳನ್ನು ಕತ್ತರಿಸಿದ್ದರು.

ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ಕಾಂಗ್ರೆಸ್ ಉಪಾಧ್ಯಕ್ಷ ಪಿ.ಆರ್.ರಮೇಶ್, ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ. '500ಕ್ಕೂ ಹೆಚ್ಚು

ಬಸವೇಶ್ವರ ನಗರದಲ್ಲಿ ರಸ್ತೆಗೆ ಚಾಚಿಕೊಂಡಿದ್ದ ಮರದ ರೆಂಬೆಗಳನ್ನು ಕತ್ತರಿಸಿರುವುದು

ಮರಗಳ ಟೊಂಗೆ ಕತ್ತರಿಸಲಾಗಿದ್ದು, ಇದು ಮರಗಳ ಕಾಯ್ದೆಗೆ ವಿರುದ್ಧವಾದುದು ಎಂದು ಹೇಳಿದ್ದಾರೆ. ರಾಜಕೀಯ ಲಾಭ ಪಡೆಯಲು ನಡೆಸಿರುವ ರ‍್ಯಾಲಿಗಾಗಿ ಪರಿಸರಕ್ಕೆ ಹಾನಿ ಮಾಡಲಾಗಿದೆ. ಮರದ ಟೊಂಗೆಗಳನ್ನು ಕಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, 'ಪ್ರಧಾನಿ ಅವರ ಕಾರ್ಯಕ್ರಮಕ್ಕೆ ಶಿಷ್ಟಾಚಾರ ಪಾಲಿಸಲಾಗಿದೆ. ಎಸ್‌ಪಿಜಿ ತಂಡ ನೀಡಿದ್ದ ಸೂಚನೆಯಂತೆ ರೆಂಬೆಗಳನ್ನು ಕತ್ತರಿಸಲಾಗಿದೆ. ಇದಕ್ಕೆ ಬಿಬಿಎಂಪಿಯಿಂದ ಹೆಚ್ಚುವರಿ ಖರ್ಚು ಮಾಡಿಲ್ಲ. ಮರಗಳ ರೆಂಬೆಗಳನ್ನು ಆಗಾಗ ಕತ್ತರಿಸಲು ವರ್ಷದ ಅವಧಿಗೆ ಗುತ್ತಿಗೆ ನೀಡಲಾಗಿದೆ. ಅವರಿಂದಲೇ ಈ ಕಾರ್ಯ ಮಾಡಿಸಿದ್ದು, ಹೆಚ್ಚುವರಿ ಹಣ ನೀಡುವ ಪ್ರಶ್ನೆ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಪ್ರಧಾನಿ ತೆರಳುವ ರಸ್ತೆಗಳಲ್ಲಿ ಗುಂಡಿಗಳಿಲ್ಲದಂತೆ ನೋಡಿಕೊಳ್ಳುವುದು ಕೂಡ ಶಿಷ್ಟಾಚಾರ. ಆ ಕೆಲಸವನ್ನು ಬಿಬಿಎಂಪಿ ಮಾಡಿದೆ. ಬಿಬಿಎಂಪಿಯಲ್ಲಿ ಲಭ್ಯವಿರುವ ಅನುದಾನವನ್ನು ಕಾನೂನು ವ್ಯಾಪ್ತಿಯಲ್ಲೇ ಬಳಕೆ ಮಾಡಲಾಗಿದೆ' ಎಂದು ತಿಳಿಸಿದರು.

1. ನರೇಂದ್ರ ಮೋದಿ ಅವರು ರಾಜಾಜಿನಗರ ಶಂಕರಮಠ ವೃತ್ತದಲ್ಲಿ ರೋಡ್ ಶೋ ಮೂಲಕ ಸಾಗುವುದಕ್ಕೂ ಮುನ್ನ ವಿದ್ಯಾರ್ಥಿನಿಯೊಬ್ಬರು ಬ್ಯಾರಿಕೇಡ್ ಹಾರಿ ಕಾಲೇಜಿಗೆ ತೆರಳಿದರು 2.ಶಂಕರಮಠ ವೃತ್ತದಲ್ಲಿ ಆಂಬುಲೆನ್ಸ್‌ವೊಂದು ಸಿಕ್ಕಿಕೊಂಡಿದ್ದ ದೃಶ್ಯ – ಪ್ರಜಾವಾಣಿ ಚಿತ್ರಗಳು/ಎಂ.ಎಸ್.ಮಂಜುನಾಥ್



ನಗರದಲ್ಲಿ ಪ್ರಧಾನಿ ಮೋದಿ 26 ಕಿ.ಮೀ. ರೋಡ್ ಶೋ • ಮಾರ್ಗ ಮಧ್ಯೆ ಸಿಲುಕಿದ ಆಂಬುಲೆನ್ಸ್

ವ್ಯಾಪಾರಿಗಳಿಗೆ ನಷ್ಟ, ಜನರಿಗೆ ಕಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ತಮ್ಮ ಪಕ್ಷದ ಅಭ್ಯರ್ಥಿಗಳ ಪರವಾಗಿ ಮತ ಸೆಳೆಯಲು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ರಾಜಧಾನಿ ಹೃದಯಭಾಗದಲ್ಲೇ ನಡೆಸಿದ 'ರೋಡ್ ಶೋ'ದಿಂದ ನಾಗರಿಕರು ಪರದಾಡಿದರು.

ಏಪ್ರಿಲ್ 29ರಂದು ಮಾಗಡಿ ರಸ್ತೆಯಲ್ಲಿ ನಡೆಸಿದ್ದ ರೋಡ್ ಶೋದಿಂದ ಆ ಭಾಗದ ನಾಗಕರಿಕರು ಸಂಕಷ್ಟಕ್ಕೆ ಒಳಗಾಗಿದ್ದರು. ಪ್ರಮುಖ ಮಾರ್ಗಗಳನ್ನು ಬಂದ್ ಮಾಡಿದ್ದರಿಂದ ಆಕ್ರೋಶ ಹೊರಹಾಕಿದ್ದರು. ವಾರದ ಬಳಿಕ ಮತ್ತೊಂದು ರೋಡ್ ಶೋದಿಂದ ರೋಗಿಗಳು, ಬೆಳಗ್ಗಿನ ಪಾಳಿ ಕೆಲಸಕ್ಕೆ ತೆರಳಬೇಕಿದ್ದವರು ತೊಂದರೆಗೆ ಸಿಲುಕಿದರು. ದ್ವಿಚಕ್ರ ವಾಹನಗಳಲ್ಲಿ ಕರ್ತವ್ಯಕ್ಕೆ ತೆರಳಬೇಕಿದ್ದವರು ನಿಗದಿತ ಸಮಯಕ್ಕೆ ಕಚೇರಿಗೆ ತಲುಪಲು ಸಾಧ್ಯವಾಗಲಿಲ್ಲ. ಕೆಲವರು ದಟ್ಟಣೆ ನಡುವೆಯೇ ಹರಸಾಹಸ ಮಾಡಿ ಕೆಲಸಕ್ಕೆ ತೆರಳಿದ್ದು ಕಂಡುಬಂತು. ಶಂಕರಮಠದ ಬಳಿ ಬ್ಯಾರಿಕೇಡ್ ಹಾರಿ ವಿದ್ಯಾರ್ಥಿಗಳು ಕಾಲೇಜಿಗೆ ತೆರಳಿದರು. ಕಾಲೇಜು ವಿದ್ಯಾರ್ಥಿಗಳಿಗೆ ಸ್ಥಳೀಯರು ನೆರವಾದರು.

ಮಾರ್ಗದಲ್ಲಿ ಹೆಜ್ಜೆ ಹೆಜ್ಜೆಗೂ ಬಂದೋಬಸ್ತ್ ಕಲ್ಪಿಸಲಾಗಿತ್ತು. ರಸ್ತೆ ದಾಟಲು ಮುಂದಾದರೆ ಪೊಲೀಸರು ಬೆದರಿಸುತ್ತಿದ್ದರು. ಬೆಳಿಗ್ಗೆ 10.20ರ ಸುಮಾರಿಗೆ ಸೋಮೇಶ್ವರ ಸಭಾ ಭವನ ಬಳಿಯಿಂದ ರೋಡ್ ಶೋ ಆರಂಭವಾಯಿತು. ಬೆಳಿಗ್ಗೆ 8ಕ್ಕೆ ರಸ್ತೆಗಳನ್ನು ಬಂದ್ ಮಾಡಲಾಗಿತ್ತು. ಇದರಿಂದ ಜನರಿಗೆ ಹಾಲು, ಅಗತ್ಯ ವಸ್ತುಗಳು ದೊರೆಯಲಿಲ್ಲ. ಮನೆಯಲ್ಲೇ ಉಳಿಯಬೇಕಾಯಿತು.

ಜೆ.ಪಿ.ನಗರ, ಜಯನಗರ, ಸೌತ್ ಎಂಡ್ ಸರ್ಕಲ್, ಮಾಧವರಾವ್ ವೃತ್ತ, ರಾಮಕೃಷ್ಣ ಆಶ್ರಮ, ಉಮಾ ಥಿಯೇಟರ್ ವೃತ್ತ, ಮೈಸೂರು ಸಿಗ್ನಲ್, ಟೋಲ್ ಗೇಟ್ ಸಿಗ್ನಲ್, ಗೋವಿಂದ ರಾಜನಗರ, ಮಾಗಡಿ ರೋಡ್ ಜಂಕ್ಷನ್, ಶಂಕರ ಮಠ ವೃತ್ತ, ಮಲ್ಲೇಶ್ವರ ವೃತ್ತ, ಸಂಪಿಗೆ ರಸ್ತೆಯ 18ನೇ ಅಡ್ಡರಸ್ತೆ ಜಂಕ್ಷನ್‌ಗಳಲ್ಲಿ ರೋಡ್ ಶೋ ನಡೆಯಿತು. ಈ ಮಾರ್ಗದಲ್ಲಿ ಜನರು ಸಮಸ್ಯೆಗೆ ಸಿಲುಕಿದರು.

ಈ ಮಾರ್ಗದ ಎರಡು ಬದಿಯಲ್ಲೂ ಭದ್ರತಾ ದೃಷ್ಟಿಯಿಂದ ಔಷಧದ ಅಂಗಡಿ, ಹೋಟೆಲ್, ಮೊಬೈಲ್ ಅಂಗಡಿ, ಬಟ್ಟೆ ಅಂಗಡಿಗಳನ್ನು ಬಂದ್ ಮಾಡಿಸಲಾಗಿತ್ತು. ಹೋಟೆಲ್‌ಗಳನ್ನೇ ಅವಲಂಬಿಸಿದ್ದವರಿಗೆ ಬೆಳಿಗ್ಗೆ ತಿಂಡಿಯೂ ದೊರೆಯಲಿಲ್ಲ. ಇದು ಜನಾಕ್ರೋಶಕ್ಕೆ ಕಾರಣವಾಯಿತು.

ರೋಡ್ ಶೋಗಾಗಿ ಪ್ರಮುಖ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಿದ್ದರಿಂದ ರೋಗಿಗಳು ಪರದಾಡಿದರು. ಆಂಬುಲೆನ್ಸ್‌ಗಳು ಪರ್ಯಾಯ ಮಾರ್ಗದ ದಟ್ಟಣೆಯಲ್ಲಿ ಸಿಲುಕಿದ್ದವು. ಸಮಯಕ್ಕೆ ಸರಿಯಾಗಿ ಆಸ್ಪತ್ರೆ ತಲುಪಲು ಸಾಧ್ಯವಾಗಲಿಲ್ಲ. ರಾಜಾಜಿನಗರ ಶಂಕರಮಠ ವೃತ್ತದಲ್ಲಿ ಸ್ಥಳೀಯರು ಹಾಗೂ ಪೊಲೀಸರು ಆಂಬುಲೆನ್ಸ್ ಮುಂದಕ್ಕೆ ತೆರಳಲು ಸಾರ್ವಜನಿಕರು ಸಹಾಯ ಮಾಡಿದರು.

ಬ್ಯಾರಿಕೇಡ್ ತೆರವಿಗೆ ಆಗ್ರಹ: ಜೆ.ಪಿ. ನಗರದಲ್ಲಿ ರೋಡ್ ಶೋ ಆರಂಭಕ್ಕೆ ಎರಡು ತಾಸು ಮೊದಲೇ ಬ್ಯಾರಿಕೇಡ್ ಹಾಕಿ, ಮುಖ್ಯರಸ್ತೆ ಹಾಗೂ ಅಡ್ಡ ರಸ್ತೆಗಳನ್ನು ಬಂದ್ ಮಾಡಲಾಗಿತ್ತು. ಅದೇ ಮಾರ್ಗದಲ್ಲಿ ಬಂದವರು ಬ್ಯಾರಿಕೇಡ್ ತೆರವು ಮಾಡುವಂತೆ ಪೊಲೀಸರ ಜತೆಗೆ ವಾಗ್ವಾದ ನಡೆಸಿದರು.

'ಯಾರು ಬಂದರೆ ನಮಗೇನು. ಮನೆಯಲ್ಲಿ ವೃದ್ಧರಿದ್ದಾರೆ. ಅವರಿಗೆ ತಿಂಡಿ ಕೊಡಲು ಹೋಗಬೇಕು. ಬ್ಯಾರಿಕೇಡ್ ತೆಗೆಯಿರಿ' ಎಂದು ವಾಗ್ವಾದ ನಡೆಸಿದರು. ದ್ವಿಚಕ್ರ ವಾಹನ ಸವಾರರ ಆಕ್ರೋಶ ಹೆಚ್ಚುತ್ತಿದ್ದಂತೆ ಬ್ಯಾರಿಕೇಡ್ ತೆರವುಗೊಳಿಸಿ, ರಸ್ತೆ ದಾಟಲು ಬೈಕ್‌ಗಳಿಗೆ ಅವಕಾಶ ನೀಡಲಾಯಿತು. ಬಹುತೇಕರಿಗೆ ವಾಹನಗಳನ್ನು ಮನೆಯ ಕಾಂಪೌಂಡ್ ಹೊರತೆಗೆಯಲು ಸಾಧ್ಯವಾಗಲಿಲ್ಲ.

ಪ್ರಜಾ ಮತ — ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023



ಇಂದು ಮೋದಿ ರೋಡ್ ಶೋ: 19 ರಸ್ತೆಗಳಲ್ಲಿ ಸಂಚಾರ ನಿರ್ಬಂಧ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ನಗರದಲ್ಲಿ ಭಾನುವಾರ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ರೋಡ್ ಶೋ ನಡೆಸಲಿದ್ದು, ಇದಕ್ಕಾಗಿ 19 ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

'ನ್ಯೂ ತಿಪ್ಪಸಂದ್ರದ ಕೆಂಪೇಗೌಡ ಪ್ರತಿಮೆಯಿಂದ ರೋಡ್ ಶೋ ಆರಂಭವಾಗಲಿದೆ. ಎಂ.ಜಿ.ರಸ್ತೆಯ ಟ್ರಿನಿಟಿ ವೃತ್ತದಲ್ಲಿ ಅಂತ್ಯವಾಗಲಿದೆ. ರೋಡ್ ಶೋ ಸಾಗುವ ಮಾರ್ಗದಲ್ಲಿ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಎಲ್ಲ ಪ್ರಕಾರದ ವಾಹನಗಳ ಸಂಚಾರಕ್ಕೆ ನಿರ್ಬಂಧ ಇರಲಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ನಿರ್ಬಂಧಿತ ರಸ್ತೆಗಳಲ್ಲಿ ಸಂಚರಿಸುವ ಸಾರ್ವಜನಿಕರು, ಭಾನುವಾರ ಪರ್ಯಾಯ ರಸ್ತೆಗಳಲ್ಲಿ ಸಂಚರಿಸಬೇಕು. ರೋಡ್ ಶೋ ಮುಗಿಯುತ್ತಿದ್ದಂತೆ ಸಂಚಾರ ವ್ಯವಸ್ಥೆ ಯಥಾಪ್ರಕಾರ ಇರಲಿದೆ' ಎಂದು ಹೇಳಿದ್ದಾರೆ.

ನಿರ್ಬಂಧಿತ ರಸ್ತೆಗಳು: ರಾಜಭವನ ರಸ್ತೆ, ಮೇಖ್ರಿ ವೃತ್ತ, ರೇಸ್ ಕೋರ್ಸ್ ರಸ್ತೆ, ಟಿ. ಚೌಡಯ್ಯ ರಸ್ತೆ, ರಮಣ ಮಹರ್ಷಿ ರಸ್ತೆ, ಹಳೇ ವಿಮಾನ ನಿಲ್ದಾಣ ರಸ್ತೆ, ಸುರಂಜನ್ ದಾಸ್ ರಸ್ತೆ, ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಜಗದೀಶನಗರ ಅಡ್ಡರಸ್ತೆ, ಬಿಇಎಂಎಲ್ ಜಂಕ್ಷನ್, ಜೀವನ್‌ಬಿಮಾನಗರ ಮುಖ್ಯರಸ್ತೆ, ಇಂದಿರಾನಗರ 80 ಅಡಿ ರಸ್ತೆ, ಹೊಸ ತಿಪ್ಪಸಂದ್ರ ರಸ್ತೆ, ಇಂದಿರಾನಗರ 12ನೇ ಮುಖ್ಯರಸ್ತೆಯ 100 ಅಡಿ ರಸ್ತೆ, ಸಿಎಂಎಚ್ ರಸ್ತೆ, ಅದರ್ಶ ಜಂಕ್ಷನ್, ಹಲಸೂರು ಮೆಟ್ರೊ ನಿಲ್ದಾಣ ರಸ್ತೆ, ಟ್ರಿನಿಟಿ ಜಂಕ್ಷನ್.

ಮೈಸೂರು ರಸ್ತೆಯ ಸಿರ್ಸಿ ವೃತ್ತದಲ್ಲಿ ರೋಡ್ ಶೋ ಬಳಿಕ ರಸ್ತೆಯಲ್ಲಿ ಬಿದ್ದಿದ್ದ ಹೂವಿನ ರಾಶಿ
ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಪುಷ್ಪವೃಷ್ಟಿಗೆ 40 ಟನ್ ಹೂವು ಬಳಕೆ

ಪ್ರಧಾನಿ ಅವರು ನಡೆಸಿದ 26.5 ಕಿ.ಮೀ ರೋಡ್ ಶೋ ಮಾರ್ಗದುದ್ದಕ್ಕೂ ಪುಷ್ಪವೃಷ್ಟಿಗೆ ಅಂದಾಜು 40 ಟನ್ ಹೂವು ಬಳಕೆ ಮಾಡಲಾಯಿತು. ಇದಕ್ಕೆ ಲಕ್ಷಾಂತರ ರೂಪಾಯಿ ಖರ್ಚಾಗಿದೆ. ಇದನ್ನು ಆಯಾ ಭಾಗದ ಅಭ್ಯರ್ಥಿಗಳು ಹಾಗೂ ಸಂಸದರು ಭರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಗರದ ಲಕ್ಷ್ಮಿ ಸಭಾಂಗಣಕ್ಕೆ ರಾಜ್ಯದ ಬೇರೆ ಭಾಗಗಳಿಂದ ಹೂವು ತರಿಸಲಾಗಿತ್ತು. ಅಲ್ಲಿಂದ ಪ್ರತಿ ಎರಡು ಕಿ.ಮೀಗೆ ಎರಡು ಟನ್‌ನಂತೆ ಹಂಚಿಕೆ ಮಾಡಿ, ರಸ್ತೆಬದಿಯಲ್ಲಿದ್ದ ಕಾರ್ಯಕರ್ತರು ಹಾಗೂ ಅಭಿಮಾನಿಗಳಿಗೆ ಹಂಚಿಕೆ ಮಾಡಲಾಯಿತು. ಅವರು ಪ್ರಧಾನಿಗೆ ಪುಷ್ಪವೃಷ್ಟಿಗರೆದರು.

'ಹಲವು ಜಿಲ್ಲೆಗಳಿಂದ ಆರು ಬಗೆಯ ಹೂವುಗಳನ್ನು ತರಿಸಲಾಗಿತ್ತು. ಶುಕ್ರವಾರ ರಾತ್ರಿಯೇ ಸಿಟಿ ಮಾರುಕಟ್ಟೆ, ಮಹಾಲಕ್ಷ್ಮಿ ಠಾಣೆ ಸಿಬ್ಬಂದಿ, ಪ್ರಧಾನಿ ಭದ್ರತಾ ಸಿಬ್ಬಂದಿ ಬಂದು ಹೂವಿನ ರಾಶಿ ಪರಿಶೀಲಿಸಿದ್ದರು. ವಿಧಿ ವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿಯೂ ಪರಿಶೀಲನೆ ನಡೆಸಿಯೇ ಅನುಮತಿ ನೀಡಿದ್ದರು. ಶನಿವಾರ ಬೆಳಿಗ್ಗೆ ರೋಡ್ ಶೋ ಆರಂಭವಾಗುವುದಕ್ಕೂ ಎರಡು ತಾಸು ಮೊದಲು ನಿಗದಿತ ಸ್ಥಳಕ್ಕೆ ಹೂವು ಕಳುಹಿಸಲಾಗಿತ್ತು' ಎಂದು ಉಸ್ತುವಾರಿ ಚಂದ್ರು ತಿಳಿಸಿದರು.

ಪ್ರಧಾನ್, ಸಂತೋಷ ವೀಕ್ಷಣೆ: ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್, ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ಕಾಡು ಮಲ್ಲೇಶ್ವರ ದೇವಸ್ಥಾನದ ಸಮೀಪ ಕಾರ್ಯಕರ್ತರ ಜತೆ ರೋಡ್ ಶೋ ವೀಕ್ಷಿಸಿದರು.

ಆಟೊ ಚಾಲಕರಿಗೂ ನಷ್ಟ

ಬೀದಿಬದಿಯ ವ್ಯಾಪಾರಿಗಳು ಮಾತ್ರವಲ್ಲದೇ ಆಟೊ ಚಾಲಕರಿಗೂ ನಷ್ಟ ಅನುಭವಿಸಿದರು. ಮೆಟ್ರೊ ನಿಲ್ದಾಣಗಳ ಬಳಿಯಿಂದ ಎಲ್ಲ ಆಟೊಗಳನ್ನು ಬೇರೆಡೆಗೆ ಸ್ಥಳಾಂತರಿಸಲಾಗಿತ್ತು. ಮೆಟ್ರೊದಿಂದ ಇಳಿದ ಪ್ರಯಾಣಿಕರಿಗೆ ಸೌತ್ ಎಂಡ್ ವೃತ್ತ, ಜೆಪಿ ನಗರ, ಜಯನಗರದಲ್ಲಿ ಆಟೊಗಳು ಸಿಗಲಿಲ್ಲ. 'ರೋಡ್ ಶೋ ನಮ್ಮ ಬಾಡಿಗೆ ಕಿತ್ತು ಕೊಂಡಿತು' ಎಂದು ಆಟೊ ಚಾಲಕ ರಮೇಶ್ ಅಸಮಾಧಾನ ಹೊರಹಾಕಿದರು.

93 ವರ್ಷದ ಮಹಿಳೆಗೆ ಸಿಕ್ಕಿತು ಫ್ಲ್ಯಾಟ್

8 ದಶಕ ಬಳಿಕ ನ್ಯಾಯ

ಮುಂಬೈ (ಪಿಟಿಐ): ಎಂಟು ದಶಕ ಹಳೆಯದಾದ ವ್ಯಾಜ್ಯವೊಂದಕ್ಕೆ ಬಾಂಬೆ ಹೈಕೋರ್ಟ್ ಮುಕ್ತಾಯ ಹಾಡಿದೆ. ದಕ್ಷಿಣ ಮುಂಬೈನ ಎರಡು ಫ್ಲ್ಯಾಟ್‌ಗಳನ್ನು 93 ವರ್ಷದ ಮಹಿಳೆಗೆ ಹಸ್ತಾಂತರಿಸುವಂತೆ ಮಹಾರಾಷ್ಟ್ರ ಸರ್ಕಾರಕ್ಕೆ ಆದೇಶ ನೀಡುವ ಮೂಲಕ ಪ್ರಕರಣವನ್ನು ವಿಲೇವಾರಿ ಮಾಡಿದೆ.

ದಕ್ಷಿಣ ಮುಂಬೈನ ರೂಬಿ ಮ್ಯಾನ್ಶನ್‌ನ ಮೊದಲ ಮಹಡಿಯಲ್ಲಿರುವ 500 ಚದರ ಅಡಿ ಹಾಗೂ 600 ಚದರ ಅಡಿ ಅಳತೆಯ ಎರಡು ಫ್ಲ್ಯಾಟ್‌ಗಳನ್ನು ಅವುಗಳ ಮಾಲೀಕರಾದ ಆಲೀಸ್ ಡಿಸೋಜಾ ಅವರಿಗೆ ನೀಡುವಂತೆ ಕೋರ್ಟ್ ಆದೇಶಿಸಿದೆ.

ಹಿಂದೆ ಜಾರಿಯಲ್ಲಿದ್ದ ಭಾರತ ರಕ್ಷಣಾ ಕಾಯ್ದೆಯ ಅಡಿಯಲ್ಲಿ ಈ ಕಟ್ಟಡವನ್ನು 1942ರ ಮಾರ್ಚ್ 28ರಂದು ಅಂದಿನ ಬ್ರಿಟಿಷ್ ಸರ್ಕಾರ ವಶಕ್ಕೆ ಪಡೆದಿತ್ತು. ಆದರೆ, 1946ರ ಜುಲೈನಲ್ಲಿ ಈ ಕಟ್ಟಡವನ್ನು ವಾಪಸ್ ನೀಡುವಂತೆ ಆದೇಶವಿದ್ದರೂ ಮಾಲೀಕರಿಗೆ ಹಸ್ತಾಂತರಿಸಿಲ್ಲ ಎಂದು ವಿಭಾಗೀಯ ಪೀಠದ ನ್ಯಾಯಮೂರ್ತಿಗಳಾದ ಆರ್.ಡಿ. ಧನುಕಾ ಮತ್ತು ಎಂ.ಎಂ. ಸಥಯೇ ಅವರು ಮೇ 4ರಂದು ಹೊರಡಿಸಿದ ಆದೇಶದಲ್ಲಿ ಹೇಳಿದ್ದಾರೆ.

1946ರ ಆದೇಶದ ಪ್ರಕಾರ, ಫ್ಲ್ಯಾಟ್‌ಗಳನ್ನು ತಮಗೆ ಹಸ್ತಾಂತರಿಸಲು ಮಹಾರಾಷ್ಟ್ರ ಸರ್ಕಾರ ಹಾಗೂ ಜಿಲ್ಲಾಧಿಕಾರಿಗೆ ಆದೇಶ ನೀಡುವಂತೆ ಡಿಸೋಜಾ ಅವರು ತಮ್ಮ ಅರ್ಜಿಯಲ್ಲಿ ಕೋರಿದ್ದರು. ಆದರೆ, ಈ ಫ್ಲ್ಯಾಟ್‌ಗಳಲ್ಲಿ ಅಂದಿನ ಬ್ರಿಟಿಷ್ ಸರ್ಕಾರದ ಅಧಿಕಾರಿಯ ವಂಶಸ್ಥರು ವಾಸವಿದ್ದಾರೆ. ಅಧಿಕಾರಿ ಡಿ.ಎಸ್. ಲಾಡ್ ಎಂಬುವರು 1940ರಲ್ಲಿ ಈ ಫ್ಲ್ಯಾಟ್‌ಗಳಲ್ಲಿ ವಾಸ ಆರಂಭಿಸಿದ್ದರು ಲಾಡ್ ಅವರು ಅಂದಿನ ಸರ್ಕಾರದ ನಾಗರಿಕ ಸೇವಾ ಇಲಾಖೆಯ ಅಧಿಕಾರಿಯಾಗಿದ್ದರು. ಕಟ್ಟಡವನ್ನು ವಾಪಸ್ ನೀಡುವ ಆದೇಶವಿದ್ದರೂ ಫ್ಲ್ಯಾಟ್‌ಗಳ ನಿಜವಾದ ಮಾಲೀಕರಾದ ತಮಗೆ ಅವುಗಳನ್ನು ಹಸ್ತಾಂತರಿಸಿಲ್ಲ. ಆದರೆ ಕಟ್ಟಡದ ಇತರ ಫ್ಲ್ಯಾಟ್‌ಗಳನ್ನು ಅವುಗಳ ಮಾಲೀಕರಿಗೆ ಹಸ್ತಾಂತರಿಸಲಾಗಿದೆ ಎಂದು ಡಿಸೋಜಾ ಅವರು ತಮ್ಮ ಅರ್ಜಿಯಲ್ಲಿ ಹೇಳಿದ್ದರು.

ಫ್ಲ್ಯಾಟ್‌ಗಳನ್ನು ತೆರವುಗೊಳಿಸಿ, ಅವುಗಳ ನಿಜವಾದ ಮಾಲೀಕರಾದ ಡಿಸೋಜಾ ಅವರಿಗೆ ಹಸ್ತಾಂತರ ಮಾಡಬೇಕು ಎಂದಿರುವ ಕೋರ್ಟ್, ಇದಕ್ಕೆ ಎಂಟು ವಾರಗಳ ಕಾಲಾವಕಾಶ ನೀಡಿದೆ.

ಜಾಹೀರಾತು

ಭೂತದ ಬಾಯಲ್ಲಿ ಭಗವದ್ಗೀತೆ

ಪ್ರಪಂಚದಲ್ಲೇ ಅತ್ಯಂತ ಭ್ರಷ್ಟ ಪಕ್ಷ, ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದೆ



65 ವರ್ಷದ ಭ್ರಷ್ಟ ಪಕ್ಷವು
ದೇಶ ಮತ್ತು ರಾಜ್ಯವನ್ನು ಅವರ ಪರಿವಾರದ ಎ.ಟಿ.ಎಂ. ಮಾಡಿಕೊಂಡಿದೆ

ಅವರು ದರೋಡೆಕೋರರ ಹಾಗೆ ರಾಜ್ಯ ಮತ್ತು ರಾಷ್ಟ್ರದ ಜನರ ಮೇಲೆ ದಬ್ಬಾಳಿಕೆಯಿಂದ ಲೂಟಿ ಮಾಡಿದ್ದು ಜಿಗಣೆಯು ಜನರ ರಕ್ತ ಹೀರುವ ರೀತಿಯಲ್ಲಿತ್ತು

ಅವರ ನಾಯಕರು ಕೊನೆಯಿಲ್ಲದ ಹಗರಣಗಳು ಮತ್ತು ಭ್ರಷ್ಟಾಚಾರದ ಮೂಲಕ ಲೆಕ್ಕವಿಲ್ಲದಷ್ಟು ಸಂಪತ್ತನ್ನು ಸಂಗ್ರಹಿಸಿದ್ದಾರೆ. ಅವರ ಬಹಳಷ್ಟು ನಾಯಕರು ಭ್ರಷ್ಟಾಚಾರದ ಹಲವಾರು ಕೇಸಿನಲ್ಲಿ ಜಾಮೀನು ಪಡೆದು ಹೊರ ಬಂದಿದ್ದಾರೆ. ಬಡವರಿಗೆ ಮೀಸಲಾಗಿದ್ದ ಹಣದಲ್ಲೂ ಪ್ರತಿ 100 ರೂ ಗಳಲ್ಲಿ 85 ರೂ ಗಳನ್ನು ಕದ್ದರು. ನಮ್ಮ ದೇಶದ ರಕ್ಷಣೆಗೆ, ನಮ್ಮ ರೈತರಿಗೆ, ಮಹಿಳೆ-ಮಕ್ಕಳು, ಹಳ್ಳಿ ಮತ್ತು ನಗರದ ಮೂಲಸೌಕರ್ಯಕ್ಕಾಗಿ ಮೀಸಲಾಗಿದ್ದ ಹಣವನ್ನು ಕೂಡ ಕದ್ದರು.

ಲೂಟಿಯ ಪಟ್ಟಿಯು ಕೊನೆಯಾಗುವುದೇ ಇಲ್ಲಾ. ಇಂದಿಗೂ ಕೆಲವು ರಾಜ್ಯಗಳಲ್ಲಿ ಮುಂದುವರೆಯುತ್ತಲೇ ಇದೆ, ಅಲ್ಲಿನ ದುರದೃಷ್ಟಕರ ಜನರು "ಭ್ರಷ್ಟರ ಪಕ್ಷ"ದ ಸರ್ಕಾರದಿಂದಾಗಿ ಅಕ್ಷರಶಃ ಬೆಲೆ ಕಟ್ಟುತ್ತಿದ್ದಾರೆ.

ಭ್ರಷ್ಟ ಪಕ್ಷವು, ಮೋಸ, ಸುಳ್ಳಿನ ಗ್ಯಾರಂಟಿಗಳು ಮತ್ತು ವೋಟ್ ಬ್ಯಾಂಕ್ ರಾಜಕಾರಣವನ್ನೇ ನೆಚ್ಚಿ ಕೊಂಡಿದೆ

ಭ್ರಷ್ಟ ಪಕ್ಷವು ಕನ್ನಡಿಗರನ್ನು ಹಲವು ತಲೆಮಾರುಗಳಿಂದ ಲೂಟಿ ಮಾಡುತ್ತಿದೆ
ಈ ಚುನಾವಣೆಯಲ್ಲಿ ಕರ್ನಾಟಕದ ಉತ್ತಮ ಭವಿಷ್ಯಕ್ಕಾಗಿ ಲೂಟಿ ಪಕ್ಷದ ಅಂತ್ಯವಾಗಲಿ

Published by BJP, Karnataka

ಬಿಜೆಪಿಯ ಡಬಲ್ ಎಂಜಿನ್ ಸರ್ಕಾರಕ್ಕೆ ಮತ ನೀಡಿ

ಕಾಂಗ್ರೆಸ್– ಬಿಜೆಪಿ ನಡುವೆ ನೇರ ಸ್ಪರ್ಧೆ • ಜೆಡಿಎಸ್‌ನಿಂದಲೂ ಪೈಪೋಟಿ

ಶಾಂತಿನಗರ: 'ಹ್ಯಾಟ್ರಿಕ್' ಹ್ಯಾರಿಸ್ ಮಣಿಸಲು ತಂತ್ರ

• ಸಂತೋಷ ಜಿಗಳಿಕೊಪ್ಪ

ಕ್ಷೇತ್ರ	2008	2013	2018
ಶಾಂತಿನಗರ	ಕಾಂಗ್ರೆಸ್	ಕಾಂಗ್ರೆಸ್	ಕಾಂಗ್ರೆಸ್



ಎನ್.ಎ. ಹ್ಯಾರಿಸ್

ಕೆ.ಶಿವಕುಮಾರ್


ಎಚ್. ಮಂಜುನಾಥ್


ಕೆ. ಮಥಾಯ್

ಬೆಂಗಳೂರು: ಪ್ರತಿಷ್ಠಿತ ಬಡಾವಣೆಗಳು ಮತ್ತು ಕೊಳೆಗೇರಿ ಪ್ರದೇಶಗಳನ್ನು ಒಳಗೊಂಡಿರುವ ಶಾಂತಿನಗರ ವಿಧಾನ ಸಭಾ ಕ್ಷೇತ್ರ ಗೆಲ್ಲಲು ಈ ಬಾರಿ ಕಾಂಗ್ರೆಸ್–ಬಿಜೆಪಿ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ. ಪ್ರತಿ ಚುನಾವಣೆಯಲ್ಲಿ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳುತ್ತಿರುವ ಜೆಡಿಎಸ್ ಕೂಡಾ ಪಾರುಪತ್ಯ ಸ್ಥಾಪಿಸಲು ತಂತ್ರ ರೂಪಿಸುತ್ತಿದೆ.

ಶಾಂತಲಾನಗರ, ದೊಮ್ಮಲೂರು, ಜೋಗುಪಾಳ್ಯ, ಅಗರ, ಶಾಂತಿನಗರ, ನೀಲಸಂದ್ರ ಹಾಗೂ ವನ್ನಾರಪೇಟೆ ವಾರ್ಡ್ ಒಳಗೊಂಡಿರುವ ಕ್ಷೇತ್ರದ ಹಲವು ಪ್ರದೇಶಗಳು ದೇಶ–ವಿದೇಶಗಳಲ್ಲಿ ಹೆಸರುವಾಸಿ. ಎಂ.ಜಿ. ರಸ್ತೆ, ಚರ್ಚ್‌ಸ್ಟ್ರೀಟ್, ಬ್ರಿಗೇಡ್ ರಸ್ತೆಗಳು ಈ ಕ್ಷೇತ್ರದ ಮುಕುಟಮಣಿಗಳು.

15 ವರ್ಷದಿಂದ ಕಾಂಗ್ರೆಸ್ ತೆಕ್ಕೆಯಲ್ಲಿರುವ ಕ್ಷೇತ್ರವನ್ನು ಈ ಬಾರಿಯಾದರೂ ತಮ್ಮದಾಗಿಸಿಕೊಳ್ಳಲು ಬಿಜೆಪಿ ಕಸರತ್ತು ನಡೆಸುತ್ತಿದೆ. ಇದರ ಜೊತೆಯಲ್ಲಿ ಜೆಡಿಎಸ್ ಹಾಗೂ ಆಮ್ ಆದ್ಮಿ ಪಾರ್ಟಿ ಕೂಡಾ ಮತದಾರರನ್ನು ಸೆಳೆಯಲು ಬಿರುಸಿನ ಪ್ರಚಾರದಲ್ಲಿ ತೊಡಗಿವೆ.

2008ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದ ಎನ್.ಎ. ಹ್ಯಾರಿಸ್, ಬಿಜೆಪಿ ಅಭ್ಯರ್ಥಿ ಡಿ.ಯು. ಮಲ್ಲಿಕಾರ್ಜುನ್ ವಿರುದ್ಧ 13,797 ಮತಗಳ ಅಂತರದಿಂದ ಗೆಲುವು ತಮ್ಮದಾಗಿಸಿಕೊಂಡಿದ್ದರು. 2013 ಹಾಗೂ 2018ರ ಚುನಾವಣೆಯಲ್ಲೂ ಹ್ಯಾರಿಸ್ ವಿಜಯ ಪತಾಕೆ ಹಾರಿಸಿದ್ದಾರೆ. 2018ರಲ್ಲಿ ಬಿಜೆಪಿಯ ವಾಸುದೇವ ಮೂರ್ತಿ ಅವರನ್ನು ಮಣಿಸಿದ್ದರು.

'ಹ್ಯಾಟ್ರಿಕ್' ವಿಜಯ ಸಾಧಿಸಿ ಖುಷಿಯಲ್ಲಿರುವ ಹ್ಯಾರಿಸ್, ನಾಲ್ಕನೇ ಬಾರಿಯೂ ಗೆಲುವು ತಮ್ಮದೆಂದು ಬಿರುಸಿನ ಪ್ರಚಾರಕ್ಕೆ ಇಳಿದಿದ್ದಾರೆ. ಅವರನ್ನು ಹೇಗಾದರೂ ಮಾಡಿ ಮಣಿಸಬೇಕೆಂದು ಪಣ ತೊಟ್ಟಿರುವ ಬಿಜೆಪಿ, ವನ್ನಾರಪೇಟೆ ಕಾರ್ಪೊರೇಟರ್ ಆಗಿದ್ದ ಕೆ. ಶಿವಕುಮಾರ್ ಅವರನ್ನು ಕಣಕ್ಕೆ ಇಳಿಸಿದೆ.

ಬಿಜೆಪಿಯ ಶಾಂತಿನಗರ ಮಂಡಲ ಅಧ್ಯಕ್ಷರೂ ಆಗಿರುವ ಶಿವಕುಮಾರ್, ಕ್ಷೇತ್ರದ ಮತದಾರರ ಮನೆ ಮನೆಗೆ ಹೋಗಿ ಮತಯಾಚನೆ ಮಾಡುತ್ತಿದ್ದಾರೆ. '15 ವರ್ಷಗಳ ಪಾರುಪತ್ಯಕ್ಕೆ ಅಂತ್ಯ ಹಾಡಿ. ಈ ಬಾರಿ ಬದಲಾವಣೆ ತನ್ನಿ' ಎಂದು ಕೋರುತ್ತಿದ್ದಾರೆ. '15 ವರ್ಷ ಕ್ಷೇತ್ರದ ಅಭಿವೃದ್ಧಿಗಾಗಿ ದುಡಿದಿದ್ದೇನೆ. ಅಭಿವೃದ್ಧಿ ನೋಡಿ ಮತ ಹಾಕಿ' ಎಂದು ಹ್ಯಾರಿಸ್ ಮತ ಕೇಳುತ್ತಿದ್ದಾರೆ.

ಕ್ಷೇತ್ರದಲ್ಲಿ ಜೆಡಿಎಸ್ ಸಾಂಪ್ರದಾಯಿಕ ಮತಗಳನ್ನು ಹೊಂದಿದೆ. 2018ರ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಶ್ರೀಧರ್ ರೆಡ್ಡಿ, 13,569 ಮತ ಪಡೆದು ಮೂರನೇ ಸ್ಥಾನದಲ್ಲಿದ್ದರು.

ಈ ಬಾರಿ ಜೆಡಿಎಸ್‌ನಿಂದ ಎಚ್. ಮಂಜುನಾಥ್ ಕಣದಲ್ಲಿದ್ದು, ಮತಗಳ ಪ್ರಮಾಣ ಹೆಚ್ಚಿಸಿಕೊಳ್ಳುವ ಹುಮ್ಮಸ್ಸಿನಲ್ಲಿದ್ದಾರೆ.

2018ರ ಚುನಾವಣೆಯಲ್ಲಿ ಆಮ್ ಆದ್ಮಿ ಪಾರ್ಟಿಯಿಂದ ರೇಣುಕಾ ವಿಶ್ವನಾಥನ್ ಕಣದಲ್ಲಿದ್ದರು. 2,658 ಮತ ಪಡೆದು ನಾಲ್ಕನೇ ಸ್ಥಾನದಲ್ಲಿದ್ದರು. ಈ ಬಾರಿ ಆಮ್ ಆದ್ಮಿ ಪಾರ್ಟಿಯಿಂದ ಕೆ. ಮಥಾಯ್ ಕಣಕ್ಕೆ ಇಳಿದಿದ್ದಾರೆ. ಮಾಜಿ ಕೆಎಎಸ್ ಅಧಿಕಾರಿಯಾಗಿರುವ ಮಥಾಯ್, ಈ ಹಿಂದೆ ಬಿಬಿಎಂಪಿ ಸಹಾಯಕ ಆಯುಕ್ತರಾಗಿ ಕೆಲಸ ಮಾಡಿದವರು. ಕ್ಷೇತ್ರದಲ್ಲಿ ತಮ್ಮದೇ ಮತದಾರರ ಗುಂಪು ಹೊಂದಿರುವ ಅವರು ಮತದಾರರ ಮನಸ್ಸು ಗೆಲ್ಲುವ ವಿಶ್ವಾಸದಲ್ಲಿದ್ದಾರೆ.

ಕ್ಷೇತ್ರದಲ್ಲಿ 199 ಮತಗಟ್ಟೆಗಳಿವೆ. ಎಲ್ಲ ಧರ್ಮ–ಜಾತಿ ಜನರಿರುವ ಕ್ಷೇತ್ರದಲ್ಲಿ 'ನಾವೆಲ್ಲರೂ ಒಂದೇ' ಎಂಬ ಜಪ ಪಠಿಸಿ ಅಭ್ಯರ್ಥಿಗಳು ಮತಯಾಚನೆ ಮಾಡುತ್ತಿದ್ದಾರೆ. ಎಲ್ಲ ಅಭ್ಯರ್ಥಿಗಳಿಗೂ ನಮಸ್ಕರಿಸಿ ಬೀಳ್ಕೊಡುತ್ತಿರುವ ಮತದಾರರು ಮಾತ್ರ ಮತದಾನದ ಗುಟ್ಟು ಬಿಟ್ಟು ಕೊಟ್ಟಿಲ್ಲ.

'ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಪ್ರತಿ ಚುನಾವಣೆಯಲ್ಲೂ ನೇರ ಹಣಾಹಣಿ ಇದೆ. ಮತದಾರರಲ್ಲಿ ಹ್ಯಾರಿಸ್ ಪರ ಹೆಚ್ಚು ಒಲವಿದೆ. ಬಿಜೆಪಿ ಅಭ್ಯರ್ಥಿಯ ಪರವೂ ಬೆಂಬಲವಿದೆ. ಹೀಗಾಗಿ, ಗೆಲುವು ಯಾರದ್ದು ಎಂಬುದು ನಿಖರವಾಗಿ ಹೇಳಲಾಗದು' ಎಂದು ಮತದಾರರು ಹೇಳುತ್ತಿದ್ದಾರೆ.

ಬಿಎಸ್‌ಪಿಯಿಂದ ಎಂ. ಸತೀಶ್ ಚಂದ್ರ, ಇಂಡಿಯನ್ ಕ್ರಿಶ್ಚಿಯನ್ ಫ್ರಂಟ್‌ನಿಂದ ಆಂಟೋನಿ ಎ. ಸಂತೋಷ್, ಅಖಿಲ ಭಾರತ ಮಹಿಳಾ ಎಂಪವರ್‌ಮೆಂಟ್ ಪಾರ್ಟಿಯಿಂದ ಡಿ. ರುಬೆನ್ ಮೊಸಸ್, ಕರ್ನಾಟಕ ರಾಷ್ಟ್ರ ಸಮಿತಿಯ ರೊನಾಲ್ಡ್ ಸೊಹಾನ್ಸ್ ಎ., ಭಾರತೀಯ ಪ್ರಜಾಗಳ ಕಲ್ಯಾಣ ಪಕ್ಷದಿಂದ ಸೈಯದ್ ಆಸಿಫ್ ಬುಖಾರಿ ಅವರು ಕಣದಲ್ಲಿದ್ದಾರೆ.

ಸಾಕ್ಷಾತ್ ಸಮೀಕ್ಷೆ

ಕಾಂಗ್ರೆಸ್ ಭದ್ರಕೋಟೆಗೆ ಲಗ್ಗೆ ಇಡಲು ಬಿಜೆಪಿ ಕಸರತ್ತು

ವಿಜಯನಗರ: ಎಂ. ಕೃಷ್ಣಪ್ಪ ಮತ್ತು ಎಚ್. ರವೀಂದ್ರ ನಡುವೆ ನೇರ ಹಣಾಹಣಿ

• ವಿ.ಎಸ್. ಸುಬ್ರಹ್ಮಣ್ಯ

ಎಂ. ಕೃಷ್ಣಪ್ಪ

ಎಚ್. ರವೀಂದ್ರ



ಕ್ಷೇತ್ರ	2008	2013	2018
ವಿಜಯನಗರ	ಕಾಂಗ್ರೆಸ್	ಕಾಂಗ್ರೆಸ್	ಕಾಂಗ್ರೆಸ್

ಬೆಂಗಳೂರು: ಸತತ ಮೂರು ಚುನಾವಣೆಗಳಿಂದ ಕಾಂಗ್ರೆಸ್‌ನ ಭದ್ರಕೋಟೆಯಾಗಿರುವ ವಿಜಯನಗರ ವಿಧಾನಸಭಾ ಕ್ಷೇತ್ರ ಈ ಬಾರಿ ನೇರ ಹಣಾಹಣಿಗೆ ವೇದಿಕೆಯಾಗಿದೆ. 'ಹ್ಯಾಟ್ರಿಕ್' ಗೆಲುವಿನೊಂದಿಗೆ ಪ್ರಬಲ ಹಿಡಿತ ಸಾಧಿಸಿರುವ ಕಾಂಗ್ರೆಸ್‌ನ ಎಂ. ಕೃಷ್ಣಪ್ಪ ಎದುರು ಬಿಜೆಪಿಯ ಎಚ್. ರವೀಂದ್ರ ಮುಖಾಮುಖಿ ಪೈಪೋಟಿ ನಡೆಸುತ್ತಿದ್ದಾರೆ. ಗೆಲುವಿನ ಓಟ ಮುಂದುವರಿಸಲು ಕಾಂಗ್ರೆಸ್ ಹುರಿಯಾಳು ಹಟಕ್ಕೆ ಬಿದ್ದಿದ್ದರೆ, ಕಳೆದ ಬಾರಿ ಕಡಿಮೆ ಅಂತರದಲ್ಲಿ ಕೈಜಾರಿದ್ದ ಗೆಲುವನ್ನು ಕಸಿದುಕೊಳ್ಳಲು ಬಿಜೆಪಿ ಅಭ್ಯರ್ಥಿ ಶತಪ್ರಯತ್ನ ಮಾಡುತ್ತಿದ್ದಾರೆ.

ಅಭಿವೃದ್ಧಿ ಹೊಂದಿರುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳ ಮಿಶ್ರಣವಾದ ವಿಜಯನಗರ ಕ್ಷೇತ್ರದಲ್ಲಿ ಒಕ್ಕಲಿಗ ಮತದಾರರ ಬಾಹುಳ್ಯವಿದೆ. ಕುರುಬರು ಮತ್ತು ಮುಸ್ಲಿಮರು ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆ. 15 ವರ್ಷಗಳಿಂದ ಕಾಂಗ್ರೆಸ್ ತೆಕ್ಕೆಯಲ್ಲಿರುವ ಈ ಕ್ಷೇತ್ರವನ್ನು ವಶ ಮಾಡಿಕೊಳ್ಳಲು ಬಿಜೆಪಿ ತರಹೇವಾರಿ ಕಸರತ್ತು ನಡೆಸುತ್ತಿದೆ. ಜೆಡಿಎಸ್ ಈ ಬಾರಿ ಅಭ್ಯರ್ಥಿಯನ್ನು ಕಣಕ್ಕಿಳಿಸಿಲ್ಲ. ಆಮ್ ಆದ್ಮಿ ಪಕ್ಷದ ರಮೇಶ್ ಬೆಲ್ಲಮ್‌ಕೊಂಡ, ಬಹುಜನ ಸಮಾಜ ಪಕ್ಷದ ಗುಲ್ಶನ್ ಬಾನು, ಕರ್ನಾಟಕ ರಾಷ್ಟ್ರ ಸಮಿತಿಯ ನರಸಿಂಹ ರೆಡ್ಡಿ ಕೆ.ಎಲ್. ಸೇರಿದಂತೆ ಒಟ್ಟು 15 ಮಂದಿ ಕಣದಲ್ಲಿದ್ದಾರೆ. ಸಮಾಜವಾದಿ ಜನತಾ ಪಕ್ಷದಿಂದ (ಕರ್ನಾಟಕ) ಮತ್ತು ಪಕ್ಷೇತರರಾಗಿ ರವೀಂದ್ರ ಹೆಸರಿನ ಇಬ್ಬರು ಸ್ಪರ್ಧಿಸಿದ್ದಾರೆ. ಎಂ. ಕೃಷ್ಣಪ್ಪ ಹೆಸರಿನ ಪಕ್ಷೇತರರೊಬ್ಬರು ಕಣದಲ್ಲಿದ್ದಾರೆ.

2008ರ ಚುನಾವಣೆಯಲ್ಲಿ ಕೃಷ್ಣಪ್ಪ, ಬಿಜೆಪಿಯ ಪ್ರಮೀಳಾ ನೇಸರ್ಗಿ ವಿರುದ್ಧ ಗೆಲುವು ಸಾಧಿಸಿದ್ದರು. 2013ರಲ್ಲಿ ಬಿಜೆಪಿಯ ವಿ. ಸೋಮಣ್ಣ ಅವರನ್ನು ಪರಾಭವಗೊಳಿಸಿದ್ದರು. 2018ರಲ್ಲಿ ಬಿಜೆಪಿಯ ಎಚ್.ರವೀಂದ್ರ ಎದುರು 2,775 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಕೃಷ್ಣಪ್ಪ ಮತ್ತು ರವೀಂದ್ರ ಈ ಚುನಾವಣೆಯಲ್ಲಿ ಮತ್ತೆ ಮುಖಾಮುಖಿಯಾಗಿದ್ದಾರೆ.

ವಿಜಯನಗರ ವಸತಿ ಸಚಿವ ವಿ. ಸೋಮಣ್ಣ ಅವರು ಪ್ರತಿನಿಧಿಸುತ್ತಿದ್ದ ಹಿಂದಿನ ಬಿನ್ನಿಪೇಟೆ ಕ್ಷೇತ್ರದ ಭಾಗವಾಗಿತ್ತು. ಇಲ್ಲಿ ಸೋಮಣ್ಣ ಕೂಡ ಹಿಡಿತ ಹೊಂದಿದ್ದರು. ಈ ಕ್ಷೇತ್ರವೂ ಕೃಷ್ಣಪ್ಪ ಮತ್ತು ಸೋಮಣ್ಣ ಕುಟುಂಬಗಳ ರಾಜಕೀಯ ಜಿದ್ದಾಜಿದ್ದಿಯ ಕಣವಾಗಿತ್ತು. ಬಿಜೆಪಿ ವರಿಷ್ಠರ ಆಣತಿಯಂತೆ ವರುಣ ಹಾಗೂ ಚಾಮರಾಜನಗರದತ್ತ ಸೋಮಣ್ಣ ವಲಸೆ ಹೋಗಿರುವುದು ವಿಜಯನಗರ ಕ್ಷೇತ್ರದ ಮೇಲೂ ತುಸು ಪ್ರಭಾವ ಬೀರಿದೆ.

'ನನ್ನ ಅವಧಿಯಲ್ಲಿ ಕ್ಷೇತ್ರದಲ್ಲಿ ಕಾನೂನು, ಸುವ್ಯವಸ್ಥೆ ಕುಸಿಯಲು ಅವಕಾಶ ನೀಡಿಲ್ಲ. ಶಾಸಕನ ಸ್ಥಾನವನ್ನು ಭ್ರಷ್ಟಾಚಾರಕ್ಕೆ ಬಳಸಿಕೊಂಡಿಲ್ಲ' ಎಂದು ಹೇಳುವ ಕೃಷ್ಣಪ್ಪ, ನಾಲ್ಕನೇ ಬಾರಿಯೂ ಗೆಲ್ಲುವ ವಿಶ್ವಾಸದಲ್ಲಿದ್ದಾರೆ. ಕೋವಿಡ್ ಸಂಕಷ್ಟದ ಕಾಲವೂ ಸೇರಿದಂತೆ ವೈಯಕ್ತಿಕವಾಗಿ ಜನರಿಗೆ ನೀಡಿದ ನೆರವು ಚುನಾವಣೆಯಲ್ಲಿ ಅನುಕೂಲಕ್ಕೆ ಬರಬಹುದು ಎಂಬುದು ಅವರ ನಿರೀಕ್ಷೆ.

ಸುಸಜ್ಜಿತ ಪಾಲಿಕೆ ಬಜಾರ್ ಮತ್ತು ಈಜು ಕೊಳಗಳ ನಿರ್ಮಾಣ ಸೇರಿದಂತೆ ಕ್ಷೇತ್ರದಲ್ಲಿ ನಡೆದಿರುವ ಅಭಿವೃದ್ಧಿ ಕೆಲಸಗಳ ಪಟ್ಟಿ ಹಿಡಿದು ಮತ ಕೇಳುತ್ತಿದ್ದಾರೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಮೂಲಕ ಕುರುಬರು ಹಾಗೂ ಒಕ್ಕಲಿಗರ ಮತಗಳನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳಲು ಯತ್ನಿಸುತ್ತಿದ್ದಾರೆ.

'ಕ್ಷೇತ್ರದಲ್ಲಿ 15 ವರ್ಷದಿಂದ ಅಭಿವೃದ್ಧಿಯೇ ಆಗಿಲ್ಲ. ಈ ಬಾರಿ ಅಭಿವೃದ್ಧಿಗಾಗಿ ಬಿಜೆಪಿಗೆ ಮತ ಕೊಡಿ' ಎಂದು ರವೀಂದ್ರ ಮತದಾರರ ಮನವೊಲಿಕೆಯಲ್ಲಿ ತೊಡಗಿದ್ದಾರೆ. ಸ್ವತಃ ತಾವು ಹಾಗೂ ಮಗಳು ಮಹಾಲಕ್ಷ್ಮಿ ಬಿಬಿಎಂಪಿ ಸದಸ್ಯರಾಗಿ ಮಾಡಿದ ಕೆಲಸ ಮತ ಗಳಿಕೆಗೆ ನೆರವಾಗಬಹುದು ಎಂಬ ವಿಶ್ವಾಸದಲ್ಲಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಲ್ಲಿ ಪ್ರಚಾರ ನಡೆಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ರೋಡ್ ಶೋ ಕೂಡ ನಡೆದಿದೆ. ಇದರಿಂದ ಗೆಲುವಿನ ದಡ ಸೇರಬಹುದು ಎಂಬ ಲೆಕ್ಕಾಚಾರ ಬಿಜೆಪಿಯಲ್ಲಿದೆ. ಜೆಡಿಎಸ್ ಅಭ್ಯರ್ಥಿ 2018ರ ಚುನಾವಣೆಯಲ್ಲಿ 8,174 ಮತ ಪಡೆದಿದ್ದರು. ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಮಗ ನಿಖಿಲ್ ಅವರು ಕೃಷ್ಣಪ್ಪ ಸಹೋದರನ ಕುಟುಂಬದ ರೇವತಿ ಅವರನ್ನು ವರಿಸಿದ್ದಾರೆ. ಆ ಬಳಿಕ ಸಂಬಂಧ ಇನ್ನಷ್ಟು ಗಟ್ಟಿಯಾಗಿದೆ. ಅದು ಕೂಡ ಈ ಕ್ಷೇತ್ರದ ಚುನಾವಣೆ ಮೇಲೆ ಪ್ರಭಾವ ಬೀರಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಜಯನಗರ: ಬಿಜೆಪಿ, ಕಾಂಗ್ರೆಸ್‌ಗೆ ಮರುಸಾಧನೆಯ ಪ್ರತಿಷ್ಠೆ!

• ಆರ್. ಮಂಜುನಾಥ್


ರಾಮಮೂರ್ತಿ

ಸೌಮ್ಯಾ ರೆಡ್ಡಿ



ಕ್ಷೇತ್ರ	2008	2013	2018
ಜಯನಗರ	ಬಿಜೆಪಿ	ಬಿಜೆಪಿ	ಕಾಂಗ್ರೆಸ್

ಬೆಂಗಳೂರು: ಜಯನಗರ ವಿಧಾನಸಭೆ ಕ್ಷೇತ್ರ ಮರುವಿಂಗಡಣೆ ನಂತರ ಎರಡು ಬಾರಿ ಬಿಜೆಪಿ ತೆಕ್ಕೆಯಲ್ಲಿದ್ದು, ಕಳೆದ ಬಾರಿ ಕಾಂಗ್ರೆಸ್–ಜೆಡಿಎಸ್ ಮೈತ್ರಿಯತ್ತ ವಾಲಿತ್ತು. ಈ ಬಾರಿ ಬಿಜೆಪಿ ತನ್ನ ಹಿಂದಿನ ಗೆಲುವನ್ನು ಮತ್ತೆ ಸಾಧಿಸುವ ಹುಮ್ಮಸ್ಸಿನಲ್ಲಿದ್ದರೆ, ಕಾಂಗ್ರೆಸ್ ಹಿಂದಿನ ವಿಜಯವನ್ನು ತನ್ನ ಹೆಸರಿನಲ್ಲೇ ಉಳಿಸಿಕೊಳ್ಳುವ ಕಸರತ್ತು ನಡೆಸಿದೆ. ಎರಡೂ ಪಕ್ಷಗಳಿಗೆ ಪ್ರತಿಷ್ಠೆಯ ಕಣವಾಗಿದೆ.

2008 ಹಾಗೂ 2013ರಲ್ಲಿ ಬಿಜೆಪಿಯ ಬಿ.ಎನ್. ವಿಜಯಕುಮಾರ್ ಈ ಕ್ಷೇತ್ರದಿಂದ ಆಯ್ಕೆಯಾಗಿದ್ದರು. 2018ರಲ್ಲಿಯೂ ಅವರು ಬಿಜೆಪಿ ಅಭ್ಯರ್ಥಿಯಾಗಿದ್ದರು. ಆದರೆ, ಮತದಾನಕ್ಕೆ ಮುನ್ನ ಅವರು ಮೃತಪಟ್ಟಿದ್ದರಿಂದ ಚುನಾವಣೆ ಮುಂದೂಡಿಕೆ ಆಗಿತ್ತು. ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರ ಬಂದ ಮೇಲೆ ನಂತರ ಈ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ರಾಮಲಿಂಗಾರೆಡ್ಡಿ ಅವರ ಮಗಳು ಸೌಮ್ಯಾ ರೆಡ್ಡಿ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿತ್ತು. ಜೆಡಿಎಸ್ ಅಭ್ಯರ್ಥಿ ಕಣದಿಂದ ಹಿಂದೆ ಸರಿದರು. ವಿಜಯಕುಮಾರ್ ಅವರ ಸೋದರನಿಗೆ ಬಿಜೆಪಿ ಟಿಕೆಟ್ ನೀಡಿತು. ಅನುಕಂಪದ ಅಲೆ ಸಿಗಲಿಲ್ಲ. ಎರಡೂ ಕಾಂಗ್ರೆಸ್–ಜೆಡಿಎಸ್ ಒಂದಾಗಿದ್ದರಿಂದ 1,843 ಮತಗಳ ಅಂತರದಲ್ಲಿ ಬಿಜೆಪಿ ಸೋಲು ಅನುಭವಿಸಿತ್ತು. ಈ ಬಾರಿ ಮೂರು ಪಕ್ಷಗಳೂ ಪ್ರತ್ಯೇಕವಾಗಿ ಹೋರಾಟ ನಡೆಸುತ್ತಿವೆ.

ಕಾಂಗ್ರೆಸ್‌ನಿಂದ ಸೌಮ್ಯಾ ರೆಡ್ಡಿ ಮರು ಆಯ್ಕೆ ಬಯಸಿದ್ದರೆ, ಬಿಜೆಪಿಯಿಂದ ಪಾಲಿಕೆ ಮಾಜಿ ಸದಸ್ಯ ಸಿ.ಕೆ. ರಾಮಮೂರ್ತಿ ಕಣಕ್ಕಿಳಿದಿದ್ದಾರೆ. ಕಳೆದ ಬಾರಿಯಂತೆ ಈ ಬಾರಿ ಜೆಡಿಎಸ್ ಅಭ್ಯರ್ಥಿ, ಪಕ್ಷದ ನೆರವೂ ಅವರಿಗಿಲ್ಲ. ಅಭಿವೃದ್ಧಿ ಕಾರ್ಯಗಳನ್ನೇ ಮುಂದಿಟ್ಟುಕೊಂಡು, 'ಭ್ರಷ್ಟಾಚಾರರಹಿತ ಕಾಮಗಾರಿ ನಡೆಸಿದ್ದೇನೆ' ಎಂದು ಹೇಳಿ ಸೌಮ್ಯಾ ರೆಡ್ಡಿ ಮತಯಾಚಿಸುತ್ತಿದ್ದಾರೆ. ಬಿಟಿಎಂ ಕ್ಷೇತ್ರದ ಅಭ್ಯರ್ಥಿಯಾಗಿರುವ ತಂದೆ ರಾಮಲಿಂಗಾರೆಡ್ಡಿ ಅವರ ಬೆಂಬಲ ಇದ್ದರೂ ಈ ಬಾರಿ ಹೋರಾಟ ತ್ರಾಸದಾಯಕವಾಗಿದೆ.

'ಬಿಜೆಪಿಯದ್ದೇ ಈ ಕ್ಷೇತ್ರ. ಇದನ್ನು ನಾವು ಮರುಸಾಧಿಸುತ್ತೇವೆ' ಎಂದು ಸಿ.ಕೆ. ರಾಮಮೂರ್ತಿ ಹಾಗೂ ಇತರೆ ಪಾಲಿಕೆ ಮಾಜಿ ಬಿಜೆಪಿ ಸದಸ್ಯರು ಒಗ್ಗಟ್ಟಾಗಿ ಶ್ರಮಿಸುತ್ತಿದ್ದಾರೆ. ಕಳೆದ ಬಾರಿ ಎರಡು ಪಕ್ಷಗಳು ಒಂದಾಗಿದ್ದರಿಂದ ಅಲ್ಪ ಹಿನ್ನಡೆಯಾಗಿತ್ತು. ಆದರೆ, ಈ ಬಾರಿ ಆ ಹಿನ್ನಡೆ ಮುನ್ನಡೆಯಾಗಿಸಿಕೊಳ್ಳಬಹುದೆಂಬ ನಿರೀಕ್ಷೆಯಲ್ಲಿದ್ದಾರೆ ರಾಮಮೂರ್ತಿ.

ಗುರಪ್ಪನಪಾಳ್ಯ, ತಿಲಕನಗರ, ಬೈರಸಂದ್ರ, ಶಾಖಾಂಬರಿ ನಗರ, ಜೆ.ಪಿ. ನಗರ, ಸಾರಕ್ಕಿ ಪ್ರದೇಶಗಳನ್ನು ಒಳಗೊಂಡಿರುವ ಈ ಕ್ಷೇತ್ರದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್‌ಗೆ ಅದರದ್ದೇ ಆದ ಮತಗಳಿವೆ. ಜೆಡಿಎಸ್ ಕೂಡ ತನ್ನದೇ ಮತದಾರರನ್ನು ಹೊಂದಿದ್ದು, ಮತ ವಿಭಜನೆಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ ಅಭಿವೃದ್ಧಿ ಸೇರಿದಂತೆ ಕೊಳೆಗೇರಿಗಳ ಅಭಿವೃದ್ಧಿ ವಿಷಯದಲ್ಲಿ ಕ್ಷೇತದ ಜನತೆಯ ಅಸಮಾಧಾನವಿದೆ. ಇದು ಕ್ಷೇತ್ರ ಮರುರಚನೆ ಆದಂದಿನಿಂದಲೂ ಇರುವ ಸಮಸ್ಯೆಯಾಗಿದ್ದು, ಎಲ್ಲರೂ ಅವುಗಳ ಅಭಿವೃದ್ಧಿಯನ್ನೇ ಮುಂದಿಟ್ಟುಕೊಂಡು ಮತ ಸೆಳೆಯಲು ಪ್ರಯತ್ನಿಸುತ್ತಿದ್ದಾರೆ. ಸಿ.ಕೆ. ರಾಮಮೂರ್ತಿ ಮತ್ತು ಸೌಮ್ಯಾ ರೆಡ್ಡಿ ಅವರಿಬ್ಬರಿಗೂ ಪ್ರತಿಷ್ಠೆಯಾಗಿದೆ.

ಕಳೆದ ಚುನಾವಣೆಯಲ್ಲಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದ ಜೆಡಿಎಸ್‌ನ ಕಾಳೇಗೌಡ ಈ ಬಾರಿ ತಮಗಿದ್ದ ಬೆಂಬಲವನ್ನು ಸಾಬೀತು ಮಾಡುವ ಉತ್ಸಾಹದಲ್ಲಿದ್ದಾರೆ. ಆಮ್ ಆದ್ಮಿ ಪಾರ್ಟಿಯ ಮಹಾಲಕ್ಷ್ಮಿ ಸಿ. 'ಬುದ್ಧಿವಂತ' ಮತದಾರರನ್ನು ಸೆಳೆಯಲು ಯೋಜಿಸುತ್ತಿದ್ದಾರೆ. ಬಿಎಸ್‌ಪಿಯ ಆರ್. ಸೆಲ್ವಕುಮಾರ್, ಕರ್ನಾಟಕ ರಾಷ್ಟ್ರ ಸಮಿತಿಯ ಬಿ. ಮಣಿಕಂಠ ದ್ರಾವಿಡರ್, ಉತ್ತಮ ಪ್ರಜಾಕೀಯ ಪಾರ್ಟಿಯ ಎಂ.ಡಿ. ಸಂತೋಷ್ ಬಿ. ನಾಯಕ್ ಸೇರಿದಂತೆ ಒಟ್ಟು 15 ಮಂದಿ ಕಣದಲ್ಲಿದ್ದಾರೆ. ಎಂಟು ಮಂದಿ ಪಕ್ಷೇತರರಿರುವುದರಿಂದ ಮತ ವಿಭಜನೆಯಾಗುವ ಸಾಧ್ಯತೆಯೂ ಇದೆ.

ಬ್ಯಾಟರಾಯನಪುರ: ಕಾಂಗ್ರೆಸ್ ಕ್ಷೇತ್ರ ಕಸಿಯಲು ಬಿಜೆಪಿ ಯತ್ನ

• ಸಚ್ಚಿದಾನಂದ ಕುರಗುಂದ


ಕೃಷ್ಣ ಬೈರೇಗೌಡ

ಪಿ. ನಾಗರಾಜು

ಎಚ್.ಸಿ. ತಮ್ಮೇಶ ಗೌಡ

ಕ್ಷೇತ್ರ	2008	2013	2018
ಬ್ಯಾಟರಾಯನಪುರ	ಕಾಂಗ್ರೆಸ್	ಕಾಂಗ್ರೆಸ್	ಕಾಂಗ್ರೆಸ್



ಬೆಂಗಳೂರು: ಉತ್ತರ ಬೆಂಗಳೂರಿನ ಬ್ಯಾಟರಾಯನಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ನೇರ ಸ್ಪರ್ಧೆ ಏರ್ಪಟ್ಟಿದೆ. ರಾಜ್ಯದ ಅತಿ ದೊಡ್ಡ ಕ್ಷೇತ್ರಗಳ ಪೈಕಿ ಒಂದಾದ ಬ್ಯಾಟರಾಯನಪುರ, ನಗರ ಮತ್ತು ಗ್ರಾಮೀಣ ಪ್ರದೇಶವನ್ನು ಒಳಗೊಂಡಿದೆ. ಗೆಲುವಿನ ದಡ ಸೇರುವ ಹುಮ್ಮಸ್ಸಿನಲ್ಲಿರುವ ಕಾಂಗ್ರೆಸ್‌ನ ಮುಂಚೂಣಿ ನಾಯಕರಲ್ಲಿ ಒಬ್ಬರಾದ ಕೃಷ್ಣ ಬೈರೇಗೌಡ ಅವರಿಗೆ ಬಿಜೆಪಿ ಅಭ್ಯರ್ಥಿ ಎಚ್.ಸಿ. ತಮ್ಮೇಶಗೌಡ ಸ್ಪರ್ಧೆಯೊಡ್ಡಿದ್ದಾರೆ.

ಇದುವರೆಗೆ ಒಟ್ಟು ಐದು ಬಾರಿ ಶಾಸಕರಾಗಿರುವ ಕೃಷ್ಣ ಬೈರೇಗೌಡ ಅವರು ಬ್ಯಾಟರಾಯನಪುರ ಕ್ಷೇತ್ರದಲ್ಲೇ 2008ರಿಂದ ಸತತ ಮೂರು ಬಾರಿ ಜಯಭೇರಿ ಬಾರಿಸಿದ್ದಾರೆ. ಸಚಿವರಾಗಿಯೂ ಕಾರ್ಯನಿರ್ವಹಿಸಿ ಕ್ಷೇತ್ರವನ್ನು ಭದ್ರಕೋಟೆ ಮಾಡಿಕೊಂಡಿರುವ ಕೃಷ್ಣ ಬೈರೇಗೌಡ ಅವರು, ಈ ಬಾರಿಯೂ ಮರು ಆಯ್ಕೆ ಬಯಸಿದ್ದಾರೆ.

ಕೃಷ್ಣ ಬೈರೇಗೌಡರ ಗೆಲುವಿನ ನಾಗಾಲೋಟ ತಡೆಯಲು ಬಿಜೆಪಿ ಈಗ ಭಾರಿ ಕಸರತ್ತು ನಡೆಸುತ್ತಿದೆ. ಆದರೆ, ಆರಂಭದಲ್ಲೇ ಆಕಾಂಕ್ಷಿಗಳು ಹೆಚ್ಚಾಗಿದ್ದರಿಂದ ಗೊಂದಲ ಸೃಷ್ಟಿಯಾಗಿ ಬಿಜೆಪಿ ಟಿಕೆಟ್ ನೀಡುವಲ್ಲಿ ವಿಳಂಬ ಮಾಡಿತು. ಕಳೆದ ಬಾರಿ ಸ್ಪರ್ಧಿಸಿ, ಪರಾಭವಗೊಂಡಿದ್ದ ಸಚಿವ ಆರ್. ಅಶೋಕ ಅವರ ಸೋದರ ಸಂಬಂಧಿ ಎ. ರವಿ ಈ ಬಾರಿಯೂ ಆಕಾಂಕ್ಷಿಯಾಗಿ ಕಣವನ್ನು ಸಜ್ಜುಗೊಳಿಸಿಕೊಂಡಿದ್ದರು. ಹಿಂದಿನ ಮೂರು ಚುನಾವಣೆಗಳಲ್ಲಿಯೂ ಎ. ರವಿ ಅವರೇ ಕೃಷ್ಣ ಬೈರೇಗೌಡ ವಿರುದ್ಧ ಸ್ಪರ್ಧಿಸಿದ್ದರು. 2018ರ ಚುನಾವಣೆಯಲ್ಲಿ ಕೃಷ್ಣೇ ಬೈರೇಗೌಡ ಅವರು ಕೇವಲ 5,671 ಮತಗಳ ಅಂತರದಿಂದ ಆಯ್ಕೆಯಾಗಿದ್ದರು. ಕೃಷ್ಣ ಬೈರೇಗೌಡ ಅವರು 1,14,964 ಮತಗಳು ಮತ್ತು ಎ. ರವಿ 1,09,293 ಮತಗಳನ್ನು ಪಡೆದಿದ್ದರು. ಜೆಡಿಎಸ್ ಕೇವಲ 22,490 ಮತಗಳನ್ನು ಪಡೆದಿತ್ತು.

ಬಿಜೆಪಿ ಮಂಡಲ ಅಧ್ಯಕ್ಷ ಕೆ.ಎ. ಮುನೀಂದ್ರ ಕುಮಾರ್ ಅವರು ಸಹ ಈ ಬಾರಿ ಆಕಾಂಕ್ಷಿಯಾಗಿದ್ದರು. ಅವರಿಬ್ಬರನ್ನು ಬದಿಗಿಟ್ಟ ಬಿಜೆಪಿ ಎಚ್.ಸಿ. ತಮ್ಮೇಶಗೌಡರಿಗೆ ಮಣೆ ಹಾಕಿದೆ. ತಮ್ಮೇಶಗೌಡ ಅವರು ಪಕ್ಷದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಆಪ್ತರು. ತಮ್ಮೇಶಗೌಡ ಅವರನ್ನು ಗೆಲ್ಲಿಸಬೇಕು ಎನ್ನುವ ಪಣ ತೊಟ್ಟಿರುವ ವಿಜಯೇಂದ್ರ ಅವರು ವಿವಿಧ ರೀತಿಯ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ.

ಮುನಿಸು ಮರೆತಿರುವ ಎಲ್ಲ ಆಕಾಂಕ್ಷಿಗಳು, ತಮ್ಮೇಶಗೌಡ ಪರ ಪ್ರಚಾರ ಕೈಗೊಂಡಿದ್ದಾರೆ. ತಮ್ಮೇಶಗೌಡ ಅವರು ಸಹ ಆಂತರಿಕ ಭಿನ್ನಮತ ಶಮನ ಮಾಡುವಲ್ಲಿ ಯಶಸ್ವಿಯಾದಂತೆ ಮೇಲ್ನೋಟಕ್ಕೆ ಕಾಣಿಸುತ್ತಿದೆ. ಆದರೆ, ಕೊನೆಗಳಿಗೆಯಲ್ಲಿ ಒಳೇಟುಗಳು ಬೀಳುವುದಿಲ್ಲ ಎಂಬ ಅನುಮಾನವಂತೂ ಹೋಗಿಲ್ಲ ಎಂಬ ಮಾತುಗಳೂ ಇವೆ.

ಜೆಡಿಎಸ್ ಕೊನೆಯ ಕ್ಷಣದಲ್ಲಿ ಪಿ. ನಾಗರಾಜು ಅವರನ್ನು ಕಣಕ್ಕಿಳಿಸಿದೆ. ಕ್ಷೇತ್ರದ ಹೊರಗಿನವರಾದ ನಾಗರಾಜು ಅವರು ಜೆಡಿಎಸ್ ವರಿಷ್ಠರಾದ ಎಚ್.ಡಿ. ದೇವೇಗೌಡ ಮತ್ತು ಎಚ್.ಡಿ. ಕುಮಾರಸ್ವಾಮಿ ಅವರ ನಾಯಕತ್ವದ ಮೇಲೆ ಹೆಚ್ಚು ಅವಲಂಬನೆಯಾಗಿದ್ದಾರೆ.

ಕಣದಲ್ಲಿ ಒಟ್ಟು 17 ಅಭ್ಯರ್ಥಿಗಳಿದ್ದು, ಆಮ್ ಆದ್ಮಿ ಪಕ್ಷದಿಂದ ಕೆ. ಗಿರೀಶ್ ಸ್ಪರ್ಧಿಸುತ್ತಿದ್ದಾರೆ. ಕ್ಷೇತ್ರದಲ್ಲಿ ಒಕ್ಕಲಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹೀಗಾಗಿ, ಮೂರು ಪಕ್ಷಗಳು ಒಕ್ಕಲಿಗರನ್ನೇ ಕಣಕ್ಕಿಳಿಸಿವೆ. ಮುಸ್ಲಿಮರು, ಪರಿಶಿಷ್ಟರ ಮತಗಳು ಈ ಕ್ಷೇತ್ರದಲ್ಲಿ ನಿರ್ಣಾಯಕ ಪಾತ್ರವಹಿಸಲಿವೆ. ಜತೆಗೆ, ವಿವಿಧ ಭಾಷೆಗಳ ಜನರು ಸಹ ಇಲ್ಲಿ ನೆಲೆಸಿದ್ದಾರೆ.

ಮೂರು ಅವಧಿಯಲ್ಲಿ ತಾವು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಮತ್ತು ವೈಯಕ್ತಿಕ ವರ್ಚಸ್ಸು ನೆಚ್ಚಿಕೊಂಡಿರುವ ಕೃಷ್ಣ ಬೈರೇಗೌಡ ಅವರು, ರಾಜ್ಯ ಸರ್ಕಾರಗಳ ವೈಫಲ್ಯಗಳನ್ನು ಬಿಂಬಿಸುವ ಮೂಲಕ ಮತದಾರರನ್ನು ಓಲೈಸಲು ಹಲವಾರು ಪ್ರಯತ್ನಗಳನ್ನು ನಡೆಸುತ್ತಿದ್ದಾರೆ.

ಕ್ಷೇತ್ರದಲ್ಲಿ ಅಭಿವೃದ್ಧಿ ಸಂಪೂರ್ಣ ಕುಂಠಿತವಾಗಿದೆ ಎನ್ನುವ ಆರೋಪಗಳೊಂದಿಗೆ ಮತ್ತು ಸರ್ಕಾರದ ಸಾಧನೆಗಳನ್ನು ಬಿಂಬಿಸಿ ಬಿಜೆಪಿ ಅಭ್ಯರ್ಥಿ ಪ್ರಚಾರ ಕೈಗೊಂಡಿದ್ದಾರೆ.

ನಗರದಲ್ಲಿ ಇಂದು

ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ: ಉದ್ಘಾಟನೆ: ಅಪ್ಪಗೆರೆ ತಿಮ್ಮರಾಜು, ಅತಿಥಿಗಳು: ಸತ್ಯಮಂಗಲ ಮಹಾದೇವ, ಗೋಪಾಲಕೃಷ್ಣ ಹರಳಹಳ್ಳಿ, ನಾಗರತ್ನ ಎನ್., ಅಧ್ಯಕ್ಷತೆ: ಗೌಡಗೆರೆ ಮಾಯುಶ್ರೀ, ಆಯೋಜನೆ: ದಲಿತ ಸಾಹಿತ್ಯ ಪರಿಷತ್ತು, ಸ್ಥಳ: ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರ ಕ್ಲಬ್ ಹಿಂಭಾಗ, ಮಲ್ಲೇಶ್ವರ, ಬೆಳಿಗ್ಗೆ 10

ಶರಣ ಸಂಗಮ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಅತಿಥಿಗಳು: ಮಹೇಶ್ವರಿ, ಶಶಿಧರ್ ಕೆ.ಎಂ., ಅರುಣಕುಮಾರ್ ಡಿ.ಟಿ., ಆಯೋಜನೆ: ರಾಷ್ಟ್ರೀಯ ಬಸವತತ್ವ ಪರಿಷತ್ತು, ಸ್ಥಳ: ಎಂ. ಚಿದಾನಂದಮೂರ್ತಿ ಸಭಾಂಗಣ, ಗೋವಿಂದರಾಜನಗರ ವಾರ್ಡ್, ಪಾಲಿಕೆ ಸೌಧ, ಸಂಜೆ 4.30

ಮಾಸದ ಮಂಥನ: ವಿ.ಎಚ್. ಶಿವಕೀರ್ತಿ ಅವರು ನಡೆದು ಬಂದ ದಾರಿ, ಸ್ಥಳ: ನಂ. 17 ಸಾನಿಧ್ಯ, 1ನೇ ಅಡ್ಡರಸ್ತೆ, ದೊಡ್ಡ ಕನ್ನೆಲ್ಲಿ, ಸಂಜೆ 4.30

'ಭಾವಸಂಜೆ' ಗಾಯನ: ಇಂಚರ ಪ್ರವೀಣ್ ಕುಮಾರ್, ಮಂಗಳ ರವಿ, ಕೀ–ಬೋರ್ಡ್: ದುಷ್ಯಂತ್, ತಬಲಾ: ಪುಟ್ಟರಾಜು ಗೋನಾಳ್, ರಿದಂ ಪ್ಯಾಡ್: ಶಂಕರ್, ಆಯೋಜನೆ: ಜಗನ್ನಾಥ ಬಳಗ, ಸ್ಥಳ: ಮಂಥನ 3ನೇ ಮಹಡಿ, ಜಗನ್ನಾಥ ಭವನ, ಮಲ್ಲೇಶ್ವರ, ಸಂಜೆ 5

ಹಂಸಲೇಖ ಅವರ 'ನೆನೆ ಮನವೇ' ಗೀತೆಯ ಆಡಿಯೋ ಬಿಡುಗಡೆ:

ಸಂಗೀತ: ಹಂಸಲೇಖ, ಗಾಯಕರು: ಕಡಬಗೆರೆ ಮುನಿರಾಜು, ಅತಿಥಿಗಳು: ಮೀನಾಕ್ಷಿಯಮ್ಮ, ಆಯೋಜನೆ: ಹಂಸಲೇಖ ಸಂಗೀತ ಶಾಲೆ, ಕಳರಿ ಗುರುಕುಲಮ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6

ಬೇಸಿಗೆ ಮಕ್ಕಳ ಸಂಭ್ರಮ: ಮಾರ್ಗದರ್ಶನ: ಕೆ.ವಿ. ನಾಗರಾಜ ಮೂರ್ತಿ, ಶಿಬಿರದ ನಿರ್ದೇಶಕರು: ಸೂರ್ಯಕುಮಾರಿ, ಮಲ್ಲಿಕಾರ್ಜುನ ಗೌಡ, ಆಯೋಜನೆ: ಗಾಂಧಿ ಪಾರ್ಕ್ ನಡಿಗೆದಾರರ ಕೂಟ, ಸ್ಥಳ: ಆಪ್ತರಂಗ ಮಂದಿರ, ಭಾರತ್ ನಗರ, ಸಂಜೆ 5.30

ಪ್ರವಚನ ವಾಹಿನಿ: 'ಭಗವದ್ಗೀತೆಯಲ್ಲಿ ಮನೋವಿಜ್ಞಾನ' ಕುರಿತು ಉಪನ್ಯಾಸ: ಗ.ನ. ಭಟ್ಟ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಸಮಾಜವಾದಿ ಪಕ್ಷದ ಅಭ್ಯರ್ಥಿ ಎನ್.ಮಂಜಪ್ಪ ಪರ ಮತಯಾಚನೆಗೆ ಶನಿವಾರ ಚಿತ್ರದುರ್ಗಕ್ಕೆ ಆಗಮಿಸಿದ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರನ್ನು ಪಕ್ಷದ ಮುಖಂಡರು ಸ್ವಾಗತಿಸಿದರು

'ಮೋದಿ ಪ್ರಚಾರಮಂತ್ರಿ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ನರೇಂದ್ರ ಮೋದಿ ಅವರು ದೇಶದ ಪ್ರಧಾನಮಂತ್ರಿಯಾಗಿ ಉಳಿದಿಲ್ಲ, ಅವರೊಬ್ಬ ಪ್ರಚಾರಮಂತ್ರಿ' ಎಂದು ಸಮಾಜವಾದಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ವ್ಯಂಗ್ಯವಾಡಿದರು.

'ಪ್ರಧಾನಿ ಮೋದಿ ಸೇರಿದಂತೆ ಕೇಂದ್ರ ಮಂತ್ರಿಮಂಡಲ ಚುನಾವಣೆ ನಡೆಯುವ ರಾಜ್ಯದಲ್ಲಿ ಬೀಡುಬಿಡುತ್ತದೆ. ಕೆಲಸ ಮಾಡುವುದನ್ನು ಬಿಟ್ಟು ಚುನಾವಣಾ ಪ್ರಚಾರದಲ್ಲಿ ತೊಡಗುತ್ತದೆ. ಕರ್ನಾಟಕದ ಜನರು ಇದನ್ನು ಗಮನಿಸುತ್ತಿದ್ದಾರೆ. ಉತ್ತರಪ್ರದೇಶದಲ್ಲಿ ಈ ಪ್ರಚಾರದ ಅಬ್ಬರ ಇನ್ನೂ ಜೋರಾಗಿತ್ತು' ಎಂದು ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದರು.

ಬಜರಂಗ ದಳ ನಿಷೇಧ ಪ್ರಸ್ತಾವಕ್ಕೆ ಬೆಂಬಲ (ಲಖನೌ ವರದಿ): ಬಜರಂಗ ದಳವನ್ನು ನಿಷೇಧಿಸುವುದಾಗಿ ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರುವುದನ್ನು ಅಖಿಲೇಶ್ ಯಾದವ್ ಬೆಂಬಲಿಸಿದ್ದಾರೆ.

ಪ್ರತೀ ವಾರ್ಡ್‌ಗೆ ಆಸ್ಪತ್ರೆ, ಕೈಗೆಟಕುವ ದರದಲ್ಲಿ ವಸತಿ: ಜೆಡಿಎಸ್ ಭರವಸೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಪ್ರತೀ ವಾರ್ಡ್‌ನಲ್ಲಿ ತಲಾ 30 ಹಾಸಿಗೆ ಸಾಮರ್ಥ್ಯದ ಸುಸಜ್ಜಿತ ಆಸ್ಪತ್ರೆ ನಿರ್ಮಾಣ, ಬಡವರಿಗೆ ಕೈಗೆಟಕುವ ದರದಲ್ಲಿ ವಸತಿ ಸೌಲಭ್ಯ ಕಲ್ಪಿಸುವುದು, ಮೆಟ್ರೊ ರೈಲು ಮಾರ್ಗದ ವಿಸ್ತರಣೆ, ಸಿಲಿಕಾನ್ ಸಿಟಿ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಜೆಡಿಎಸ್ ಭರವಸೆ ನೀಡಿದೆ.

ಬೆಂಗಳೂರಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಪಕ್ಷವು ಪ್ರಕಟಿಸಿರುವ ಪ್ರತ್ಯೇಕ ಪ್ರಣಾಳಿಕೆಯಲ್ಲಿ ಈ ಭರವಸೆಗಳನ್ನು ನೀಡಲಾಗಿದೆ. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ಶನಿವಾರ ಈ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು. ವಿಧಾನ ಪರಿಷತ್ ಸದಸ್ಯ ಬಿ.ಎಂ. ಫಾರೂಕ್ ಅಧ್ಯಕ್ಷತೆಯ ಸಮಿತಿ ಈ ಪ್ರಣಾಳಿಕೆಯನ್ನು ಸಿದ್ಧಪಡಿಸಿದೆ.

ಬೆಂಗಳೂರು ನಗರಕ್ಕೆ ಜೆಡಿಎಸ್ ನೀಡಿರುವ ಪ್ರಮುಖ ಭರವಸೆಗಳು:

- ಖಾಸಗಿ ಶಾಲೆಗಳಲ್ಲಿ ದುಡಿಯುವ 10,000ಕ್ಕಿಂತ ಕಡಿಮೆ ವೇತನದ ಶಿಕ್ಷಕರಿಗೆ ಸಹಾಯಧನ.
- ನಗರದ ಒಳಚರಂಡಿ ವ್ಯವಸ್ಥೆಯನ್ನು ಬಲಪಡಿಸುವುದು.
- ಬಿಬಿಎಂಪಿ ವ್ಯಾಪ್ತಿಗೆ ಸೇರಿರುವ 110 ಗ್ರಾಮಗಳಿಗೆ ಕೊಳವೆ ಮಾರ್ಗದ ಮೂಲಕ ಕುಡಿಯುವ ನೀರು ಪೂರೈಕೆ.
- ಸಭೆ ಸಮಾರಂಭಗಳಲ್ಲಿ ಸಂಪೂರ್ಣವಾಗಿ ಪ್ಲಾಸ್ಟಿಕ್ ಬಳಕೆ ನಿಷೇಧ.
- ತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ ವ್ಯವಸ್ಥೆಯಲ್ಲಿ ಸುಧಾರಣೆ.
- ಪಂಚರತ್ನ ಯೋಜನೆ ಅಡಿಯಲ್ಲಿ ಶಾಲಾ ಶಿಕ್ಷಣದಲಿ ಸುಧಾರಣೆ.
- ಮದರಸಾ ಸೇರಿದಂತೆ ಅಲ್ಪಸಂಖ್ಯಾತ ಸಮುದಾಯದ ಶಾಲೆಗಳಲ್ಲೂ ಹೊಸ ಶಿಕ್ಷಣ ನೀತಿ ಜಾರಿ.
- ಬೆಂಗಳೂರು ಸಾರ್ವಜನಿಕ ಆರೋಗ್ಯ ಮಂಡಳಿ ರಚನೆ.
- ಎಲ್ಲ ವಾರ್ಡ್‌ಗಳಲ್ಲೂ 30 ಹಾಸಿಗೆಗಳ ಸಾಮರ್ಥ್ಯದ ಸುಸಜ್ಜಿತ ಆಸ್ಪತ್ರೆ ಆರಂಭ.
- ಬೆಂಗಳೂರು ನಗರ ಮತ್ತು ಹೊರವಲಯ ಸೇರಿದಂತೆ ಸ್ಥಳೀಯ ರೈಲು ಯೋಜನೆ ಅನುಷ್ಠಾನ.
- ದೀರ್ಘ ಕಾಲದಿಂದ ನನೆಗುದಿಗೆ ಬಿದ್ದಿರುವ ಹೊರವರ್ತುಲ ರಸ್ತೆ ಕಾಮಗಾರಿಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವುದು.

ಪ್ರಿಯಾಂಕಾ, ರಾಹುಲ್ ರೋಡ್ ಶೋ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಮತ್ತು ಮುಖಂಡ ರಾಹುಲ್ ಗಾಂಧಿ ಅವರು ಪಕ್ಷದ ಅಭ್ಯರ್ಥಿಗಳ ಪರ ನಗರದಲ್ಲಿ ಭಾನುವಾರ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಲಿದ್ದಾರೆ.

ಸಂಜೆ 5 ಗಂಟೆಯಿಂದ 6.15 ರವರೆಗೆ ಮಹದೇವಪುರದಲ್ಲಿ ಪಕ್ಷದ ಮುಖಂಡರು ಮತ್ತು ಕ್ಷೇತ್ರದ ಅಭ್ಯರ್ಥಿ ಎಚ್. ನಾಗೇಶ್ ಜೊತೆ ರೋಡ್ ಶೋದಲ್ಲಿ ನಡೆಸಲಿರುವ ಪ್ರಿಯಾಂಕಾ, ನಂತರ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ನಡೆಯಲಿರುವ ರೋಡ್ ಶೋ ಮತ್ತು ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ರಾತ್ರಿ 8.30ರಿಂದ 9.30ರವರೆಗೆ ಶಿವಾಜಿನಗರದಲ್ಲಿ ನಡೆಯಲಿರುವ ಸಾರ್ವಜನಿಕ ಸಭೆ ಮತ್ತು ರೋಡ್ ಶೋದಲ್ಲಿ ಪ್ರಿಯಾಂಕಾ ಗಾಂಧಿ ಜೊತೆ ರಾಹುಲ್ ಗಾಂಧಿ ಕೂಡಾ ಭಾಗವಹಿಸಲಿದ್ದಾರೆ.

ಸಂಚಾರ ನಿರ್ಬಂಧ: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಭಾನುವಾರ ನಗರದಲ್ಲಿ ರೋಡ್ ಶೋ ನಡೆಸಲಿದ್ದು, ಹಲವು ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ.

'ಸಂಜೆ 5 ಗಂಟೆಯಿಂದ 7 ಗಂಟೆಯವರೆಗೆ ಹಳೇ ವಿಮಾನ ನಿಲ್ದಾಣ ರಸ್ತೆ, ಸುರಂಜನ್‌ದಾಸ್ ರಸ್ತೆ, ಮಹದೇವಪುರ ಮುಖ್ಯರಸ್ತೆ, ಮಾರತ್ತಹಳ್ಳಿ ಮುಖ್ಯರಸ್ತೆ ಹಾಗೂ ವರ್ತೂರು ಕೋಡಿ ಮಾರ್ಗದಲ್ಲಿ ಸಂಚಾರ ನಿರ್ಬಂಧ ಇರಲಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಹೊಂಗಸಂದ್ರ, ಬೊಮ್ಮನಹಳ್ಳಿ ಮುಖ್ಯರಸ್ತೆ, ಬೇಗೂರು ರಸ್ತೆ ಹಾಗೂ ಹೊಸೂರು ರಸ್ತೆಯಲ್ಲಿ ಸಂಜೆ 7 ಗಂಟೆಯಿಂದ 9 ಗಂಟೆಯವರೆಗೆ ಸಾರ್ವಜನಿಕರ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಸಂಜೆ 6 ಗಂಟೆಯಿಂದ 10 ಗಂಟೆಯವರೆಗೆ ಶಿವಾಜಿನಗರದ ರಸೆಲ್ ಮಾರ್ಕೆಟ್ ಸ್ಕ್ವೇರ್, ಪೆರಿಯಾರ್ ವೃತ್ತ ಹಾಗೂ ಟ್ಯಾನರಿ ವೃತ್ತದಲ್ಲಿ ಸಂಚಾರ ನಿರ್ಬಂಧವಿದೆ. ಸಾರ್ವಜನಿಕರು ಪರ್ಯಾಯ ರಸ್ತೆ ಬಳಸಬೇಕು' ಎಂದು ತಿಳಿಸಿದ್ದಾರೆ.

ವಿಮಾನನಿಲ್ದಾಣದಲ್ಲಿ ಸಾವು: 12 ಲಕ್ಷ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಿಂದ ಮಂಗಳೂರಿಗೆ ತೆರಳಬೇಕಿದ್ದ ಪ್ರಯಾಣಿಕರೊಬ್ಬರು ವಿಮಾನ ನಿಲ್ದಾಣದಲ್ಲಿ ಅಸ್ವಸ್ಥಗೊಂಡು, ಸೂಕ್ತ ಸಮಯಕ್ಕೆ ವೈದ್ಯಕೀಯ ನೆರವು ದೊರೆಯದೆ ಮೃತಪಟ್ಟ ಪ್ರಕರಣವೊಂದರಲ್ಲಿ ಇಂಡಿಗೊ ಏರ್‌ಲೈನ್ಸ್ ಹಾಗೂ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ (ಕೆಐಎ) ವ್ಯವಸ್ಥಾಪಕ ನಿರ್ದೇಶಕರು ಮೃತರ ಕುಟುಂಬದ ಸದಸ್ಯರಿಗೆ ₹ 12 ಲಕ್ಷ ಪರಿಹಾರ ನೀಡುವಂತೆ ಗ್ರಾಹಕರ ನ್ಯಾಯಾಲಯ ಆದೇಶಿಸಿದೆ.

ಈ ಸಂಬಂಧ ಮೃತ ಪ್ರಯಾಣಿಕ ಕೆ.ಚಂದ್ರ ಶೆಟ್ಟಿ ಅವರ ಪತ್ನಿ ಸುಮತಿ ಶೆಟ್ಟಿ ಮತ್ತು ಪುತ್ರಿ ಸಿ. ದೀಕ್ಷಿತಾ ಶೆಟ್ಟಿ ಸಲ್ಲಿಸಿದ್ದ ದೂರನ್ನು ಬೆಂಗಳೂರು ನಗರ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಅಧ್ಯಕ್ಷೆ ಎಂ.ಶೋಭಾ, ಸದಸ್ಯೆ ಕೆ.ಅನಿತಾ ಶಿವಕುಮಾರ್ ಅವರಿದ್ದ ಪೀಠವು ವಿಚಾರಣೆ ನಡೆಸಿ ಮನವಿಯನ್ನು ಭಾಗಶಃ ಮಾನ್ಯ ಮಾಡಿದೆ.

‘ವಿಮಾನ ನಿಲ್ದಾಣದಲ್ಲಿ ಅಸ್ವಸ್ಥಗೊಂಡ ಚಂದ್ರ ಶೆಟ್ಟಿ ಅವರಿಗೆ ಅಲ್ಲಿದ್ದ ಸಿಬ್ಬಂದಿ ಸಕಾಲದಲ್ಲಿ (ಗೋಲ್ಡನ್ ಟೈಂ) ವೈದ್ಯಕೀಯ ನೆರವು ಕಲ್ಪಿಸಲು ವಿಫಲವಾಗಿದ್ದು, ಇದು ಸೇವಾ ವೈಫಲ್ಯ ಎನಿಸಿಕೊಳ್ಳಲಿದೆ’ ಎಂದು ಅಭಿಪ್ರಾಯಪಟ್ಟಿರುವ ಪೀಠವು, ’ಇಂಡಿಗೊ ಏರ್‌ಲೈನ್ಸ್ ಹಾಗೂ ಕೆಐಎ ವ್ಯವಸ್ಥಾಪಕ ನಿರ್ದೇಶಕರು ಒಟ್ಟಾಗಿ ದೂರುದಾರರಿಗೆ ₹ 12 ಲಕ್ಷ ಪರಿಹಾರ ಮತ್ತು ವ್ಯಾಜ್ಯದ ವೆಚ್ಚ ₹ 10 ಸಾವಿರ ಪಾವತಿಸಬೇಕು’ ಎಂದು 2023ರ ಏಪ್ರಿಲ್ 20ರಂದು ಆದೇಶಿಸಿದೆ.

‘ಪರಿಹಾರದ ಮೊತ್ತವನ್ನು 45 ದಿನಗಳ ಒಳಗೆ ಪಾವತಿಸಬೇಕು’ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಏನಿದು ದೂರು?: ‘ನಾವು ಮೂವರೂ 2021ರ ನವೆಂಬರ್ 19ರಂದು ಮಧ್ಯಾಹ್ನ 2.45ಕ್ಕೆ ಇಂಡಿಗೊ ಏರ್‌ಲೈನ್ಸ್ ವಿಮಾನದಲ್ಲಿ ಮಂಗಳೂರಿಗೆ ತೆರಳಬೇಕಿತ್ತು. ಈ ವೇಳೆ ಚಂದ್ರ ಶೆಟ್ಟಿ ಅವರು ಇದ್ದಕ್ಕಿದ್ದಂತೆ ತೀವ್ರ ಆಯಾಸಕ್ಕೆ ಒಳಗಾಗಿದ್ದರು. ಅವರನ್ನು ಆಸ್ಪತ್ರೆಗೆ ಕರೆದೊಯ್ಯಲು ಗಾಲಿಕುರ್ಚಿ ಒದಗಿಸಿ ಎಂದು ಇಂಡಿಗೊ ಏರ್‌ಲೈನ್ಸ್ ಹಾಗೂ ಏರ್‌ಪೋರ್ಟ್ ಸಿಬ್ಬಂದಿ ಬಳಿ ವಿನಂತಿಸಿದರೂ ಅವರಿಂದ ನಮಗೆ ತಕ್ಷಣಕ್ಕೆ ನೆರವು ದೊರೆಯಲಿಲ್ಲ. ಅಷ್ಟರಲ್ಲಾಗಲೇ ಪ್ರಜ್ಞೆ ತಪ್ಪಿದ್ದ ಚಂದ್ರ ಶೆಟ್ಟಿ ಉಸಿರಾಡಲು ಕಷ್ಟಪಡುತ್ತಿದ್ದರು. ಏರ್‌ಪೋರ್ಟ್‌ನಲ್ಲಿದ್ದ ಎಮರ್ಜೆನ್ಸಿ ಕೇರ್‌ಗೆ ಕರೆದುಕೊಂಡು ಹೋದಾಗ ಅಲ್ಲಿನ ವೈದ್ಯರು ತಪಾಸಣೆ ನಡೆಸಿ ಬೇರೊಂದು ಆಸ್ಪತ್ರೆಗೆ ಕರೆದೊಯ್ಯುವಂತೆ ಸೂಚಿಸಿದ್ದರು. ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅಷ್ಟರೊಳಗೆ ಚಂದ್ರ ಶೆಟ್ಟಿ ಮೃತಪಟ್ಟಿದ್ದರು. ಹೀಗಾಗಿ, ಚಂದ್ರ ಶೆಟ್ಟಿ ಅವರ ಸಾವಿಗೆ ಇಂಡಿಗೊ ಏರ್‌ಲೈನ್ಸ್ ಹಾಗೂ ವಿಮಾನ ನಿಲ್ದಾಣದ ಸಿಬ್ಬಂದಿಯ ನಿರ್ಲಕ್ಷ್ಯವೇ ಕಾರಣ‘ ಎಂದು ಆರೋಪಿಸಿ ಸುಮತಿ ಶೆಟ್ಟಿ ಮತ್ತು ಸಿ.ದೀಕ್ಷಿತಾ ಶೆಟ್ಟಿ ದೂರು ವೇದಿಕೆಯಲ್ಲಿ ದೂರು ಸಲ್ಲಿಸಿದ್ದರು.

₹ 34.40 ಲಕ್ಷ ಕಿತ್ತ ಆನ್‌ಲೈನ್ ವಧು

ಬೆಂಗಳೂರು: ವೈವಾಹಿಕ ಜಾಲತಾಣವೊಂದರ ಮೂಲಕ ಪರಿಚಯವಾದ ಯುವತಿಯೊಬ್ಬರು ಉಡುಗೊರೆ ನೆಪದಲ್ಲಿ ₹ 34.40 ಲಕ್ಷ ಪಡೆದು ವಂಚಿಸಿದ್ದು, ಈ ಸಂಬಂಧ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮಾರತ್ತಹಳ್ಳಿಯ 48 ವರ್ಷದ ಸಾಫ್ಟ್‌ವೇರ್ ಎಂಜಿನಿಯರೊಬ್ಬರು ದೂರು ನೀಡಿದ್ದಾರೆ. ಅಪರಿಚಿತ ಯುವತಿ ಹಾಗೂ ಇತರರ ವಿರುದ್ಧ ಎಫ್ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವೈವಾಹಿಕ ಜಾಲತಾಣದಲ್ಲಿ ದೂರುದಾರ ಖಾತೆ ತೆರೆದಿದ್ದರು. ಅಲ್ಲಿಯೇ ಅವರಿಗೆ ಪರಿಚಯವಾಗಿದ್ದ ಯುವತಿ ಲಂಡನ್‌ನಲ್ಲಿ ವಾಸವಿರುವುದಾಗಿ ಹೇಳಿ, ₹ 5 ಕೋಟಿ ಮೌಲ್ಯದ ವಸ್ತುಗಳನ್ನು ಉಡುಗೊರೆಯಾಗಿ ಕಳುಹಿಸುವುದಾಗಿ ತಿಳಿಸಿದ್ದರು. ಅದನ್ನು ದೂರುದಾರ ನಂಬಿದ್ದರು.’

‘ಕಸ್ಟಮ್ಸ್ ಅಧಿಕಾರಿಗಳ ಸೋಗಿನಲ್ಲಿ ಈಚೆಗೆ ಕರೆ ಮಾಡಿದ್ದ ಆರೋಪಿಗಳು, ‘ವಿಮಾನ ನಿಲ್ದಾಣದಲ್ಲಿ ಉಡುಗೊರೆ ಇದೆ. ಅದನ್ನು ನಿಮ್ಮ ವಿಳಾಸಕ್ಕೆ ಕಳುಹಿಸಲು ಹಣ ಪಾವತಿ ಮಾಡಬೇಕು’ ಎಂದಿದ್ದರು. ದೂರುದಾರ, ₹ 34. 40 ಲಕ್ಷ ಪಾವತಿಸಿದ್ದರು. ಇದಾದ ನಂತರ ಯಾವುದೇ ಉಡುಗೊರೆ ಬಂದಿಲ್ಲ. ಆರೋಪಿಗಳ ಮೊಬೈಲ್ ಸ್ವಿಚ್ ಆಫ್ ಆಗಿದೆ’ ಎಂದು ತಿಳಿಸಿವೆ.

ಗುಂಡಿನ ದಾಳಿ: ವಿಜಯಪುರ ಪಾಲಿಕೆ ಸದಸ್ಯೆ ಪತಿ ಹತ್ಯೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಇಲ್ಲಿನ ಮಹಾನಗರ ಪಾಲಿಕೆ 19ನೇ ವಾರ್ಡಿನ ಪಕ್ಷೇತರ ಸದಸ್ಯೆ ನಿಶಾತ್ ನದಾಫ್ ಅವರ ಪತಿ, ರೌಡಿ ಶೀಟರ್ ಹೈದರ್ ನದಾಫ್ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ, ಹತ್ಯೆ ಮಾಡಿದ್ದಾರೆ.

ಹೈದರ್ ನದಾಫ್

ಜಲನಗರ ಪೊಲೀಸ್ ಠಾಣೆ ವ್ಯಾಪ್ತಿಯ ವಜ್ರ ಹನುಮಾನ್ ರೈಲ್ವೆಗೇಟ್ ಸಮೀಪದ ಚಾಂದಾಪುರ ಕಾಲೊನಿಯಲ್ಲಿದ್ದ ತಮ್ಮ ಪತ್ನಿ ಮನೆಯಿಂದ ಹೈದರ್ ನದಾಫ್ ಶನಿವಾರ ಬೆಳಿಗ್ಗೆ ಹೊರಬಂದ ವೇಳೆ ಅಡ್ಡಗಟ್ಟಿದ ದುಷ್ಕರ್ಮಿಗಳು, ಗುಂಡು ಹಾರಿಸಿದ್ದಾರೆ. ತಪ್ಪಿಸಿಕೊಳ್ಳಲು ಯತ್ನಿಸಿ ನೆಲಕ್ಕೆ ಉರುಳಿಬಿದ್ದ ನದಾಫ್ ಅವರಿಗೆ ನಾಲ್ಕು ಗುಂಡು ತಗುಲಿ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.

‘ವಿಜಯಪುರ ಮಹಾನಗರ ಪಾಲಿಕೆಗೆ ನಾಲ್ಕು ತಿಂಗಳ ಹಿಂದೆ ನಡೆದಿದ್ದ ಚುನಾವಣೆಯಲ್ಲಿ ಹೈದರ್ ನದಾಫ್ ಅವರು ವಾರ್ಡ್ ಸಂಖ್ಯೆ 19ರಲ್ಲಿ ತಮ್ಮ ಪತ್ನಿ ನಿಶಾತ್ ನದಾಫ್ ಅವರನ್ನು ಪಕ್ಷೇತರವಾಗಿ ಕಣಕ್ಕಿಳಿಸಿ, ಗೆಲುವು ಸಾಧಿಸಿದ್ದರು. ಅವರ ವಿರುದ್ಧ ಸ್ಪರ್ಧಿಸಿ ಸೋತಿದ್ದ ಕಾಂಗ್ರೆಸ್ ಅಭ್ಯರ್ಥಿಯೇ ಈ ಕೃತ್ಯ ಮಾಡಿರುವುದಾಗಿ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್.ಡಿ.ಆನಂದಕುಮಾರ್ ಹೇಳಿದ್ದಾರೆ.



www.kriyayogashyamacharan.org

ಯೋಗಿರಾಜ್ ಶ್ಯಾಮಚರಣ್ ಮಿಷನ್ ನಿಮ್ಮನ್ನು ಯೋಗಿರಾಜ್ ಶ್ರೀ ಶ್ಯಾಮಚರಣ್ ಲಹಿರೀ ಮಹಾಶಯ ಮತ್ತು ಕ್ರಿಯಾಯೋಗದ ಶಾಶ್ವತ ಆಧ್ಯಾತ್ಮಿಕ ವಿಜ್ಞಾನದ ಕುರಿತು ಕಾರ್ಯಕ್ರಮಕ್ಕೆ ಹೃತ್ಪೂರ್ವಕವಾಗಿ ಆಹ್ವಾನಿಸುತ್ತದೆ.

ಕ್ರಿಯಾಯೋಗವು ಭಗವದ್ಗೀತೆಯಲ್ಲಿ ಭಗವಾನ್ ಶ್ರೀ ಕೃಷ್ಣ ವಿವರಿಸಿದಂತೆ ಮತ್ತು ಪತಂಜಲ ಯೋಗಸೂತ್ರದಲ್ಲಿಯೂ ಸಹ ವಿವರಿಸಲಾಗಿರುವಂತೆ ರಾಜಯೋಗದಂತೆಯೇ ಭಾರತದ ಶಾಶ್ವತ ಸನಾತನ ಧರ್ಮವಾಗಿದೆ.

ಮುಖ್ಯ ಭಾಷಣವನ್ನು ಶ್ರೀಮತಿ ಜೋಯತಿ ಕಪೂರ್, ಸಂಸ್ಥಾಪಕ ಕಾರ್ಯಾಧ್ಯಕ್ಷೆ ಹಾಗೂ ಶ್ರೀ ಶಾಂತನು ಕಪೂರ್, ಸಂಸ್ಥಾಪಕ ಸದಸ್ಯರು ಮತ್ತು ಹಿರಿಯ ಸಲಹೆಗಾರರು ನೀಡಲಿದ್ದಾರೆ. ಶ್ರೀಮತಿ ಜೋಯತಿ ಕಪೂರ್ ಮತ್ತು ಶ್ರೀ ಶಾಂತನು ಕಪೂರ್ ಅವರು ಪೂಜ್ಯ ಗುರುದೇವ ಮಹಾಮಹೋಪಾಧ್ಯಾಯ ಯೋಗಾಚಾರ್ಯ ಡಾ. ಅಶೋಕ್ ಕುಮಾ ಚ್ಯಾಟರ್ಜಿಯವರ ಅತ್ಯಂತ ಹಳೆಯ, ನಿಕಟ ಶಿಷ್ಯರಾಗಿರುವರು. ಅವರು ತಮ್ಮ 35 ವರ್ಷಗಳ ಕ್ರಿಯಾಯೋಗ ಸಾಧನೆ ಮತ್ತು ಪೂಜ್ಯ ಗುರುದೇವರೊಂದಿಗಿನ ನಿಕಟ ಸಾಮೀಪ್ಯದ ಮೂಲಕ ಕ್ರಿಯಾಯೋಗದ ಅತ್ಯಂತ ಸೂಕ್ಷ್ಮ ಅಂಶಗಳನ್ನು ಸಂಗ್ರಹಿಸಲು ಸಮರ್ಥರಾಗಿದ್ದಾರೆ.

ಭಾಷಣದ ನಂತರ ಪ್ರಶ್ನೋತ್ತರ ಅಧಿವೇಶನವನ್ನು ನಡೆಸಲಾಗುವುದು.

ದಿನಾಂಕ: 07 ಮೇ 2023
ಸಮಯ: ಸಂಜೆ 6:00 ರಿಂದ ರಾತ್ರಿ 8:30 ರವರೆಗೆ

ಸ್ಥಳ: ITC ಗಾರ್ಡೇನಿಯಾ, ರೆಸಿಡೆನ್ಸಿ ರಸ್ತೆ, ಅಶೋಕನಗರ, ಬೆಂಗಳೂರು

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ:
9833658167 / 9833883838

ಪ್ರವೇಶ ಉಚಿತ

ನೇರ ಸಂದರ್ಶನ

ಬೆಂಗಳೂರಿನ ಮಲ್ಲೇಶ್ವರಂ ನಲ್ಲಿ ಬರಲಿರುವ ನಮ್ಮ ಮೂರನೇ ಹೊಸ AVR ಸ್ವರ್ಣ ಮಹಲ್ ಜೆವೆಲ್ಲರಿ ಶೋರೂಮ್ ಗಾಗಿ ನಾವು ಈ ಕೆಳಗಿನ ಹುದ್ದೆಗಳಿಗೆ ಸರಿಯಾದ ಅರ್ಹತೆ ಹೊಂದಿರುವ ಕ್ರಿಯಾತ್ಮಕ ವೃತ್ತಿಪರರನ್ನು ನೇಮಿಸಿಕೊಳ್ಳುತ್ತಿದ್ದೇವೆ

AVR® ಸ್ವರ್ಣ ಮಹಲ್ ಜ್ಯುವೆಲ್ಲರ್ಸ್
ಪರಿಶುದ್ಧತೆಯೇ ನಮ್ಮ ಪರಂಪರೆ

- BRANCH MANAGER
- FLOOR MANAGER
- P.R.O
- SALES EXECUTIVES
- APPRAISERS
- BILLING EXECUTIVES
- RELATIONSHIP EXECUTIVES
- ELECTRICIAN
- PANTRY ASST.
- HOUSEKEEPING

ದಿನಾಂಕ ಸಮಯ
ಮೇ 8 & 9, 2023
10 AM - 5 PM

ಸ್ಥಳ AVR ಸ್ವರ್ಣ ಮಹಲ್ ಜುವೆಲರ್ಸ್
41, ಡಿಕನ್‌ಸನ್ ರೋಡ್, ಬೆಂಗಳೂರು – 42.
ಫೋನ್ : 080 25540007

ಅಭ್ಯರ್ಥಿಗಳು ನವೀಕರಿಸಿದ CV ಮತ್ತು ಇತ್ತೀಚಿನ ಪಾಸ್‌ಪೋರ್ಟ್ ಫೋಟೋದೊಂದಿಗೆ ಕಾಣಿಸಿಕೊಳ್ಳಬೇಕು

ಸೂಕ್ತ ಅಭ್ಯರ್ಥಿಗೆ ಉದ್ಯಮದಲ್ಲಿಯೇ ಉತ್ತಮವಾದ ಪ್ಯಾಕೇಜ್‌ಗಳನ್ನು ನೀಡಲಾಗುತ್ತದೆ.
ಹೆಚ್ಚಿನ ವಿವರಗಳಿಗಾಗಿ, ನಿಮ್ಮ ರೆಸ್ಯೂಮ್ ಅನ್ನು 6369079371 ಅಥವಾ hr@avrswarnamahal.com ಗೆ ಕಳುಹಿಸಿ

ಬಜಾಜ್ ಫ್ಯಾನ್ಸ್
ನಿಮ್ಮಂತೆ ಸಾಟಿಯಿಲ್ಲದ ಗಟ್ಟಿಮುಟ್ಟು

BAJAJ
BUILT FOR LIFE

shop.bajajelectricals.com | +91 70399 20000 | ಫ್ರೀ ಹೋಮ್ ಸರ್ವಿಸ್# 022 4128 0000 | consumercare@bajajelectricals.com

#ನಿಯಮ ಮತ್ತು ಷರತ್ತುಗಳು ಅನ್ವಯ. *ಸೂಪರ್5ಟಫ್™ ಟೆಕ್ನಾಲಜಿ ಬಜಾಜ್ ಇಲೆಕ್ಟ್ರಿಕಲ್ಸ್ ಲಿಮಿಟೆಡ್‌ನ ಟ್ರೇಡ್‌ಮಾರ್ಕ್ ಆಗಿದೆ. ಸೂಪರ್5ಟಫ್™ ಟೆಕ್ನಾಲಜಿ ಇದು ಸೆಲ್ಫ್ ಗಾರ್ಡ್ ಕೆಪ್ಯಾಸಿಟರ್, ಫಿಯೆರೊಶೀಲ್ಡ್ ಬಿಯರಿಂಗ್, ಸರ್ಜ್‌ಪ್ರೊಟೆಕ್ಟ್ ಮೋಟರ್, ಡ್ಯುರಾಕೋಟ್ ಕಾಪರ್ ಮತ್ತು ಕೊರೊಸೇಫ್ ಲಾಕ್ವೆರ್‌ನ್ನು ಒಳಗೊಂಡಿದೆ. **IS 1709 ರಂತೆ ಪರೀಕ್ಷಿಸಲಾಗಿದೆ. ^ASTM B117 ರಂತೆ ಪರೀಕ್ಷಿಸಲಾಗಿದೆ.
^^IEC 61000-4-5 ರಂತೆ ಪರೀಕ್ಷಿಸಲಾಗಿದೆ. ಉತ್ಪನ್ನದ ಚಿತ್ರಗಳು ಮಾದರಿಯಾಗಿವೆ. ಹೆಚ್ಚಿನ ವಿವರಗಳಿಗಾಗಿ ಭೇಟಿ ನೀಡಿರಿ : www.bajajelectricals.com/terms-and-conditions/2023

SCAN TO KNOW MORE

ನಮ್ಮ ಬೆಂಗಳೂರು ನಮ್ಮ ಹೆಮ್ಮೆ

ಮೋದಿ ಎಂದರೆ ಭರವಸೆ

ಮೋದಿ ಎಂದರೆ ಯಶಸ್ಸು

ಮುಂದಿನ ಪೀಳಿಗೆಗಾಗಿ ನವ ಬೆಂಗಳೂರಿನ ಅಭಿವೃದ್ಧಿ.

- ಆಯುಷ್ಮಾನ್ ಭಾರತ್: 3.11 ಲಕ್ಷ ಆರೋಗ್ಯ ಕಾರ್ಡ್ ನೀಡಲಾಗಿದೆ
- ಪಿಎಮ್ ಆವಾಸ್ (ನಗರ): 71643 ಮನೆಗಳ ನಿರ್ಮಾಣ
- ಬೆಂಗಳೂರು ಉಪ ನಗರ ರೈಲ್ವೆಗೆ ಅಡಿಪಾಯ ಹಾಕಲಾಗಿದೆ
- 5,000 ಕೋಟಿ ರೂ. ವೆಚ್ಚದಲ್ಲಿ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ 'ಸ್ಟೇಟ್ ಆಫ್ ದಿ ಆರ್ಟ್' ಎರಡನೇ ಟರ್ಮಿನಲ್ ತೆರೆಯಲಾಗಿದೆ.
- ಸರ್ ಎಂ ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ಉದ್ಘಾಟನೆ

ಡಿಜಿಟಲ್ ೪.0 ವಿಶ್ವ ದರ್ಜೆಯ

- ಅನ್ನು ಬಹು-ಮಾದರಿ ಸಾರಿಗೆ ಹಬ್ 'ಕಾಂಕಾರ್ಡ್ ಬೆಂಗಳೂರು' ಸ್ಥಾಪನೆ
- ಬೆಂಗಳೂರಿನ ಟ್ರಾಫಿಕ್ ಸವಾಲುಗಳನ್ನು ನಿಭಾಯಿಸಲು AI ಚಾಲಿತ ಪರಿಹಾರಗಳನ್ನು ಸಂಯೋಜಿಸುವ ಸಮಗ್ರ ಮೊಬೈಲ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಲಾಗಿದೆ.
- ಯುವ-ಕರುನಾಡು - ಡಿಜಿಟಲ್ 4.0 ಯೋಜನೆಯ ಅಡಿಯಲ್ಲಿ ಕರ್ನಾಟಕದ ಮೊದಲ ಗ್ಲೋಬಲ್ ಇನ್ನೋವೇಶನ್ ಹಬ್ ಸ್ಥಾಪಿಸಲಾಗಿದೆ
- ವರ್ಧಿತ ಇಂಟರ್ನೆಟ್ ವೇಗದೊಂದಿಗೆ ಬೆಂಗಳೂರಿನಲ್ಲಿ ಮಾಹಿತಿ ಹೆದ್ದಾರಿಯಾಗಿ ಕಾರ್ಯನಿರ್ವಹಿಸುವ ಜಿಗಾಬಿಟ್ ಆಪ್ಟಿಕಲ್ ಫೈಬರ್ ನೆಟ್ವರ್ಕ್ ಸ್ಥಾಪಿಸಲಾಗಿದೆ

#BJPYeBharavase

ಕಮಲದ ಬಟನ್ ಒತ್ತಿ ಬಿ.ಜೆ.ಪಿ. ಗೆಲ್ಲಿಸಿ

ಡಬಲ್ ಎಂಜಿನ್ ಸರ್ಕಾರ
ಕರ್ನಾಟಕದ ಅಭಿವೃದ್ಧಿಯ ಸಾಕಾರ
ಈ ಬಾರಿಯ ನಿರ್ಧಾರ ಬಹುಮತದ ಬಿಜೆಪಿ ಸರ್ಕಾರ

Published by BJP, Karnataka

ಮತದಾನ ಚಲಾಯಿಸುವಂತೆ ಜಾಗೃತಿ ಜಾಥಾ

‘ಪ್ರತಿಯೊಬ್ಬರು ಮತ ಚಲಾಯಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಯುವಶಕ್ತಿಯ ಪಾತ್ರ ಅತ್ಯಂತ ಪ್ರಮುಖವಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಹಾಗೂ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ಚುನಾವಣಾ ಸಾಕ್ಷರತಾ ಕ್ಲಬ್ ಸಹಯೋಗದಲ್ಲಿ ಸೆಂಟ್ರಲ್ ಕಾಲೇಜು ಆವರಣದಲ್ಲಿ ಶನಿವಾರ ಆಯೋಜಿಸಿದ್ದ ವಿದ್ಯಾರ್ಥಿಗಳೊಂದಿಗೆ ಸಂವಾದ ಮತ್ತು ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮೇ 10 ರಂದು ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರು ನಗರದ ಎಲ್ಲ ಮತದಾರರು ತಪ್ಪದೇ ಮತ ಚಲಾಯಿಸುವ ಮೂಲಕ ಅಧಿಕ ಮತದಾನ ಪ್ರಮಾಣ ಹೆಚ್ಚಿಸಬೇಕು' ಎಂದು ಸಲಹೆ ನೀಡಿದರು.

‘ಸ್ಥಳೀಯ ಸಂಸ್ಥೆಗಳಿಂದ ಸಂಸತ್ತಿನ ವರೆಗೆ ಏಕಕಾಲದಲ್ಲಿ ಚುನಾವಣೆ, ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡಬೇಕು. ಚುನಾವಣೆಯಲ್ಲಿ ಸ್ಪರ್ಧಿಸುವ ವಯೋಮಿತಿ ಇಳಿಕೆ, ಕುಟುಂಬ ರಾಜಕಾರಣಕ್ಕೆ ಕಡಿವಾಣ ಹಾಕಬೇಕು’ ಎಂಬ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ತುಷಾರ್ ಗಿರಿನಾಥ್ ಉತ್ತರಿಸಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯ ಶನಿವಾರ ಆಯೋಜಿಸಿದ್ದ ಮತದಾನ ಜಾಗೃತಿ ಜಾಥಾಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಚಾಲನೆ ನೀಡಿದರು. ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಇದ್ದಾರೆ.

ಕೆ.ಆರ್ ವೃತ್ತ, ಹಡ್ಸನ್ ವೃತ್ತ, ಕೆಂಪೇಗೌಡ ರಸ್ತೆ, ಮೈಸೂರು ಬ್ಯಾಂಕ್ ವೃತ್ತಗಳಲ್ಲಿ ಕಲಾತಂಡಗಳ ಸಮೇತ ನಡೆದ ಮತದಾನದ ಕುರಿತು ಜಾಗೃತಿ ಜಾಥಾ ನಡೆಯಿತು. ಬೆಂಗಳೂರು ನಗರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜ ಗಾಂಧಿ, ಬಿಬಿಎಂಪಿ ದಕ್ಷಿಣ ವಲಯದ ಆಯುಕ್ತ ಜಯರಾಂ ರಾಯಪುರ, ಬೆಂಗಳೂರು ನಗರ ವಿ.ವಿ ಕುಲಸಚಿವ ಸಿ.ಎನ್. ಶ್ರೀಧರ, ವಿ. ಲೋಕೇಶ, ವೀಣಾ, ಎನ್‌ಎಸ್‌ಎಸ್ ಸಂಯೋಜಕ ಗೋವಿಂದ ಗೌಡ ಅವರು ಇದ್ದರು.

‘ಮಣ್ಣಿನ ಫಲವತ್ತತೆ ಉಳಿಸುವುದು ಮುಖ್ಯವಾಗಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಡಿನ ಮಣ್ಣನ್ನು ಫಲವತ್ತಾಗಿಸಲು ಪ್ರತ್ಯೇಕ ಯೋಜನೆಗಳನ್ನು ರೂಪಿಸಬೇಕು’ ಎಂದು ಈಶ ಫೌಂಡೇಷನ್‌ನ ಸದ್ಗುರು ಜಗ್ಗಿ ವಾಸುದೇವ್ ಅವರು ಎಲ್ಲಾ ಅಭ್ಯರ್ಥಿಗಳಲ್ಲಿ ಮನವಿ ಮಾಡಿದ್ದಾರೆ.

‘ಕರ್ನಾಟಕಕ್ಕಾಗಿ ನಿಮ್ಮ ಬೇರೆ ಯಾವುದೇ ಯೋಜನೆಗಳಿದ್ದರೂ ಮಣ್ಣು ಉಳಿಸುವುದು ಮೂಲ ಧ್ಯೇಯ ಆಗಬೇಕು.

ಇದು ಕರ್ನಾಟಕ ರೈತರ ಏಕೈಕ ಬೇಡಿಕೆ. ಕನ್ನಡನಾಡಿನ ಮಣ್ಣನ್ನು ಫಲವತ್ತಾಗಿಸಬೇಕು.

ಜಗ್ಗಿ ವಾಸುದೇವ್

ರೈತರು ಮತ್ತು ರಾಜ್ಯದ ಸಮೃದ್ಧಿಗೆ ಇರುವುದು ಇದೊಂದೇ ಮಾರ್ಗ’ ಎಂದು ಸದ್ಗುರು ಜಗ್ಗಿ ವಾಸುದೇವ್ ಅವರು ಟ್ವೀಟ್ ಮಾಡಿದ್ದಾರೆ.

ಪುಲಕೇಶಿನಗರ (ಎಸ್‌ಸಿ ಮೀಸಲು) ವಿಧಾನಸಭಾ ಕ್ಷೇತ್ರ

ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ರಾಜೇಶ್ ರೈ ಚಟ್ಲ** ಅವರು ನಡೆಸಿದ ಕಿರು ಸಂದರ್ಶನ ಇಲ್ಲಿದೆ

ಅಖಂಡ ಶ್ರೀನಿವಾಸ ಮೂರ್ತಿ (ಬಿಎಸ್‌ಪಿ)

‘ಇಡೀ ಕ್ಷೇತ್ರದ ಜನ ನನ್ನ ಜೊತೆಗಿದ್ದಾರೆ, ಗೆಲುವು ಖಚಿತ’

● ಶಾಸಕರಾಗಿದ್ದ ಅವಧಿಯ ನಿಮ್ಮ ಸಾಧನೆಗಳನ್ನು ಹೇಳಿಕೊಳ್ಳಬಹುದೇ?

ಕ್ಷೇತ್ರದಲ್ಲಿ ಶೇ 90ರಷ್ಟು ಕೊಳಗೇರಿ ಪ್ರದೇಶ. ಹತ್ತು ವರ್ಷಗಳ ಹಿಂದೆ ಬಹುತೇಕ ಭಾಗದಲ್ಲಿ ಒಂದು ಬಿಂದಿಗೆ ನೀರಿಗೆ ₹ 10 ಕೊಡಬೇಕಿತ್ತು. ಆದರೆ, ಈ ಬಹುದೊಡ್ಡ ಸಮಸ್ಯೆಯನ್ನು ಪರಿಹರಿಸಿದ್ದೇನೆ. ಪ್ರತಿ ಪ್ರದೇಶದಲ್ಲಿ ಕೊಳವೆಬಾವಿ, ಕುಡಿಯುವ ನೀರು, ಒಳಚರಂಡಿ, ಬೀದಿದೀಪ ವ್ಯವಸ್ಥೆ ಆಗಿದೆ. ರಸ್ತೆ, ಶಾಲೆಗಳನ್ನು ಅಭಿವೃದ್ಧಿಪಡಿಸಿದ್ದೇನೆ. ಶಾಲೆಗಳಿಗೆ ಹೊಸ ಕಟ್ಟಡಗಳನ್ನು ಕಟ್ಟಿಸಿದ್ದೇನೆ. ಎರಡು ಪದವಿ ಕಾಲೇಜು, ಎರಡು ಪಿಯು ಕಾಲೇಜುಗಳು ಆಗಿವೆ. ಕ್ರೀಡಾ ಕಾಂಪ್ಲೆಕ್ಸ್, ಅಂಬೇಡ್ಕರ್ ಭವನ, ಇತರ ಸಮುದಾಯ ಭವನಗಳು, ಅಂಗನವಾಡಿಗಳಿಗೆ ಕಟ್ಟಡ ನಿರ್ಮಿಸಿದ್ದೇನೆ. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯೂ ನನ್ನ ಅವಧಿಯಲ್ಲೇ ಆಗಿದೆ. ಕ್ಷೇತ್ರಕ್ಕೆ ಐಟಿಐ ಮಂಜೂರಾಗಿದೆ. ಸಾವಿರಾರು ಕುಟುಂಬಗಳಿಗೆ ಹಕ್ಕುಪತ್ರ ಕೊಟ್ಟಿದ್ದೇನೆ. ವಸತಿರಹಿತರಿಗಾಗಿ ಆರು ಸಾವಿರ ಮನೆಗಳನ್ನು ಕಟ್ಟಿಸಿದ್ದೇನೆ. ಕೋವಿಡ್ ಸಮಯದಲ್ಲಿ 50 ಸಾವಿರ ಜನರಿಗೆ ರೇಷನ್ ಕಿಟ್, 10 ಲಕ್ಷ ಜನಕ್ಕೆ ಊಟ ಪೂರೈಸಿದ್ದೇನೆ. ಹೀಗೆ ಕ್ಷೇತ್ರದ ಇಡೀ ಚಿತ್ರಣ ಬದಲಾಗಲು ನಾನು ಕಾರಣ.

● ಹಾಗಿದ್ದರೆ, ನಿಮಗೆ ಈ ಬಾರಿ ಕಾಂಗ್ರೆಸ್ ಮತ್ತೆ ಟಿಕೆಟ್ ಯಾಕೆ ಕೊಡಲಿಲ್ಲ?

2018ರ ಚುನಾವಣೆಯಲ್ಲಿ ರಾಜ್ಯದಲ್ಲಿಯೇ ಅತಿ ಹೆಚ್ಚು 81,626 ಮತಗಳಿಂದ ಜೆಡಿಎಸ್‌ನ ಬಿ. ಪ್ರಸನ್ನ ಕುಮಾರ್ ವಿರುದ್ಧ ಗೆದ್ದಿದ್ದೇನೆ. ಆದರೂ 2020ರಲ್ಲಿ ಡಿಜೆ ಹಳ್ಳಿ, ಕೆ.ಜಿ ಹಳ್ಳಿಯಲ್ಲಿ ನಡೆದ ಘಟನೆ ನೆಪವಾಗಿಟ್ಟು ಪಕ್ಷದ ಹಿರಿಯ ನಾಯಕರು ತೀರ್ಮಾನ ತೆಗೆದುಕೊಂಡು ಟಿಕೆಟ್ ತಪ್ಪಿಸಿದ್ದಾರೆ. ಯಾರೋ ಮಾಡಿದ ತಪ್ಪಿಗೆ ನನಗೆ ಶಿಕ್ಷೆ ಕೊಟ್ಟಿದ್ದಾರೆ. ನನ್ನನ್ನು ಬಲಿಪಶು ಮಾಡಿದ್ದಾರೆ. ಕ್ಷೇತ್ರದಲ್ಲಿ ನಾವು ಹಿಂದುಗಳು, ಮುಸ್ಲಿಮರು, ಕ್ರಿಶ್ಚಿಯನರು, ಜೈನರು ಹೀಗೆ ಎಲ್ಲ ಧರ್ಮದವರು ಅಣ್ಣ ತಮ್ಮಂದಿರಂತೆ ಒಟ್ಟಾಗಿ ಇದ್ದೇವೆ. ಆದರೂ ಷಡ್ಯಂತ್ರ ಮಾಡಿ ಟಿಕೆಟ್ ಸಿಗದಂತೆ ಮಾಡಿದ್ದಾರೆ

● ಕಾಂಗ್ರೆಸ್ ಟಿಕೆಟ್ ನೀಡದೇ ಇದ್ದರೆ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತೇನೆ ಎಂದವರು ಬಿಎಸ್‌ಪಿ ಸೇರಲು ಏನು ಕಾರಣ?

ಕಾಂಗ್ರೆಸ್ ಟಿಕೆಟ್ ಸಿಗುವುದಿಲ್ಲ ಎಂದು ಖಚಿತವಾಗುತ್ತಿದ್ದಂತೆ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ನಿರ್ಧರಿಸಿದ್ದೆ. ಆದರೆ, ಕ್ಷೇತ್ರ ನನ್ನ ಪರ ಒಲವು ಹೊಂದಿದ್ದ ನಾಯಕರು, ಬೆಂಬಲಿಗರು ಯಾವುದಾದರೂ ರಾಷ್ಟ್ರೀಯ ಪಕ್ಷದಿಂದ ಸ್ಪರ್ಧಿಸಿದರೆ ಒಳ್ಳೆಯದೆಂದು ಸಲಹೆ ನೀಡಿದರು. ಹೀಗಾಗಿ, ಕಾಂಗ್ರೆಸ್ ತ್ಯಜಿಸಿ ಬಿಎಸ್‌ಪಿ ಸೇರಿ ಕಣಕ್ಕಿಳಿದಿದ್ದೇನೆ.

● ನಿಮ್ಮ ಮೇಲೆ ಕ್ಷೇತ್ರದ ಮತದಾರರಿಗೆ ಅನುಕಂಪ ಇದೆ ಅನಿಸುತ್ತಿದೆಯೇ?

ನನಗೆ ಕಾಂಗ್ರೆಸ್ ಟಿಕೆಟ್ ತಪ್ಪಿದ್ದಕ್ಕೆ ಕ್ಷೇತ್ರದ ನಾಯಕರಿಗೆ, ಕಾರ್ಯಕರ್ತರಿಗೆ, ಅಭಿಮಾನಿಗಳಿಗೆ ನೋವಾಗಿದೆ. ನನಗೆ ಅನ್ಯಾಯ ಆಗಿದೆ ಎಂದು ಜನರೇ ಮಾತನಾಡುತ್ತಿದ್ದಾರೆ. ಈ ಅನುಕಂಪ ಖಂಡಿತವಾಗಿಯೂ ನನಗೆ ಅನುಕೂಲವಾಗುತ್ತದೆ. ಜನರಿಗೆ ನನ್ನ ಮೇಲೆ ವಿಶ್ವಾಸ ಬಂದಿದೆ. ಅವರೆಲ್ಲರೂ ನನ್ನ ಜೊತೆಗೇ ಇದ್ದಾರೆ. ಅವರೇ ನನಗೆ ಬಲ. ಹೀಗಾಗಿ ಗೆಲ್ಲುವ ಪೂರ್ಣ ವಿಶ್ವಾಸವಿದೆ.

● ನಿಮ್ಮ ಪ್ರಚಾರ ಹೇಗೆ ಸಾಗಿದೆ?

ಈಗಾಗಲೇ ಕ್ಷೇತ್ರ ವ್ಯಾಪ್ತಿಯಲ್ಲಿ ಮನೆ ಮನೆ ಸಂಪರ್ಕ ಮಾಡಿದ್ದೇನೆ. ಎಲ್ಲ ಕಡೆಯಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

● ನಿಮ್ಮ ಪ್ರತಿಸ್ಪರ್ಧಿ ಯಾರು?

ಕಾಂಗ್ರೆಸ್ ಅಭ್ಯರ್ಥಿ ನನ್ನ ಸ್ಪರ್ಧಿ. ಎಸ್‌ಡಿಪಿಐ ಅಭ್ಯರ್ಥಿಯೂ ಕಣದಲ್ಲಿದ್ದಾರೆ. ಆದರೆ, ಅವರಿಬ್ಬರೂ ಈ ಕ್ಷೇತ್ರದವರಲ್ಲ. ನಾನು ಸ್ಥಳೀಯ ನಿವಾಸಿ. ಇಡೀ ಕ್ಷೇತ್ರವನ್ನು ಚೆನ್ನಾಗಿ ಬಲ್ಲೆ. ಮತ್ತೊಮ್ಮೆ ವಿಧಾನಸೌಧ ಪ್ರವೇಶಿಸಲು ಕ್ಷೇತ್ರದ ಜನ ನನಗೆ ಆಶೀರ್ವಾದ ಮಾಡುತ್ತಾರೆಂಬ ಪೂರ್ಣ ವಿಶ್ವಾಸವಿದೆ.

ಎ.ಸಿ. ಶ್ರೀನಿವಾಸ್ (ಕಾಂಗ್ರೆಸ್)

‘ಕಾಂಗ್ರೆಸ್ ಮತಗಳು ನನ್ನ ಕೈಹಿಡಿಯಲಿವೆ’

● ಆಕಸ್ಮಿಕವಾಗಿ ಕ್ಷೇತ್ರದ ಟಿಕೆಟ್ ಗಿಟ್ಟಿಸಿಕೊಂಡಿದ್ದೀರಿ. ಏನು ಅನಿಸುತ್ತದೆ?

ನಾನು ಈ ಹಿಂದೆ ಮಹದೇವಪುರ ಕ್ಷೇತ್ರದಿಂದ ಸ್ಪರ್ಧಿಸಿದ್ದೆ. ಈ ಬಾರಿ ದೇವನಹಳ್ಳಿ ಕ್ಷೇತ್ರದಿಂದ ಟಿಕೆಟ್ ನಿರೀಕ್ಷೆ ಮಾಡಿದ್ದೆ. ಅಲ್ಲಿಂದ ಕಣಕ್ಕಿಳಿಯಲು ಎಲ್ಲ ತಯಾರಿಯನ್ನೂ ಮಾಡಿದ್ದೆ. ಆದರೆ, ಪಕ್ಷದ ನಾಯಕರು ನನಗೆ ಈ ಕ್ಷೇತ್ರದಲ್ಲಿ ಟಿಕೆಟ್ ನೀಡಿದ್ದಾರೆ.

● ನಿಮಗೆ ಈ ಕ್ಷೇತ್ರ ಹೊಸತಲ್ವಾ?

ಮೊದಲು ಈ ಕ್ಷೇತ್ರ ಯಲಹಂಕದ ಭಾಗವಾಗಿತ್ತು. 2008ರಲ್ಲಿ ಕ್ಷೇತ್ರಗಳ ಪುನರ್‌ವಿಂಗಡನೆಯ ಬಳಿಕ ಹೊಸ ಕ್ಷೇತ್ರವಾಗಿದೆ. ನಾನು ಪಕ್ಷದ ಹಿರಿಯ ಮುಖಂಡ ಜಾಫರ್ ಷರೀಫ್ ಜೊತೆ ಈ ಭಾಗದಲ್ಲಿ ಕೆಲಸ ಮಾಡಿದ್ದೇನೆ.

● ಮತದಾರರಿಗೆ ಏನು ಭರವಸೆ ಕೊಡುತ್ತೀರಿ ?

ಕ್ಷೇತ್ರದಲ್ಲಿ ನೀರಿನ ಸಮಸ್ಯೆ, ಕಸ, ನಿರುದ್ಯೋಗ ಸಮಸ್ಯೆಯಿದೆ. ಶಾಲಾ ಕಾಲೇಜು, ಕ್ರೀಡಾಂಗಣ ಇಲ್ಲ. ಉದ್ಯಾನಗಳಿಲ್ಲ. ಆಸ್ಪತ್ರೆಗಳಿಲ್ಲ. ಜನರಿಗೆ ಅಗತ್ಯವಾದ ಮೂಲಸೌಲಭ್ಯ ಒದಗಿಸಲು ನಾನು ಬದ್ಧನಾಗಿದ್ದೇನೆ. ಇಡೀ ಕ್ಷೇತ್ರದ ಅಭಿವೃದ್ಧಿಗೆ ಖಂಡಿತಾ ಶಕ್ತಿ ಮೀರಿ ಕೆಲಸ ಮಾಡುತ್ತೇನೆ. ಈಗಾಗಲೇ ಕ್ಷೇತ್ರದಾದ್ಯಂತ ಸುತ್ತಾಡಿದ್ದೇನೆ. ಎಲ್ಲ ಧರ್ಮದವರು ಸೌಹಾರ್ದಯುತವಾಗಿ ಇದ್ದಾರೆ. ಗೆಲ್ಲುವ ವಿಶ್ವಾಸ ಮೂಡಿದೆ.



● ಪ್ರಚಾರ ಹೇಗೆ ನಡೆಯುತ್ತಿದೆ?

15 ಸಾವಿರ ಜನರ ಬೆಂಬಲದಲ್ಲಿ ನಾಮಪತ್ರ ಸಲ್ಲಿಸಿದ್ದೇನೆ. ಪಕ್ಷದ ಎಲ್ಲ ಮುಖಂಡರನ್ನು ಭೇಟಿ ಮಾಡಿದ್ದೇನೆ. ವಾರ್ಡ್‌ವಾರು ಸಭೆಗಳನ್ನು ನಡೆಸಿದ್ದೇನೆ. ಎಲ್ಲ ಜನರು ಬೆಂಬಲ ಕೊಡುತ್ತಿದ್ದಾರೆ.

● ನಿಮಗೆ ಯಾರು ಇಲ್ಲಿ ಪ್ರತಿಸ್ಪರ್ಧಿ?

ಇಲ್ಲಿ ನನಗೆ ಪ್ರತಿಸ್ಪರ್ಧಿಗಳೇ ಇಲ್ಲ. ನನಗೆ ಕೆಲಸಗಳೇ ಸವಾಲು. ಹಿಂದೆ ಇಲ್ಲಿ ಗೆದ್ದವರು ಕಾಂಗ್ರೆಸ್ ಮತಗಳಿಂದ ಆಯ್ಕೆಯಾಗಿದ್ದಾರೆ. ಅವರ ಸ್ವಂತ ಮತಗಳು ಅಲ್ಲ. ಹೀಗಾಗಿ ಪಕ್ಷದ ಮತಗಳು ನನ್ನ ಪರವಾಗುವ ವಿಶ್ವಾಸವಿದೆ.

ಸಿ.ವಿ. ರಾಮನ್ ನಗರ: ಆರ್‌ಪಿಐ ಅಭ್ಯರ್ಥಿಗೆ ಜೆಡಿಎಸ್ ಬೆಂಬಲ

ರಘುವಿಗೆ ಜಯವೋ, ‘ಕೈ’ಗೆ ಆನಂದವೋ

• ಸಂತೋಷ ಜಿಗಳಿಕೊಪ್ಪ

ಎಸ್‌.ರಘು

ಎಂ. ರಾಜೇಂದ್ರ

ಆನಂದ್ ಕುಮಾರ್

ಮೋಹನ್ ದಾಸರಿ



ಕ್ಷೇತ್ರ	2008	2013	2018
ಸಿ.ವಿ.ರಾಮನ್‌ನಗರ	ಬಿಜೆಪಿ	ಬಿಜೆಪಿ	ಬಿಜೆಪಿ

ಬೆಂಗಳೂರು: ಪ್ರತಿಷ್ಠಿತ ನೊಬೆಲ್ ಪ್ರಶಸ್ತಿ ಪುರಸ್ಕೃತ ಭಾರತೀಯ ವಿಜ್ಞಾನಿ ಸರ್ ಸಿ.ವಿ. ರಾಮನ್ ಹೆಸರಿರುವ ಕ್ಷೇತ್ರವನ್ನು ಭದ್ರಕೋಟೆ ಮಾಡಿಕೊಂಡಿರುವ ‘ಕಮಲ’ವನ್ನು ಬಾಡಿಸಲು ‘ಕೈ’ ಪ್ರಬಲ ಪೈಪೋಟಿ ಒಡ್ಡಿದೆ.

ಪರಿಶಿಷ್ಟರು, ಹಿಂದುಳಿದ ವರ್ಗದ ಮತದಾರರನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿರುವ ಕ್ಷೇತ್ರದಲ್ಲಿ ಸಿ.ವಿ. ರಾಮನ್ ನಗರ, ಲಾಲ್ ಬಹದ್ದೂರ್ ನಗರ, ಹೊಸ ಬೈಯಪ್ಪನಹಳ್ಳಿ, ಹೊಯ್ಸಳ ನಗರ, ಹಳೇ ತಿಪ್ಪಸಂದ್ರ, ನ್ಯೂ ತಿಪ್ಪಸಂದ್ರ, ಜಲಕಂಠೇಶ್ವರನಗರ, ಜೀವನ್‌ಬಿಮಾನಗರ ಹಾಗೂ ಕೋನೇನ ಅಗ್ರಹಾರ ವಾರ್ಡ್‌ಗಳಿವೆ.

ಪ್ರತಿಷ್ಠಿತ ಬಡಾವಣೆಗಳಿಂದ ಹಿಡಿದು ಕೊಳೆಗೇರಿ ಪ್ರದೇಶವನ್ನು ಒಳಗೊಂಡಿರುವ ಕ್ಷೇತ್ರ ಪರಿಶಿಷ್ಟ ಜಾತಿ (ಎಸ್‌ಸಿ) ಅಭ್ಯರ್ಥಿಗೆ ಮೀಸಲು. ಸದ್ಯ 251 ಮತಗಟ್ಟೆಗಳಿವೆ.

2008ರಲ್ಲಿ ಕ್ಷೇತ್ರ ಮರು ವಿಂಗಡನೆಯಾದಾಗ ನಡೆದ ಮೊದಲ ಚುನಾವಣೆಯಲ್ಲಿ ಜಯಭೇರಿ ಬಾರಿಸಿ ಶಾಸಕರಾಗಿದ್ದ ಬಿಜೆಪಿಯ ಎಸ್. ರಘು, 2013 ಹಾಗೂ 2018ರ ಚುನಾವಣೆಯಲ್ಲೂ ವಿಜಯ ಪತಾಕೆ ಹಾರಿಸಿದ್ದಾರೆ.

ಈ ಬಾರಿಯೂ ಎಸ್.ರಘು ಬಿಜೆಪಿ ಅಭ್ಯರ್ಥಿಯಾಗಿದ್ದು, ಕ್ಷೇತ್ರದಲ್ಲಿ ಬಿರುಸಿನ ಪ್ರಚಾರ ಆರಂಭಿಸಿದ್ದಾರೆ. ಇವರನ್ನು ಮಣಿಸಲು ತಂತ್ರ ರೂಪಿಸಿರುವ ಕಾಂಗ್ರೆಸ್, ಹೊಯ್ಸಳ ನಗರದ ಮಾಜಿ ಕಾರ್ಪೊರೇಟರ್ ಆಗಿರುವ ಎಸ್. ಆನಂದ್‌ಕುಮಾರ್ ಅವರನ್ನು ಕಣಕ್ಕೆ ಇಳಿಸಿದೆ.

2018ರ ಚುನಾವಣೆಯಲ್ಲಿ ಸೋತಿದ್ದ ಕಾಂಗ್ರೆಸ್ ಅಭ್ಯರ್ಥಿ ಸಂಪತ್ ರಾಜ್, ಎರಡನೇ ಸ್ಥಾನದಲ್ಲಿದ್ದರು. ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿದ್ದ ರಮೇಶ್, 20,478 ಮತ ಪಡೆದು ಮೂರನೇ ಸ್ಥಾನ ಪಡೆದಿದ್ದರು. ಆದರೆ, ಈ ಬಾರಿ ಜೆಡಿಎಸ್ ಅಭ್ಯರ್ಥಿ ಕಣದಲ್ಲಿಲ್ಲ. ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ) ಅಭ್ಯರ್ಥಿ ಎಂ. ರಾಜೇಂದ್ರ ಅವರಿಗೆ ಬೆಂಬಲ ನೀಡುವುದಾಗಿ ಜೆಡಿಎಸ್ ಘೋಷಿಸಿದೆ. ಹೀಗಾಗಿ, ರಾಜೇಂದ್ರ ಅವರು ಹೆಚ್ಚು ಮತ ಗಳಿಸುವ ವಾತಾವರಣವಿದೆ.

ಆಮ್ ಆದ್ಮಿ ಪಾರ್ಟಿಯಿಂದ ಸ್ಪರ್ಧಿಸಿದ್ದ ಮೋಹನ್ ದಾಸರಿ, ಐದನೇ ಸ್ಥಾನದಲ್ಲಿದ್ದರು. ಈ ಬಾರಿಯೂ ಅವರು ಆಮ್ ಆದ್ಮಿ ಪಾರ್ಟಿಯಿಂದ ಸ್ಪರ್ಧಿಸಿದ್ದಾರೆ.

ಐಟಿ–ಬಿಟಿ ಉದ್ಯೋಗಿಗಳು, ರಕ್ಷಣಾ ಪಡೆಗಳ ನೌಕರರು, ದಿನಗೂಲಿ ಕಾರ್ಮಿಕರು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದ ಜನ ಕ್ಷೇತ್ರದಲ್ಲಿ ಹೆಚ್ಚಿದ್ದಾರೆ. ಕ್ಷೇತ್ರದಲ್ಲಿರುವ ಇಂದಿರಾನಗರ ಹೆಸರುವಾಸಿಯಾದ ಪ್ರದೇಶ. ಹೀಗಾಗಿ, ಎಲ್ಲ ವರ್ಗ ಹಾಗೂ ಧರ್ಮ–ಜಾತಿ ಜನರ ಮತಗಳನ್ನು ಸೆಳೆಯಲು ಅಭ್ಯರ್ಥಿಗಳು ಪ್ರಚಾರದಲ್ಲಿ ತೊಡಗಿದ್ದಾರೆ.

‘15 ವರ್ಷಗಳಿಂದ ಶಾಸಕನಾಗಿ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಈ ಬಾರಿಯೂ ಆಶೀರ್ವಾದ ಮಾಡಿ, ಸೇವೆಗೆ ಅವಕಾಶ ನೀಡಿ’ ಎಂದು ಬಿಜೆಪಿ ಅಭ್ಯರ್ಥಿ ರಘು ಕೋರುತ್ತಿದ್ದಾರೆ.

ಕಾಂಗ್ರೆಸ್‌ನ ಆನಂದ್‌ಕುಮಾರ್, ‘ಕ್ಷೇತ್ರದಲ್ಲಿ ಹೇಳಿಕೊಳ್ಳುವಂಥ ಅಭಿವೃದ್ಧಿ ಆಗಿಲ್ಲ. ಕ್ಷೇತ್ರಕ್ಕೆ ಬಂದ ಅನುದಾನ ಎಲ್ಲಿಗೆ ಹೋಯಿತು ಎಂಬ ಮಾಹಿತಿಯೂ ಇಲ್ಲ. ಈ ಬಾರಿಯಾದರೂ ಬದಲಾವಣೆ ತನ್ನಿ’ ಎಂದು ಪ್ರಚಾರ ಮಾಡುತ್ತಿದ್ದಾರೆ.

ಆಮ್ ಆದ್ಮಿ ಪಾರ್ಟಿಯ ಮೋಹನ್ ದಾಸರಿ, ‘2018ರ ಚುನಾವಣೆ ನಂತರವೂ ಕ್ಷೇತ್ರದಲ್ಲಿ ಸುತ್ತಾಡುತ್ತಿದ್ದೇನೆ. ಜನರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಸ್ಪಂದಿಸುತ್ತಿದ್ದೇನೆ. ಮತ ನೀಡಿ’ ಎಂದು ಪ್ರಚಾರದಲ್ಲಿ ತೊಡಗಿದ್ದಾರೆ.

ಎಲ್ಲರನ್ನು ನಗುತ್ತಲೇ ಬೀಳ್ಕೊಡುತ್ತಿರುವ ಮತದಾರರು, ‘ಕ್ಷೇತ್ರದಲ್ಲಿ ಮೊದಲಿನಿಂದಲೂ ಬಿಜೆಪಿ ಅಭ್ಯರ್ಥಿ ಮೇಲೆ ಒಲವಿದೆ. ಕಾಂಗ್ರೆಸ್ ಪ್ರತಿ ವರ್ಷವೂ ಅಭ್ಯರ್ಥಿಯನ್ನು ಬದಲಿಸುತ್ತಿದೆ. ಹೀಗಾಗಿ, ಈ ಬಾರಿ ಬಿಜೆಪಿ–ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದೆ’ ಎನ್ನುತ್ತಿದ್ದಾರೆ. ಆದರೆ, ಯಾರಾಗಲಿದ್ದಾರೆ ಮುಂದಿನ ಶಾಸಕ ಎಂಬ ಗುಟ್ಟು ಬಿಟ್ಟು ಕೊಡುತ್ತಿಲ್ಲ.

ಬಹುಜನ ಸಮಾಜ ಪಾರ್ಟಿಯಿಂದ (ಬಿಎಸ್‌ಪಿ) ವಿ. ಅಂಜಿ, ಉತ್ತಮ ಪ್ರಜಾಕೀಯ ಪಾರ್ಟಿಯಿಂದ ಜಿ. ಚೈತ್ರಾ, ಕರ್ನಾಟಕ ರಾಷ್ಟ್ರ ಸಮಿತಿಯಿಂದ ಡಾ. ಮಂಜುನಾಥ್ ಎಸ್. ಕಣದಲ್ಲಿದ್ದಾರೆ. ಎಸ್. ಚಂದ್ರಶೇಖರ್, ಪಿ. ರಮೇಶ್ ಹಾಗೂ ರಾಕೇಶ್‌ಕುಮಾರ್ ಅವರು ಪಕ್ಷೇತರ ಅಭ್ಯರ್ಥಿಗಳಾಗಿದ್ದಾರೆ.

ಸಾಕ್ಷಾತ್ ಸಮೀಕ್ಷೆ

ಮಹಾಲಕ್ಷ್ಮಿ ಬಡಾವಣೆ: ಗೋಪಾಲಯ್ಯ ಮಣಿಸಲು ಕಾಂಗ್ರೆಸ್, ಜೆಡಿಎಸ್ ಏದುಸಿರು

• ವಿ.ಎಸ್. ಸುಬ್ರಹ್ಮಣ್ಯ



ಫಲಿತಾಂಶದ ಹಿನ್ನೋಟ			
2008	2013	2018	2019
ಕಾಂಗ್ರೆಸ್	ಜೆಡಿಎಸ್	ಜೆಡಿಎಸ್	ಬಿಜೆಪಿ(ಉಪಚುನಾವಣೆ)

ಬೆಂಗಳೂರು: ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರ ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ಮಧ್ಯದ ಜಿದ್ದಾಜಿದ್ದಿಯ ಕಣವಾಗಿತ್ತು. ಚುನಾವಣೆಯಿಂದ ಚುನಾವಣೆಗೆ ಕ್ಷೇತ್ರದ ಮೇಲೆ ಪ್ರಬಲ ಹಿಡಿತ ಸಾಧಿಸಿರುವ ಅಬಕಾರಿ ಸಚಿವ ಕೆ. ಗೋಪಾಲಯ್ಯ ವಿರುದ್ಧ ಈ ಬಾರಿ ಪ್ರಬಲ ಪೈಪೋಟಿ ನೀಡುವುದಕ್ಕೂ ಕಾಂಗ್ರೆಸ್ ಮತ್ತು ಜೆಡಿಎಸ್ ಏದುಸಿರು ಬಿಡುತ್ತಿವೆ.

ಅಭಿವೃದ್ಧಿ ಹೊಂದಿದ ಪ್ರದೇಶಗಳು, ಇನ್ನೂ ಅಭಿವೃದ್ಧಿ ಹಂತದಲ್ಲಿರುವ ಪ್ರದೇಶಗಳು ಮತ್ತು ಕೊಳೆಗೇರಿಗಳನ್ನು ಒಳಗೊಂಡಿರುವ ಪ್ರದೇಶದಲ್ಲಿ ಮತದಾರರ ಸಂಖ್ಯೆಯಲ್ಲಿ ಒಕ್ಕಲಿಗರೇ ನಿರ್ಣಾಯಕ. ಕಾಂಗ್ರೆಸ್ ಹಿಡಿತದಿಂದ ಜೆಡಿಎಸ್ ತೆಕ್ಕೆಗೆ ಹೊರಳಿದ್ದ ಕ್ಷೇತ್ರದಲ್ಲಿ ಗೋಪಾಲಯ್ಯ ಅವರ ಪಕ್ಷಾಂತರದಿಂದ ಬಿಜೆಪಿ ಬಲವಾದ ಹಿಡಿತ ಸಾಧಿಸಿದೆ. ಪಕ್ಷಕ್ಕಿಂತಲೂ ಗೋಪಾಲಯ್ಯ ಅವರ ವೈಯಕ್ತಿಕ ಪ್ರಭಾವವೇ ಕ್ಷೇತ್ರದ ಉದ್ದಗಲಕ್ಕೂ ಸದ್ದು ಮಾಡುತ್ತಿದೆ.

2019ರಲ್ಲಿ ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದ ಗೋಪಾಲಯ್ಯ, ಆಗ ನಡೆದ ಉಪ ಚುನಾವಣೆಯಲ್ಲಿ ‘ಕಮಲ’ದ ಗುರುತಿಗೆ ವಿಜಯಮಾಲೆ ತೊಡಿಸುವಲ್ಲಿ ಯಶಸ್ವಿಯಾಗಿದ್ದರು. ನಂತರದ ಮೂರು ವರ್ಷಗಳಲ್ಲಿ ಹಿಂದೆ ತಮಗೆ ಪ್ರತಿಸ್ಪರ್ಧಿಗಳಾಗಿದ್ದವರೂ ಸೇರಿದಂತೆ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಹಲವರನ್ನು ಬಿಜೆಪಿಗೆ ಕರೆತಂದಿದ್ದಾರೆ. 2019ರ ಉಪ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿದ್ದ ಡಾ. ಗಿರೀಶ್ ಕೆ. ನಾಶಿ ಅವರೇ ಈಗ ಬಿಜೆಪಿಯಲ್ಲಿದ್ದಾರೆ. ಪಕ್ಷಾಂತರದ ಹೊಡೆತಕ್ಕೆ ಎರಡೂ ಪಕ್ಷಗಳು ಇಲ್ಲಿ ಅಕ್ಷರಶಃ ತತ್ತರಿಸಿಹೋಗಿವೆ.


ಗೋಪಾಲಯ್ಯ

ಕೆ.ಸಿ. ರಾಜಣ್ಣ

ಶಾಂತಲಾ ದಾಮ್ಲೆ


ಕೇಶವಮೂರ್ತಿ

ಈ ಬಾರಿ ಕಾಂಗ್ರೆಸ್ ಮತ್ತು ಜೆಡಿಎಸ್‌ನಲ್ಲಿ ಈ ಕ್ಷೇತ್ರದಿಂದ ಕಣಕ್ಕಿಳಿಯಲು ಹೆಚ್ಚು ಪೈಪೋಟಿಯೇ ಇರಲಿಲ್ಲ. ಕಾಂಗ್ರೆಸ್‌ನಿಂದ ಬಿಬಿಎಂಪಿ ಮಾಜಿ ಸದಸ್ಯ ಎಸ್. ಕೇಶವಮೂರ್ತಿ ಅವರನ್ನು ಕಣಕ್ಕಿಳಿಸಿದ್ದರೆ, ಗೋಪಾಲಯ್ಯ ಅವರಿಗೆ ವರಸೆಯಲ್ಲಿ ಅಣ್ಣನಾದ (ದೊಡ್ಡಪ್ಪನ ಮಗ) ಕೆ.ಸಿ. ರಾಜಣ್ಣ ಜೆಡಿಎಸ್ ಹುರಿಯಾಳು. ಆಮ್ ಆದ್ಮಿ ಪಕ್ಷದ (ಆಪ್) ಶಾಂತಲಾ ದಾಮ್ಲೆ ಸ್ಪರ್ಧೆಯಲ್ಲಿದ್ದಾರೆ.

ಕರ್ನಾಟಕ ರಾಷ್ಟ್ರ ಸಮಿತಿಯ ಅಮಿತ್ ರಬೆಲ್ಲೊ, ಬಹುಜನ ಸಮಾಜ ಪಕ್ಷದ ಎನ್. ನಾರಾಯಣಸ್ವಾಮಿ ನವಕೋಟಿ ಸೇರಿದಂತೆ ಒಟ್ಟು 12 ಮಂದಿ ಅಖಾಡದಲ್ಲಿದ್ದಾರೆ. ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಮಧ್ಯದಲ್ಲೇ ತ್ರಿಕೋನ ಸ್ಪರ್ಧೆ ಇದೆ. ದೀರ್ಘ ಕಾಲದಿಂದ ಕ್ಷೇತ್ರದಲ್ಲಿ ಸಕ್ರಿಯರಾಗಿರುವ ಆಪ್ ಅಭ್ಯರ್ಥಿ ಒಂದಷ್ಟು ಮತ ಕಸಿಯಬಹುದಾದ ಸಾಧ್ಯತೆಗಳು ಕಾಣಿಸುತ್ತಿವೆ. ಅಭಿವೃದ್ಧಿ ಸೇರಿದಂತೆ ಇತರ ವಿಚಾರಗಳಿಗಿಂತಲೂ ಇಲ್ಲಿ ವೈಯಕ್ತಿಕ ವರ್ಚಸ್ಸೇ ಫಲಿತಾಂಶ ನಿರ್ಧರಿಸುವಂತಿದೆ.

ಕ್ಷೇತ್ರದ 270 ಮತಗಟ್ಟೆಗಳಲ್ಲೂ ಗೋಪಾಲಯ್ಯ ಹಿಡಿತ ಹೊಂದಿದ್ದಾರೆ. ಕ್ಷೇತ್ರದ ಸರ್ಕಾರಿ ಶಾಲೆಗಳಿಗೆ ಹೊಸ ರೂಪ ನೀಡಿರುವುದು, ಮಕ್ಕಳ ಶಿಕ್ಷಣಕ್ಕೆ ವೈಯಕ್ತಿಕ ನೆರವು ನೀಡುತ್ತಿರುವುದು, ಆಸ್ಪತ್ರೆ ಮತ್ತು ಆರೋಗ್ಯ ಕೇಂದ್ರಗಳ ಸುಧಾರಣೆ, ಡಯಾಲಿಸಿಸ್ ಕೇಂದ್ರದ ಸ್ಥಾಪನೆ ಹೆಚ್ಚು ಮತ ಗಳಿಕೆಗೆ ನೆರವಾಗಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ. ಕೋವಿಡ್ ಅವಧಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಆಹಾರದ ಕಿಟ್ ವಿತರಿಸಿ, ಚಿಕಿತ್ಸೆ ಮತ್ತು ಆಮ್ಲಜನಕದ ಪೂರೈಕೆಗೆ ವ್ಯವಸ್ಥೆ ಮಾಡಿರುವುದೂ ಚುನಾವಣೆಯಲ್ಲಿ ಫಲ ನೀಡಬಹುದು ಎಂಬುದು ಅವರ ಲೆಕ್ಕಾಚಾರ.

‘ಗೋಪಾಲಯ್ಯ ದಬ್ಬಾಳಿಕೆ ಮಾಡುತ್ತಿದ್ದಾರೆ’ ಎಂಬುದು ಕಾಂಗ್ರೆಸ್‌ನ ಪ್ರಚಾರದ ಪ್ರಮುಖ ಅಸ್ತ್ರ. ಕಾಂಗ್ರೆಸ್ ಪಕ್ಷದ ‘ಗ್ಯಾರಂಟಿ’, ಪ್ರಣಾಳಿಕೆ ನೆರವಿಗೆ ಬರಬಹುದು ಎಂಬುದು ಕೇಶವಮೂರ್ತಿ ಅವರ ವಿಶ್ವಾಸ. ಜೆಡಿಎಸ್ ವರಿಷ್ಠರಾದ ಎಚ್‌.ಡಿ. ದೇವೇಗೌಡ, ಎಚ್‌.ಡಿ. ಕುಮಾರಸ್ವಾಮಿ ಅವರ ಪ್ರಭಾವವೇ ಒಕ್ಕಲಿಗರ ಮತಗಳು ಪಕ್ಷದಿಂದ ಚದುರದಂತೆ ತಡೆ ಹಿಡಿದು ತಮ್ಮನ್ನು ಗೆಲುವಿನ ದಡ ಮುಟ್ಟಿಸುತ್ತದೆ ಎಂಬುದು ರಾಜಣ್ಣ ಅವರ ನಂಬಿಕೆ.

ದಿನದಿಂದ ದಿನಕ್ಕೆ ಗೋಪಾಲಯ್ಯ ಅವರ ಪ್ರಚಾರದ ಅಬ್ಬರ ಹೆಚ್ಚುತ್ತಿದೆ. ಪಕ್ಷಾಂತರವೂ ನಿಂತಿಲ್ಲ. ಬಿಜೆಪಿಯತ್ತ ಹರಿದು ಹೋಗುತ್ತಿರುವ ಜನಬೆಂಬಲವನ್ನು ತಡೆಹಿಡಿದು ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಗೋಪಾಲಯ್ಯ ಅವರಿಗೆ ಹೇಗೆ ಸ್ಪರ್ಧೆ ಒಡ್ಡಲಿದ್ದಾರೆ ಎಂಬುದೇ ಕುತೂಹಲ.

ಹಲವೆಡೆ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಶನಿವಾರ ಮಧ್ಯಾಹ್ನ ಹಾಗೂ ಸಂಜೆ ಧಾರಾಕಾರ ಮಳೆಯಾಗಿದೆ.

ಜಯನಗರ, ರಾಜಾಜಿನಗರ, ರಾಜರಾಜೇಶ್ವರಿ ನಗರ, ವಿಜಯನಗರ, ಬಸವೇಶ್ವರ ನಗರ, ಬನಶಂಕರಿ, ಜೆ.ಪಿ.ನಗರ, ಬಸವನಗುಡಿ ಭಾಗದಲ್ಲಿ ಮಧ್ಯಾಹ್ನ ಜೋರು ಮಳೆಯಾಗಿದೆ.

ಜಾಲಹಳ್ಳಿ, ದಾಸರಹಳ್ಳಿ ಭಾಗದಲ್ಲಿ ಸಾಧಾರಾಣ ಮಳೆ ಸುರಿದಿದೆ. ಉಳಿದ ಕಡೆಗಳಲ್ಲಿ ಮೋಡ ಕವಿದ ವಾತಾವರಣವಿತ್ತು. ಸಂಜೆ ವೇಳೆಯಲ್ಲಿ ಎಂ.ಜಿ. ರಸ್ತೆ, ಹೊಸೂರು, ಅಶೋಕನಗರ, ಶಾಂತಿನಗರ, ಪುಲಿಕೇಶಿ ನಗರದಲ್ಲಿ ತುಂತುರು ಮಳೆಯಾಗಿದೆ.

ಕಳೆದ ಒಂದು ವಾರದಿಂದ ನಗರದಲ್ಲಿ ಮಳೆಯಾಗುತ್ತಿದ್ದು ವಾತಾವರಣ ತಂಪಾಯಿತು. ಚುನಾವಣಾ ಪ್ರಚಾರಕ್ಕೆ ಮಳೆ ಅಡ್ಡಿ ಪಡಿಸಿತು. ಕೊಡೆ ಹಿಡಿದು ಅಭ್ಯರ್ಥಿಗಳು ಪ್ರಚಾರ ನಡೆಸಿದರು.

ನಗರದಲ್ಲಿ ಇನ್ನೂ ಎರಡು ದಿನಗಳ ಕಾಲ ಸಂಜೆ ವೇಳೆ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

‘ಬಜೆಟ್‌ಗಿಂತ ಗ್ಯಾರಂಟಿಗಳು ತುಟ್ಟಿ’

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ‘ಕಾಂಗ್ರೆಸ್‌ನ ಗ್ಯಾರಂಟಿಗಳ ಮೊತ್ತವು ರಾಜ್ಯ ಬಜೆಟ್‌ಗಿಂತಲೂ ಹೆಚ್ಚಾಗಿದೆ. ಕರ್ನಾಟಕದ ಜನ ಎಲ್ಲ ಲೆಕ್ಕ ಹಾಕಿದ್ದಾರೆ. ಆದರೆ, ಇದು ರಾಹುಲ್ ಗಾಂಧಿಗೆ ಅರ್ಥವಾಗಿಲ್ಲ’ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಟೀಕಿಸಿದರು.

ಪಟ್ಟಣದಲ್ಲಿ ಶನಿವಾರ ಬಿಜೆಪಿ ಅಭ್ಯರ್ಥಿ ರಮೇಶ ಕತ್ತಿ ಪರ ಚುನಾವಣಾ ಪ್ರಚಾರ ಮಾಡಿ ಮಾತನಾಡಿದ ಅವರು, ‘ಗುಜರಾತ್, ಉತ್ತರಪ್ರದೇಶ, ಉತ್ತರಾಖಂಡ, ಅಸ್ಸಾಂ, ತ್ರಿಪುರಾ, ಮಣಿಪುರ, ನಾಗಾಲ್ಯಾಂಡ್ ರಾಜ್ಯಗಳಲ್ಲಿ ಕೂಡ ಕಾಂಗ್ರೆಸ್ ಇವೇ ಐದು ಗ್ಯಾರಂಟಿಗಳನ್ನು ನೀಡಿತ್ತು. ಆ ಎಲ್ಲ ಕಡೆ ಗ್ಯಾರಂಟಿ ಕಾರ್ಡ್‌ಗಳು ಹೇಳ ಹೆಸರಿಲ್ಲದಂತೆ ಹೋದವು. ಅದರಿಂದ ಬುದ್ಧಿ ಕಲಿಯದ ರಾಹುಲ್ ಬಾಬಾ ಕರ್ನಾಟಕದಲ್ಲಿ ಮತ್ತೆ ಗ್ಯಾರಂಟಿ ಕಾರ್ಡ್ ಹಿಡಿದು ಓಡಾಡುತ್ತಿದ್ದಾರೆ.’ ಎಂದರು.

ಅಥಣಿಯಲ್ಲಿ ಮಹೇಶ ಕುಮಠಳ್ಳಿ ಪರ ಚುನಾವಣಾ ಭಾಷಣ ಮಾಡಿದ ಅವರು, ‘ಸ್ವಾರ್ಥಕ್ಕಾಗಿ ಬಿಜೆಪಿಗೆ ಮೋಸ ಮಾಡಿದ ಲಕ್ಷ್ಮಣ ಸವದಿಯನ್ನು ಈ ಬಾರಿಯೂ ಸೋಲಿಸಿ’ ಎಂದು ಕರೆ ನೀಡಿದರು. ನಂತರ ಅವರು ಬೆಳಗಾವಿ ನಗರ ಹಾಗೂ ರಾಯಬಾಗದಲ್ಲಿ ಅವರು ರೋಡ್ ಶೋ ನಡೆಸಿದರು.

ಬಾಲ್ಯದ ಪ್ರಯಾಣ ನೆನಪಿಸಿಕೊಂಡ ಕನ್ನಡಿಗ

ಅಮೆರಿಕದಲ್ಲಿ ಟೆಸ್ಲಾ ಕಾರಿಗೆ ಬಿಎಂಟಿಸಿ ಬಸ್ ನಂಬರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದಲ್ಲಿ ನೆಲೆಸಿರುವ ಕನ್ನಡಿಗರೊಬ್ಬರು ತಾವು ಖರೀದಿಸಿದ ಟೆಸ್ಲಾ ಕಾರಿಗೆ ಬಾಲ್ಯದಲ್ಲಿ ಪ್ರಯಾಣಿಸಿದ ಬಿಎಂಟಿಸಿ ಬಸ್ ನಂಬರ್ ಹಾಕಿಸಿಕೊಂಡಿದ್ದು, ಸಾಮಾಜಿಕ ಜಾಲತಾಣದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.

ಕೊಡಗಿನ ಚೆಂಗಪ್ಪ ಎಂಬ ಯುವಕ ಈಗ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ್ದಾರೆ. ಅವರು ತಮ್ಮ ಹೊಸ ಕಾರಿಗೆ 'ಕೆಎ01 ಎಫ್232' ನಂಬರ್ ಹಾಕಿಸಿಕೊಂಡಿದ್ದಾರೆ. ಈ ಸಂಖ್ಯೆ 1990ರ ದಶಕದಲ್ಲಿ ಬೆಂಗಳೂರಿನ 401 ಬಿ ಮಾರ್ಗದಲ್ಲಿ ಸಂಚರಿಸುತ್ತಿದ್ದ ಬಿಎಂಟಿಸಿ ಬಸ್ ನಂಬರ್. ಚೆಂಗಪ್ಪ ಅವರು ಶಾಲಾ ದಿನಗಳಲ್ಲಿ ವಿದ್ಯಾರಣ್ಯಪುರದಿಂದ ಯಶವಂತಪುರಕ್ಕೆ ಇದೇ ಬಸ್‌ನಲ್ಲಿ ಸಂಚರಿಸಿದ್ದರು. ಬಸ್ ಮೇಲಿನ ಪ್ರೀತಿ ಹಾಗೂ ಶಾಲಾ ದಿನಗಳಲ್ಲಿ ಚಾಲಕ ಧನಪಾಲ್ ಮಂಚೇನಹಳ್ಳಿ ಅವರ ಜತೆಗಿನ ಒಡನಾಟದಿಂದ ತಮ್ಮ ಕಾರಿಗೆ ಬಸ್ ನಂಬರ್ ಇರಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ, ನಿವೃತ್ತರಾದ ಧನಪಾಲ್ ಅವರಿಗೆ ವಿಡಿಯೊ ಮೂಲಕ ಶುಭಹಾರೈಸಿದ್ದಾರೆ. ಇದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

‘ಧನಪಾಲ್ ಅವರೇ ನಿಮ್ಮ ನಿವೃತ್ತಿ ಜೀವನಕ್ಕೆ ಅಭಿನಂದನೆಗಳು. 401 ಬಿ ಮಾರ್ಗದಲ್ಲಿ ನಮ್ಮ ಮೊದಲ ಭೇಟಿಯಾಗಿ, 31 ವರ್ಷಗಳು ಕಳೆದಿವೆ. ಒತ್ತಡದ ನಡುವೆಯೂ ನೀವು ಶ್ರದ್ಧೆ, ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದದ್ದು ಇಷ್ಟವಾಗುತ್ತಿತ್ತು. ನಿಮ್ಮಿಂದ ನಮ್ಮ ಜ್ಞಾನ ಸಾಕಷ್ಟು ವೃದ್ಧಿಯಾಯಿತು. ವಿದ್ಯಾರಣ್ಯಪುರದಿಂದ ಯಶವಂತಪುರಕ್ಕೆ ಶಾಲೆಗೆ ಹೋಗುತ್ತಿದ್ದ ದಿನಗಳು ನೆನಪಾದವು’ ಎಂದು ಚೆಂಗಪ್ಪ ವಿಡಿಯೊದಲ್ಲಿ ಹೇಳಿಕೊಂಡಿದ್ದಾರೆ.

ಟೆಸ್ಲಾ ಕಾರಿನೊಂದಿಗೆ ಚೆಂಗಪ್ಪ

401 ಬಿ ಮಾರ್ಗದಲ್ಲಿ ಸಂಚರಿಸುತ್ತಿದ್ದ ಬಸ್ ಜತೆಗೆ ಧನಪಾಲ್ ಇರುವ ಹಳೆಯ ಚಿತ್ರ

ಈ ವಿಡಿಯೊ ಹಾಗೂ ಬಸ್ ಜತೆಗಿನ ಹಳೆಯ ಫೋಟೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಧನಪಾಲ್ ಮಂಚೇನಹಳ್ಳಿ, ‘1992ರಲ್ಲಿ ಬಿಎಂಟಿಸಿಯ ಡಿಪೊ 11ರಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದಾಗ ಅನೇಕ ಶಾಲೆಗಳ ಮಕ್ಕಳಿಗೆ ನನ್ನ ಬಸ್ ಅಚ್ಚುಮೆಚ್ಚಾಗಿತ್ತು. ಆ ಮಕ್ಕಳಲ್ಲಿ ಚೆಂಗಪ್ಪ ಮತ್ತು ಆದಿತ್ಯ ಎಂಬ ಹುಡುಗರು ನನ್ನ ಬಸ್‌ನ ಎಂಜಿನ್ ಮೇಲೆ ಕುಳಿತು, ಹಲವು ವರ್ಷ ಶಾಲೆಗೆ ಪ್ರಯಾಣ ಮಾಡಿದ್ದಾರೆ. ಆದಿತ್ಯ ಈಗ ಜರ್ಮನಿಯಲ್ಲಿದ್ದಾನೆ. ಚೆಂಗಪ್ಪ ಈಗಲೂ ನನ್ನ ಸಂಪರ್ಕದಲ್ಲಿದ್ದಾನೆ. ಅವನ ಅಭಿಮಾನಕ್ಕೆ ನಾನು ಚಿರಋಣಿ’ ಎಂದು ಧನಪಾಲ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ತಮಗಿಷ್ಟವಾದ ಸಂಖ್ಯೆಯನ್ನು ವಾಹನಕ್ಕೆ ನೋಂದಾಯಿಸಿಕೊಳ್ಳಲು ಅವಕಾಶವಿದೆಯೇ? ಎಂದು ಸಾಮಾಜಿಕ ಜಾಲತಾಣದಲ್ಲಿ ಕೆಲವರು ಪ್ರಶ್ನಿಸಿದ್ದಾರೆ. ಅಮೆರಿಕದಲ್ಲಿ ಈ ರೀತಿ ನೋಂದಾವಣೆಗೆ ಅವಕಾಶವಿದೆ ಎಂದು ಉತ್ತರಿಸಿರುವ ತಜ್ಞರು, ‘ನಿಗದಿತ ಸಂಖ್ಯೆಯನ್ನು ಬೇರೆಯವರು ಹೊಂದಿರದಿದ್ದರೆ ನೋಂದಾಯಿಸಿಕೊಳ್ಳಬಹುದು. ಅಲ್ಲಿನ ಕೆಲ ರಾಜ್ಯಗಳಲ್ಲಿ ಹೆಚ್ಚಿನ ಶುಲ್ಕ ಪಾವತಿಸಬೇಕಾಗುತ್ತದೆ’ ಎಂದು ಹೇಳಿದ್ದಾರೆ.

‘ಅನುದಾನ ಇಲ್ಲ ಎನ್ನುವುದು ನೆಪ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಒಂದು ವಿಧಾನಸಭಾ ಕ್ಷೇತ್ರಕ್ಕೆ 400ಕ್ಕೂ ಹೆಚ್ಚು ಕೋಟಿ ಅನುದಾನ ಬರುತ್ತದೆ. ಆದರೆ ಒಂದು ವಾರ್ಡ್‌ಗೆ 15 ಕೋಟಿಯಲ್ಲಿ ಒಂದು ಈಜುಕೊಳ, ಬ್ಯಾಡ್ಮಿಂಟನ್ ಕೋರ್ಟ್, ಒಳ್ಳೆಯ ಶಾಲೆ, ಸುಸಜ್ಜಿತ ಆಸ್ಪತ್ರೆ ಎಲ್ಲವನ್ನೂ ನಿರ್ಮಿಸಬಹುದು. ಆದರೆ ಇದುವರೆಗೂ ನಿರ್ಮಿಸಲಾಗುತ್ತಿಲ್ಲ’ ಎಂದು ದಾಸರಹಳ್ಳಿ ಕ್ಷೇತ್ರದ ಸ್ವತಂತ್ರ ಅಭ್ಯರ್ಥಿ ಹಾಗೂ ‘ರಥಾವರ’ ಚಿತ್ರದ ನಿರ್ಮಾಪಕ ಎನ್. ಮಂಜುನಾಥ್ ಆರೋಪಿಸಿದರು.

'ದಾಸರಹಳ್ಳಿಯಲ್ಲಿ ಕೂಡ ಸಾಕಷ್ಟು ಅನುದಾನ ಬಂದಿದೆ. ಅಷ್ಟು ಹಣ ಬಂದರೂ ಕೂಡ ಅದು ಎಲ್ಲಿ ಹೋಗುತ್ತದೆ ಎಂದು ಗೊತ್ತಾಗುತ್ತಿಲ್ಲ. ಇಲ್ಲಿನ ಶಾಸಕ ಇಂತಹ ಸಾರ್ವಜನಿಕ ಕೆಲಸ ಮಾಡದೆ ಅನುದಾನ ಬಂದಿಲ್ಲ ಎಂದು ಕುಂಟು ನೆಪ ಹೇಳುತ್ತಿದ್ದಾರೆ.ನನ್ನ ಪ್ರಣಾಳಿಕೆಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳ ಬಗ್ಗೆ ವಿವರಿಸಿದ್ದೇನೆ. ಇದುವರೆಗೂ ಸ್ಪರ್ಧಿಗಳು ಗೆದ್ದಾಗ ಎಲ್ಲಾ ಕೆಲಸಗಳನ್ನು ಮಾಡುತ್ತೇನೆ ಎಂದು ತಮ್ಮ ಪ್ರಣಾಳಿಕೆಯಲ್ಲಿ ಭರವಸೆಯನ್ನ ಅಷ್ಟೇ ನೀಡುತ್ತಾರೆ. ಆದರೆ, ನಾನು ಸ್ವತಂತ್ರ ಅಭ್ಯರ್ಥಿಯಾಗಿ ಭರವಸೆಯ ನನ್ನ ಪ್ರಣಾಳಿಕೆಯನ್ನು ಪ್ರಮಾಣ ಪತ್ರವಾಗಿ ನೋಟರಿ ಮಾಡಿಸಿ ಕೊಡುತ್ತಿದ್ದೇನೆ' ಎಂದರು.



ಪಕ್ಷೇತರ ಅಭ್ಯರ್ಥಿ ಎನ್. ಮಂಜುನಾಥ್

ಕೆ.ಆರ್‌.ಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಮೋಹನ್ ಪರ ನಟ ಧ್ರುವ ಸರ್ಜಾ ಅವರು ಕ್ಷೇತ್ರದ ವಿವಿಧ ಭಾಗಗಳಲ್ಲಿ ಪ್ರಚಾರ ನಡೆಸಿದರು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ: ಮತಯಾಚನೆ ವಿಚಾರವಾಗಿ ಗಲಾಟೆ– ಲಾಠಿ ಪ್ರಹಾರ

ಕಾಂಗ್ರೆಸ್– ಬಿಜೆಪಿ ಜಟಾಪಟಿ: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿ ಮತಯಾಚನೆ ವಿಚಾರವಾಗಿ ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಶನಿವಾರ ಸಂಜೆ ಜಟಾಪಟಿ ನಡೆದಿದ್ದು, ಪೊಲೀಸರು ಲಾಠಿ ಪ್ರಹಾರ ನಡೆಸಿ ಜನರನ್ನು ಚದುರಿಸಿದ್ದಾರೆ.

'ಬಿಜೆಪಿ ಕಾರ್ಯಕರ್ತರು ನಮ್ಮ ಮೇಲೆ ಹಲ್ಲೆ ಮಾಡಿದ್ದಾರೆ. ಅದಕ್ಕೆ ಪೊಲೀಸರು ಸಹಕಾರ ನೀಡಿದ್ದಾರೆ' ಎಂದು ಆರೋಪಿಸಿ ಕಾಂಗ್ರೆಸ್ ಅಭ್ಯರ್ಥಿ ಎಚ್. ಕುಸುಮಾ ಹಾಗೂ ಇತರರು, ಯಶವಂತಪುರ ಠಾಣೆಗೆ ಶನಿವಾರ ರಾತ್ರಿ ದೂರು ನೀಡಿದ್ದಾರೆ.

ಯಶವಂತಪುರ ಠಾಣೆ ವ್ಯಾಪ್ತಿಯಲ್ಲಿ ಈ ಜಟಾಪಟಿ ನಡೆದಿದ್ದು, ಸ್ಥಳದಲ್ಲಿ ಪೊಲೀಸರು ಬಿಗಿ ಭದ್ರತೆ ಹೆಚ್ಚಿಸಿದ್ದಾರೆ.

ಬಿಜೆಪಿ ಪರ ಪೊಲೀಸರ ಕೆಲಸ: 'ಪಕ್ಷದ ಪರ ಪ್ರಚಾರ ಮಾಡಲೆಂದು ಕಾಂಗ್ರೆಸ್ ಕಾರ್ಯಕರ್ತರು ಮನೆಗಳಿಗೆ ಹೋಗಿದ್ದರು. ಮಾಜಿ ಕಾರ್ಪೊರೇಟರ್ ಆಗಿರುವ ಬಿಜೆಪಿಯ ಜಿ.ಕೆ. ವೆಂಕಟೇಶ್ ಹಾಗೂ ಇತರರು ಪ್ರಚಾರಕ್ಕೆ ಅಡ್ಡಿಪಡಿಸಿದ್ದರು. ಅದನ್ನು ಪ್ರಶ್ನಿಸಿದ್ದಕ್ಕೆ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿದ್ದಾರೆ' ಎಂದು ಕಾಂಗ್ರೆಸ್ ಕಾರ್ಯಕರ್ತರು ದೂರಿದ್ದಾರೆ.

'ಸ್ಥಳದಲ್ಲಿದ್ದ ಪೊಲೀಸರು, ಬಿಜೆಪಿ ಕಾರ್ಯಕರ್ತರ ಪರ ನಿಂತಿದ್ದರು. ಪೊಲೀಸರ ಎದುರೇ ಹಲ್ಲೆ ನಡೆದಿದೆ' ಎಂದು ಆಕ್ರೋಶ ವ್ಯಕ್ತಪಡಿಸಿರುವ ಕಾಂಗ್ರೆಸ್ ಕಾರ್ಯಕರ್ತರು, 'ಸಮವಸ್ತ್ರ ಬಿಚ್ಚಿಟ್ಟು, ರಾಜಕೀಯಕ್ಕೆ ಬನ್ನಿ' ಎಂದು ಪೊಲೀಸರ ವಿರುದ್ಧ ಕಿಡಿ ಕಾರಿದ್ದಾರೆ.

ಕುಸುಮಾ ತಳ್ಳಾಡಿ ಲಾಠಿ ಬೀಸಿದ ಅಧಿಕಾರಿ: ಸ್ಥಳದಲ್ಲಿ ಎರಡೂ ಪಕ್ಷಗಳ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಸ್ಥಳಕ್ಕೆ ಬಂದಿದ್ದ ಎಚ್. ಕುಸುಮಾ, ಪೊಲೀಸರ ವರ್ತನೆಯನ್ನು ಪ್ರಶ್ನಿಸಿದ್ದರು. ನಂತರ, ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು.

'ಮಹಿಳಾ ಸಿಬ್ಬಂದಿ ಇರಲಿಲ್ಲ. ಪೊಲೀಸ್ ಅಧಿಕಾರಿಯೊಬ್ಬರು, ಕುಸುಮಾ ಅವರನ್ನು ತಳ್ಳಾಡಿ ಇತರರ ಮೇಲೆ ಲಾಠಿ ಬೀಸಿದರು. ನಂತರ, ಎಲ್ಲ ಪೊಲೀಸರು ಲಾಠಿ ಪ್ರಹಾರ ನಡೆಸಿ ಕಾರ್ಯಕರ್ತರನ್ನು ಚದುರಿಸಿದರು' ಎಂದು ಪ್ರತ್ಯಕ್ಷದರ್ಶಿಗಳು ಹೇಳಿದರು.

ಲಾಠಿ ಬೀಸಿದ ಅಧಿಕಾರಿ ವಿರುದ್ಧ ಹರಿಹಾಯ್ದ ಕಾಂಗ್ರೆಸ್ ಕಾರ್ಯಕರ್ತರು, ಯಶವಂತಪುರ ಠಾಣೆ ಎದುರು ರಾತ್ರಿ ಪ್ರತಿಭಟನೆ ನಡೆಸಿದರು. ಅಧಿಕಾರಿಯನ್ನು ಅಮಾನತು ಮಾಡುವಂತೆ ಒತ್ತಾಯಿಸಿದರು.

ಘಟನೆ ಬಗ್ಗೆ ಪ್ರತಿಕ್ರಿಯೆ ನೀಡಲು ಉತ್ತರ ವಿಭಾಗದ ಡಿಸಿಪಿ ಶಿವಪ್ರಕಾಶ್ ದೇವರಾಜು ನಿರಾಕರಿಸಿದರು.

ಸುಳ್ಳು ಸುದ್ದಿ ಹಂಚಿಕೆ: ಐವರ ವಿರುದ್ಧ ಎಫ್‌ಐಆರ್

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ಹೆಸರಿನಲ್ಲಿ ಸುಳ್ಳು ಸುದ್ದಿ ಸೃಷ್ಟಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದ ಆರೋಪದಡಿ ಐವರ ವಿರುದ್ಧ ಉತ್ತರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಬಿಜೆಪಿ ಕಾನೂನು ಘಟಕದ ಎಂ. ಯಶವಂತ್ ಅವರು ದೂರು ನೀಡಿದ್ದಾರೆ. ಭೈರಪ್ಪ ಹರೀಶ್ ಕುಮಾರ್, ದಿನೇಶ್ ಅಮಿನ್‌ಮಟ್ಟು, ಹೇಮಂತ್‌ಕುಮಾರ್, ದಿಲೀಪ್ ಗೌಡ ಹಾಗೂ ಬಿಂದು ಗೌಡ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅವರಿಗೆ ನೋಟಿಸ್ ನೀಡಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಾವು ಹಿಂದುತ್ವದಲ್ಲಿ ಮುಂದುವರೆಯುತ್ತೇವೆ. ಲಿಂಗಾಯತರ ಅಗತ್ಯವಿಲ್ಲ: ಬಿ.ಎಲ್. ಸಂತೋಷ್' ಎಂಬ ಶೀರ್ಷಿಕೆಯುಳ್ಳ ಸುಳ್ಳು ವರದಿಯನ್ನು ಸೃಷ್ಟಿಸಿ, ಪತ್ರಿಕೆಯಲ್ಲಿ ಬಂದ ರೀತಿಯಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡಲಾಗಿದೆ. ಇದೇ ಸುಳ್ಳು ಸುದ್ದಿಯನ್ನು ವಿರೋಧ ಪಕ್ಷಗಳ ಬೆಂಬಲಿಗರು ಹಂಚಿಕೊಂಡಿದ್ದಾರೆ' ಎಂಬುದಾಗಿ ದೂರುದಾರರು ಆರೋಪಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಲಿಂಗಾಯತ ಸಮುದಾಯದವರನ್ನು ಬಿಜೆಪಿ ವಿರುದ್ಧ ಎತ್ತಿ ಕಟ್ಟುವ ಸಲುವಾಗಿ ಬಿ.ಎಲ್. ಸಂತೋಷ್ ಅವರ ಹೆಸರಿನಲ್ಲಿ ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ. ಅದನ್ನೇ ಆರೋಪಿಗಳು ತಮ್ಮ ಟ್ವಿಟರ್ ಹಾಗೂ ಫೇಸ್‌ಬುಕ್ ಖಾತೆಗಳಲ್ಲಿ ಹಂಚಿಕೊಂಡಿದ್ದಾರೆ. ಇವರೆಲ್ಲರ ವಿರುದ್ಧ ಕ್ರಮ ಕೈಗೊಳ್ಳಿ' ಎಂದೂ ದೂರುದಾರರು ಕೋರಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮೆಜೆಸ್ಟಿಕ್ ಮಳಿಗೆಯಲ್ಲಿ ₹ 5.22 ಲಕ್ಷ ಜಪ್ತಿ

ಬೆಂಗಳೂರು: ಮೆಜೆಸ್ಟಿಕ್ ಬಳಿಯ 'ಸಿಟಿ ಸೆಂಟರ್' ಕಟ್ಟಡದಲ್ಲಿರುವ ಮಳಿಗೆಯೊಂದರಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ₹ 5.22 ಲಕ್ಷವನ್ನು ಚುನಾವಣಾಧಿಕಾರಿಗಳ ತಂಡದ ಅಧಿಕಾರಿಗಳು ಹಾಗೂ ಪೊಲೀಸರು ಶನಿವಾರ ಜಪ್ತಿ ಮಾಡಿದ್ದಾರೆ.

'ಮಳಿಗೆಯಲ್ಲಿ ಹಣವಿರುವ ಮಾಹಿತಿ ಬಂದಿತ್ತು. ಕಾರ್ಯಾಚರಣೆ ನಡೆಸಿ ಹಣ ಪತ್ತೆ ಮಾಡಲಾಯಿತು. ಹಣಕ್ಕೆ ಯಾವುದೇ ದಾಖಲೆ ನೀಡಿಲ್ಲ. ಹೀಗಾಗಿ, ಜಪ್ತಿ ಮಾಡಿದ್ದೇವೆ. ಮಳಿಗೆ ಸಿಬ್ಬಂದಿ ವಿಚಾರಣೆ ನಡೆಸಿ, ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸುದೀಪ್‌ಗೆ ಬೆದರಿಕೆ: ಆಪ್ತನ ವಿಚಾರಣೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ರಮೇಶ್ ಕಿಟ್ಟಿ

ಬೆಂಗಳೂರು: 'ಅಶ್ಲೀಲ ವಿಡಿಯೊದ ಸಿ.ಡಿ ಬಿಡುಗಡೆ ಮಾಡುತ್ತೇನೆ' ಎಂಬುದಾಗಿ ಬೆದರಿಸಿ ನಟ ಸುದೀಪ್ ಅವರಿಗೆ ಅನಾಮಧೇಯ ಪತ್ರ ಕಳುಹಿಸಿದ್ದ ಆರೋಪಿ ರಮೇಶ್ ಕಿಟ್ಟಿ ವಿಚಾರಣೆಯನ್ನು ಸಿಸಿಬಿ ಪೊಲೀಸರು ಮುಂದುವರಿಸಿದ್ದಾರೆ.

ಜೆ.ಪಿ. ನಗರದಲ್ಲಿರುವ ಸುದೀಪ್ ನಿವಾಸಕ್ಕೆ ಅಂಚೆ ಮೂಲಕ ಎರಡು ಪತ್ರಗಳು ಬಂದಿದ್ದವು. ಸುದೀಪ್ ಆಪ್ತರಾದ ನಿರ್ಮಾಪಕ ಜಾಕ್ ಮಂಜು ಅವರು ಪುಟ್ಟೇನಹಳ್ಳಿ ಠಾಣೆಗೆ ದೂರು ನೀಡಿದ್ದರು. ಅದರನ್ವಯ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿರುವ ಸಿಸಿಬಿ ಪೊಲೀಸರು, ಅಂಚೆ ಕಚೇರಿ ಸುಳಿವು ಆಧರಿಸಿ ರಮೇಶ್ ಅವರನ್ನು ವಶಕ್ಕೆ ಪಡೆದಿದೆ.

'ನಿರ್ದೇಶಕನಾಗಿದ್ದ ರಮೇಶ್ ಕಿಟ್ಟಿ, ಸುದೀಪ್ ಜೊತೆ ಉತ್ತಮ ಒಡನಾಟ ಹೊಂದಿದ್ದರು. 'ಕಿಚ್ಚ ಸುದೀಪ್ ಚಾರಿಟಬಲ್ ಟ್ರಸ್ಟ್' ಅಧ್ಯಕ್ಷರಾಗಿದ್ದರು. ₹ 2 ಕೋಟಿ ವಿಚಾರಕ್ಕೆ ಗಲಾಟೆ ಆಗಿ, ಟ್ರಸ್ಟ್‌ನಿಂದ ಹೊರಬಂದಿದ್ದರು. ಅದೇ ಹಣದ ವಿಚಾರದಲ್ಲಿ ಸಿಟ್ಟಾಗಿ, ಅಶ್ಲೀಲ ವಿಡಿಯೊ ಇರುವುದಾಗಿ ಪತ್ರ ಬರೆದಿದ್ದರು' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಹಣಕಾಸು ವಿಚಾರ ಹಾಗೂ ವಿಡಿಯೊ ಎರಡರ ಬಗ್ಗೆಯೂ ರಮೇಶ್ ಅವರಿಂದ ಮಾಹಿತಿ ಕಲೆಹಾಕಲಾಗುತ್ತಿದೆ. ಈ ಬೆದರಿಕೆ ಪ್ರಕರಣವೂ ಜಾಮೀನು ಸಹಿತವಾಗಿದೆ. ಹೀಗಾಗಿ, ನೋಟಿಸ್ ನೀಡಿ ವಿಚಾರಣೆಗೆ ಕರೆಸಿ ವಶಕ್ಕೆ ಪಡೆಯಲಾಗಿದೆ. ಬಂಧನ ಪ್ರಕ್ರಿಯೆ ಬಗ್ಗೆ ಸದ್ಯ ತೀರ್ಮಾನ ಮಾಡಿಲ್ಲ' ಎಂದು ಮೂಲಗಳು ತಿಳಿಸಿವೆ.

'ಬೆದರಿಕೆ ಹಾಕಿ ಮತ ಪಡೆಯುತ್ತಿದ್ದಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉತ್ತರಹಳ್ಳಿ, ವಸಂತಪುರ, ಸುಬ್ರಮಣ್ಯಪುರ, ಯಾದಳಂನಗರ ವ್ಯಾಪ್ತಿಯಲ್ಲಿ ಬಿಜೆಪಿ ಶಾಸಕರು ಮತ್ತು ಅವರ ಹಿಂಬಾಲಕರು ಹದಿನೈದು ವರ್ಷಗಳಿಂದ ಭಯದ ವಾತಾವರಣ ನಿರ್ಮಾಣ ಮಾಡಿ, ಬೆದರಿಕೆ ಹಾಕಿ ಮತ ಪಡೆಯುತ್ತಿದ್ದಾರೆ' ಎಂದು ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆರ್.ಕೆ.ರಮೇಶ್ ಆರೋಪಿಸಿದರು.

ಕ್ಷೇತ್ರದಲ್ಲಿ ಶನಿವಾರ ಪ್ರಚಾರ ನಡೆಸಿದ ಅವರು, 'ಸ್ಥಳೀಯ ಶಾಸಕರು ಮತ್ತು ಅವರ ಬೆಂಬಲಿಗರ ದಬ್ಬಾಳಿಕೆಯಿಂದ ಬಡವರು, ಕೂಲಿ ಕಾರ್ಮಿಕರು, ಮಧ್ಯಮ ವರ್ಗದವರು ಭಯಭೀತರಾಗಿದ್ದಾರೆ. ಯಾದಳಂನಗರ, ಜೈಭುವನೇಶ್ವರಿನಗರ ಸೇರಿ ಹಿಂದುಳಿದ ಹಲವಾರು ಬಡಾವಣೆಗಳಲ್ಲಿ ಇಂದಿಗೂ 10 ದಿನಕ್ಕೊಮ್ಮೆ ನೀರು ಬರುತ್ತಿದೆ. ಕಾವೇರಿ ನೀರು ಕನಸಿನ ಮಾತಾಗಿದೆ. ನಮಗೆ ಅವಕಾಶ ನೀಡಿದಲ್ಲಿ ಭಯದ ವಾತಾವರಣ ಹೋಗಲಾಡಿಸಿ, ಕ್ಷೇತ್ರದ ಸಮಗ್ರ ಅಭಿವೃದ್ಧಿ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಉತ್ತರಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಕುಮಾರ್, 'ಸತತ ಐದು ವರ್ಷಗಳಿಂದ ಕ್ಷೇತ್ರದಲ್ಲಿ ನಿರಂತರ ಸೇವೆ ನೀಡುತ್ತಿರುವ ಆರ್. ಕೆ.ರಮೇಶ್ ಅವರಿಗೆ ಅವಕಾಶ ಮಾಡಿಕೊಡಬೇಕು' ಎಂದು ಮನವಿ ಮಾಡಿಕೊಂಡರು.

ಉತ್ತರಹಳ್ಳಿ ಹೋಬಳಿ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಈಶ್ವರ್, 'ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರ ಜೀವನ ಕಷ್ಟವಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಶತಸಿದ್ಧ' ಎಂದು ಹೇಳಿದರು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆರ್‌.ಕೆ.ರಮೇಶ್ ಪ್ರಚಾರ ಮಾಡಿದರು.

1. ಹೆಬ್ಬಾಳ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಭೈರತಿ ಸುರೇಶ್ ಅವರು ನಾಗೇನಹಳ್ಳಿ, ಹೆಬ್ಬಾಳ, ರಾಧಾಕೃಷ್ಣ ದೇವಸ್ಥಾನ, ಸಂಜಯನಗರ ವಾರ್ಡ್‌ನ ಮುಖ್ಯರಸ್ತೆಗಳಲ್ಲಿ ಕಾರ್ಯಕರ್ತರೊಂದಿಗೆ ಪಾದಯಾತ್ರೆ ನಡೆಸಿ ಮತ ಯಾಚಿಸಿದರು 2. ಯಶವಂತಪುರ ವಿಧಾನಸಭೆ ಕ್ಷೇತ್ರ ಬಿಜೆಪಿ ಅಭ್ಯರ್ಥಿ ಎಸ್‌.ಟಿ. ಸೋಮಶೇಖರ್ ಅಗರ, ಎಚ್‌. ಗೊಲ್ಲಹಳ್ಳಿ, ಕೆ. ಗೊಲ್ಲಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ರೋಡ್ ಶೋ ನಡೆಸಿದರು

ಅಭ್ಯರ್ಥಿಗಳಿಂದ ಮತಯಾಚನೆ ಮತ್ತಷ್ಟು ಬಿರುಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಇನ್ನು ಎರಡು ದಿನಗಳಷ್ಟೆ ಬಾಕಿ ಉಳಿದಿದ್ದು, ಪ್ರಚಾರದ ಕಾವು ಮತ್ತಷ್ಟು ಏರಿದೆ. ಕಾರ್ಯಕರ್ತರು, ಬೆಂಬಲಿಗರ ಜೊತೆ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ಮತದಾರರ ಮನೆಮನೆ ಸಂಪರ್ಕದಲ್ಲಿ ನಿರತರಾಗಿದ್ದಾರೆ.

ಬೆಳಗ್ಗಿನಿಂದಲೇ ತಮ್ಮ ವ್ಯಾಪ್ತಿಯ ರಸ್ತೆಗಳಲ್ಲಿ ರ‍್ಯಾಲಿ, ಸಮಾವೇಶಗಳನ್ನು ಸಂಘಟಿಸಿ, ಪಕ್ಷದ ಸಾಧನೆಗಳನ್ನು, ಪ್ರಣಾಳಿಕೆಯಲ್ಲಿ ಘೋಷಿಸಿರುವ ಭರವಸೆಗಳನ್ನು ಮುದ್ರಿಸಿದ ಕರಪತ್ರಗಳನ್ನು ಮತದಾರರ ಮನೆ ಬಾಗಿಲಿಗೆ ತಲುಪಿಸಿ ಓಲೈಕೆ ನಡೆಸುತ್ತಿದ್ದಾರೆ.

ಹೆಬ್ಬಾಳ ಕ್ಷೇತ್ರದ ಶಾಸಕ, ಕಾಂಗ್ರೆಸ್ ಅಭ್ಯರ್ಥಿ ಭೈರತಿ ಸುರೇಶ್ ಅವರು ನಾಗೇನಹಳ್ಳಿ, ಹೆಬ್ಬಾಳ, ರಾಧಾಕೃಷ್ಣ ದೇವಸ್ಥಾನ, ಸಂಜಯನಗರ ವಾರ್ಡ್‌ನ ಮುಖ್ಯರಸ್ತೆಗಳಲ್ಲಿ ಕಾರ್ಯಕರ್ತರೊಂದಿಗೆ ರ‍್ಯಾಲಿ ನಡೆಸಿ ಮತ ಯಾಚಿಸಿದರು. ಅಲ್ಲದೆ, ಅವರ ಪರವಾಗಿ ಪತ್ನಿ ಪದ್ಮಾವತಿ ಸುರೇಶ್ ಅವರು ಗಂಗಾನಗರದ ಆರ್‌ಬಿಐ ಕಾಲೊನಿ, ಹೆಬ್ಬಾಳದ ಶಿವಶಂಕರ ಬ್ಲಾಕ್‌ನಲ್ಲಿ ಮತ್ತು ಮಗ ಸಂಜಯ್ ಸುರೇಶ್ ಅವರು ಹೆಬ್ಬಾಳದಲ್ಲಿ ಮನೆ ಮನೆ ಮತಯಾಚನೆ ನಡೆಸಿದರು.

ಬೆಂಗಳೂರು ದಕ್ಷಿಣ ಕ್ಷೇತ್ರ ಬಿಜೆಪಿ ಅಭ್ಯರ್ಥಿ ಎಂ. ಕೃಷ್ಣಪ್ಪ ಅವರು ತಮ್ಮ ಕ್ಷೇತ್ರ ವ್ಯಾಪ್ತಿಯ ದೊಡ್ಡ ತೋಗುರು ಗ್ರಾಮ ಪಂಚಾಯಿತಿಯ ವಿಪ್ರೊಗೇಟ್ ನೀಲಾದ್ರಿನಗರ, ಇನ್ವೆಸ್ಟ್‌ಮೆಂಟ್ ಲೇಔಟ್, ಮತ್ತು ಕೋನಪ್ಪನ ಅಗ್ರಹಾರ ಪಂಚಾಯಿತಿ ವ್ಯಾಪ್ತಿಯ ಗೋವಿಂದ ಶೆಟ್ಟಿ ಪಾಳ್ಯ, ಕೃಷ್ಣಾರೆಡ್ಡಿ ಲೇಔಟ್, ದೊಡ್ಡ ನಾಗಮಂಗಲ ಹಾಗೂ ನಾಗನಾಥಪುರ ವಾರ್ಡ್‌ನ ಪರಪ್ಪನ ಅಗ್ರಹಾರ ಮತ್ತು ಕೆಂಪೇಗೌಡ ಸರ್ಕಲ್ ಮುಂತಾದ ಪ್ರಮುಖ ರಸ್ತೆಗಳಲ್ಲಿ ತೆರೆದ ವಾಹನದಲ್ಲಿ ಅವರು ರೋಡ್ ಶೋ ಮೂಲಕ ಮತ ಯಾಚಿಸಿದರು.

ಸರ್ವಜ್ಞ ನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಜೆ. ಜಾರ್ಜ್ ಅವರು ತಮ್ಮ ಕ್ಷೇತ್ರ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಮನೆ, ಮನೆಗೆ ತೆರಳಿ ಮತ ಯಾಚಿಸಿದರು. ಅದೇ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪದ್ಮನಾಭ ರೆಡ್ಡಿ ಕೂಡಾ ಹಲವೆಡೆ ಪ್ರಚಾರ ನಡೆಸಿದರು.

'ಅಭಿವೃದ್ಧಿ ಕಾರ್ಯಗಳೇ ಗೆಲುವಿಗೆ ಪೂರಕ'

ಬೆಂಗಳೂರು: 'ನಗರ ಮತ್ತು ಗ್ರಾಮೀಣ ಪ್ರದೇಶವನ್ನು ಒಳಗೊಂಡಿರುವ ಯಶವಂತಪುರ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದೇನೆ' ಎಂದು ಯಶವಂತಪುರ ವಿಧಾನಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಟಿ. ಸೋಮಶೇಖರ್ ಹೇಳಿದರು.

ಅಗರ, ಎಚ್. ಗೊಲ್ಲಹಳ್ಳಿ, ಕೆ. ಗೊಲ್ಲಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಮಾತನಾಡಿದ ಅವರು, 'ಈ ಭಾಗದಲ್ಲಿ ರಸ್ತೆ, ಕುಡಿಯುವ ನೀರು ಸೇರಿ ಶೇ 75ರಷ್ಟು ಅಭಿವೃದ್ಧಿ ಕಾಮಗಾರಿಗಳು ಮುಗಿದಿವೆ. ಉಳಿದ ಕಾಮಗಾರಿಗಳು ಮುಂದಿನ ದಿನಗಳಲ್ಲಿ ಮುಕ್ತಾಯವಾಗಲಿವೆ' ಎಂದು ಭರವಸೆ ನೀಡಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಕುಡಿಯುವ ನೀರು, ಒಳಚರಂಡಿಗಾಗಿ ಹಾಳಾದ ರಸ್ತೆ ಕಾಮಗಾರಿಗಳನ್ನು ₹1,561 ಕೋಟಿ ಅನುದಾನದಲ್ಲಿ ಸರಿಪಡಿಸಲಾಗಿದೆ. ₹175 ಕೋಟಿ ವೆಚ್ಚದಲ್ಲಿ ಲೋಕೋಪಯೋಗಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ₹417 ಕೋಟಿ ವೆಚ್ಚದಲ್ಲಿ 223 ಗ್ರಾಮಗಳ ಸಂಪರ್ಕ ಕಲ್ಪಿಸಲು ರಸ್ತೆ ಮತ್ತು ಚರಂಡಿ ಕಾಮಗಾರಿ ಕೈಗೊಳ್ಳಲಾಗಿದೆ. ₹324 ಕೋಟಿ ಅನುದಾನದಲ್ಲಿ ಗ್ರಾಮೀಣ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ' ಎಂದರು.

ಬಿಬಿಎಂಪಿ ಪ್ರದೇಶದ 628 ಕಿ.ಮೀ ಎಚ್‌.ಟಿ. ಲೈನ್ ಅನ್ನು ಭೂಗತ ಕೇಬಲ್ ಆಗಿ ಬದಲಾಯಿಸಲಾಗಿದೆ. ಕಂಬೀಪುರ ಮತ್ತು ದೊಡ್ಡೇರಿಯಲ್ಲಿ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರ ಕಾಮಗಾರಿ ಪ್ರಗತಿಯಲ್ಲಿದೆ. ಕಾನೂನು ಸುವ್ಯವಸ್ಥೆ ಕಾಪಾಡಲು ಎಲ್ಲಾ ರೀತಿಯಲ್ಲಿ ಕ್ರಮವಹಿಸಲಾಗಿದೆ' ಎಂದು ಹೇಳಿದರು.

ಚುನಾವಣೆ ಕರ್ತವ್ಯ: ಸಂಭಾವನೆ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆ ಕೆಲಸಗಳಿಗೆ ನಿಯೋಜಿಸಿರುವ ಆಶಾ ಕಾರ್ಯಕರ್ತೆಯರಿಗೆ ಸೂಕ್ತ ಸಂಭಾವನೆ ನೀಡಬೇಕು ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘವು ಮುಖ್ಯ ಚುನಾವಣಾಧಿಕಾರಿಗೆ ಆಗ್ರಹಿಸಿದೆ.

ಈ ಬಗ್ಗೆ ಸಂಘದ ರಾಜ್ಯಾಧ್ಯಕ್ಷ ಕೆ. ಸೋಮಶೇಖರ್ ಯಾದಗಿರಿ ಹಾಗೂ ರಾಜ್ಯ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ಅವರು ಪತ್ರ ಬರೆದಿದ್ದಾರೆ.

'ಆಶಾ ಕಾರ್ಯಕರ್ತೆಯರನ್ನು ವಿವಿಧ ಜಿಲ್ಲೆಗಳ ಮತದಾನ ಕೇಂದ್ರಗಳಲ್ಲಿ ಆರೋಗ್ಯ ಸಹಾಯಕರನ್ನಾಗಿ ನೇಮಿಸಿಕೊಳ್ಳಲಾಗಿದೆ. ಬೆಳಿಗ್ಗೆ 7ರಿಂದ ಸಂಜೆ 6 ಗಂಟೆಯವರೆಗೆ ಕರ್ತವ್ಯ ನಿರ್ವಹಿಸಲು ಜಿಲ್ಲಾ ಚುನಾವಣಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ಇವರು ಮತಕೇಂದ್ರಕ್ಕೆ ಬರುವ ಮತದಾರರಿಗೆ ಅನಾರೋಗ್ಯ ಸಮಸ್ಯೆ ಕಾಣಿಸಿಕೊಂಡಲ್ಲಿ ಓಆರ್‌ಎಸ್ ಒದಗಿಸಿಸುವುದು ಸೇರಿ ವಿವಿಧ ಸಹಾಯ ಮಾಡಬೇಕೆಂದು ತಿಳಿಸಲಾಗಿದೆ. ಆಶಾ ಕಾರ್ಯಕರ್ತೆಯರು ಸೇವಾನೆಲೆಗಟ್ಟಿನಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪ್ರೋತ್ಸಾಹಧನ ಮಾದರಿ ಕಡಿಮೆ ಗೌರವಧನಕ್ಕೆ ಕೆಲಸ ಮಾಡುತ್ತಿದ್ದಾರೆ' ಎಂದು ಡಿ. ನಾಗಲಕ್ಷ್ಮಿ ಹೇಳಿದ್ದಾರೆ.

'ಈ ಹಿಂದೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಕೆಲಸಗಳಿಗೆ ಆಶಾ ಕಾರ್ಯಕರ್ತೆಯರಿಗೆ ₹ 700 ಸಂಭಾವನೆ ನೀಡಲಾಗಿದೆ. ಆಶಾ ಕಾರ್ಯಕರ್ತೆಯರಿಗೆ ನಿಗದಿಪಡಿಸಿದ ಕೆಲಸಗಳನ್ನು ಹೊರತುಪಡಿಸಿ ಯಾವುದೇ ಕೆಲಸಕ್ಕೆ ನಿಯೋಜಿಸಿದಲ್ಲಿ ಜಿಲ್ಲಾಡಳಿತ ಸೂಕ್ತ ಸಂಭಾವನೆ ನೀಡತಕ್ಕದ್ದು ಎಂದು ಆರೋಗ್ಯ ಇಲಾಖೆಯ ಆದೇಶಿಸಿದೆ. ಆದ್ದರಿಂದ ವಿಧಾನಸಭೆ ಚುನಾವಣಾ ಕೆಲಸಗಳಿಗೆ ನಿಯೋಜಿಸುವ ಆಶಾ ಕಾರ್ಯಕರ್ತೆಯರಿಗೆ ಊಟ-ತಿಂಡಿಯ ಜತೆಗೆ ಸೂಕ್ತ ಸಂಭಾವನೆ ನೀಡಬೇಕು. ಈ ಬಗ್ಗೆ ಆದೇಶಿಸಬೇಕು' ಎಂದು ಆಗ್ರಹಿಸಿದ್ದಾರೆ.

ಶಿವಾಜಿನಗರ: ಮತದಾರರಿಗೆ ಹಣ ಹಂಚುತ್ತಿದ್ದವರ ಬಂಧನ

ಬೆಂಗಳೂರು: ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಕೆಲ ಮತದಾರರಿಗೆ ಹಣ ಹಂಚುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಅವರಿಂದ ₹ 7.60 ಲಕ್ಷ ಜಪ್ತಿ ಮಾಡಿದ್ದಾರೆ.

'ಸ್ಥಳೀಯ ನಿವಾಸಿಗಳಾದ ಭಾಸ್ಕರ್, ಪಿಂಟೊ ಪ್ರಮೋದ್ ಬಂಧಿತರು. ಇವರಿಬ್ಬರು, ಬಿಜೆಪಿ ಅಭ್ಯರ್ಥಿಗೆ ಮತ ನೀಡುವಂತೆ ಆಮಿಷವೊಡ್ಡಿ ಮತದಾರರಿಗೆ ಹಣ ಹಂಚುತ್ತಿದ್ದರೆಂದು ಗೊತ್ತಾಗಿದೆ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಚುನಾವಣಾಧಿಕಾರಿ ತಂಡದ ಜೊತೆ ಕಾರ್ಯಾಚರಣೆ ನಡೆಸಿ ಇಬ್ಬರನ್ನೂ ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳ ಬಳಿಯ ದ್ವಿಚಕ್ರ ವಾಹನದಲ್ಲಿ ₹ 7.60 ಲಕ್ಷ ನಗದು ಸಿಕ್ಕಿದೆ. ಜೊತೆಗೆ, ಕ್ಷೇತ್ರದ ಮತದಾರರ ಪಟ್ಟಿ ಜೆರಾಕ್ಸ್ ಪ್ರತಿಯೂ ಲಭ್ಯವಾಗಿದೆ. ಸದ್ಯ ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ. ಟಸ್ಕರ್ ಟೌನ್‌ನಲ್ಲಿರುವ ಕೆಲ ಮನೆಗಳಿಗೆ ಶುಕ್ರವಾರ ರಾತ್ರಿ ಹೋಗಿದ್ದ ಆರೋಪಿಗಳು, ಮತದಾರರ ಪಟ್ಟಿ ಪರಿಶೀಲಿಸಿ ಒಬ್ಬೊಬ್ಬರಿಗೆ ₹ 2,000ರಿಂದ ₹3,000 ನೀಡುತ್ತಿದ್ದರು. ಈ ಬಗ್ಗೆ ಸ್ಥಳೀಯರು ಚುನಾವಣಾಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ಕಾರ್ಯಾಚರಣೆ ಸಂದರ್ಭದಲ್ಲಿ ಆರೋಪಿಗಳು, ಬಿಜೆಪಿ ಅಭ್ಯರ್ಥಿ ಹೆಸರು ಹೇಳಿದ್ದಾರೆ. ಅವರಿಂದಲೂ ಮಾಹಿತಿ ಪಡೆಯಬೇಕಿದೆ' ಎಂದು ತಿಳಿಸಿವೆ.

ರಾಜರಾಜೇಶ್ವರಿನಗರ: ತಮಿಳುನಾಡು ಸಂಸದ ತೋಲ್‌ತಿರುಮಾವಳವನ್ ಸಲಹೆ

'ಸಾಮರಸ್ಯಕ್ಕೆ ಧಕ್ಕೆ ತರುವವರ ವಿರುದ್ಧ ಎಚ್ಚರವಹಿಸಿ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಕನ್ನಡಿಗರು ಹಾಗೂ ತಮಿಳರು ಅಣ್ಣ ತಮ್ಮಂದಿರು– ಅಕ್ಕತಂಗಿಯರಂತೆ ಜೀವನ ಸಾಗಿಸುತ್ತಿದ್ದೇವೆ. ಅಧಿಕಾರ ಮತ್ತು ಸ್ವಾರ್ಥಕ್ಕೆ ಬಿಜೆಪಿಗರು ನಮ್ಮ ನಮ್ಮಲ್ಲಿಯೇ ಭಾಷೆ, ಧರ್ಮ, ಜಾತಿಯ ಹೆಸರಿನಲ್ಲಿ ಒಡಕನ್ನು ಮೂಡಿಸಿ, ಸಮಾಜದ ಸಾಮರಸ್ಯ ಹಾಳು ಮಾಡುತ್ತಿದ್ದಾರೆ. ಇವರ ವಿರುದ್ಧ ಎಚ್ಚರಿಕೆಯಿಂದ ಇರಬೇಕು' ಎಂದು ತಮಿಳುನಾಡು ಸಂಸದ ತೋಲ್‌ತಿರುಮಾವಳವನ್ ಸಲಹೆ ನೀಡಿದರು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಲಕ್ಷ್ಮಿದೇವಿನಗರ ವಾರ್ಡ್‌ನ ಜೈಭುವನೇಶ್ವರಿ ನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಚ್.ಕುಸುಮಾ ಪರವಾಗಿ ಮತಯಾಚನೆ ಮಾಡಿ ಮಾತನಾಡಿದರು.

'ಹಿಂದುಳಿದ, ಅಲ್ಪಸಂಖ್ಯಾತರು, ದಲಿತರು, ಶೋಷಿತರ ಏಳಿಗೆ, ಅಭಿವೃದ್ಧಿ, ನೆಮ್ಮದಿ ಕಾಣಬೇಕಾದರೆ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ಬಿಜೆಪಿ ಬಹಳ ಅಪಾಯಕಾರಿ ಪಕ್ಷ' ಎಂದು ಹೇಳಿದರು.

'ಬಿಜೆಪಿಗೆ ಮತ ನೀಡಿದ್ದರೆ ಅಂಬೇಡ್ಕರ್ ಅವರ ಸಂವಿಧಾನ ಕಿತ್ತು ಹಾಕುತ್ತಾರೆ. ಮೀಸಲಾತಿಯೇ ಇರುವುದಿಲ್ಲ. ಹೆಣ್ಣುಮಕ್ಕಳಿಗೆ, ರೈತರಿಗೆ, ದಲಿತರಿಗೆ, ಹಿಂದುಳಿದ, ಅಲ್ಪಸಂಖ್ಯಾತರ ಹಕ್ಕುಗಳನ್ನೇ, ಇಲ್ಲದಂತೆ ಮಾಡುತ್ತಾರೆ. ಈ ಚುನಾವಣೆ ಮಹತ್ವದಾಗಿದ್ದು, ದೇಶದ ಸಂಪತ್ತನ್ನು ಲೂಟಿ ಮಾಡುವ ಬಿಜೆಪಿಗೆ ಲಗಾಮು ಹಾಕಿ ದೇಶ ಉಳಿಸಿ' ಎಂದರು.

ರಾಜರಾಜೇಶ್ವರಿನಗರ ಸಭೆ ಮಾಜಿ ಅಧ್ಯಕ್ಷ ಹನುಮಂತರಾಯಪ್ಪ, ತಮಿಳುನಾಡು ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ವಿಚ್ಚುಲೆನಿನ್ ಪ್ರಸಾದ್, ಪಾಲಿಕೆ ಮಾಜಿ ಸದಸ್ಯೆ ಮಂಜುಳ ನಾರಾಯಣಸ್ವಾಮಿ, ದಲಿತ ಮುಖಂಡ ಮದುರೈ ಇದ್ದರು.

ಜೈಭುವನೇಶ್ವರಿ ನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಚ್‌.ಕುಸುಮಾ ಪರ ಸಂಸದ ತೋಲ್ ತಿರುಮಾವಳವನ್ ಅವರು ಪ್ರಚಾರ ನಡೆಸಿದರು

ಜನರ ಕಷ್ಟಕ್ಕೆ ಸ್ಪಂದನೆ: ಡಿ.ವಿ.ಸದಾನಂದಗೌಡ

ಪೀಣ್ಯ ದಾಸರಹಳ್ಳಿ: ರಾಜಗೋಪಾಲನಗರ ವಾರ್ಡ್‌ನಲ್ಲಿ ಸಂಸದ ಡಿ.ವಿ.ಸದಾನಂದಗೌಡ ಅವರು ಬಿಜೆಪಿ ಅಭ್ಯರ್ಥಿ ಎಸ್.ಮುನಿರಾಜು ಅವರ ಪರ ರೋಡ್ ಶೋ ಮೂಲಕ ಮತಯಾಚನೆ ಮಾಡಿದರು.

ಬಳಿಕ ಮಾತನಾಡಿದ ಅವರು, 'ಮುನಿರಾಜು ಅವರು ಶಾಸಕರಾಗಿದ್ದ ಹತ್ತು ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಇತ್ತೀಚಿನ ಐದು ವರ್ಷಗಳಲ್ಲಿ ದಾಸರಹಳ್ಳಿಯಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಜೆಡಿಎಸ್ ಕುತಂತ್ರದಿಂದ ಗೆದ್ದಿದೆ' ಎಂದು ವಾಗ್ದಾಳಿ ನಡೆಸಿದರು.

'ಮುನಿರಾಜು ಮಾಜಿ ಶಾಸಕರಾದರು ಕೂಡ ಎಂದೂ ಮನೆಯಲ್ಲಿ ಕೂತಿಲ್ಲ. ಸದಾ ಜನರ ಜೊತೆ ಬೆರೆತು ಜನರ ಕಷ್ಟಕ್ಕೆ ಸ್ಪಂದಿಸಿದ್ದಾರೆ. ಕೋವಿಡ್ ಸಮಯದಲ್ಲಂತೂ ಅವರು 25ಕ್ಕೂ ಹೆಚ್ಚು ಕ್ಯಾಂಟೀನ್ ತೆರೆದು ಬಡಜನರ ಸಂಕಷ್ಟಕ್ಕೆ ಸಹಾಯ ಮಾಡಿದ್ದಾರೆ. ಒಂದು ಲಕ್ಷಕ್ಕೂ ಹೆಚ್ಚು ಬಡ ಜನರಿಗೆ ಆಹಾರ ಕಿಟ್ ವಿತರಿಸಿ ಜನರ ಜೊತೆ ಬೆರೆತಿದ್ದಾರೆ' ಎಂದರು.

ಡಿ.ವಿ. ಸದಾನಂದ ಗೌಡ ಅವರು ಬಿಜೆಪಿ ಅಭ್ಯರ್ಥಿ ಎಸ್‌. ಮುನಿರಾಜು ಅವರ ಪರವಾಗಿ ರೋಡ್ ಶೋ ಮೂಲಕ ಮತಯಾಚನೆ ಮಾಡಿದರು

3 ತಿಂಗಳಿಂದ ಪೂರೈಕೆ ಸ್ಥಗಿತ, ಸುಧಾರಿಸದ ಪರಿಸ್ಥಿತಿ

ಅಂಗನವಾಡಿ ಕಂದಮ್ಮಗಳಿಗಿಲ್ಲ ಹಾಲು

• ಪ್ರಮೋದ

ಕೊಪ್ಪಳ: ಐದಾರು ತಿಂಗಳುಗಳಿಂದ ಹಾಲಿನ ಕೊರತೆಯಿಂದ ರಾಜ್ಯದ ಎಲ್ಲ ಅಂಗನವಾಡಿ ಕೇಂದ್ರಗಳಿಗೆ ಹಾಲಿನ ಪುಡಿ ಪೂರೈಕೆ ಸ್ಥಗಿತಗೊಂಡಿದ್ದು, ಅಂಗನವಾಡಿಗಳಿಂದ ಮಕ್ಕಳು, ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಹಾಲು ಸಿಗುತ್ತಿಲ್ಲ.

ರಾಜ್ಯದಲ್ಲಿ ಸುಮಾರು 70 ಸಾವಿರ ಅಂಗನವಾಡಿ ಕೇಂದ್ರಗಳಿದ್ದು, 6 ವರ್ಷದೊಳಗಿನ 36 ಲಕ್ಷ ಮಕ್ಕಳು ಪೂರ್ವ ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದಾರೆ. ಶನಿವಾರ ಹೊರತುಪಡಿಸಿ ವಾರದಲ್ಲಿ 5 ದಿನ ಮೊದಲು ಹಾಲು ಕೊಟ್ಟು, ಮಧ್ಯಂತರ ಅವಧಿಯಲ್ಲಿ ಉಪಾಹಾರ ನೀಡಬೇಕು. ಮನೆಗೆ ಮರಳುವ ಮುನ್ನ ಮಕ್ಕಳಿಗೆ ಊಟ ಮಾಡಿಸಬೇಕು.

ಅಂಕಿ-ಅಂಶಗಳು

36 ಲಕ್ಷ ಪೂರ್ವ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವ ಮಕ್ಕಳು

3.68 ಲಕ್ಷ ಬಾಣಂತಿಯರ ಸಂಖ್ಯೆ

3.75 ಲಕ್ಷ ಗರ್ಭಿಣಿಯರ ಸಂಖ್ಯೆ

ಆದರೆ, 3 ತಿಂಗಳಿನಿಂದ ಹಾಲಿನ ಪುಡಿ ಪೂರೈಕೆಯನ್ನು ಸರ್ಕಾರ ಸ್ಥಗಿತಗೊಳಿಸಿದೆ. ಇದರ ಪರಿಣಾಮ ಮಕ್ಕಳಿಗೆ ಕಿರು ಉಪಾಹಾರ, ಊಟ ಮಾತ್ರ ಕೊಡಲಾಗುತ್ತಿದೆ, ಹಾಲು ಸಿಗುತ್ತಿಲ್ಲ. ಶಾಲೆಗೆ ಬರುವ ಮಕ್ಕಳಿಗೆ ನಿತ್ಯ 15 ಗ್ರಾಂ ಪುಡಿಯಿಂದ ತಯಾರಿಸಿದ ಹಾಲು ಕೊಡಬೇಕು ಎಂಬುದು ಸರ್ಕಾರದ ನಿಯಮ. ಆದರೆ, ಇದು ಪಾಲನೆಯಾಗುತ್ತಿಲ್ಲ.

ಹಾಲು ಪೂರೈಕೆ ಸಂಬಂಧ ಕೆಎಂಎಫ್ ಜೊತೆ ಚರ್ಚಿಸಿದ್ದೇನೆ. ಹಾಲು ಉತ್ಪಾದನೆ ಕಡಿಮೆಯಿರುವ ಕಾರಣ ಈ ಸಮಸ್ಯೆಯಾಗಿದೆ. ಸಮಸ್ಯೆ ಶೀಘ್ರ ಪರಿಹರಿಸುತ್ತೇವೆ

ಡಾ. ಅನುರಾಧಾ ಕೆ.ಎನ್., ನಿರ್ದೇಶಕಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

6 ತಿಂಗಳಿಂದ 3 ವರ್ಷದ ವರೆಗಿನ ಮಕ್ಕಳಿಗೆ ತಿಂಗಳಲ್ಲಿ 25 ದಿನ ಒಟ್ಟು 300 ಗ್ರಾಂ ಹಾಲಿನ ಪುಡಿ ನೀಡಲಾಗುತ್ತಿತ್ತು. ಈಗ, ರಾಜ್ಯದಲ್ಲಿರುವ 3.75 ಲಕ್ಷ ಗರ್ಭಿಣಿಯರಿಗೆ 3 ತಿಂಗಳಿನಿಂದ 8 ತಿಂಗಳವರೆಗೆ ನಿತ್ಯ 20 ಗ್ರಾಂ ಹಾಲಿನ ಪುಡಿಯನ್ನು ನೀರಿಗೆ ಬೆರೆಸಿ ನೀಡಬೇಕು. 3.68 ಲಕ್ಷ ಬಾಣಂತಿಯರಿಗೆ ಈ ಸೌಲಭ್ಯ ಸಿಗಬೇಕಿದೆ.

'ಅಪೌಷ್ಟಿಕತೆ ಸಮಸ್ಯೆ ಹೆಚ್ಚಿರುವ ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳ ಫಲಾನುಭವಿಗಳಿಗೆ ಹೆಚ್ಚಿನ ಅನುಕೂಲ ಆಗುತ್ತಿತ್ತು. ಆದರೆ, ಹಾಲಿನ ಪುಡಿ ಪೂರೈಕೆ ಸ್ಥಗಿತಗೊಂಡ ಕಾರಣ ಮಕ್ಕಳಿಗಷ್ಟೇ ಅಲ್ಲ, ಗರ್ಭಿಣಿಯರು ಮತ್ತು ಬಾಣಂತಿಯರಿಗೂ ಪುಡಿ ವಿತರಿಸಲಾಗುತ್ತಿಲ್ಲ' ಎಂದು ಅಂಗನವಾಡಿ ಕಾರ್ಯಕರ್ತೆಯೊಬ್ಬರು ತಿಳಿಸಿದರು.

'ಸರ್ಕಾರವು ಹಾಲಿನ ಪುಡಿ ನೀಡಿದರೂ ಅಂಗನವಾಡಿ ಕಾರ್ಯಕರ್ತೆಯರು ಹಾಲು ಕೊಡುತ್ತಿಲ್ಲ ಎಂದು ಪೋಷಕರು ಅನುಮಾನ ವ್ಯಕ್ತಪಡಿಸುತ್ತಾರೆ. 3 ತಿಂಗಳಿಂದ ಹಾಲಿನ ಪುಡಿ ಪೂರೈಕೆಯಾಗಿಲ್ಲ ಎಂದರೂ ಪೋಷಕರು ನಂಬುತ್ತಿಲ್ಲ. ಪರಿಸ್ಥಿತಿ ನಿಭಾಯಿಸುವುದು ಕಷ್ಟವಾಗಿದೆ' ಎಂದು ಅಂಗನವಾಡಿ ಕಾರ್ಯಕರ್ತೆಯೊಬ್ಬರು ಅಳಲು ತೋಡಿಕೊಂಡರು.

ಕಾರಣವೇನು: 2022ರ ಸೆಪ್ಟೆಂಬರ್‌ನಲ್ಲಿ ರಾಜ್ಯದ ಜಾನುವಾರುಗಳಲ್ಲಿ ಚರ್ಮ ಗಂಟು ರೋಗ (ಲಂಪಿ ಸ್ಕಿನ್ ಡಿಸೀಜ್) ಕಾಣಿಸಿಕೊಂಡ ಪರಿಣಾಮ ಹಾಲು ಉತ್ಪಾದನೆ ಕಡಿಮೆಯಾಗಿದೆ. ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಪ್ರಕಾರ, ದಿನಕ್ಕೆ ₹15 ಲಕ್ಷ ಲೀಟರ್ ಹಾಲಿನ ಕೊರತೆ ಇದೆ.

'ಚರ್ಮಗಂಟು ರೋಗದಿಂದ ಅನೇಕ ಜಾನುವಾರುಗಳು ಮೃತಪಟ್ಟವು. ಹಾಲು ಶೇಖರಣೆ ಪ್ರಮಾಣ ತೀವ್ರವಾಗಿ ಕುಸಿಯಿತು. ಈಗ ನಿಧಾನವಾಗಿ ಚೇತರಿಕೆ ಕಾಣುತ್ತಿದೆ' ಎಂದು ಕೆಎಂಎಫ್ ಬಳ್ಳಾರಿವಿಭಾಗದ ಉಪ ವ್ಯವಸ್ಥಾಪಕ ಶಂಭುಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಮೋದಿಯಲ್ಲಿ ದೈವತ್ವ ಗುಣ: ತೇಜಸ್ವಿ

ಪ್ರಜಾವಾಣಿ ವಾರ್ತೆ

ವಿಜಯಪುರ (ದೇವನಹಳ್ಳಿ): ಪ್ರಧಾನಿ ನರೇಂದ್ರ ಮೋದಿ ಅವರಲ್ಲಿ ದೈವತ್ವದ ಗುಣಗಳಿವೆ. ಅದರಿಂದಾಗಿಯೇ ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಸಂಸದ, ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ತೇಜಸ್ವಿ ಸೂರ್ಯ ಹೇಳಿದ್ದಾರೆ.

ಪಟ್ಟಣದ ಗಾಯಿತ್ರಿ ಭವನದಲ್ಲಿ ಶನಿವಾರ ಚಿಂತಕರ ವೇದಿಕೆ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, 'ಮೋದಿ ಪ್ರಧಾನಿ ಆಗಿರುವುದು ಈ ದೇಶದ ಸೌಭಾಗ್ಯ' ಎಂದು ತಿಳಿಸಿದರು.

ಹಣ ಪಡೆದಿಲ್ಲ: ಶಿವರಾಜ್‌ಕುಮಾರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಜಗದೀಶ ಶೆಟ್ಟರ್ ಅವರ ಮೇಲಿನ ಪ್ರೀತಿ, ವಿಶ್ವಾಸಕ್ಕೆ ಸ್ವಯಂಪ್ರೇರಿತವಾಗಿ ಬಂದು ಅವರ ಪರ ಪ್ರಚಾರ ಮಾಡಿದ್ದೇನೆ. ಹಣ ಪಡೆದು ವ್ಯಾಪಾರಕ್ಕಾಗಿ ಬಂದಿಲ್ಲ' ಎಂದು ನಟ ಶಿವರಾಜ್‌ಕುಮಾರ್ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ರಚಾರದಲ್ಲಿ ಶೆಟ್ಟರ್ ಬಗ್ಗೆ ಮಾತ್ರ ಮಾತನಾಡಿದ್ದೇನೆ. ಯಾರನ್ನೂ ಟೀಕೆ ಮಾಡಿಲ್ಲ. ಯಾರ ಬಗ್ಗೆಯೂ ಮಾತನಾಡಿಲ್ಲ. ಹಣ ಪಡೆದು ಪ್ರಚಾರಕ್ಕೆ ಬಂದಿದ್ದೇನೆ ಎಂದು ಮಾತನಾಡುವುದು ತಪ್ಪು' ಎಂದರು.

ಬಿಜೆಪಿ ನಾಯಕರ ಆಪ್ತನ ಮನೆಯಲ್ಲಿ ಐ.ಟಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಮ್ಮವಾರಿ ಸಂಘದ ಅಧ್ಯಕ್ಷ ರಾಜಗೋಪಾಲ್ ನಾಯ್ಡು ಮನೆ ಮೇಲೆ ಶನಿವಾರ ದಾಳಿ ಮಾಡಿರುವ ಆದಾಯ ತೆರಿಗೆ (ಐ.ಟಿ.) ಇಲಾಖೆ ಅಧಿಕಾರಿ, ಶೋಧ ನಡೆಸುತ್ತಿದ್ದಾರೆ.

ಬಸವನಗುಡಿಯಲ್ಲಿರುವ ನಾಯ್ಡು ಮನೆ ಮೇಲೆ ಶನಿವಾರ ಬೆಳಿಗ್ಗೆ 15ಕ್ಕೂ ಹೆಚ್ಚು ಅಧಿಕಾರಿಗಳ ತಂಡ ದಾಳಿಮಾಡಿದೆ. ತಡ ರಾತ್ರಿಯವರೆಗೂ ಶೋಧ ಮುಂದುವರಿದಿತ್ತು. 'ರಾಜಗೋಪಾಲ್ ನಾಯ್ಡು ಬಸವನಗುಡಿ ವಿಧಾನಸಭಾ ಕ್ಷೇತ್ರದ ಬಿಜೆಪಿಯ ಪ್ರಮುಖ ನಾಯಕರಿಗೆ ಆಪ್ತರಾಗಿದ್ದಾರೆ. ವಿಧಾನಸಭಾ ಚುನಾ ವಣೆಯಲ್ಲಿ ಮತದಾರರಿಗೆ ಹಂಚಲು ಹಣ ಸಂಗ್ರಹಿಸಿಟ್ಟಿರುವ ಆರೋಪದ ಮೇಲೆ ದಾಳಿ ನಡೆಸಲಾಗಿದೆ. ಶೋಧ ಕಾರ್ಯ ಪ್ರಗತಿಯಲ್ಲಿದೆ' ಎಂದು ಮೂಲಗಳು ತಿಳಿಸಿವೆ.

ಬೆಟ್ಟಿಂಗ್ ಭೂತದ ತಾಂಡವ



ಚಿತ್ರ: ಭಾವು ಪತ್ತಾರ್

ಪೊಲೀಸ್ ದಾಳಿಗೆ ದಾಖಲಾದ ಪ್ರಕರಣಗಳು		
ಕ್ರಿಕೆಟ್ ಬೆಟ್ಟಿಂಗ್		
ವರ್ಷ	ಬೆಂಗಳೂರು	ಕರ್ನಾಟಕ
2020	42	62
2021	51	68
2022	62	74
2023 (ಜನವರಿ–ಏಪ್ರಿಲ್)	36	49

ಒಂದನೇ ಪುಟದಿಂದ...

ಅದರ ಅಟ್ಟಹಾಸಕ್ಕೆ ಬಡವ, ಮಧ್ಯಮ ವರ್ಗ ಮತ್ತು ಶ್ರೀಮಂತರೂ ಸೇರಿದಂತೆ ಎಲ್ಲ ವರ್ಗದವರು ಬಲಿಯಾಗುತ್ತಿದ್ದಾರೆ. ಮಾಫಿಯಾಗಳು ನಡೆಸುವ ಬೆಟ್ಟಿಂಗ್‌ನಿಂದಾಗಿ ಹಲವಾರು ಸಂಸಾರಗಳು ಮೂರಾಬಟ್ಟೆಯಾಗಿವೆ. ಅಶ್ವಿನಿ ಹಾಗೂ ಆನಂದ್ ದಂಪತಿಯ ಕಥೆ ಇತ್ತೀಚಿನ ಸೇರ್ಪಡೆಯಷ್ಟೇ.

ಸ್ಮಾರ್ಟ್‌ಫೋನ್ ತಂತ್ರಜ್ಞಾನ, ಇಂಟರ್‌ನೆಟ್ ಕ್ರಾಂತಿಯಿಂದಾಗಿ ಹಳ್ಳಿ ಹಳ್ಳಿಗೂ ಈ ಪಿಡುಗು ಕಾಲಿಟ್ಟಿದೆ. ಆನ್‌ಲೈನ್‌ನಲ್ಲಿ ಕಟ್ಟುವ ಬೆಟ್ಟಿಂಗ್ ಯುವ ಮತ್ತು ಮಧ್ಯವಯಸ್ಕರನ್ನು ಆಪೋಷನ ತೆಗೆದುಕೊಳ್ಳುತ್ತಿದೆ.

ಗೆದ್ದವರು ಮತ್ತಷ್ಟು ಹಣ ಗಳಿಸಲು, ಸೋತವರು ಕಳೆದುಕೊಂಡಿದ್ದನ್ನು ಮರಳಿ ಪಡೆಯಲು ಯತ್ನಿಸುತ್ತಾರೆ. ಚಟ ಅಂಟಿಸಿಕೊಳ್ಳುತ್ತಾರೆ. ಆ್ಯಪ್‌ಗಳ ಮೂಲಕ ದಿಢೀರ್ ಸಾಲ ನೀಡುವವರ ಮೊರೆ ಹೋಗುತ್ತಾರೆ. ಅಲ್ಲಿಯೂ ಕಳೆದುಕೊಂಡ ಮೇಲೆ ಇದ್ದಬದ್ದ ಆಸ್ತಿ, ಉಳಿತಾಯದ ಹಣ, ಹೆಂಡತಿಯ ತಾಳಿಯನ್ನೂ ಮಾರಾಟ ಮಾಡುತ್ತಾರೆ. ಎಲ್ಲ ಮುಗಿದ ಮೇಲೆ ಒಂದೋ ನಾಪತ್ತೆಯಾಗ್ತಾರೆ, ಇಲ್ಲವೇ ಸಾವಿನ ಮನೆಯ ಕದ ತಟ್ಟುತ್ತಾರೆ. ಇಂತಹ ಪ್ರಕರಣಗಳು ದೇಶದಲ್ಲೆಡೆ ಪ್ರತಿವರ್ಷವೂ ಹೆಚ್ಚುತ್ತಿವೆ.

₹ 100 ಕೋಟಿ ಕ್ಲೀನ್‌ಬೌಲ್ಡ್: ತೆಲಂಗಾಣದ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬ ಐಪಿಎಲ್ ಬೆಟ್ಟಿಂಗ್ ಚಟಕ್ಕೆ ₹ 100 ಕೋಟಿಗೂ ಹೆಚ್ಚು ಹಣ ಕಳೆದುಕೊಂಡ ಕಥೆ ಇದು.

ಕೆಲ ದಿನಗಳ ಹಿಂದೆ ತೆಲಂಗಾಣದ ರಾಚಕೊಂಡದ ಪೊಲೀಸ್ ಕಮಿಷನರ್ ಡಿ.ಎಸ್. ಚೌಹಾಣ್ ನೇತೃತ್ವದ ತಂಡವು ಬೆಟ್ಟಿಂಗ್ ಜಾಲವೊಂದರ ಮೇಲೆ ದಾಳಿ ಮಾಡಿತು. ಮೂವರು ಬುಕ್ಕಿಗಳು, ಇಬ್ಬರು ಸಹಾಯಕ ಬುಕ್ಕಿಗಳು ಹಾಗೂ ಒಬ್ಬ ವಸೂಲಿ ಏಜೆಂಟನನ್ನು ಬಂಧಿಸಿದರು. ಮೊಬೈಲ್ ಫೋನ್‌ಗಳು, ಲಕ್ಷಾಂತರ ಹಣವನ್ನೂ ವಶಪಡಿಸಿಕೊಂಡರು. ಆರೋಪಿ ಜಕ್ಕಿರೆಡ್ಡಿ ಅಶೋಕ ರೆಡ್ಡಿ ನೀಡಿದ ಹೇಳಿಕೆಗೆ ಪೊಲೀಸ್ ಅಧಿಕಾರಿಗಳು ಬೆಚ್ಚಿಬೆರಗಾದರು.

ಕಳೆದ 12 ವರ್ಷಗಳಲ್ಲಿ ಐಪಿಎಲ್ ಬೆಟ್ಟಿಂಗ್ ಚಟಕ್ಕೆ ಈತ ಕಳೆದುಕೊಂಡಿದ್ದು ₹ 100 ಕೋಟಿಗೂ ಹೆಚ್ಚು ಹಣ. ರಿಯಲ್ ಎಸ್ಟೇಟ್ ಉದ್ಯಮಿಯಾಗಿದ್ದ ಆತ, ಆರಂಭದಲ್ಲಿ ಮೋಜಿಗಾಗಿ ಬಾಜಿ ಕಟ್ಟಿದ. ಆರಂಭದಲ್ಲಿ ಹಣ ಬಂತು. ಸ್ನೇಹಿತರೂ 'ಅದೃಷ್ಟಶಾಲಿ' ಎಂದು ಹುರಿದುಂಬಿಸಿದರು. ಮತ್ತಷ್ಟು ಕಟ್ಟಿ ಕಳೆದುಕೊಂಡ. ಮತ್ತೆ ಗಳಿಸಲೇಬೇಕೆಂಬ ಕೆಟ್ಟ ಹಟ ಹುಟ್ಟಿತು. ತನ್ನ ಉದ್ಯಮದ ಹಣವೂ ಇತ್ತ ಹರಿಯಿತು. ಸಾಲವೂ ಬೆಟ್ಟದಂತೆ ಬೆಳೆಯಿತು. ನಂತರ ಜಾಲಕ್ಕೆ ಉಪಬುಕ್ಕಿಯಾಗಿ ಕೆಲಸ ಮಾಡತೊಡಗಿದ. ತನ್ನ ಪರಿಚಯಸ್ಥರಿಗೂ ಮತ್ತು ಬೆಟ್ಟಿಂಗ್ ಜಾಲಕ್ಕೂ ಸಂಪರ್ಕ ಸೇತುವೆಯಾದ.

ಈತನೊಂದಿಗೆ ಬಂಧನಕ್ಕೊಳಗಾದ ಮತ್ತೊಬ್ಬ ಉಪಬುಕ್ಕಿ ಎಡುಕುಲ ಜಗದೀಶ್ ಕೂಡ ಬೆಟ್ಟಿಂಗ್ ಚಟ ಹೊಂದಿದವನು. ಈತ ಹೈದರಾಬಾದಿನಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ. ಈ ಜಾಲಕ್ಕೆ ವಸೂಲಿ ಏಜೆಂಟ್ ಆಗಿದ್ದ ವಡುಪು ಚರಣ್ ವೃತ್ತಿಯಿಂದ ಸಾಫ್ಟ್‌ವೇರ್ ಎಂಜಿನಿಯರ್. ಇವರೆಲ್ಲರಿಗೂ ಹರಿಯಾಣದ ವ್ಯಕ್ತಿಯೊಂದಿಗೆ ವ್ಯವಹರಿಸುತ್ತಿದ್ದರು. ಈಗ ನಡೆಯುತ್ತಿರುವ ಐಪಿಎಲ್ ಟೂರ್ನಿಯಲ್ಲಿ (ಏ. 17ರವರೆಗೆ) ಸುಮಾರು ಮೂರು ಕೋಟಿ ರೂಪಾಯಿಯ ಬೆಟ್ಟಿಂಗ್ ವ್ಯವಹಾರ ನಡೆಸಿದ್ದರಂತೆ ಇವರು. ಬೆಟ್ಟಿಂಗ್‌ನಲ್ಲಿ ತಮ್ಮ ಹಣವನ್ನು ಕಳೆದುಕೊಂಡ ಮೇಲೆ ಅದೇ ಮಾಫಿಯಕ್ಕಾಗಿ ಕೆಲಸ ಮಾಡುತ್ತ ಮತ್ತಷ್ಟು ಜನರನ್ನು ಕೂಪಕ್ಕೆ ತಳ್ಳುತ್ತಿದ್ದಾರೆ.

ಸಹೋದರರ ಸಂಸಾರಕ್ಕೆ ಕಿಚ್ಚು: ಧಾರವಾಡದ ನಿವಾಸಿ ಮಹಾಲಕ್ಷ್ಮೀ ಶೀಲವಂತ ಅವರು ತಮ್ಮ ಕುಟುಂಬದಲ್ಲಿಯೇ ನಡೆದ ಘಟನೆಯನ್ನು ಎಳೆಎಳೆಯಾಗಿ ಬಿಡಿಸಿಡುತ್ತಾರೆ.

'ಕ್ರಿಕೆಟ್ ಬೆಟ್ಟಿಂಗ್‌ನಿಂದಾಗಿ ನನ್ನ ತಮ್ಮ ದೀಪಕ್ (ಹೆಸರು ಬದಲಿಸಲಾಗಿದೆ) ಸಂಸಾರ ಹಾಳಾಗಿ ಹೋಯಿತು. ಸುಮಾರು ₹ 45 ಲಕ್ಷಕ್ಕೂ ಹೆಚ್ಚು ಹಣ ನಷ್ಟವಾಯಿತು. ನನ್ನ ತವರು ಮನೆ ಶಹಾಪುರದಲ್ಲಿ (ಯಾದಗಿರಿ ಜಿಲ್ಲೆ). ನನ್ನ ತಮ್ಮನದು, ಹೆಂಡತಿ ಮತ್ತು ಮಗುವಿನೊಂದಿಗೆ ಚೆನ್ನಾಗಿದ್ದ ಸಂಸಾರ. ಸ್ವಂತ ಮನೆ ಮತ್ತು ಒಂದು ಸೈಟು ಕೂಡ ಇತ್ತು. ಸ್ನೇಹಿತರ ವಲಯದಲ್ಲಿ ಆರಂಭವಾದ ಬೆಟ್ಟಿಂಗ್ ಮೋಜು ಮಾರಿಯಾಗಿ ಕಾಡಿತು. ಸಂಬಳ ಸಾಲದಾಯಿತು. ಕಳೆದುಕೊಂಡ ಹಣವನ್ನು ಮರಳಿ ಪಡೆಯಲು ಮತ್ತೆ ಬೆಟ್ಟಿಂಗ್ ಮಾಡಿದ. ಅದಕ್ಕಾಗಿ ಲಕ್ಷಾಂತರ ರೂಪಾಯಿ ಸಾಲ ಮಾಡಿದ. ಸಾಲಗಾರರ ಕಾಟ ಹೆಚ್ಚಾದಾಗ ಮನೆ, ಸೈಟು ಮಾರಾಟ ಮಾಡಬೇಕಾಯಿತು. ಸಾಲದ್ದಕ್ಕೆ ಗೋವಾಕ್ಕೆ ಹೋಗಿ ಕ್ಯಾಸಿನೊ ಕೂಡ ಆಡಿ ಹಣ ಕಳೆದುಕೊಂಡಿದ್ದ. ಹೆಂಡತಿ ದೂರವಾದಳು. ನನ್ನ ಸಹೋದರ ಈಗ ಬೆಂಗಳೂರಿನಲ್ಲಿ ಕಿರಾಣಿ ಅಂಗಡಿಯ ಡೆಲಿವರಿ ಬಾಯ್ ಆಗಿದ್ದಾನೆ. ಸಿಂಧನೂರಿನಲ್ಲಿರುವ ನನ್ನ ತಂಗಿ ಗಂಡನೂ ₹ 10 ಲಕ್ಷ ರೂಪಾಯಿಯನ್ನು ಬೆಟ್ಟಿಂಗ್‌ನಲ್ಲಿ ಕಳೆದುಕೊಂಡು ಬೆಂಗಳೂರು ಸೇರಿಕೊಂಡಿದ್ದಾನೆ' ಎಂದು ಮಹಾಲಕ್ಷ್ಮೀ ಕಣ್ಣೀರೊರೆಸಿಕೊಂಡರು. ಸಹೋದರರ ಸಾಲ ತೀರಿಸಲು ತಮ್ಮ ಒಡವೆಗಳನ್ನೂ ಮಾರಿದ್ದರಂತೆ.

'ಇದು ಒಂದು ಊರಿಗೆ ಸೀಮಿತವಾಗಿಲ್ಲ. ಎಲ್ಲ ಕಡೆಯೂ ಹಬ್ಬಿದೆ. ಸರ್ಕಾರಗಳು ಈ ಪಿಡುಗನ್ನು ತಡೆಯಲು ಏನೂ ಮಾಡುತ್ತಿಲ್ಲವಲ್ಲ ಏಕೆ' ಎಂದು ಅವರು ಪ್ರಶ್ನಿಸುತ್ತಾರೆ.

ಠೇವಣಿಗೇ ಕನ್ನ: ಮಧ್ಯಪ್ರದೇಶದ ಸಾಗರ ಜಿಲ್ಲೆಯ ಅಂಚೆ ಕಚೇರಿಯಲ್ಲಿ ಗ್ರಾಹಕರು ಇಟ್ಟಿದ್ದ ಎಫ್.ಡಿ (ಠೇವಣಿ) ಅಕೌಂಟ್‌ಗಳ ನಕಲಿ ಪಾಸ್‌ಬುಕ್ ಸೃಷ್ಟಿಸಿ ಕನ್ನ ಹಾಕಿದ್ದ ಪೋಸ್ಟ್ ಮಾಸ್ಟರ್ ವಿಶಾಲ್ ಎಂಬುವವನು ಒಂದು ಕೋಟಿ ರೂಪಾಯಿಯನ್ನು ಬೆಟ್ಟಿಂಗ್‌ಗೆ ಸುರಿದಿದ್ದ. ನಂತರ ತಲೆತಪ್ಪಿಸಿಕೊಂಡಿದ್ದ. ಹಲವು ದಿನಗಳ ಕಾಲ ಪೊಲೀಸರು ಮಾಡಿದ ಪ್ರಯತ್ನಕ್ಕೆ ಕಡೆಗೂ ಸಿಕ್ಕಿಬಿದ್ದ ಆರೋಪಿ ತಪ್ಪೊಪ್ಪಿಕೊಂಡ. ಇಂತಹ ಕರಾಳ ದಂಧೆಗೆ ಹಣವಷ್ಟೇ ಅಲ್ಲ. ಪ್ರಾಣವನ್ನೂ ಕಳೆದುಕೊಂಡಿರುವ ಪ್ರಕರಣಗಳು ಬಹಳಷ್ಟಿವೆ.

ಇಪ್ಪತ್ತು ದಿನಗಳ ಹಿಂದಷ್ಟೇ ತಮಿಳುನಾಡಿನ ಹೋಟೆಲ್‌ವೊಂದರಲ್ಲಿ 35 ವರ್ಷದ ವ್ಯಕ್ತಿಯೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ. ಆತ ಸುಮಾರು ₹ 90 ಲಕ್ಷ ಸಾಲ ಮಾಡಿ ಐಪಿಎಲ್ ಬೆಟ್ಟಿಂಗ್ ಹಾಗೂ ಆನ್‌ಲೈನ್ ರಮ್ಮಿಗಳಲ್ಲಿ ಕಳೆದುಕೊಂಡಿದ್ದ ಎಂಬುದು ಪೊಲೀಸರ ತನಿಖೆಯಿಂದ ಹೊರಬಿತ್ತು. ಕೆಲವು ವರ್ಷಗಳ ಹಿಂದೆ ಹಾಸನ, ಮೈಸೂರು, ಬೆಳಗಾವಿ ಜಿಲ್ಲೆಗಳಲ್ಲಿಯೂ ಇಂತಹ ಪ್ರಕರಣಗಳು ವರದಿಯಾಗಿದ್ದವು.

ಇವೆಲ್ಲವೂ ಕೆಲವೇ ಕೆಲವು ಸತ್ಯಘಟನೆಗಳು ಮಾತ್ರ. ಆದರೆ ದೇಶದ ಉದ್ದಗಲಕ್ಕೂ ಇಂತಹ ಪ್ರಕರಣಗಳು ಲೆಕ್ಕವಿಲ್ಲದಷ್ಟು ಇವೆ. ಹಾಗಿದ್ದರೆ ಇಷ್ಟೊಂದು ವ್ಯಾಪಕವಾಗಿ ಬೆಟ್ಟಿಂಗ್ ಮಾಫಿಯಾ ಬೆಳೆದಿದ್ದು ಹೇಗೆ?

ಎಂಟು ಸೆಕೆಂಡುಗಳ ಅಂತರ: ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಒಬ್ಬ ಬೌಲರ್ ಎಸೆತ ಹಾಕುವ ದೃಶ್ಯವು ಟಿ.ವಿ. ಪರದೆ ಮೇಲೆ ಬರಲು ಸುಮಾರು ಎಂಟು ಸೆಕೆಂಡುಗಳ ಸಮಯ ಬೇಕು. ಇಷ್ಟು ಸಣ್ಣ ಅಂತರವೇ ಬೆಟ್ಟಿಂಗ್ ಲೋಕಕ್ಕೆ ಬಂಡವಾಳ. ಬೌಂಡರಿ, ಸಿಕ್ಸರ್, ವಿಕೆಟ್, ಯುಡಿಆರ್‌ಎಸ್, ವೈಡ್, ನೋಬಾಲ್, ಕ್ಯಾಚ್, ಡ್ರಾಪ್ ಗಳಿಗೆಲ್ಲ ಬೆಟ್ಟಿಂಗ್ ಕಟ್ಟುತ್ತಾರೆ.

ಕ್ರೀಡಾಂಗಣದೊಳಗೇ ಪ್ರೇಕ್ಷಕರ ನಡುವೆ ಇರುವ ಮಾಫಿಯಾ ಏಜೆಂಟ್‌ಗಳು, ಜಾಮರ್ ಇದ್ದರೂ ಕೆಲಸ ಮಾಡುವ ಅತ್ಯಾಧುನಿಕ ತ್ರೀಡಿ ತಂತ್ರಾಂಶದ ಫೋನ್‌ಗಳ ಮುಖಾಂತರ ತಮ್ಮ ಧಣಿಗಳಿಗೆ ಸಂದೇಶ ಮುಟ್ಟಿಸುತ್ತಾರೆ. ಅಲ್ಲಿಯವರು ಸ್ಪಾಟ್ ಬೆಟ್ಟಿಂಗ್ ಮಾಡುತ್ತಾರೆ. ಈಗ ತಂತ್ರಜ್ಞಾನ ಮುಂದುವರಿದಿರುವುದರಿಂದ ತಮಗೆ ಬೇಕಾದ ಹಾಗೆ ಆ್ಯಪ್‌ಗಳನ್ನು ಮಾಡಿಸಿಕೊಳ್ಳುತ್ತಾರೆ.

ಇತ್ತೀಚೆಗೆ ಇಂತಹದೇ ಆ್ಯಪ್ ನಲ್ಲಿ ನಡೆಯುತ್ತಿದ್ದ ದಂಧೆಯನ್ನು ಬೆಂಗಳೂರು ಪೊಲೀಸರು ಪತ್ತೆ ಹೆಚ್ಚಿದ್ದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದ ಪಂದ್ಯವೊಂದರಲ್ಲಿ ವಿಶಾಂತ್, ಅಮರ್ ಜಿತ್ ಸಿಂಗ್, ಮೋಹಿತ್ ಬಾತ್ರಾ ಹಾಗೂ ದುಶ್ಯಂತ್ ಕುಮಾರ್ ಸೋನಿ ಎಂಬುವವರನ್ನು ಬಂಧಿಸಲಾಗಿತ್ತು.

'ಪಂದ್ಯದ ಪ್ರತಿ ಬಾಲ್ ಹಾಗೂ ಬ್ಯಾಟಿಂಗ್ ಮಾಹಿತಿಯನ್ನು ಆರೋಪಿಗಳು ಆ್ಯಪ್ ಮೂಲಕ ರವಾನಿಸುತ್ತಿದ್ದರು. ಈ ಮೂಲಕ ಜನರಿಂದ ಬೆಟ್ಟಿಂಗ್ ಕಟ್ಟಿಸಿಕೊಂಡು ವಂಚಿಸುತ್ತಿದ್ದರು. ಪಂದ್ಯ ನಡೆಯುವ ಸಂದರ್ಭದಲ್ಲಿ ಅಕ್ರಮ ತಡೆಯಲು ಮಫ್ತಿಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ. ಮೊಬೈಲ್‌ನಲ್ಲಿ ಹೆಚ್ಚು ಸಮಯ ಕಳೆಯುವ ಪ್ರೇಕ್ಷಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಇತ್ತೀಚೆಗೆ ನಡೆದ ಪಂದ್ಯದ ವೇಳೆ ನಾಲ್ವರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಬೆಟ್ಟಿಂಗ್ ವಿಷಯ ಗೊತ್ತಾಯಿತು' ಎಂದು ಪೊಲೀಸರು ಬಹಿರಂಗಪಡಿಸಿದ್ದಾರೆ.

ಬೆಟ್ಟಿಂಗ್‌ನಲ್ಲಿ ಇನ್ನೊಂದು ಬಗೆ ಇದೆ. ಅದು ಪಂದ್ಯ ಫಲಿತಾಂಶದ ಮೇಲೆ ಕಟ್ಟುವುದು. ಪಂದ್ಯದಲ್ಲಿ ಕಠಿಣ ಪೈಪೋಟಿ ಶುರುವಾದಂತೆ, ರೋಚಕ ಫಲಿತಾಂಶ ಹೊರಹೊಮ್ಮುವಂತಹ ಪಂದ್ಯಗಳಲ್ಲಿ ಬಾಜಿ ಕಟ್ಟಿದವರ ಮನಸ್ಸೂ ಅತ್ತಿತ್ತ ಹೊಯ್ದಾಡುತ್ತಾ, ಹೂಡುವ ದುಡ್ಡು ಹೆಚ್ಚುತ್ತದೆ. ಇದರಲ್ಲಿ ಬುಕ್ಕಿಗಳು ಯಥೇಚ್ಛ ಲಾಭ ಗಳಿಸುತ್ತಾರೆ.

ಮುಂಬೈ, ದೆಹಲಿ ಹರಿಯಾಣ, ರಾಜಸ್ಥಾನ, ಮಾಲ್ಡೀವ್ಸ್, ಶ್ರೀಲಂಕಾ ಮತ್ತಿತರ ಪ್ರದೇಶಗಳಿಂದ ಬಾಜಿಯನ್ನು ನಿಯಂತ್ರಿಸುತ್ತಾರೆ. ಪ್ರತಿ ಊರಿನಲ್ಲಿಯೂ ಇವರಿಗೆ ಏಜೆಂಟರು ಇದ್ದಾರೆ. ಇಲ್ಲವೇ ಆನ್‌ಲೈನ್ ಆ್ಯಪ್‌ಗಳ ಮೂಲಕ ವ್ಯವಹಾರ ಕುದುರಿಸುತ್ತಾರೆ. ಹಣ ವಸೂಲಿ ಮಾಡಲು ಕಲೆಕ್ಷನ್ ಏಜೆಂಟರೂ ಇರುತ್ತಾರೆ.

ಆನ್‌ಲೈನ್ ಆ್ಯಪ್‌ಗಳು ಹಾಗೂ ಮನೋವ್ಯಾಧಿ: ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳು ಈಗ ಅಪಾರ ಸಂಖ್ಯೆಯಲ್ಲಿ ಲಭ್ಯ ಇವೆ. ಕೋವಿಡ್ ಕಾಲಘಟ್ಟದಲ್ಲಿ ಮಕ್ಕಳಿಗೆ ಆನ್‌ಲೈನ್ ಮೂಲಕವೇ ಶಾಲೆ ತರಗತಿಗಳು ನಡೆದವು. ಇದರಿಂದಾಗಿ ಮೊಬೈಲ್ ಮತ್ತು ಇಂಟರ್‌ನೆಟ್ ಬಳಕೆ ಹೆಚ್ಚಾಯಿತು. ಅದರೊಂದಿಗೆ ಗೇಮಿಂಗ್ ಆ್ಯಪ್‌ಗಳ ಭರಾಟೆಯೂ ಹೆಚ್ಚಾಯಿತು.

ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಕ್ರಿಕೆಟ್‌ಗೆ ಸಂಬಂಧಿತ ಫ್ಯಾಂಟಸಿ ಆ್ಯಪ್‌ಗಳೇ ಹೆಚ್ಚಾಗಿವೆ. ಅಲ್ಲೆಲ್ಲೋ ಪಂದ್ಯ ನಡೆಯುತ್ತಿದ್ದರೆ, ಆ ತಂಡಗಳ ಹನ್ನೊಂದರ ಬಳಗವನ್ನು ಇಲ್ಲಿ ಕುಳಿತವರು ತಮ್ಮ ಮೊಬೈಲ್‌ಗಳಲ್ಲಿ ರಚಿಸಿಕೊಳ್ಳುತ್ತಾರೆ. ಇವರ ಫ್ಯಾಂಟಸಿ ತಂಡದಲ್ಲಿರುವ ಆಟಗಾರರು ಕ್ರೀಡಾಂಗಣದಲ್ಲಿ ನೀಡುವ ಪ್ರದರ್ಶನದ ಆಧಾರದಲ್ಲಿ ಪಾಯಿಂಟ್ಸ್ ಅಥವಾ ಹಣ ಗಳಿಕೆಯಾಗುತ್ತದೆ. ಇಲ್ಲಿ ಹತ್ತು, ಇಪ್ಪತ್ತು ರೂಪಾಯಿ ಕಟ್ಟಿ ಆಡಲು ಆರಂಭಿಸಬಹುದು. ಆದರೆ ಇದು ದಿನಗಳೆದಂತೆ ಚಟವಾಗಿ ಪರಿಣಮಿಸುತ್ತದೆ.

ಆದರೆ ಈ ಫ್ಯಾಂಟಸಿ ಗೇಮಿಂಗ್ ಈಗ ₹ 50 ಸಾವಿರ ಕೋಟಿ ವ್ಯವಹಾರದ ಉದ್ಯಮವಾಗಿ ಬೆಳೆದಿದೆ. 18 ವರ್ಷ ಮೇಲ್ಪಟ್ಟವರಿಗೆ ಮಾತ್ರ ಪ್ರವೇಶ ಎಂದು ನಿಯಮ ವಿಧಿಸಿದೆ. ಆಡುತ್ತ ಆಡುತ್ತಾ ಚಟವಾಗಿ ಪರಿಣಮಿಸುವ ಅಪಾಯವೂ ಇದೆ ಎಂದು ಜಾಹೀರಾತುಗಳ ಕೊನೆಯಲ್ಲಿ ಎಚ್ಚರಿಕೆ ಸಂದೇಶ ನೀಡಲಾಗುತ್ತದೆ. ಆದರೆ ಅದಕ್ಕೂ ಮುನ್ನ ಖ್ಯಾತನಾಮ ಆಟಗಾರರು 'ಎಲ್ಲಾ ಕೆಲಸ ಬಿಡಿ, ತಂಡ ಕಟ್ಟಿ ಆಡಿ, ಗೆಲ್ಲಿರಿ ಬಹುಮಾನ' ಎಂದು ಆಮಿಷ ತೋರಿರುತ್ತಾರೆ!

'ಗೇಮಿಂಗ್ ಆ್ಯಪ್‌ಗಳಿಂದ ಪೀಡಿತರಾದವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಖಿನ್ನತೆ, ಏಕಾಗ್ರತೆ ಕೊರತೆ, ಓದಿನಲ್ಲಿ ಹಿಂದುಳಿಯುವಿಕೆ, ಸುಳ್ಳು ಹೇಳುವ ಪ್ರವೃತ್ತಿ ಮತ್ತಿತರ ದುಶ್ಚಟಗಳಿಗೆ ಬೀಳುತ್ತಿರುವ ಯುವಕ, ಯುವತಿಯರ ಸಂಖ್ಯೆ ಹೆಚ್ಚುತ್ತಿದೆ. ನಮ್ಮ ಕ್ಲಿನಿಕ್‌ನಲ್ಲಿ ಪ್ರತಿನಿತ್ಯ ಇಂತಹ ಪ್ರಕರಣಗಳು ಬರುತ್ತಿವೆ. ಮಕ್ಕಳಿಗೆ ಇಂತಹ ಚಟ ಹತ್ತದಂತೆ ತಂದೆ, ತಾಯಿ ಮತ್ತು ಕುಟುಂಬದ ಸದಸ್ಯರು ಕಾಳಜಿ ವಹಿಸಬೇಕು. ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯಬೇಕು. ಮೊದಲು ತಾವು ಮೊಬೈಲ್‌ಗಳನ್ನು ಪಕ್ಕಕ್ಕಿಟ್ಟು ಮಕ್ಕಳಿಗೆ ಮಾದರಿಯಾಗಬೇಕು' ಎಂದು ನಿಮ್ಹಾನ್ಸ್‌ನಲ್ಲಿರುವ ಸರ್ವಿಸ್ ಫಾರ್ ಹೆಲ್ತಿ ಯೂಸ್ ಆಫ್ ಟೆಕ್ನಾಲಜಿ ಕ್ಲಿನಿಕ್ ಮುಖ್ಯಸ್ಥರಾದ ಡಾ. ಮನೋಜ್ ಶರ್ಮಾ (ಸಹಾಯವಾಣಿ; 9480829675) ಹೇಳುತ್ತಾರೆ.

ಕಾನೂನಿನ ಚೌಕಟ್ಟು ಇಲ್ಲ: ಭಾರತದಲ್ಲಿ ಜೂಜಾಟಕ್ಕೆ ಮಹಾಭಾರತ ಕಾಲದಿಂದಲೂ ನಂಟಿದೆ. ಆದರೆ ಬ್ರಹ್ಮಾಂಡದಂತೆ ಬೆಳೆದಿರುವ ಕ್ರಿಕೆಟ್ ಬೆಟ್ಟಿಂಗ್‌ಗೆ ಕಾನೂನಿನ ಚೌಕಟ್ಟು ಹಾಕುವ ಕಾರ್ಯ ಈಗಲೂ ಆಗಿಲ್ಲ. ದೇಶದಲ್ಲಿ ಕುದುರೆ ಜೂಜು ಕಾನೂನುಬದ್ಧವಾಗಿ ನಡೆಯುತ್ತದೆ. ಅದರಿಂದ ಬರುವ ತೆರಿಗೆ ಹಣವು ಸರ್ಕಾರದ ಬೊಕ್ಕಸಕ್ಕೆ ಸಂದಾಯವಾಗುತ್ತಿದೆ. ಆದರೆ, ಕ್ರಿಕೆಟ್ ಆಟವನ್ನು ಧರ್ಮದ ರೀತಿ ಆರಾಧಿಸುವ ಭಾರತದಲ್ಲಿ ನಡೆಯುವ ಅಕ್ರಮ ಬೆಟ್ಟಿಂಗ್‌ಗೆ ಕಡಿವಾಣವಿಲ್ಲ. ಇದರಿಂದಾಗಿ ಜನಸಾಮಾನ್ಯರು ಆಮಿಷಗಳಿಗೆ ಒಳಗಾಗಿ ಹಣ ಮತ್ತು ಜೀವ ಕಳೆದುಕೊಳ್ಳುತ್ತಿದ್ದಾರೆ. ಇನ್ನೊಂದೆಡೆ ಸರ್ಕಾರಕ್ಕೆ ತೆರಿಗೆಯೂ ಸಿಗುತ್ತಿಲ್ಲ. ಆದರೆ ಸಾವಿರಾರು ಕೋಟಿ ಹಣ ಮಾಫಿಯಾ ಪಾಲಾಗುತ್ತಿದೆ.

ಕ್ರಿಕೆಟ್ ಜನಕರ ನಾಡು ಬ್ರಿಟನ್‌ನಲ್ಲಿ ಇವತ್ತಿಗೂ ಫ್ರ್ಯಾಂಚೈಸಿ ಲೀಗ್ ಕ್ರಿಕೆಟ್ ಆರಂಭಿಸಿಲ್ಲ. ಆದರೆ, ಅಲ್ಲಿ ಕ್ರಿಕೆಟ್, ಟೆನಿಸ್, ಫುಟ್‌ಬಾಲ್ ಹಾಗೂ ಕುದುರೆ ರೇಸ್‌ಗಳ ಬೆಟ್ಟಿಂಗ್ ಕಾನೂನುಬದ್ಧವಾಗಿದೆ. ಶ್ರೀಲಂಕಾ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್ ದೇಶಗಳಲ್ಲಿಯೂ ಕಾನೂನುಬದ್ಧ ಬೆಟ್ಟಿಂಗ್ ನಡೆಯುತ್ತದೆ. ಈ ಮೂಲಕ ಅಕ್ರಮ ಬೆಟ್ಟಿಂಗ್‌ಗೆ ಲಗಾಮು ಹಾಕಲಾಗಿದೆ.

ಬೆಟ್ಟಿಂಗ್ ಮತ್ತು ಪಂದ್ಯಗಳ ಫಿಕ್ಸಿಂಗ್‌ಗೆ ಸಂಬಂಧವಿದೆ ಎಂಬುದೂ ಈಗ ಗುಟ್ಟಾಗಿಯೇನೂ ಉಳಿದಿಲ್ಲ. 1999–2000ರಲ್ಲಿ ದೊಡ್ಡಮಟ್ಟದ ಸುದ್ದಿ ಮಾಡಿದ್ದ ಮ್ಯಾಚ್ ಫಿಕ್ಸಿಂಗ್ ಹಗರಣದಲ್ಲಿ ಖ್ಯಾತನಾಮ ಆಟಗಾರರು ಸಿಲುಕಿದ್ದರು. ಭಾರತ ಕ್ರಿಕೆಟ್ ತಂಡದ ನಾಯಕರಾಗಿದ್ದ ಮೊಹಮ್ಮದ್ ಅಜರುದ್ದೀನ್, ಆಟಗಾರರಾಗಿದ್ದ ಅಜಯ್ ಜಡೇಜ, ಮನೋಜ್ ಪ್ರಭಾಕರ್, ದಕ್ಷಿಣ ಆಫ್ರಿಕಾದ ಹ್ಯಾನ್ಸಿ ಕ್ರೊನಿಯೆ ಅವರ ಮೇಲೆ ಆರೋಪಗಳಿದ್ದವು. ಹ್ಯಾನ್ಸಿ ಕ್ರೊನಿಯೆ ದುರಂತ ಸಾವಿನೊಂದಿಗೆ ಬಹಳಷ್ಟು ರಹಸ್ಯಗಳು ಸಮಾಧಿಯಾದವು ಎನ್ನಲಾಗುತ್ತದೆ. ಭೂಗತ ಪಾತಕಿ ದಾವೂದ್ ಇಬ್ರಾಹಿಂ ಕ್ರಿಕೆಟ್ ಬೆಟ್ಟಿಂಗ್ ಜಾಲದ ಸೂತ್ರಧಾರಿಯೆಂದೂ ಹೇಳಲಾಗಿತ್ತು. ನಂತರ ವರ್ಷಗಳಲ್ಲಿಯೂ ಹಲವಾರು ಪ್ರಕರಣಗಳು ವರದಿಯಾದವು.

ಆದರೆ 2013ರಲ್ಲಿ ಐಪಿಎಲ್‌ನಲ್ಲಿ ನಡೆದ ಸ್ಪಾಟ್ ಫಿಕ್ಸಿಂಗ್ ಹಗರಣ ಕೂಡ ದೊಡ್ಡ ಸದ್ದು ಮಾಡಿತು. ವೇಗದ ಬೌಲರ್ ಎಸ್. ಶ್ರೀಶಾಂತ್, ಅಜಿತ್ ಚಾಂಡೇಲಾ ಮತ್ತು ಅಂಕಿತ್ ಚವಾಣ್ ಆಟಗಾರರನ್ನು ಪೊಲೀಸರು ಬಂಧಿಸಿದ್ದರು. ಇತ್ತೀಚೆಗಷ್ಟೇ ಅವರು ಖುಲಾಸೆಯಾದರು. ಇದರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ರಾಜಸ್ಥಾನ ರಾಯಲ್ಸ್ ಫ್ರ್ಯಾಂಚೈಸಿಗಳು ಎರಡು ವರ್ಷಗಳ ಅವಧಿಗೆ ನಿಷೇಧಕ್ಕೊಳಗಾಗಿದ್ದವು. ಈ ಪ್ರಕರಣದ ನಂತರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆಡಳಿತ ಸುಧಾರಣೆಗೆ ಹೊಸ ನಿಯಮಾವಳಿ ರಚಿಸಿದ ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಸಮಿತಿಯು 'ಕ್ರಿಕೆಟ್ ಬೆಟ್ಟಿಂಗ್ ಅನ್ನು ಕಾನೂನು ಬದ್ಧಗೊಳಿಸಬೇಕು. ಬಿಸಿಸಿಐ ಪದಾಧಿಕಾರಿಗಳು, ಆಡಳಿತ ಸಿಬ್ಬಂದಿ, ಆಟಗಾರರು ಇದರಲ್ಲಿ ಭಾಗಿಯಾಗುವಂತಿಲ್ಲ. ಅವರೆಲ್ಲರೂ ತಮ್ಮ ಆಸ್ತಿ ವಿವರ ಸಲ್ಲಿಸಬೇಕು. ಮ್ಯಾಚ್ ಫಿಕ್ಸಿಂಗ್ ಅನ್ನು ಅಪರಾಧವೆಂದು ಪರಿಗಣಿಸಿ ಶಿಕ್ಷೆ ನೀಡುವ ನಿಯಮ ತರಬೇಕು' ಎಂದು ಸೂಚಿಸಿತ್ತು. ಆದರೆ ಇದು ಇನ್ನೂ ಜಾರಿಯಾಗಿಲ್ಲ.

ನಾಲ್ಕು ವರ್ಷಗಳ ಹಿಂದೆ ಕರ್ನಾಟಕ ಪ್ರೀಮಿಯರ್ ಲೀಗ್ ಮತ್ತು ತಮಿಳುನಾಡು ಪ್ರೀಮಿಯರ್ ಲೀಗ್ ಟೂರ್ನಿಗಳಲ್ಲಿಯೂ ಫಿಕ್ಸಿಂಗ್ ಆರೋಪಗಳು ವರದಿಯಾಗಿದ್ದವು. ಸ್ಥಳೀಯ ಟೂರ್ನಿಗಳಿಗೂ ದುಷ್ಟಶಕ್ತಿಗಳ ನೆರಳು ಬೀಳುತ್ತಿರುವುದು ಅಪಾಯಕಾರಿ ಬೆಳವಣಿಗೆ ಇದು ಮುಂದೊಂದು ದಿನ ಕ್ರಿಕೆಟ್ ಆಟವನ್ನೇ ನುಂಗಿದರೆ ಅಚ್ಚರಿಯಿಲ್ಲ.

ಮಾಹಿತಿ: ಸಂತೋಷ ಜಿಗಳಿಕೊಪ್ಪ, ಎಂ.ಎನ್. ಯೋಗೇಶ್, ವಿಕ್ರಂ ಕಾಂತಿಕೆರೆ

ಬೆಟ್ಟಿಂಗ್‌ಗೆ ಆ್ಯಪ್‌ಗಳೇ ಮೂಲ

'ಮಂಡ್ಯದ ಪಶ್ಚಿಮ ಠಾಣೆಯಲ್ಲಿ ಒಂದು ಪ್ರಕರಣವಷ್ಟೇ ದಾಖಲಾಗಿದೆ. ಆದರೂ ಕ್ರಿಕೆಟ್ ಬೆಟ್ಟಿಂಗ್‌ನಿಂದ ಜೀವನ ಹಾಳು ಮಾಡಿಕೊಂಡ ಯುವಕರ ಸಂಖ್ಯೆ ಎಲ್ಲಾ ಜಿಲ್ಲೆಗಳಲ್ಲಿ ಹೆಚ್ಚುತ್ತಿದೆ. ಅದಕ್ಕೆ ಆನ್‌ಲೈನ್ ಆ್ಯಪ್‌ಗಳ ಪ್ರಭಾವವೇ ಕಾರಣ. ನಮ್ಮಲ್ಲಿ ಸೈಬರ್ ಪೊಲೀಸ್ ವ್ಯವಸ್ಥೆ ಸದೃಢವಾಗಿಲ್ಲದ್ದರಿಂದ ಆನ್‌ಲೈನ್ ಬೆಟ್ಟಿಂಗ್ ದಂಧೆಯನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ' ಪೊಲೀಸರೊಬ್ಬರು ತಿಳಿಸಿದರು.

'ಇಂಡುವಾಳು ಬಳಿ ನನ್ನ ಟೀ ಅಂಗಡಿಯಲ್ಲಿ ದಿನದ 24 ಗಂಟೆಯೂ ಮಾರಾಟ ನಡೆಯುತ್ತಿತ್ತು. ರಾತ್ರಿ 12 ಗಂಟೆಯಿಂದ ಮುಂಜಾನೆ 6 ಗಂಟೆವರೆಗೂ ಹೆಚ್ಚು ಆದಾಯ ಬರುತ್ತಿತ್ತು. ದಶಪಥ ಹೆದ್ದಾರಿಯಿಂದ ಅಂಗಡಿ ಮುಚ್ಚಿದೆ. ಮುಂದೇನು ಮಾಡಬೇಕೆಂದೇ ತೋಚುತ್ತಿಲ್ಲ, ದಾರಿ ಕಾಣದೆ ಬೆಟ್ಟಿಂಗ್‌ಗೆ ಹಣ ಹಾಕಿ ಕಳೆದುಕೊಂಡಿದ್ದೇನೆ' ಎಂದು ಸುರೇಶ್ (ಹೆಸರು ಬದಲಾಯಿಸಲಾಗಿದೆ) ನೋವು ವ್ಯಕ್ತಪಡಿಸಿದರು.

'ಸುಪ್ರೀಂ' ಗೆ ಬಿಷಪ್ ಸ್ಯಾಮ್ಯುಯೆಲ್ ಮೇಲ್ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ಆಡಳಿತಾತ್ಮಕ ನಿರ್ಧಾರ ಅಥವಾ ಚಟುವಟಿಕೆ ಕೈಗೊಳ್ಳದಂತೆ ನಿರ್ಬಂಧ ವಿಧಿಸಿರುವ ತಮ್ಮ ವಿರುದ್ಧದ ಹೈಕೋರ್ಟ್ ಆದೇಶ ಪ್ರಶ್ನಿಸಿ, ಕರ್ನಾಟಕ ಸೆಂಟ್ರಲ್ ಡಯಾಸೆಸ್‌ನ (ಬಿಷಪ್ ಆಡಳಿತ ನಿರ್ವಹಿಸುವ ಪ್ರಾಂತ್ಯ ವ್ಯಾಪ್ತಿ) ಬಿಷಪ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಸಂಬಂಧ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿರುವ ಅರ್ಜಿದಾರರಾದ ಬೆಂಗಳೂರಿನ ಮನೋರಾಯನಪಾಳ್ಯದ ಹಿರಿಯ ನಾಗರಿಕ ಜೆ.ಸಿ.ಸಂಪತ್ ಕುಮಾರ್ ತಮ್ಮ ವಕೀಲ ಕೆ.ಬಿ.ಎಸ್.ಮಣಿಯನ್ ಮುಖಾಂತರ 2023ರ ಏಪ್ರಿಲ್ 27ರಂದು ನೀಡಿದ್ದ ಲಾಯರ್ ನೋಟಿಸ್‌ಗೆ, ಬಿಷಪ್ ಪ್ರಸನ್ನ ಕುಮಾರ್ ಸ್ಯಾಮ್ಯುಯೆಲ್ ತಮ್ಮ ವಕೀಲರಾದ ಬಿ.ಎಂ.ಅರುಣ್ ಮುಖಾಂತರ 2023ರ ಮೇ 4ರಂದು ಲಿಖಿತ ಪ್ರತ್ಯುತ್ತರ ವಾನಿಸಿದ್ದಾರೆ.

'ನನ್ನ ಕಕ್ಷಿದಾರ ಬಿಷಪ್ ಪಿ.ಕೆ.ಸ್ಯಾಮ್ಯುಯೆಲ್ ಉನ್ನತ ಧರ್ಮಾಧಿಕಾರಿ ಸ್ಥಾನದಲ್ಲಿದ್ದು ಈಗಲೂ ಆ ಸ್ಥಾನದಲ್ಲಿಯೇ ಮುಂದುವರೆದಿರುತ್ತಾರೆ. ಆದಾಗ್ಯೂ, ಮೇಲ್ಮನವಿಗೆ ಸಂಬಂಧಿಸಿದಂತೆ 2023ರ ಏಪ್ರಿಲ್ 21ರಂದು ಹೈಕೋರ್ಟ್ ನೀಡಿರುವ ತೀರ್ಪನ್ನು ಪ್ರಶ್ನಿಸಿ ಅವರು, ಸುಪ್ರೀಂ ಕೋರ್ಟ್‌ನಲ್ಲಿ ಎಸ್‌ಎಲ್‌ಪಿ ಮುಖೇನ ಮೇಲ್ಮನವಿ ಸಲ್ಲಿಸಿರುತ್ತಾರೆ. ಈ ಕುರಿತ ನಿವೇದನಾ ಅರ್ಜಿಯು (11598/2023) ಶೀಘ್ರವೇ ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಲಿದೆ' ಎಂದು ಪ್ರತ್ಯುತ್ತರದಲ್ಲಿ ವಿವರಿಸಲಾಗಿದೆ.

'ಸ್ಯಾಮ್ಯುಯೆಲ್ ಅವರು ದಕ್ಷಿಣ ಭಾರತದ ಚರ್ಚ್‌ಗಳ ಸಂವಿಧಾನ ಮತ್ತು ಕರ್ನಾಟಕ ಸೆಂಟ್ರಲ್ ಡಯಾಸೆಸ್‌ನ ನಿಯಮಗಳಿಗೆ ಅನುಗುಣವಾಗಿಯೇ ನಡೆದುಕೊಂಡು ಬರುತ್ತಿದ್ದಾರೆ. ಅಂತೆಯೇ, ಮದ್ರಾಸ್ ಹೈಕೋರ್ಟ್‌ನಲ್ಲಿರುವ ಮತ್ತೊಂದು ಅರ್ಜಿಯ ವಿಚಾರಣೆಯನ್ನು 2023ರ ಜೂನ್ 6ಕ್ಕೆ ನಿಗದಿಪಡಿಸಲಾಗಿದೆ. ಹೀಗಾಗಿ, ತಾವುಗಳು ಕೋರ್ಟ್‌ನ ಮುಂದಿನ ಆದೇಶ ಬರುವತನಕ ನಿರೀಕ್ಷಿಸಬೇಕು' ಎಂದು ದಾವೆದಾರ ಜೆ.ಸಿ.ಸಂಪತ್ ಕುಮಾರ್ ಅವರಿಗೆ ಸೂಚಿಸಲಾಗಿದೆ.

ಏನಿದು ಪ್ರಕರಣ?: ದಕ್ಷಿಣ ಭಾರತದ ಪ್ರಾಟೆಸ್ಟೆಂಟ್ ಚರ್ಚ್‌ಗಳ ಸಂವಿಧಾನದ ಪ್ರಕಾರ ಬಿಷಪ್‌ಗಳ ನಿವೃತ್ತಿ ವಯೋಮಿತಿ 67 ವರ್ಷ. ಆದರೆ, 2022ರ ಡಿಸೆಂಬರ್ 21ರಂದು ಸಿನಾಡ್‌ನಲ್ಲಿ (ಪಾದ್ರಿಗಳ ಪರಿಷತ್) ಮಂಡಿಸಲಾಗಿರುವ ತಿದ್ದುಪಡಿ ಅನುಸಾರ ಈ ವಯೋಮಿತಿಯನ್ನು 67 ರಿಂದ 70 ವರ್ಷಕ್ಕೆ ವಿಸ್ತರಿಸಲು ಉದ್ದೇಶಿಸಲಾಗಿದೆ. 'ಇದು ದುರುದ್ದೇಶಪೂರ್ವ' ಎಂದು ಆಕ್ಷೇಪಿಸಿ ಜೆ.ಸಿ.ಸಂಪತ್‌ಕುಮಾರ್ ಕಾನೂನು ಹೋರಾಟ ನಡೆಸುತ್ತಿದ್ದಾರೆ. ಬಿಷಪ್ ಪ್ರಸನ್ನ ಕುಮಾರ್ ಸ್ಯಾಮ್ಯುಯೆಲ್ 2023ರ ಫೆ. 10ರಂದು ನಿವೃತ್ತಿ ಹೊಂದಿದ್ದಾರೆ.

ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಮತದಾನಕ್ಕೆ ಬರುವ ಅಂಗವಿಕಲ ಮತದಾರರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಮತಗಟ್ಟೆ ಕೇಂದ್ರಗಳಿಗೆ ವಿತರಿಸಲಾಗುವ ಗಾಲಿಕುರ್ಚಿಗಳನ್ನು ಕಲಬುರಗಿಯ ಮಹಾನಗರ ಪಾಲಿಕೆಯ ಗೋದಾಮಿನಲ್ಲಿ ಸಂಗ್ರಹಿಸಿಟ್ಟಿರುವುದು. ಚಿತ್ರ: ತಾಜುದ್ದೀನ್ ಆಜಾದ್

'ಬುದ್ಧನ ಬೆಳಕು' ಕವನ ಸ್ಪರ್ಧೆ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಧಾರವಾಡ: ಗಣಕರಂಗ ಸಂಸ್ಥೆಯು 2566ನೇ ಬುದ್ಧ ಪೂರ್ಣಿಮೆ ಆಚರಣೆ ಅಂಗವಾಗಿ ಆಯೋಜಿಸಿದ್ದ 'ಬುದ್ಧ ಬೆಳಕು' ಕವನ ಸ್ಪರ್ಧೆಯ ಫಲಿತಾಂಶ ಪ್ರಕಟಿಸಲಾಗಿದೆ.

ಪ್ರಥಮ ಬಹುಮಾನ ಶಿವಮೊಗ್ಗ ಜಿಲ್ಲೆಯ ಶಂಕರಘಟ್ಟದ ಡಾ. ನೆಲ್ಲಿಕಟ್ಟೆ ಸಿದ್ದೇಶ್ ಮತ್ತು ದಾವಣಗೆರೆಯ ಸದಾಶಿವ ಸೊರಟೂರ ಅವರಿಗೆ ಲಭಿಸಿದೆ. ದ್ವಿತೀಯ ಬಹುಮಾನ ತುಮಕೂರು ಜಿಲ್ಲೆಯ ಯರವರಹಳ್ಳಿಯ ಶ್ರೀಧರ ಜಿ. ಹಾಗೂ ತೃತೀಯ ಬಹುಮಾನ ಬೆಳಗಾವಿಯ ನಮಿತಾ ನಾಯಕ ಅವರಿಗೆ ಲಭಿಸಿದೆ. ತೀರ್ಪುಗಾರರ ಮೆಚ್ಚುಗೆ ಬಹುಮಾನ ಬೆಳಗಾವಿ ಜಿಲ್ಲೆಯ ನೇಸರಗಿಯ ಗಂಗಾದೇವಿ ಚಕ್ರಸಾಲಿ, ಚಿಕ್ಕಮಗಳೂರಿನ ಆರ್. ಗಿರೀಶ, ಹುಬ್ಬಳ್ಳಿಯ ಸುಭಾಷ ಚವ್ಹಾಣ್, ಬೀದರ್ ಜಿಲ್ಲೆಯ ಮಾಳೆಗಾಂವದ ಆರ್ಜಿತ್ ದಂಡಿನ, ಹೊಸಕೋಟೆಯ ಭಾವಜೀವಿ ಭಾರ್ಗವ ಪಡೆದುಕೊಂಡಿದ್ದಾರೆ.

ವೈ.ಜಿ.ಭಗವತಿ ಮತ್ತು ಡಾ.ಎಚ್.ಕೆ.ಅಭಿಲಾಷಾ ಅವರು ತೀರ್ಪುಗಾರರಾಗಿದ್ದರು ಎಂದು ಸಂಸ್ಥೆಯ ಮುಖ್ಯಸ್ಥ ಸಿದ್ದರಾಮ ಹಿಪ್ಪರಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 7-5-1998

● ಮೈಸೂರು ಅರಮನೆ ಸ್ವಾಧೀನಕ್ಕೆ ವಿಧೇಯಕ

ಬೆಂಗಳೂರು, ಮೇ 6– ಸಾರ್ವಜನಿಕ ಹಿತದೃಷ್ಟಿಯಿಂದ ಮೈಸೂರು ಅರಮನೆ ಹಾಗೂ ಅದರ ಸುತ್ತಮುತ್ತಲಿನ ಖಾಲಿ ಜಾಗವನ್ನು ಸಂರಕ್ಷಿಸಲು ರಾಜ್ಯ ಸರ್ಕಾರ ಇಂದು ವಿಧಾನ ಪರಿಷತ್ತಿನಲ್ಲಿ ವಿಧೇಯಕವನ್ನು ಮಂಡಿಸಿತು.

ಮೈಸೂರು ಅರಮನೆಯನ್ನು ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರಿಗೆ ನೀಡಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಆದರೆ, ಐತಿಹಾಸಿಕ ವಾಸ್ತುಶಿಲ್ಪ ಪರಂಪರೆಯ ಪ್ರತೀಕವಾದ ಅರಮನೆ, ಖಾಲಿ ಜಾಗ, ರಾಜ ಸಿಂಹಾಸನ, ಮುಕುಟಗಳು, ಅಂಬಾರಿ ಮೊದಲಾದವನ್ನು ಸಂರಕ್ಷಿಸುವುದು ವಿಧೇಯಕದ ಉದ್ದೇಶ ಎಂದು ಕಾನೂನು ಸಚಿವ ಎಂ.ಸಿ. ನಾಣಯ್ಯ ವಿವರಿಸಿದರು.

50 ವರ್ಷಗಳ ಹಿಂದೆ — ಸೋಮವಾರ, 7-5-1973

● ಅರಸು ಸಂಪುಟದಲ್ಲಿ ಬದಲಾವಣೆ ಇಲ್ಲ: ವದಂತಿಗಳಿಗೆ ವಿರಾಮ

ಬೆಂಗಳೂರು, ಮೇ 6– 'ದೇವರಾಜ ಅರಸು ಅವರ ಮಂತ್ರಿಮಂಡಲದಲ್ಲಿ ಬದಲಾವಣೆ ಪ್ರಶ್ನೆಯೇ ಇಲ್ಲ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಚಂದ್ರಜಿತ್ ಯಾದವ್ ಅವರು ಸ್ಪಷ್ಟಪಡಿಸಿ, ಕಳೆದ ಕೆಲವು ದಿನಗಳಿಂದ ಏಳುತ್ತಿರುವ ಊಹಾಪೋಹಗಳಿಗೆ ವಿರಾಮ ಹಾಕಿದರು.

'ಯಾವ ಬದಲಾವಣೆಯೂ ಇಲ್ಲ. ಮೈಸೂರು ಮಂತ್ರಿಮಂಡಲ ಈಗಿನಂತೆಯೇ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಿಕೊಂಡು ಬರುವುದು' ಎಂದು ಅವರು ನಗರದಲ್ಲಿ ಭಾಗವಹಿಸಿದ ಸಮಾರಂಭವೊಂದರಲ್ಲಿ ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಮೇ 7, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣ ದ್ವಿತೀಯಾ ಗಂ. 20-16 ನಕ್ಷತ್ರ: ಅನುರಾಧಾ ಗಂ. 20.21 ಯೋಗ: ಪರಿಘ ಗಂ. 26-52 ಕರಣ: ತೈತಿಲ ಗಂ. 09-07, ಮೇಷ ಮಾಸದ 23 ನೇ ದಿನ, ಮಳೆನಕ್ಷತ್ರ: ಭರಣಿ 3.
ರಾಹುಕಾಲ : ಸಾಯಂಕಲ 04-30 – 06-00
ಸೂರ್ಯೋದಯ : 06-11 ಸೂರ್ಯಾಸ್ತ : 06-44
ಮುಸ್ಲಿಂ ದಿನಾಂಕ : 16 ಶವ್ವಾಲ್
ಅದೃಷ್ಟ ಸಂಖ್ಯೆ : 3, 5

ಮೇಷ: ಹಲವು ಕೆಲಸಗಳನ್ನು ಒಂದೇ ಬಾರಿಗೆ ನಿರ್ವಹಿಸಬೇಕಾದ ಸಂದರ್ಭ ಎದುರಾಗುವುದು. ಸಂದರ್ಭವನ್ನು ನೋಡಿಕೊಂಡು ನಿಮ್ಮ ಬೇಡಿಕೆಯನ್ನು ಅಧಿಕಾರಿಗಳ ಮುಂದಿಡುವುದರಿಂದ ಈಡೇರುತ್ತದೆ.

ವೃಷಭ: ಮುಂದಾಲೋಚನೆ ಇಲ್ಲದೆ ಶುರುಮಾಡಿದ ಕಾರ್ಯ ಅನಿರೀಕ್ಷಿತ ಉತ್ತಮ ಫಲವನ್ನು ಕೊಡುವುದರಿಂದ ಸಂತೋಷ. ಕೊನೆ ಸಮಯದಲ್ಲಿ ಅಪಾಯದಿಂದ ಪಾರಾಗುವುದರಿಂದ ಬಹು ದೊಡ್ಡ ನಿರಾಳತೆ.

ಮಿಥುನ: ಸಣ್ಣ ವಿಚಾರಗಳನ್ನು ದೊಡ್ಡದಾಗಿ ಮಾಡುವ ನಿಮ್ಮ ಮನಸ್ಥಿತಿ ಬದಲಾಯಿಸಿಕೊಳ್ಳಿ. ತಾಳ್ಮೆಯಿಂದ ವರ್ತಿಸಿದಲ್ಲಿ ಉತ್ತಮ ಫಲಿತಾಂಶ ಪಡೆಯುವಿರಿ. ಅನುಭವದ ಕೊರತೆಯಿಂದ ಕೆಲಸಗಳಲ್ಲಿ ವಿಳಂಬವಾಗಬಹುದು.

ಕರ್ಕಾಟಕ: ದನ ಕರುಗಳ ಅಥವಾ ಮನೆಯಲ್ಲಿ ಸಾಕಿರುವ ಪ್ರಾಣಿಗಳ ಆರೋಗ್ಯ ತಪಾಸಣೆ ಮಾಡಿಸುವಿರಿ. ನೂತನ ದಂಪತಿಗಳು ಸಂತಾನದ ಶುಭ ಸುದ್ದಿಯನ್ನು ಕೇಳುವಿರಿ. ನಿಮ್ಮ ಒಳ್ಳೆಯ ಕನಸುಗಳಿಗೆ ಜೀವ ಬಂದಂತೆ ಭಾಸವಾಗುತ್ತದೆ.

ಸಿಂಹ: ನಡೆಯಲಿರುವ ಮದುವೆಯ ಪ್ರಯುಕ್ತ ವಿಲಾಸಿ ಸಾಮಗ್ರಿ ಖರೀದಿಸುವಿರಿ. ಮನರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಸಂತೋಷ ಇಮ್ಮಡಿಗೊಳ್ಳಲಿದೆ. ಮನೆಯವರ ಆರೋಗ್ಯದ ಬಗೆಗೆ ಕಾಳಜಿ ವಹಿಸುವಿರಿ.

ಕನ್ಯಾ: ದಾಯಾದಿಗಳು ನಿಮ್ಮ ಅಭಿವೃದ್ಧಿಗೆ ಅಡ್ಡಗಾಲು ಹಾಕಬಹುದು. ಮನೆಯ ಹಿರಿಯರ ಆಶೀರ್ವಾದದ ಮೇರೆಗೆ ವೈದ್ಯ ವೃತ್ತಿಯನ್ನು ಆರಂಭಿಸುವ ಸಲುವಾಗಿ ಸ್ನೇಹಿತರೊಂದಿಗೆ ಸ್ಥಳದ ಅನ್ವೇಷಣೆ ಮಾಡುವಿರಿ.

ತುಲಾ: ವಿದೇಶ ಪ್ರಯಾಣ ಕೈಗೊಳ್ಳುವ ಕಾರ್ಯಕ್ರಮವಿರುವುದರಿಂದ ಎಲ್ಲಾ ತಯಾರಿ ಮಾಡಿಕೊಳ್ಳುವಿರಿ. ಪಾಲುದಾರಿಕೆ ಮುಂದುವರೆಸುವ ಯೋಚನೆ ಮಾಡಬಹುದು. ಮನೆ ಕಟ್ಟುವ ಆಸೆಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತದೆ.

ವೃಶ್ಚಿಕ: ನಿಮ್ಮೆಲ್ಲಾ ಪ್ರಮುಖ ಗುರಿ ಸಾಧನೆಗಳಿಗೆ ಕುಟುಂಬದವರಿಮದ ಬೆಂಬಲ ಸಿಗುವುದು. ಅಸಹಾಯಕ ಪರಿಸ್ಥಿತಿಯನ್ನು ತಂದುಕೊಳ್ಳಬೇಡಿ. ಸದ್ಗುರು ದತ್ತಾತ್ರೇಯರ ಆರಾಧನೆಯಿಂದ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಧನು: ನಿಮ್ಮಲ್ಲಿದ್ದ ಅಭದ್ರತೆ ಭಾವ ಈ ದಿನದಲ್ಲಿಯೇ ಬಿಟ್ಟು ಹೋಗಲಿದೆ. ಕೃಷಿಕರು ಕೈ ಬಿಟ್ಟಿರುವ ಯೋಜನೆಗಳನ್ನು ಮತ್ತೆ ಮುಂದುವರೆಸುವ ಅವಕಾಶ ಬರಲಿದೆ ಹಾಗೂ ಪೂರಕವಾದ ವಾತಾವರಣ ನಿರ್ಮಾಣವಾಗುವುದು.

ಮಕರ: ನೀವು ಮಾಡುವ ತಪ್ಪಿನಿಂದಾಗಿ ಜೀವನ ಪರ್ಯಂತ ನೆನಪಿಟ್ಟುಕೊಳ್ಳುವ ಪಾಠ ಕಲಿಯುವಂತಾಗಲಿದೆ. ಋಣಾತ್ಮಕವಾಗಿ ಚಿಂತಿಸದಿರಿ. ಕಣ್ಣು, ಕಿವಿಗೆ ಸಂಬಂಧಿಸಿದಂತೆ ಅನಾರೋಗ್ಯ ಉಂಟಾದಲ್ಲಿ ವೈದ್ಯರನ್ನು ಬೇಟಿ ಮಾಡಿ.

ಕುಂಭ: ಕಟ್ಟಡ ನಿರ್ಮಾಣದವರು ಹೊರ ಊರಿನಲ್ಲಿನ ಗುತ್ತಿಗೆ ಪಡೆಯುವಲ್ಲಿ ಯಶಸ್ವಿಯಾಗುವಿರಿ. ನಿಮ್ಮ ಪ್ರೀತಿ ಪಾತ್ರರೊಂದಿಗೆ ದೂರದ ಪ್ರಯಾಣದ ಯೋಗವಿದೆ. ಸಂಗೀತ ಮತ್ತು ಕಲೆಯಲ್ಲಿ ಅಭಿರುಚಿ ಹೆಚ್ಚಲಿದೆ.

ಮೀನ: ಕ್ರಯ ವಿಕ್ರಯಗಳಿಗೆ ಇದು ಸಕಾಲ. ಮಕ್ಕಳ ಅಸಡ್ಡೆ ವಿದ್ಯಾಪ್ರಗತಿಗೆ ಮಾರಕವಾಗಲಿದೆ. ಮತ್ತೊಬ್ಬರನ್ನು ಗೌರವಿಸುವುದರಿಂದ ನಿಮ್ಮ ಗೌರವ ಹೆಚ್ಚುವುದು. ನಿವೃತ್ತಿ ನಂತರದ ಜೀವನದ ಬಗ್ಗೆ ಯೋಚನೆಗಳು ಬರಲಿದೆ.

ಪದಬಂಧ 5311 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ವಠಾರದಲ್ಲಿರುವವನ ಹೊಟ್ಟೆ ಇಲ್ಲಿ ಕಾಣುತ್ತಿದೆ (3)
6. ಉತ್ತರ ಕೊಡುತ್ತಾ ದಾರಿಯಲ್ಲಿ ವಹಿಸಿಕೊಂಡ ಹೊಣೆಗಾರಿಕೆ (5)
7. ನಗರದಲ್ಲಿ ಕೇಳಿಸಿದ ಚರ್ಮವಾದ್ಯ (3)
10. ಕೆಲಸ ಮಾಡಲು ಬೇಕಾದ ಸಾಧನ (5)
14. ಇದು ಪಾಪಿಗಳ ಲೋಕ (3)
16. ಈತ ದಾರಿ ತೋರುವವನು (5)
17. ವನದ ಬಗ್ಗೆ ಬರೆದ ಪದ್ಯ (3)

ಮೇಲಿಂದ ಕೆಳಕ್ಕೆ
1. ಈತ ಗೆಲುವನ್ನು ಪಡೆದವನು (4)
2. ದ್ರವ ಒಸರುವ ಜಿಹ್ವೆ (3)
3. ಹಳೆ ಸಾಮಾನುಗಳನ್ನು ಮಾರುವ ಸ್ಥಳ (3)
4. ಸಮುದ್ರವನ್ನು ಹೀಗನ್ನಿ (3)
5. ಹಣವಿರುವ ದೊಡ್ಡ ತಟ್ಟೆ (4)
8. ಗಾಳಿಯಲ್ಲಿ ಹಾರಿಸುವ ಕಾಗದದ ಪಟ (4)
9. ಈತ ಸೈನ್ಯದ ಮುಖ್ಯಸ್ಥ (4)
11. ಸಂದೇಹ ಈ ರೀತಿ ಬಂದಿದೆ (4)
12. ದಡ್ಡ ಇಲ್ಲಿದ್ದಾನೆ (4)
13. ಜರಡಿಯನ್ನು ಹೀಗೂ ಹೇಳುವರು (3)
14. ಇದು ಅಸಲಿಯಂತೂ ಅಲ್ಲ! (3)
15. ತಿರುಗಿಸಿದರೂ ಇದು ಚಿನ್ನ (3)



5310ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮುತ್ತು 2.ಕಾಯಕ 4.ಕಡಿವಾಣ 6.ರುದ್ರಭೂಮಿ 8.ರಾವುತ 9.ಅಜ್ಞಾನಿ 11.ಸಮಂಜಸ 13.ಮಧುಕರ 15.ಹಲಗೆ 16.ಗಣಿ

ಮೇಲಿಂದ ಕೆಳಕ್ಕೆ: 1.ಮುದುಕ 2.ಕಾರಣ 3.ಕರಾರು 5.ಡಿಕಾವು 7.ಮಿಸುನಿ 8.ರಾಯಸ 10.ಜ್ಞಾಪಕ 12.ಸನಿಹ 13.ಮಲ್ಲಿಗೆ 14.ರಮಣಿ

ಸುಡೊಕು 5697

7		4		5				3
			1		9	6		5
6		5		3			1	
2					4	1		9
	7	1		8				
4			9		2	3		7
	4		3		7		2	1
						7		
1	3			2			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5696 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರೈಲುಗಳ ಸಂಚಾರ ರದ್ದು • ವ್ಯಾಪಾರ–ವಹಿವಾಟು ಆರಂಭ • ರಸ್ತೆಗಿಳಿದ ವಾಹನಗಳು

ಮಣಿಪುರ ಹಿಂಸಾಚಾರ: 54 ಮಂದಿ ಸಾವು

ಇಂಫಾಲ್ (ಮಣಿಪುರ) (ಪ್ರಜಾವಾಣಿ ವಾರ್ತೆ/ಪಿಟಿಐ): ರಾಜ್ಯದಲ್ಲಿ ಕಳೆದ ಕೆಲ ದಿನಗಳ ಕಾಲ ನಡೆದ ಹಿಂಸಾಚಾರದಲ್ಲಿ ಮೃತಪಟ್ಟವರ ಸಂಖ್ಯೆ 54ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಆದರೆ, ಮೃತಪಟ್ಟವರ ಸಂಖ್ಯೆಯ ಬಗ್ಗೆ ಗೊಂದಲ ಇದೆ ಎಂದು ಸ್ಥಳೀಯರು ಹೇಳುತ್ತಾರೆ. 'ಸಾವಿನ ಸಂಖ್ಯೆ ಇನ್ನೂ ಹೆಚ್ಚೇ ಇದೆ. ಪೊಲೀಸರು ನಿಖರ ಮಾಹಿತಿ ನೀಡುತ್ತಿಲ್ಲ' ಎಂದು ಮೂಲಗಳು ಹೇಳುತ್ತವೆ.

'ರಾಜ್ಯದಲ್ಲಿ ಕಳೆದ ಮೂರು ದಿನಗಳಿಂದ ಕಂಡುಬಂದ ಹಿಂಸಾಚಾರದಲ್ಲಿ 18ರಿಂದ 20 ಜನರು ಮೃತಪಟ್ಟಿದ್ದಾರೆ. 100ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ' ಎಂದು ಮಣಿಪುರ ಸರ್ಕಾರಕ್ಕೆ ಭದ್ರತೆ ಕುರಿತು ಸಲಹೆ ನೀಡಲು ಕೇಂದ್ರ ನೇಮಕ ಮಾಡಿರುವ ಅಧಿಕಾರಿ ಕುಲದೀಪ್ ಸಿಂಗ್ ಹೇಳುತ್ತಾರೆ.

ಗಲಭೆಯಲ್ಲಿ ಮೃತಪಟ್ಟವರ ಹಾಗೂ ಗಾಯಗೊಂಡವರ ಕುರಿತು ಈ ವರೆಗೆ ಅಧಿಕಾರಿಗಳು ಯಾವುದೇ ಪ್ರಕಟಣೆ ಬಿಡುಗಡೆ ಮಾಡಿಲ್ಲ.

'54 ಜನರು ಮೃತಪಟ್ಟಿದ್ದು, ಈ ಪೈಕಿ 16 ಮೃತದೇಹಗಳನ್ನು ಚುರ್ಚಾಂದ್‌ಪುರ ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಇಡಲಾಗಿದೆ. 15 ಮೃತದೇಹಗಳನ್ನು ಇಂಫಾಲ್ ಪೂರ್ವ ಜಿಲ್ಲೆಯಲ್ಲಿರುವ ಜವಾಹರಲಾಲ್ ನೆಹರೂ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಇಡಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಇಂಫಾಲ್ ಪಶ್ಚಿಮ ಜಿಲ್ಲೆಯ ಲಾಂಫೆಲ್‌ನಲ್ಲಿರುವ ಪ್ರಾದೇಶಿಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 23 ಮೃತದೇಹಗಳನ್ನು ಇಡಲಾಗಿದೆ' ಎಂದೂ ತಿಳಿಸಿದ್ದಾರೆ.

ಸಹಜ ಸ್ಥಿತಿಗೆ: ಹಿಂಸಾಚಾರದಿಂದಾಗಿ ನಲುಗಿದ್ದ ರಾಜ್ಯದಲ್ಲಿ ಜನಜೀವನ ಶನಿವಾರ ಸಹಜಸ್ಥಿತಿಗೆ ಮರಳಿದೆ. ಅಂಗಡಿಗಳು ಹಾಗೂ ಮಾರುಕಟ್ಟೆಗಳು ತೆರೆದಿದ್ದು, ವ್ಯಾಪಾರ–ವಹಿವಾಟು ಆರಂಭಗೊಂಡಿದೆ. ವಾಹನಗಳು ರಸ್ತೆಗಿಳಿದಿವೆ.

ನಗರ ಹಾಗೂ ಇತರೆಡೆಯ ರಸ್ತೆಗಳಲ್ಲಿ ಸೇನೆ, ಅರೆಸೇನಾ ಪಡೆಗಳು, ಕ್ಷಿಪ್ರ ಕಾರ್ಯ ಪಡೆಗಳ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಭಾರಿ ಬಂದೋಬಸ್ತ್ ನಡುವೆಯೇ ಮಾರುಕಟ್ಟೆಗಳತ್ತ ಮುಖ ಮಾಡಿದ್ದ ಜನರು, ಅಗತ್ಯ ವಸ್ತುಗಳು ಹಾಗೂ ತರಕಾರಿಗಳನ್ನು ಖರೀದಿಸುವ ಧಾವಂತದಲ್ಲಿದ್ದದ್ದು ಕಂಡುಬಂತು.

ರಕ್ಷಣೆ: 'ಈ ವರೆಗೆ 13 ಸಾವಿರ ಜನರನ್ನು ರಕ್ಷಣೆ ಮಾಡಲಾಗಿದೆ. ಈ ಪೈಕಿ ಕೆಲವರನ್ನು ಸುರಕ್ಷಿತ ಸ್ಥಳಗಳಿಗೆ ಹಾಗೂ ಸೇನಾ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ' ಎಂದು ರಕ್ಷಣಾ ವಕ್ತಾರರೊಬ್ಬರು ತಿಳಿಸಿದ್ದಾರೆ.

'ಕಳೆದ 12 ಗಂಟೆಗಳಲ್ಲಿ ಇಂಫಾಲ್ ಪೂರ್ವ ಹಾಗೂ ಪಶ್ಚಿಮ ಜಿಲ್ಲೆಗಳ ಕೆಲವೆಡೆ ಬೆಂಕಿ ಹಚ್ಚುವ ಪ್ರಯತ್ನಗಳು ನಡೆದಿವೆ. ಕೆಲವರು ರಸ್ತೆಗಳನ್ನು ಬಂದ್ ಮಾಡಲು ಪ್ರಯತ್ನಿಸಿದ್ದಾರೆ. ಭದ್ರತಾ ಪಡೆಗಳ ಕ್ಷಿಪ್ರ ಕಾರ್ಯಾಚರಣೆಯಿಂದಾಗಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಚುರ್ಚಾಂದ್‌ಪುರ, ಕಾಂಗ್‌ಪೋಕ್ಪಿ, ಮೋರೆ ಹಾಗೂ ಕಾಕ್‌ಚಿಂಗ್‌ನ ಕೆಲ ಪ್ರದೇಶಗಳಲ್ಲಿ ವಿವಿಧ ಸಮುದಾಯಗಳ ನಡುವೆ ಭುಗಿಲೆದ್ದ ಹಿಂಸಾಚಾರದಿಂದಾಗಿ ನಾಗರಿಕರು ಸಂಕಷ್ಟಕ್ಕೆ ಸಿಲುಕಿದ್ದರು. ಆದರೆ, ಭದ್ರತಾ ಪಡೆಗಳು ತ್ವರಿತವಾಗಿ ಕಾರ್ಯಾಚರಣೆ ಕೈಗೊಂಡ ಪರಿಣಾಮ ಈ ಪ್ರದೇಶಗಳಲ್ಲಿ ಪರಿಸ್ಥಿತಿ ಸಂಪೂರ್ಣ ನಿಯಂತ್ರಣಕ್ಕೆ ಬಂದಿದೆ. ಶುಕ್ರವಾರ ರಾತ್ರಿಯಿಂದ ಈ ಪ್ರದೇಶಗಳಲ್ಲಿ ಹಿಂಸಾಚಾರ ನಡೆದ ವರದಿಗಳು ಬಂದಿಲ್ಲ' ಎಂದು ರಕ್ಷಣಾ ಇಲಾಖೆಯ ವಕ್ತಾರ ತಿಳಿಸಿದ್ದಾರೆ.

ಸರ್ವಪಕ್ಷ ಸಭೆ: ರಾಜ್ಯದಲ್ಲಿ ಶಾಂತಿ ಸ್ಥಾಪನೆಗಾಗಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 'ಶಾಂತಿ ಸಮಿತಿ'ಗಳನ್ನು ರಚಿಸಲಾಗುವುದು ಎಂದು ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಘೋಷಿಸಿದ್ದಾರೆ. ಸರ್ವಪಕ್ಷಗಳ ಸಭೆಯ ನಂತರ ಅವರು ಈ ವಿಷಯ ತಿಳಿಸಿದರು.

ಮಣಿಪುರದಲ್ಲಿ ಹಿಂಸಾಚಾರ ಪೀಡಿತ ಪ್ರದೇಶಗಳ ಜನರಿಗೆ ಅಸ್ಸಾಂನ ಕಚಾರ್ ಜಿಲ್ಲೆಯಲ್ಲಿ ಸ್ಥಾಪಿಸಿರುವ ಪರಿಹಾರ ಕೇಂದ್ರದಲ್ಲಿ ಶನಿವಾರ ಆಶ್ರಯ ನೀಡಲಾಗಿದೆ –ಪಿಟಿಐ ಚಿತ್ರ

> **ಮಣಿಪುರದಲ್ಲಿರುವ ಅಸ್ಸಾಂನ ವಿದ್ಯಾರ್ಥಿಗಳನ್ನು ಶೀಘ್ರವೇ ಕರೆತರಲಾಗುವುದು. ಅವರ ಸುರಕ್ಷತೆಗೆ ಸಾಧ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು**
> **ಹಿಮಂತ ಬಿಸ್ವ ಶರ್ಮಾ**, ಅಸ್ಸಾಂ ಮುಖ್ಯಮಂತ್ರಿ

> **ಮಣಿಪುರದಲ್ಲಿರುವ ಬಿಹಾರ ಜನರಿಗೆ ಭದ್ರತೆ ಒದಗಿಸಬೇಕು. ತವರಿಗೆ ಮರಳಲು ಇಚ್ಛಿಸುವವರು ಸುರಕ್ಷಿತವಾಗಿ ತಮ್ಮ ಊರುಗಳನ್ನು ತಲುಪಲು ಕ್ರಮ ಕೈಗೊಳ್ಳಬೇಕು**
> **ನಿತೀಶ್ ಕುಮಾರ್**, ಬಿಹಾರ ಮುಖ್ಯಮಂತ್ರಿ

> **ಮೈತೇಯಿ ಹಾಗೂ ಕುಕಿ ಸಮುದಾಯಗಳ ನಡುವೆ ಹಿಂಸಾಚಾರ ನಡೆದಿರುವುದು ದುರದೃಷ್ಟಕರ. ಎರಡೂ ಸಮುದಾಯಗಳು ಮಣಿಪುರ ರಾಜ್ಯಕ್ಕೆ ಸೇರಿದವುಗಳಾಗಿದ್ದು ಒಟ್ಟಿಗೆ ಬಾಳಬೇಕು**
> **ಕಿರಣ್ ರಿಜಿಜು**, ಕೇಂದ್ರ ಕಾನೂನು ಸಚಿವ

'ಐವರು ಬಂಡುಕೋರರ ಹತ್ಯೆ'

ಚುರ್ಚಾಂದ್‌ಪುರ ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ಮೀಸಲು ಪಡೆ ಯೋಧರು ಹಾಗೂ ಗುಡ್ಡಗಾಡು ಪ್ರದೇಶದ ಬಂಡುಕೋರರ ನಡುವೆ ಎರಡು ಪ್ರತ್ಯೇಕ ಮುಖಾಮುಖಿಗಳು ನಡೆದಿದ್ದು, ಐವರು ಬಂಡುಕೋರರನ್ನು ಹೊಡೆದುರುಳಿಸಲಾಗಿದೆ. ಇಬ್ಬರು ಯೋಧರಿಗೆ ಗಾಯಗಳಾಗಿವೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯ ಪೊಲೀಸ್ ಠಾಣೆ ಬಳಿ ನಡೆದ ಎನ್‌ಕೌಂಟರ್‌ನಲ್ಲಿ ನಾಲ್ವರು ಬಂಡುಕೋರರನ್ನು ಯೋಧರು ಹತ್ಯೆ ಮಾಡಿದ್ದಾರೆ.

ತೋರ್ಬಂಗ್ ಎಂಬಲ್ಲಿ ಭದ್ರತಾ ಪಡೆಗಳನ್ನು ಗುರಿಯಾಗಿಸಿ ಗುಂಡಿನ ದಾಳಿ ನಡೆಸಿದರು. ಇದಕ್ಕೆ ಪ್ರತಿಯಾಗಿ ಭದ್ರತಾ ಪಡೆಗಳು ದಾಳಿ ನಡೆಸಿ ಒಬ್ಬ ಬಂಡುಕೋರನನ್ನು ಹತ್ಯೆ ಮಾಡಿವೆ. ಈ ಘಟನೆಯಲ್ಲಿ ಇಬ್ಬರು ಯೋಧರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಸ್ಸಾಂಗೆ ವಲಸೆ

ಸಿಲ್ಚಾರ್ (ಅಸ್ಸಾಂ) (ಪಿಟಿಐ): ಮಣಿಪುರದ ಜಿರಿಬಾಮ್ ಜಿಲ್ಲೆ ಹಾಗೂ ಸುತ್ತಲಿನ ಪ್ರದೇಶಗಳ 1,100ಕ್ಕೂ ಹೆಚ್ಚು ಜನರು ರಾಜ್ಯದ ಗಡಿಯನ್ನು ದಾಟಿ ಅಸ್ಸಾಂ ಕಚಾರ್ ಜಿಲ್ಲೆಯನ್ನು ಪ್ರವೇಶಿಸಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಅಸ್ಸಾಂ ಪ್ರವೇಶಿಸಿರುವವರ ಪೈಕಿ ಬಹುತೇಕ ಜನರು ಕುಕಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

ನೀಟ್ ಮುಂದಕ್ಕೆ

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ಮಣಿಪುರದಲ್ಲಿ ಇದೇ 7ಕ್ಕೆ ನಿಗದಿಯಾಗಿದ್ದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯನ್ನು (ನೀಟ್–ಪಿಜಿ) ಮುಂದೂಡಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಶನಿವಾರ ತಿಳಿಸಿದೆ.

'ರಾಜ್ಯದಲ್ಲಿನ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ಅವಲೋಕಿಸಿ, ಈ ನಿರ್ಧಾರ ಕೈಗೊಳ್ಳಲಾಗಿದೆ. ಪರೀಕ್ಷೆ ನಡೆಯುವ ದಿನಾಂಕವನ್ನು ನಂತರ ತಿಳಿಸಲಾಗುವುದು' ಎಂದು ಎನ್‌ಟಿಎ ತಿಳಿಸಿದೆ.

'ನೀಟ್' ಮುಂದೂಡುವಂತೆ ಕೇಂದ್ರ ಶಿಕ್ಷಣ ಖಾತೆ ರಾಜ್ಯ ಸಚಿವ ರಾಜಕುಮಾರ್ ರಂಜನ್ ಸಿಂಗ್ ಅವರು ಎನ್‌ಟಿಎಗೆ ಪತ್ರ ಬರೆದಿದ್ದರು.

ಬಹು ಮಾಧ್ಯಮ ಪ್ರಜಾವಾಣಿ 75
www.prajavani.net
ಇಂದು
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ಪ್ರಸಾರ
ಸೆಲೆಬ್ರಿಟಿ PREMIERE
ಶೇಷೇಗೌಡ
ಹಾಕಿ ಆಟಗಾರ
ಬೆಳಿಗ್ಗೆ 10 ಕ್ಕೆ
ಸಾಧನೆಗೆ ಅಡ್ಡಿಯಾಗದ ಬಡತನ
Prajavani.net Prajavani Prajavani
ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ವೈದ್ಯಕೀಯ ಕಾಲೇಜುಗಳ ಪ್ರವೇಶಕ್ಕೆ 'ನೀಟ್' ಇಂದು

ಒಂದನೇ ಪುಟದಿಂದ

ರಸಾಯನಶಾಸ್ತ್ರ, ಜೀವಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ವಿಷಯಗಳಿದ್ದು, ಪ್ರತಿ ವಿಷಯವೂ ತಲಾ 45 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಒಟ್ಟು 180 ಪ್ರಶ್ನೆಗಳಿಗೆ ತಲಾ 4 ಅಂಕಗಳಂತೆ 720 ಅಂಕಗಳಿಗೆ ಪರೀಕ್ಷೆ ನಡೆಸಲಾಗುತ್ತದೆ. ಮಧ್ಯಾಹ್ನ 2ಕ್ಕೆ ಪರೀಕ್ಷೆ ಆರಂಭವಾದರೆ, 1.30ರ ಒಳಗೆ ಪರೀಕ್ಷಾ ಕೇಂದ್ರಗಳ ಒಳಗೆ ಇರಬೇಕು. ಅಲ್ಲದೇ, ಪ್ರತಿ ವಿದ್ಯಾರ್ಥಿಗೂ ವೈಯಕ್ತಿಕವಾಗಿ ನೀಡಿರುವ ಸಮಯದ ಒಳಗೆ ಹಾಜರಿದ್ದು, ತಪಾಸಣಾ ಕಾರ್ಯಗಳಿಗೆ ಸಹಕರಿಸಬೇಕಿದೆ. ಎಲ್ಲ ಕೇಂದ್ರಗಳ ಸುತ್ತಲೂ ಬಿಗಿ ಭದ್ರತೆ ಕಲ್ಪಿಸಲಾಗಿದ್ದು, ಅಗತ್ಯ ಇರುವಷ್ಟು ಪೊಲೀಸರನ್ನು ನಿಯೋಜಿಸಲಾಗಿದೆ. ಪ್ರತಿ ಕೇಂದ್ರದಲ್ಲೂ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ.

ದೂರವಾಗದ ಆತಂಕ

ಪ್ರಧಾನಿ ನರೇಂದ್ರ ಮೋದಿ 'ರೋಡ್ ಶೋ' ವೇಳಾಪಟ್ಟಿಯಲ್ಲಿ ಬದಲಾವಣೆಗಳ ಹೊರತಾಗಿಯೂ, ಭಾನುವಾರ ನಡೆಯುವ ನೀಟ್ ಪರೀಕ್ಷಾ ಆಕಾಂಕ್ಷಿಗಳ ಆತಂಕ ಇನ್ನೂ ದೂರವಾಗಿಲ್ಲ.

ಮೇ 7ರಂದು ಬೆಂಗಳೂರು ಕೇಂದ್ರ ಪ್ರದೇಶದಲ್ಲಿ ರೋಡ್‌ಶೋ ನಡೆಯಲಿದ್ದು,ಆ ಪ್ರದೇಶಗಳಲ್ಲಿ ನೀಟ್ ಪರೀಕ್ಷಾ ಕೇಂದ್ರಗಳನ್ನು ಹೊಂದಿರುವ ವಿದ್ಯಾರ್ಥಿಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗಬಹುದು. ಇದೇ 6ರಂದು ನಡೆದ ಪ್ರಧಾನಿ 'ರೋಡ್ ಶೋ' ಒಂದು ತಾಸು ತಡವಾಗಿ ಆರಂಭವಾಗಿತ್ತು. ಭಾನುವಾರವೂ ಇದೇ ಪುನರಾವರ್ತನೆಯಾದರೆ ನಿಗದಿತ ಸಮಯಕ್ಕೆ ಪರೀಕ್ಷಾ ಕೇಂದ್ರಗಳನ್ನು ತಲುಪಲು ಕಷ್ಟವಾಗಬಹುದು ಎಂದು ವಿದ್ಯಾರ್ಥಿಗಳು, ಪೋಷಕರು ಆತಂಕ ವ್ಯಕ್ತಪಡಿಸಿದ್ದಾರೆ.

ತಂದೆಯ ಮೃತದೇಹ ಕಂಡು ಕಣ್ಣೀರಿಟ್ಟ ಪುತ್ರಿ: ಯೋಧನಿಗೆ ಭಾವುಕ ವಿದಾಯ

'ಅಪ್ಪ... ದಯವಿಟ್ಟು ಮರಳಿ ಬಾ'

ದಲ್‌ಪತ್ (ಜಮ್ಮು ಮತ್ತು ಕಾಶ್ಮೀರ), (ಪಿಟಿಐ): 'ಅಪ್ಪ, ನೀನೇಕೆ ಮೇಲೇಳುತ್ತಿಲ್ಲ. ನನಗೆ ಬೇರೇನೂ ಬೇಡ ಅಪ್ಪಾ. ದಯವಿಟ್ಟು ಮರಳಿ ಬಾ...'

ತ್ರಿವರ್ಣ ಧ್ವಜ ಹೊದ್ದಿದ್ದ ಶವಪೆಟ್ಟಿಗೆಯಲ್ಲಿ ನಿಸ್ತೇಜವಾಗಿ ಮಲಗಿದ್ದ ತನ್ನ ಅಕ್ಕರೆಯ ಅಪ್ಪನ ಮೊಗವನ್ನು ಕಂಡು 10 ವರ್ಷದ ಪಾವನಾ ಚಿಬ್ ಹೀಗೆ ರೋದಿಸುತ್ತಿದ್ದಾಗ ನೆರೆದಿದ್ದವರ ಕಣ್ಣುಗಳು ತುಂಬಿಬಂದವು. ಮನಸ್ಸು ಭಾರವಾದವು.

ಪಾವನಾ, ಹುತಾತ್ಮ ಯೋಧ ನೀಲಂ ಸಿಂಗ್ ಅವರ ಮಗಳು. ರಜೌರಿ ಜಿಲ್ಲೆಯ ಕಾಂಡಿ ಅರಣ್ಯ ಪ್ರದೇಶದಲ್ಲಿ ಶುಕ್ರವಾರ ಉಗ್ರರು ನಡೆಸಿದ ಸ್ಫೋಟದಲ್ಲಿ ಮೃತಪಟ್ಟಿದ್ದ ಐವರು ಕಮಾಂಡೊಗಳಲ್ಲಿ ನೀಲಂ ಕೂಡ ಒಬ್ಬರು. ಅವರ ಮೃತದೇಹವನ್ನು ಶನಿವಾರ ಹುಟ್ಟೂರು ದಲ್‌ಪತ್‌ನ ಕೃಪಾಲ್‌ಪುರ ಗ್ರಾಮಕ್ಕೆ ತರಲಾಗಿತ್ತು. ಈ ವೇಳೆ ಕುಟುಂಬದವರು ಹಾಗೂ ಗ್ರಾಮಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

ಪತ್ನಿ ವಂದನಾ, ಕಳೆಗುಂದಿದ್ದ ಪತಿಯ ಮೊಗವನ್ನು ಕೈಗಳಿಂದ ನೇವರಿಸುತ್ತಾ ಕುಸಿದು ಬಿದ್ದರು. ಏಳು ವರ್ಷದ ಮಗ ಅಂಕಿತ್ ಬಿಕ್ಕಿ ಬಿಕ್ಕಿ ಅಳುತ್ತಿದ್ದ. ತಮ್ಮೂರಿನ ವೀರ ಪುತ್ರನನ್ನು ಕೊನೆಯ ಬಾರಿಗೆ ಕಣ್ತುಂಬಿಕೊಳ್ಳಲು ಬಂದಿದ್ದವರೂ ಆತನೊಂದಿಗಿನ ಒಡನಾಟ ನೆನೆದು ಗದ್ಗದಿತರಾದರು.

ಜಮ್ಮುವಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಉತ್ತರ ಸೇನಾ ಕಮಾಂಡರ್ ಆಗಿರುವ ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ ಹಾಗೂ ಸೇನೆ ಮತ್ತು ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳು ಅಂತಿಮ ನಮನ ಸಲ್ಲಿಸಿದರು. ಬಳಿಕ ಮೃತದೇಹಗಳನ್ನು ಅವರ ತವರೂರಿಗೆ ಕಳುಹಿಸಲಾಯಿತು.

ಮೃತದೇಹವು ಕೃಪಾಲ್‌ಪುರ ಗ್ರಾಮ ತಲುಪುತ್ತಿದ್ದಂತೆ ಊರಿನವರು ಹಾಗೂ ಸಂಬಂಧಿಕರು 'ನೀಲಂ ಸಿಂಗ್ ಅಮರವಾಗಲಿ' ಎಂಬ ಘೋಷಣೆಯನ್ನು ಮೊಳಗಿಸಿದರು. ನೀಲಂ ಅವರ ತಮ್ಮ, ಸಿಐಎಸ್‌ಎಫ್ ಯೋಧ ಆನಂದ್ ಸಿಂಗ್ ಚಿತೆಗೆ ಅಗ್ನಿಸ್ಪರ್ಶ ಮಾಡಿದರು.

'ಮಗನ ಬಗ್ಗೆ ಹೆಮ್ಮೆ ಇದೆ. ಆತ ತುಂಬಾ ಧೈರ್ಯಶಾಲಿಯಾಗಿದ್ದ. ಕರ್ತವ್ಯದ ಬಗ್ಗೆ ಅಪಾರ ಶ್ರದ್ಧೆ ಹೊಂದಿದ್ದ ಆತ ಉಗ್ರರೊಂದಿಗೆ ಕಾದಾಡಿ ಪ್ರಾಣ ಬಿಟ್ಟಿದ್ದಾನೆ. ಆತ ಎಳವೆಯಲ್ಲೇ ಸೇನೆಗೆ ಸೇರುವ ಕನಸು ಕಂಡಿದ್ದ' ಎಂದು ನೀಲಂ ಅವರ ತಂದೆ ಹರ್ದೇವ್ ಸಿಂಗ್ ಚಿಬ್ ನುಡಿದಿದ್ದಾರೆ.

ನೀಲಂ ಪರೋಪಕಾರಿಯಾಗಿದ್ದ. ಕಷ್ಟ ಎಂದವರಿಗೆ ಕೈಲಾದ ಸಹಾಯ ಮಾಡುತ್ತಿದ್ದ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

'ಎರಡು ತಿಂಗಳ ಹಿಂದೆ ಮದುವೆಯಾಗಿದ್ದ' (ಡಾರ್ಜಿಲಿಂಗ್ ವರದಿ): ಉಗ್ರರ ದಾಳಿಯಲ್ಲಿ ಮೃತಪಟ್ಟಿರುವ ಮತ್ತೊಬ್ಬ ಯೋಧ ಸಿದ್ಧಾಂತ್ ಚೆಟ್ರಿ, ಎರಡು ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದರು.

ಚೆಟ್ರಿ ಅವರು ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯ ಬಿಜಾನ್‌ಬರಿ ಪ್ರದೇಶದ ನಿವಾಸಿಯಾಗಿದ್ದರು. ಇವರ ಅಣ್ಣ ಓಂ ಪ್ರಕಾಶ್ ಕೂಡ ಸೇನೆಯಲ್ಲಿ ಸೇವೆ ಸಲ್ಲಿಸಿ ಇತ್ತೀಚೆಗೆ ನಿವೃತ್ತರಾಗಿದ್ದರು.

'ಸಿದ್ಧಾಂತ್ ದೇಶ ಸೇವೆಯ ಹಂಬಲ ಹೊತ್ತಿದ್ದ. 2020ರಲ್ಲಿ ಸೇನೆಗೆ ಸೇರಿದ್ದ ಆತ ಪರಾಕ್ರಮಿಯಾಗಿದ್ದ. ಮದುವೆ ಮುಗಿಸಿಕೊಂಡು 15 ದಿನಗಳ ಹಿಂದೆಯಷ್ಟೇ ಆತ ಕರ್ತವ್ಯಕ್ಕೆ ಮರಳಿದ್ದ' ಎಂದು ಓಂ ಪ್ರಕಾಶ್ ಹೇಳಿದ್ದಾರೆ.

ಅಪ್ಪನ ಮೃತ ದೇಹ ಕಂಡು ಕಣ್ಣೀರಿಟ್ಟ ಪಾವನಾ ಚಿಬ್–ಪಿಟಿಐ ಚಿತ್ರ

ಉಗ್ರನ ಹತ್ಯೆಗೈದ ಯೋಧರು

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಂಡಿ ಅರಣ್ಯ ಪ್ರದೇಶದಲ್ಲಿ 'ಆಪರೇಷನ್ ತ್ರಿನೇತ್ರ' ಕಾರ್ಯಾಚರಣೆ ಕೈಗೊಂಡಿರುವ ಸೇನಾ ಪಡೆ ಶನಿವಾರ ಉಗ್ರನೊಬ್ಬನನ್ನು ಹತ್ಯೆ ಮಾಡಿದೆ.

'ಜಮ್ಮು ಮತ್ತು ಕಾಶ್ಮೀರದ ಪೊಲೀಸರು ಹಾಗೂ ಸಿಆರ್‌ಪಿಎಫ್ ಸಿಬ್ಬಂದಿಯ ಸಹಯೋಗದಲ್ಲಿ ಸೇನೆಯು ಜಂಟಿ ಕಾರ್ಯಾಚರಣೆ ಕೈಗೊಂಡಿದೆ. ಶನಿವಾರ ಬೆಳಿಗ್ಗೆ ನಡೆದ ಗುಂಡಿನ ಚಕಮಕಿಯಲ್ಲಿ ಉಗ್ರನೊಬ್ಬನನ್ನು ಹೊಡೆದುರುಳಿಸಲಾಗಿದೆ. ಮತ್ತೊಬ್ಬ ಗಾಯಗೊಂಡಿದ್ದಾನೆ' ಎಂದು ಸೇನಾ ಪ್ರಕಟಣೆ ತಿಳಿಸಿದೆ.

'ಎನ್‌ಕೌಂಟರ್ ಸ್ಥಳದಲ್ಲಿ ಒಂದು ಎಕೆ–56 ರೈಫಲ್, ನಾಲ್ಕು ಮ್ಯಾಗಜೀನ್, 56 ಬುಲೆಟ್, ಒಂದು 9 ಎಂ.ಎಂ ಪಿಸ್ತೂಲ್, ಮೂರು ಗ್ರೆನೇಡ್‌ಗಳು, ಸ್ಫೋಟಕ ತುಂಬಿದ್ದ ಚೀಲ ಪತ್ತೆಯಾಗಿದ್ದು, ಅವುಗಳನ್ನು ಜಪ್ತಿ ಮಾಡಲಾಗಿದೆ. ರಜೌರಿ, ಪೂಂಛ್ ಸುತ್ತಲಿನ ಪ್ರದೇಶಗಳಲ್ಲಿ ಸುರಿಯುತ್ತಿರುವ ಭಾರಿ ಮಳೆ ಹಾಗೂ ಪ್ರತಿಕೂಲ ಹವಾಮಾನವು ಶೋಧ ಕಾರ್ಯಾಚರಣೆಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ' ಎಂದು ಹೇಳಿದೆ.

ರಾಜನಾಥ್‌ರಿಂದ ಭದ್ರತಾ ಪರಿಶೀಲನೆ

ರಜೌರಿ/ಜಮ್ಮು (ಪಿಟಿಐ): ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ರಜೌರಿ ಹಾಗೂ ಪೂಂಛ್‌ಗೆ ಶನಿವಾರ ಭೇಟಿ ನೀಡಿ ಭದ್ರತಾ ಪರಿಸ್ಥಿತಿ ಅವಲೋಕಿಸಿದ್ದಾರೆ.

ಈ ಜಿಲ್ಲೆಗಳಲ್ಲಿ 2021ರ ಅಕ್ಟೋಬರ್‌ನಿಂದ ಈವರೆಗೆ ಎಂಟು ಭಯೋತ್ಪಾದನಾ ದಾಳಿಗಳು ನಡೆದಿದ್ದು, 26 ಸೈನಿಕರು ಸೇರಿ ಒಟ್ಟು 35 ಮಂದಿ ಅಸುನೀಗಿದ್ದಾರೆ.

'ಜಮ್ಮುವಿನಲ್ಲಿ ಕೆಲ ಸಮಯ ಕಳೆದ ರಾಜನಾಥ್, ಅಲ್ಲಿಂದ ರಜೌರಿಗೆ ಪ್ರಯಾಣ ಬೆಳೆಸಿದರು. ಅಲ್ಲಿನ 'ಏಸ್ ಆಫ್ ಸ್ಪೇಡ್ಸ್' ವಿಭಾಗೀಯ ಕೇಂದ್ರ ಕಚೇರಿಗೆ ಭೇಟಿ ನೀಡಿ ಯೋಧರೊಂದಿಗೆ ಸಮಾಲೋಚನೆ ನಡೆಸಿದರು. ಈ ವೇಳೆ ಅವರೊಂದಿಗೆ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ, ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಹಾಗೂ ಇತರ ಅಧಿಕಾರಿಗಳು ಇದ್ದರು' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಕೋವಿಡ್ ಲಸಿಕೆಯಿಂದ ಕೆಲವರಲ್ಲಿ ಹೃದಯದ ಉರಿಯೂತ ಸಮಸ್ಯೆ'

ನವದೆಹಲಿ (ಪಿಟಿಐ): ಕೋವಿಡ್–19 ಲಸಿಕೆ ಪಡೆದ ನಂತರ ಕೆಲವರಲ್ಲಿ ಹೃದಯದ ಉರಿಯೂತ ಕಂಡುಬಂದಿದೆ. ದೇಹದಲ್ಲಿನ ರೋಗ ನಿರೋಧಕ ಶಕ್ತಿಗೆ ಕಾರಣವಾಗುವ ಜೀವಕೋಶಗಳ ಪ್ರತಿಕ್ರಿಯೆಯೇ ಇದಕ್ಕೆ ಕಾರಣವಾಗಿದ್ದು, ಲಸಿಕೆಯಿಂದಾಗಿ ಉತ್ಪತ್ತಿಯಾಗುವ ಪ್ರತಿಕಾಯಗಳಲ್ಲ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಅಮೆರಿಕದ ಯೇಲ್ ವಿಶ್ವವಿದ್ಯಾಲಯದ ಸಂಶೋಧಕರು ಈ ಕುರಿತು ಅಧ್ಯಯನ ನಡೆಸಿದ್ದು, 'ಸೈನ್ಸ್ ಇಮ್ಯುನಾಲಜಿ' ನಿಯತಕಾಲಿಕೆಯಲ್ಲಿ ಅಧ್ಯಯನ ವರದಿ ಪ್ರಕಟವಾಗಿದೆ.

'ಕೋವಿಡ್ ಲಸಿಕೆ ಪಡೆದ ಕೆಲ ವ್ಯಕ್ತಿಗಳಲ್ಲಿ ಪ್ರತಿಕಾಯಗಳು ಉತ್ಪತ್ತಿಯಾಗುವ ಜೊತೆಗೆ ಸೈಟೊಕಿನ್ ಎಂಬ ಪ್ರೊಟೀನ್‌ಗಳು ಸೃಷ್ಟಿಯಾಗುತ್ತವೆ. ದೇಹದಲ್ಲಿ ಉರಿಯೂತ ನಿಯಂತ್ರಣಕ್ಕೆ ಈ ಸೈಟೊಕಿನ್‌ಗಳು ನೆರವಾಗುತ್ತವೆ. ಆದರೆ, ಕೋವಿಡ್ ಲಸಿಕೆ ಪಡೆದ ಕೆಲವರಲ್ಲಿ ಈ ಪ್ರೊಟೀನ್‌ಗಳು ಅಧಿಕ ಪ್ರಮಾಣದಲ್ಲಿ ಹಾಗೂ ವೇಗವಾಗಿ ಉತ್ಪತ್ತಿಯಾಗುವುದರಿಂದ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ' ಎಂದು ಸಂಶೋಧಕರು ಹೇಳಿದ್ದಾರೆ.

ಎರಡು ವರ್ಷಗಳ ಹಿಂದೆ, ಕೋವಿಡ್ ಲಸಿಕೆ ಪಡೆದ ಕೆಲವರಲ್ಲಿ 'ಮೈಯೊಕಾರ್ಡಿಟಿಸ್' ಎಂಬ ಹೃದಯದ ಸಮಸ್ಯೆ ಕಾಣಿಸಿಕೊಂಡಿತ್ತು. ಹೃದಯದ ಸ್ನಾಯುಗಳ ಉರಿಯೂತವೇ ಇದಕ್ಕೆ ಕಾರಣ. ಆದರೆ, ಈ ಆರೋಗ್ಯ ಸಮಸ್ಯೆ ಕಾಣಿಸಿಕೊಳ್ಳಲು ನಿಖರ ಕಾರಣಗಳು ಗೊತ್ತಾಗಿರಲಿಲ್ಲ. ಈಗ, ಯೇಲ್ ವಿ.ವಿ ಸಂಶೋಧಕರ ತಂಡವು ಲಸಿಕೆ ಪಡೆದವರಲ್ಲಿನ ರೋಗನಿರೋಧಕ ವ್ಯವಸ್ಥೆಯ ವಿಶ್ಲೇಷಣೆ ನಡೆಸಿ, ಹೃದಯದ ಸಮಸ್ಯೆಗೆ ಕಾರಣವನ್ನು ವಿವರಿಸಿದೆ.

'ಆದಾಗ್ಯೂ, ಕೋವಿಡ್–19 ಸಂಬಂಧಿತ ಕಾಯಿಲೆಗಳ ವಿರುದ್ಧ ಲಸಿಕೆಯು ಪರಿಣಾಮಕಾರಿ ರಕ್ಷಣೆ ನೀಡುತ್ತದೆ' ಎಂದು ಅಮೆರಿಕದ ವಿಶ್ವವಿದ್ಯಾಲಯದ ಇಮ್ಯುನೊಬಯಾಲಜಿ ವಿಭಾಗದ ಪ್ರಾಧ್ಯಾಪಕಿ ಕೆರ್ರಿ ಲೂಕಾಸ್ ಹೇಳುತ್ತಾರೆ.

ಸೇನೆಯಿಂದ ಯುದ್ಧ ಭೂಮಿ ಕಣ್ಗಾವಲು ವ್ಯವಸ್ಥೆ ಅಭಿವೃದ್ಧಿ

ನವದೆಹಲಿ (ಪಿಟಿಐ): 'ಭದ್ರತಾ ಪಡೆಗಳ ಕಮಾಂಡರ್‌ಗಳು ಹಾಗೂ ಎಲ್ಲಾ ಹಂತಗಳ ಸಿಬ್ಬಂದಿಗೆ ಕಾರ್ಯಾಚರಣೆಯ ಕುರಿತಾದ ಸಮಗ್ರ ಚಿತ್ರಣ ಒದಗಿಸುವ ಹಾಗೂ ಅದರ ಆಧಾರದಲ್ಲಿ ಅವರು ತ್ವರಿತವಾಗಿ ನಿರ್ಧಾರ ಕೈಗೊಳ್ಳುವುದಕ್ಕೆ ಅನುವು ಮಾಡಿಕೊಡುವ ಉದ್ದೇಶದಿಂದ ಸೇನೆಯು ಯುದ್ಧ ಭೂಮಿ ಕಣ್ಗಾವಲು ವ್ಯವಸ್ಥೆ ರೂಪಿಸಲು ಮುಂದಾಗಿದೆ' ಎಂದು ರಕ್ಷಣಾ ಇಲಾಖೆಯ ಮೂಲಗಳು ಶನಿವಾರ ತಿಳಿಸಿವೆ.

'ಪ್ರಾಜೆಕ್ಟ್ ಸಂಜಯ್' ಅಡಿಯಲ್ಲಿ ಈ ವ್ಯವಸ್ಥೆ ರೂಪಿಸಲಾಗುತ್ತದೆ. ಇದಕ್ಕಾಗಿ ಸಂಘರ್ಷ ಪೀಡಿತ ಪ್ರದೇಶಗಳಲ್ಲಿ ದೊಡ್ಡ ಸಂಖ್ಯೆಯ ಸೆನ್ಸಾರ್‌ಗಳನ್ನು ಸ್ಥಾಪಿಸಬೇಕಾಗಿದ್ದು, ಇವುಗಳಿಂದ ಸಿಗುವ ಮಾಹಿತಿಗಳನ್ನು ಕ್ರೋಡೀಕರಿಸುವುದಕ್ಕೆ ಅಸಂಖ್ಯ ಕಣ್ಗಾವಲು ಕೇಂದ್ರಗಳನ್ನು ನಿರ್ಮಿಸುವುದು ಅಗತ್ಯವಾಗಿದೆ.

ಕಳೆದ ತಿಂಗಳು ನಾಗ್ಪುರದಿಂದ ಮುಂಬೈಗೆ ಪ್ರಯಾಣ ಕೈಗೊಂಡಿದ್ದಾಗ ಘಟನೆ

ಮಹಿಳೆಗೆ ವಿಮಾನದಲ್ಲಿ ಚೇಳು ಕಡಿತ!

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನದಲ್ಲಿ ಮಹಿಳೆಯೊಬ್ಬರಿಗೆ ಚೇಳು ಕಡಿದಿದೆ. ಅವರು ಕಳೆದ ತಿಂಗಳು ನಾಗ್ಪುರದಿಂದ ಮುಂಬೈಗೆ ಪ್ರಯಾಣ ಕೈಗೊಂಡಿದ್ದಾಗ ಘಟನೆ ನಡೆದಿದೆ.

'ಮಹಿಳೆಯು ವಿಮಾನ ನಿಲ್ದಾಣಕ್ಕೆ ಬಂದಿಳಿದ ಕೂಡಲೇ ವೈದ್ಯರೊಬ್ಬರು ಅವರನ್ನು ಪರೀಕ್ಷಿಸಿದ್ದರು. ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೂ ದಾಖಲಿಸಲಾಗಿತ್ತು. ಗುಣಮುಖರಾದ ನಂತರ ಮನೆಗೆ ಕಳುಹಿಸಿಕೊಡಲಾಗಿತ್ತು' ಎಂದು ಏರ್ ಇಂಡಿಯಾ ಶನಿವಾರ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

'ಏಪ್ರಿಲ್ 23ರಂದು ಎಐ–630 ವಿಮಾನದಲ್ಲಿ ಈ ಘಟನೆ ನಡೆದಿತ್ತು. ಇದು ಅತ್ಯಂತ ಅಪರೂಪ ಹಾಗೂ ದುರದೃಷ್ಟಕರ ಘಟನೆಯಾಗಿದೆ. ವಿಷಯ ಗೊತ್ತಾದ ಬಳಿಕ ಇಡೀ ವಿಮಾನದಲ್ಲಿ ಪರಿಶೀಲನೆ ಕೈಗೊಳ್ಳಲಾಗಿತ್ತು. ಧೂಮೀಕರಣ ಪ್ರಕ್ರಿಯೆ ಕೈಗೊಂಡ ನಂತರ ಚೇಳು ಪತ್ತೆಯಾಗಿತ್ತು' ಎಂದು ಹೇಳಲಾಗಿದೆ.

ಈ ಹಿಂದೆ ವಿಮಾನದಲ್ಲಿ ಹಾವು ಕಂಡುಬಂದ ಉದಾಹರಣೆಗಳು ಇವೆ. ಕಳೆದ ವರ್ಷದ ಡಿಸೆಂಬರ್‌ನಲ್ಲಿ ಕೇರಳದಿಂದ ದುಬೈಗೆ ಹಾರಾಟ ನಡೆಸಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನದ ಸರಕು ಇಡುವ ಜಾಗದಲ್ಲಿ ಹಾವೊಂದು ಪತ್ತೆಯಾಗಿತ್ತು.

ಬಿ737–800 ವಿಮಾನವು ದುಬೈ ವಿಮಾನ ನಿಲ್ದಾಣದಲ್ಲಿ ಇಳಿಯುತ್ತಿದ್ದಂತೆಯೇ ಹಾವು ಇರುವುದು ಕಂಡುಬಂದಿತ್ತು.

ಲಂಚ: ಅಧೀನ ಕಾರ್ಯದರ್ಶಿ ಸೆರೆ

ನವದೆಹಲಿ (ಪಿಟಿಐ): ವಿದೇಶದಲ್ಲಿ ಉನ್ನತ ವೈದ್ಯಕೀಯ ವ್ಯಾಸಂಗಕ್ಕೆ ಅಗತ್ಯವಿರುವ ಅನುಮತಿ ಪತ್ರ ನೀಡಲು ಲಂಚಕ್ಕೆ ಬೇಡಿಕೆ ಇಟ್ಟಿದ್ದ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಧೀನ ಕಾರ್ಯದರ್ಶಿ ಸೋನು ಕುಮಾರ್ ಅವರನ್ನು ಸಿಬಿಐ ಶನಿವಾರ ಬಂಧಿಸಿದೆ.

ಅಮೆರಿಕದಲ್ಲಿ ನೆಲೆಸಿರುವ ಭಾರತೀಯ ವೈದ್ಯರೊಬ್ಬರಿಗೆ ಅನುಮತಿ ಪತ್ರ ನೀಡಲು ₹ 1.5 ಲಕ್ಷ ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬಿಜೆಪಿ ಕರ್ನಾಟಕ
ಡಬಲ್ ಎಂಜಿನ್ ಸರ್ಕಾರ
ಕರ್ನಾಟಕದ ಅಭಿವೃದ್ಧಿಯ ಸಾಕಾರ
#ಬಿಜೆಪಿಯೇಭರವಸೆ
ಚುನಾವಣಾ ಪ್ರಚಾರ ಸಭೆಗಳು
7 ಮೇ 2023 | ಭಾನುವಾರ

ಶ್ರೀ ಜಗತ್ ಪ್ರಕಾಶ್ ನಡ್ಡಾ
ಮಾನ್ಯ ರಾಷ್ಟ್ರೀಯ ಅಧ್ಯಕ್ಷರು, ಬಿಜೆಪಿ
ಬೆ. 10:30 ಹರಪನಹಳ್ಳಿ-ರೋಡ್ ಶೋ
ಮ. 12:30 ಶಿರಗುಪ್ಪ-ರೋಡ್ ಶೋ
ಮ. 3:00 ಕೂಡ್ಲಗಿ

ಶ್ರೀ ಅಮಿತ್ ಶಾ
ಮಾನ್ಯ ಕೇಂದ್ರ ಗೃಹ ಮತ್ತು ಸಹಕಾರ ಸಚಿವರು
ಬೆ. 9:30 ಬೆಳಗಾವಿ ದಕ್ಷಿಣ-ರೋಡ್ ಶೋ
ಮ. 12:00 ಹುನಗುಂದ
ಮ. 2:30 ಚಿಕ್ಕಬಳ್ಳಾಪುರ-ರೋಡ್ ಶೋ
ಸಂ. 4:00 ದೊಡ್ಡಬಳ್ಳಾಪುರ-ರೋಡ್ ಶೋ
ಸಂ. 5:30 ಆನೇಕಲ್-ರೋಡ್ ಶೋ

ಶ್ರೀ ಬಿ.ಎಸ್. ಯಡಿಯೂರಪ್ಪ
ಮಾನ್ಯ ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರು, ಬಿಜೆಪಿ ಹಾಗೂ ಮಾಜಿ ಮುಖ್ಯಮಂತ್ರಿಗಳು
ಬೆ. 10:30 ಹಿರೇಕೇರೂರು
ಮ. 12:00 ಶಿವಮೊಗ್ಗ

ಶ್ರೀ ಏಕನಾಥ್ ಶಿಂಧೆ
ಮಾನ್ಯ ಮುಖ್ಯಮಂತ್ರಿಗಳು, ಮಹಾರಾಷ್ಟ್ರ
ಮ. 12:30 ಗಾಂಧಿನಗರ (ಬೆಂಗಳೂರು)
ಸಂ. 5:30 ಮಂಗಳೂರು

ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಕೇಂದ್ರ ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಖಾತೆ ಸಚಿವರು
ಬೆ. 9:30 ಬಸವನಗುಡಿ (ಮಹಿಳಾ ಉದ್ಯಮಿಗಳೊಂದಿಗೆ ಸಂವಾದ)

ಶ್ರೀ ಎಸ್. ಜಯಶಂಕರ್
ಮಾನ್ಯ ಕೇಂದ್ರ ವಿದೇಶಾಂಗ ಖಾತೆ ಸಚಿವರು
ಬೆ. 10:00 ಮೈಸೂರು

ಶ್ರೀ ಪ್ರಹ್ಲಾದ್ ಜೋಶಿ
ಮಾನ್ಯ ಕೇಂದ್ರ ಸಂಸದೀಯ ವ್ಯವಹಾರಗಳು, ಗಣಿ ಮತ್ತು ಕಲ್ಲಿದ್ದಲು ಖಾತೆ ಸಚಿವರು
ಬೆ. 11:30 ಕೆ.ಜಿ.ಎಫ್. -ರೋಡ್ ಶೋ

ಶ್ರೀ ವಿ.ಕೆ. ಸಿಂಗ್
ಮಾನ್ಯ ಕೇಂದ್ರ ಸಹಾಯಕ ಸಾರಿಗೆ ಮತ್ತು ಹೆದ್ದಾರಿ ಹಾಗೂ ನಾಗರಿಕ ವಿಮಾನ ಯಾನ ಖಾತೆ ಸಚಿವರು
ಬೆ. 10:00 ಮಡಿಕೇರಿ
ಮ. 1:00 ವಿರಾಜಪೇಟೆ

ಶ್ರೀಮತಿ ಸ್ಮೃತಿ ಇರಾನಿ
ಮಾನ್ಯ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಸಚಿವರು
ಬೆ. 10:30 ತೇರದಾಳ-ರೋಡ್ ಶೋ
ಮ. 1:30 ದಾವಣಗೆರೆ ದಕ್ಷಿಣ-ರೋಡ್ ಶೋ

ಶ್ರೀ ಕೆ.ಎಸ್. ಈಶ್ವರಪ್ಪ
ಮಾನ್ಯ ಶಾಸಕರು ಹಾಗೂ ಮಾಜಿ ಉಪಮುಖ್ಯಮಂತ್ರಿಗಳು
ಮ. 3:30 ಹೊನ್ನಾಳಿ

ಶ್ರೀ ದೇವೇಂದ್ರ ಫಡ್ನವೀಸ್
ಮಾನ್ಯ ಉಪಮುಖ್ಯಮಂತ್ರಿಗಳು, ಮಹಾರಾಷ್ಟ್ರ
ಬೆ. 11:00 ಕೊಪ್ಪಳ
ಮ. 2:30 ಹಳಿಯಾಳ
ಸಂ. 4:30 ನಿಪ್ಪಾಣಿ

ಶ್ರೀಮತಿ ಪುರಂದೇಶ್ವರಿ
ಮಾನ್ಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು, ಬಿಜೆಪಿ
ಬೆ. 10:30 ಗೌರಿಬಿದನೂರು-ರೋಡ್ ಶೋ
ಮ. 3:00 ಶಿಡ್ಲಘಟ್ಟ-ರೋಡ್ ಶೋ

ಶ್ರೀಮತಿ ವಾನತಿ ಶ್ರೀನಿವಾಸನ್
ಮಾನ್ಯ ಮಹಿಳಾ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷರು, ಬಿಜೆಪಿ ಹಾಗೂ ಶಾಸಕರು
ಬೆ. 10:30 ಮೈಸೂರು ನಗರ
ಮ. 3:30 ಚಾಮರಾಜ

ಶ್ರೀ ಬಸನಗೌಡ ಪಾಟೀಲ್ ಯತ್ನಾಳ್
ಮಾನ್ಯ ಶಾಸಕರು
ಬೆ. 9:30 ಇಳಕಲ್
ಬೆ. 11:30 ಶಿರೂರು-ರೋಡ್ ಶೋ
ಮ. 2:30 ಬಬಲೇಶ್ವರ -ರೋಡ್ ಶೋ

ಶ್ರೀ ಸುದೀಪ್
ಖ್ಯಾತ ಚಲನಚಿತ್ರ ನಟರು
ಶ್ರೀ ಛಲವಾದಿ ನಾರಾಯಣ ಸ್ವಾಮಿ
ಮಾನ್ಯ ವಿಧಾನಪರಿಷತ್ ಸದಸ್ಯರು
ಬೆ. 9:30 ನರಗುಂದ-ರೋಡ್ ಶೋ
ಮ. 12:00 ಸಿರಿಗೆರೆ, ಹೊನ್ನಾಳಿ-ರೋಡ್ ಶೋ
ಮ. 1:30 ಚನ್ನಗಿರಿ-ರೋಡ್ ಶೋ
ಮ. 2:30 ಹೊಳಲ್ಕೆರೆ-ರೋಡ್ ಶೋ
ಮ. 4:00 ಚಳ್ಳಕೆರೆ-ರೋಡ್ ಶೋ

ಶ್ರೀಮತಿ ತಾರಾ ಅನುರಾಧ
ಮಾಜಿ ವಿಧಾನಪರಿಷತ್ ಸದಸ್ಯರು ಹಾಗೂ ಖ್ಯಾತ ಚಲನಚಿತ್ರ ನಟಿ
ಬೆ. 9:30 ಮುಧೋಳ (ಮಹಿಳಾ ಸಮಾವೇಶ)
ಸಂ. 4:00 ಬಾಗಲಕೋಟೆ-ರೋಡ್ ಶೋ

ಶ್ರೀಮತಿ ಶ್ರುತಿ
ಖ್ಯಾತ ಚಲನಚಿತ್ರ ನಟಿ
ಬೆ. 10:00 ಕನಕಪುರ-ರೋಡ್ ಶೋ

ಬನ್ನಿ, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳೋಣ
ಕಮಲದ ಬಟನ್ ಒತ್ತಿ ಬಿಜೆಪಿ ಗೆಲ್ಲಿಸಿ
ಪ್ರಕಟಣೆ : ಬಿಜೆಪಿ ಕರ್ನಾಟಕ

ಚಿತ್ರದುರ್ಗ ಗೆಲುವಿನ ಕೋಟೆ ಯಾರದು?

ತೊಡೆ ತಟ್ಟಿದ್ದಾರೆ ಹಳೇ ಹುಲಿಗಳು

ವಯೋಮಿತಿ ನಿರ್ಬಂಧವನ್ನು ಮೀರಿ 75 ವರ್ಷದ ಇಬ್ಬರು ಅಭ್ಯರ್ಥಿಗಳನ್ನು ಬಿಜೆಪಿ ಅಖಾಡಕ್ಕೆ ಇಳಿಸಿದೆ. ಕಾಂಗ್ರೆಸ್‌ನಿಂದ ಹಳೆಯ ಕಲಿಗಳೇ ಕಣಕ್ಕೆ ಧುಮುಕಿದ್ದಾರೆ

ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ಮೊಳಕಾಲ್ಮುರು	ಬಿಎಸ್‌ಆರ್ ಕಾಂಗ್ರೆಸ್	ಬಿಜೆಪಿ
ಚಳ್ಳಕೆರೆ	ಕಾಂಗ್ರೆಸ್	ಕಾಂಗ್ರೆಸ್
ಚಿತ್ರದುರ್ಗ	ಬಿಜೆಪಿ	ಬಿಜೆಪಿ
ಹಿರಿಯೂರು	ಕಾಂಗ್ರೆಸ್	ಬಿಜೆಪಿ
ಹೊಸದುರ್ಗ	ಕಾಂಗ್ರೆಸ್	ಬಿಜೆಪಿ
ಹೊಳಲ್ಕೆರೆ	ಕಾಂಗ್ರೆಸ್	ಬಿಜೆಪಿ



• ಜಿ.ಬಿ.ನಾಗರಾಜ್

ಚಿತ್ರದುರ್ಗ: ಕಾಂಗ್ರೆಸ್ ಹಾಗೂ ಜನತಾ ಪರಿವಾರದ ಭದ್ರನೆಲೆಯಾಗಿದ್ದ ಕೋಟೆನಾಡಿನಲ್ಲಿ ಈಚಿನ ವರ್ಷಗಳಲ್ಲಿ ಅರಳಿರುವ 'ಕಮಲ' ಆಳವಾಗಿ ಬೇರೂರುವ ಉಮೇದಿಯಲ್ಲಿದೆ. ಪ್ರಾಬಲ್ಯ ಮರುಸ್ಥಾಪಿಸುವ ಉತ್ಸಾಹದಲ್ಲಿ 'ಕೈ' ಪಡೆ ಮುನ್ನುಗ್ಗುತ್ತಿದೆ. 'ತೆನೆ' ಕಾಳುಕಟ್ಟುವ ನಿರೀಕ್ಷೆಯಲ್ಲಿ ಜೆಡಿಎಸ್ ಕಾಯುತ್ತಿದೆ. ಆದರೆ, ಈ ಮೂರು ಪಕ್ಷಗಳಿಗೆ ಸ್ವತಂತ್ರ ಅಭ್ಯರ್ಥಿಗಳು ಸವಾಲಾಗಿ ಪರಿಣಮಿಸಿದ್ದಾರೆ.

ಪಕ್ಷ ಹಾಗೂ ವೈಯಕ್ತಿಕ ವರ್ಚಸ್ಸಿಗೆ ಸಿಗುವ ಮನ್ನಣೆಯಿಂದಾಗಿ ಸಾಂಪ್ರದಾಯಿಕ ಎದುರಾಳಿಗಳೇ ಮತ್ತೆ ಮುಖಾಮುಖಿ ಆಗಿದ್ದಾರೆ. ವಯೋಮಿತಿ ನಿರ್ಬಂಧವನ್ನು ಮೀರಿ 75 ವರ್ಷದ ಇಬ್ಬರು ಅಭ್ಯರ್ಥಿಗಳನ್ನು ಬಿಜೆಪಿ ಅಖಾಡಕ್ಕೆ ಇಳಿಸಿದೆ. ಕಾಂಗ್ರೆಸ್‌ನಿಂದ ಹಳೆಯ ಕಲಿಗಳೇ ಕಣಕ್ಕೆ ಧುಮುಕಿದ್ದಾರೆ. ಎರಡೂ ಪಕ್ಷಗಳಿಗೆ ಬಂಡಾಯದ ಬಿಸಿ ತಟ್ಟಿದೆ.

ಪಕ್ಷ ಸಂಘಟನೆಯಲ್ಲಿ ಸಬಲಗೊಂಡ ಬಿಜೆಪಿಗೆ ಕಾರ್ಯಕರ್ತರ ಪಡೆ ನಿರ್ಮಾಣವಾಗಿದೆ. ಹಿಂದುತ್ವ ಪ್ರಜ್ಞೆ ಜಾಗೃತಗೊಳಿಸುವ ನಿರಂತರ ಪ್ರಯತ್ನ ಚುನಾವಣೆಯಲ್ಲಿ ಉತ್ತಮ ಫಸಲಾಗಿ ದಕ್ಕಬಹುದು ಎಂಬ ನಿರೀಕ್ಷೆಯನ್ನು ಇಟ್ಟುಕೊಂಡಿದೆ. ಪಕ್ಷ ಸಂಘಟನೆಯಲ್ಲಿ ದುರ್ಬಲವಾಗಿದ್ದರೂ ಕಾಂಗ್ರೆಸ್‌ಗೆ ಸಾಂಪ್ರದಾಯಿಕ ಮತಬುಟ್ಟಿ ದೊಡ್ಡದಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ಮತದಾರರೇ ಹೆಚ್ಚಿರುವ ಜಿಲ್ಲೆಯು ಕಾಂಗ್ರೆಸ್ ಕೈಹಿಡಿದಿದ್ದೇ ಹೆಚ್ಚು. ಮೀಸಲಾತಿ ಹಂಚಿಕೆಯಲ್ಲಿ ಆಗಿರುವ ಬದಲಾವಣೆ ಚುನಾವಣೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಭ್ರಷ್ಟಾಚಾರ ಆರೋಪ, ವಯೋಮಿತಿಯ ನಿರ್ಬಂಧ ಇದ್ದರೂ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಅವರನ್ನೇ ಬಿಜೆಪಿ ಕಣಕ್ಕೆ ಇಳಿಸಿದೆ. 1994ರಿಂದ 2018ರವರೆಗಿನ ಆರು ಚುನಾವಣೆಯಲ್ಲಿ ಐದು ಬಾರಿ ಗೆಲುವು ಸಾಧಿಸಿರುವ ತಿಪ್ಪಾರೆಡ್ಡಿ ಮೇಲೆ ಬಿಜೆಪಿ ಭರವಸೆ ಇಟ್ಟುಕೊಂಡಿದೆ. ಚುನಾವಣೆ ಸಮೀಪಿಸಿದಾಗ ಜೆಡಿಎಸ್ ತೊರೆದು 'ಕೈ' ಹಿಡಿದ ಕೆ.ಸಿ. ವೀರೇಂದ್ರ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಟಿಕೆಟ್ ಸಿಗದೇ ಅಸಮಾಧಾಗೊಂಡ ವಿಧಾನಪರಿಷತ್ ಮಾಜಿ ಸದಸ್ಯ ಜಿ.ರಘು ಆಚಾರ್ ಜೆಡಿಎಸ್ ಅಭ್ಯರ್ಥಿಯಾಗಿದ್ದಾರೆ. ಕಾಂಗ್ರೆಸ್ ವಿರುದ್ಧ ಆಕ್ರೋಶಗೊಂಡು ಪಕ್ಷೇತರ ಅಭ್ಯರ್ಥಿಯಾಗಿದ್ದ ಸೌಭಾಗ್ಯ ಬಸವರಾಜನ್ ಕಣದಿಂದ ನಿವೃತ್ತಿ ಘೋಷಿಸಿ ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸಿದ್ದಾರೆ. ಮಾಜಿ ಶಾಸಕರೂ ಆಗಿರುವ ಎಸ್.ಕೆ. ಬಸವರಾಜನ್ ಜೊತೆಗೆ ಬಿಜೆಪಿ ಸೇರ್ಪಡೆಗೊಂಡಿದ್ದು, ತಿಪ್ಪಾರೆಡ್ಡಿಗೆ ಅನುಕೂಲವಾಗಲಿದೆ ಎಂಬುದು ಕಮಲ ಪಾಳಯದ ಲೆಕ್ಕಾಚಾರ.

ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಹೊಳಲ್ಕೆರೆ ಕ್ಷೇತ್ರದಲ್ಲಿ ಸಾಂಪ್ರದಾಯಿಕ ಎದುರಾಳಿಗಳಾದ ಬಿಜೆಪಿಯ ಎಂ.ಚಂದ್ರಪ್ಪ ಹಾಗೂ ಕಾಂಗ್ರೆಸ್‌ನ ಎಚ್.ಆಂಜನೇಯ ಮತ್ತೆ ಮುಖಾಮುಖಿಯಾಗಿದ್ದಾರೆ. ಅಭಿವೃದ್ಧಿ ವಿಚಾರ ಗಳನ್ನೇ ಪ್ರಧಾನವಾಗಿ ಮುಂದಿಟ್ಟುಕೊಂಡು ಕಾಂಗ್ರೆಸ್ ಹಾಗೂ ಬಿಜೆಪಿ ಮತಯಾಚಿಸುತ್ತಿವೆ. ಕಾಂಗ್ರೆಸ್ ಅಭ್ಯರ್ಥಿಗೆ ಹಳ್ಳಿಗಳಲ್ಲಿ ನಿರೀಕ್ಷೆ ಮೀರಿದ ಸ್ಪಂದನೆ ವ್ಯಕ್ತವಾಗುತ್ತಿದೆ. ಬಿಜೆಪಿ ಅಭ್ಯರ್ಥಿಯದು ಒರಟು ವ್ಯಕ್ತಿತ್ವ ಎಂಬ ಬೇಸರ ಮತದಾರರಲ್ಲಿದೆ. ತಾಲ್ಲೂಕು ಆರೋಗ್ಯಾಧಿಕಾರಿ ಹುದ್ದೆಗೆ ರಾಜೀನಾಮೆ ನೀಡಿ ಬಿಜೆಪಿ ಟಿಕೆಟ್ ನಿರೀಕ್ಷೆಯಲ್ಲಿದ್ದ ಡಾ.ಜಯಸಿಂಹ ಲೋಕನಾಥ್ ಪಕ್ಷೇತರ ಅಭ್ಯರ್ಥಿಯಾಗಿ ಪ್ರಬಲ ಪೈಪೋಟಿ ನೀಡುತ್ತಿದ್ದಾರೆ.

ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವ ಚಳ್ಳಕೆರೆ ಕ್ಷೇತ್ರದಲ್ಲಿ ಸತತ ಎರಡು ಗೆಲುವು ದಾಖಲಿಸಿದ ಕಾಂಗ್ರೆಸ್‌ನ ಟಿ.ರಘುಮೂರ್ತಿ ಹ್ಯಾಟ್ರಿಕ್ ಸಾಧನೆಯ ಹುಮ್ಮಸ್ಸಿನಲ್ಲಿದ್ದಾರೆ. ಕಳೆದ ಚುನಾವಣೆಯಲ್ಲಿ ಪರಾಭವಗೊಂಡಿದ್ದ ಜೆಡಿಎಸ್ ಅಭ್ಯರ್ಥಿ ಎಂ.ರವೀಶ್‌ಕುಮಾರ್ ವರ್ಷದಿಂದ ಕ್ಷೇತ್ರ ಸುತ್ತಿ ಪಕ್ಷ ಬಲಪಡಿಸಿಕೊಂಡಿದ್ದಾರೆ. ಮಾಜಿ ಸಚಿವ ತಿಪ್ಪೇಸ್ವಾಮಿ ಅವರ ಪುತ್ರ ಕೆ.ಟಿ.ಕುಮಾರಸ್ವಾಮಿ ಬಿಜೆಪಿಯ ಆಹ್ವಾನವನ್ನು ತಿರಸ್ಕರಿಸಿ ಪಕ್ಷೇತರರಾಗಿ ನಿದ್ದೆಗೆಡಿಸಿದ್ದಾರೆ. ಸರ್ಕಾರಿ ನೌಕರಿಯಿಂದ ಸ್ವಯಂ ನಿವೃತ್ತಿ ಪಡೆದ ತುಮಕೂರಿನ ಆರ್.ಅನಿಲ್‌ಕುಮಾರ್ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ಕ್ಷೇತ್ರದಲ್ಲಿ ಬಿಜೆಪಿ ದುರ್ಬಲವಾಗಿರುವ ಕಾರಣಕ್ಕೆ ನಿರೀಕ್ಷಿತ ಸ್ಪಂದನೆ ಸಿಗುತ್ತಿಲ್ಲ.

ತಾವು ಪರಿಶಿಷ್ಟ ಜಾತಿಯವರಾದರೂ ಸಾಮಾನ್ಯ ಕ್ಷೇತ್ರ ಹೊಸದುರ್ಗದಲ್ಲಿ ಗೆಲುವು ಸಾಧಿಸಿ ಹುಬ್ಬೇರುವಂತೆ ಮಾಡಿದ್ದ ಗೂಳಿಹಟ್ಟಿ ಡಿ.ಶೇಖರ್‌ಗೆ ಬಿಜೆಪಿ ಟಿಕೆಟ್ ಕೈತಪ್ಪಿದೆ. ಸರ್ಕಾರ ಹಾಗೂ ಪಕ್ಷದ ನಾಯಕರನ್ನು ಬಹಿರಂಗವಾಗಿ ಟೀಕಿಸಿ ವಿರೋಧ ಪಕ್ಷಗಳ ಕೈಗೆ ಅಸ್ತ್ರ ನೀಡಿದ್ದು ಇವರಿಗೆ ಮುಳುವಾಗಿದೆ. ಪಕ್ಷೇತರ ಅಭ್ಯರ್ಥಿಯಾಗಿ ಕಣದಲ್ಲಿರುವ ಗೂಳಿಹಟ್ಟಿ, ಅಬ್ಬರದ ಪ್ರಚಾರದಲ್ಲಿ ತೊಡಗಿದ್ದಾರೆ. ಎರಡು ಬಾರಿ ಕಂಡಿದ್ದ ಸೋಲು ಅನುಕಂಪವಾಗಿ ಮಾರ್ಪಡಬಹುದು ಎಂಬ ನಿರೀಕ್ಷೆಯಲ್ಲಿ ಎಸ್.ಲಿಂಗಮೂರ್ತಿ ಅವರಿಗೆ ಬಿಜೆಪಿ ಮಣೆಹಾಕಿದೆ. ಮೂರು ಬಾರಿ ಶಾಸಕರಾಗಿದ್ದ ಬಿ.ಜಿ.ಗೋವಿಂದಪ್ಪ ಕಾಂಗ್ರೆಸ್ ಅಭ್ಯರ್ಥಿಯಾಗಿ 'ಇದು ನನ್ನ ಕೊನೆಯ ಚುನಾವಣೆ' ಎಂಬ ಅಸ್ತ್ರವನ್ನು ಪ್ರಯೋಗಿಸಿದ್ದಾರೆ.

ಕಾಂಗ್ರೆಸ್– ಜೆಡಿಎಸ್ ಜಿದ್ದಾಜಿದ್ದಿಗೆ ಹೆಸರಾಗಿದ್ದ ಹಿರಿಯೂರು ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಬಾರಿಯಷ್ಟೇ 'ಕಮಲ' ಅರಳಿದೆ. ಬಿಜೆಪಿ ಅಭ್ಯರ್ಥಿಯಾಗಿ ಕೆ.ಪೂರ್ಣಿಮಾ ಮತ್ತೊಮ್ಮೆ ಕಣದಲ್ಲಿದ್ದಾರೆ. ಗೊಲ್ಲ ಸಮುದಾಯದ ಮತಗಳು ಬೆನ್ನಿಗಿವೆ ಎಂಬ ಬಲವಾದ ನಂಬಿಕೆ ಇವರದು. ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ ಆರೋಪದಡಿ ಬಿಜೆಪಿಯಿಂದ ಅಮಾನತುಗೊಂಡಿದ್ದ ಇವರ ಪತಿ ಡಿ.ಟಿ. ಶ್ರೀನಿವಾಸ್ ವಿರುದ್ಧ ಕೇಳಿಬಂದಿರುವ ಆರೋಪಗಳನ್ನು ಕಾಂಗ್ರೆಸ್ ಅಸ್ತ್ರವಾಗಿ ಪ್ರಯೋಗಿಸುತ್ತಿದೆ. ಜಾತಿ ಪ್ರಾಬಲ್ಯವೇ ಹೊಂದಿರದ ಡಿ.ಸುಧಾಕರ್ ಕಾಂಗ್ರೆಸ್ ಅಭ್ಯರ್ಥಿಯಾಗಿ ಅಖಾಡಕ್ಕೆ ಧುಮುಕಿದ್ದಾರೆ. 2018ರಲ್ಲಿ ಪರಾಭವಗೊಂಡಿದ್ದರೂ ಕ್ಷೇತ್ರದ ಜನರ ಜೊತೆಗೆ ನಿರಂತರ ಸಂಪರ್ಕ ಇಟ್ಟುಕೊಂಡಿದ್ದಾರೆ. ನಿವೃತ್ತ ಎಂಜಿನಿಯರ್ ಎಂ.ರವೀಂದ್ರಪ್ಪ ಜೆಡಿಎಸ್ ಅಭ್ಯರ್ಥಿಯಾಗಿ ಪ್ರಬಲ ಸ್ಪರ್ಧೆ ನೀಡುತ್ತಿದ್ದಾರೆ.

ಮೊಳಕಾಲ್ಮುರು ಕ್ಷೇತ್ರದ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ನಡೆದ ರಾಜಕೀಯ ವಿದ್ಯಮಾನಗಳು ಗಮನ ಸೆಳೆದಿವೆ. ಕಾಂಗ್ರೆಸ್ ಟಿಕೆಟ್‌ಗೆ ಅರ್ಜಿ ಸಲ್ಲಿಸಿದ್ದ ಮಾಜಿ ಶಾಸಕ ಎಸ್.ತಿಪ್ಪೇಸ್ವಾಮಿ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳುವ ಮುನ್ನವೇ ಬಿಜೆಪಿಗೆ ಮರಳಿ ಟಿಕೆಟ್ ಗಿಟ್ಟಿಸಿಕೊಂಡಿದ್ದಾರೆ. ಕೂಡ್ಲಿಗಿ ಶಾಸಕರಾಗಿದ್ದ ಎನ್.ವೈ. ಗೋಪಾಲಕೃಷ್ಣ ಬಿಜೆಪಿ ತೊರೆದು ಕ್ಷೇತ್ರಕ್ಕೆ ಮರಳಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಈ ಇಬ್ಬರ ಜಿದ್ದಾಜಿದ್ದಿಗೆ ಹಲವು ಚುನಾವಣೆಗಳು ಸಾಕ್ಷಿಯಾಗಿವೆ. 2018ರಲ್ಲಿ ಕಂಡಿದ್ದ ಸೋಲು ಹಾಗೂ ಪುತ್ರನ ಅಕಾಲಿಕ ಮರಣ ತಿಪ್ಪೇಸ್ವಾಮಿ ಅವರಿಗೆ ಅನುಕಂಪವಾಗಿ ಮಾರ್ಪಟ್ಟಿದೆ. ಹತ್ತು ವರ್ಷಗಳ ಹಿಂದೆ ಕೈತಪ್ಪಿದ್ದ ಕ್ಷೇತ್ರವನ್ನು ಮರಳಿ ಪಡೆಯುವ ಹುಮ್ಮಸ್ಸಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಇದ್ದಾರೆ. 'ಇದು ಕೊನೆಯ ಚುನಾವಣೆ' ಎಂಬ ಅಸ್ತ್ರವನ್ನು ಪ್ರಯೋಗಿಸಿ ಭಾವನಾತ್ಮಕವಾಗಿ ಮತ ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ.

ತುಮಕೂರು ಮೂರು ಪಕ್ಷಗಳಿಗೆ ಬಂಡಾಯದ ಬಿಸಿ: ಇರುವ ಕ್ಷೇತ್ರ ಉಳಿಸಿಕೊಳ್ಳಲು ಕೇಸರಿ ಪಡೆ ತಂತ್ರ

ಕಾಂಗ್ರೆಸ್, ಜೆಡಿಎಸ್‌ಗೆ ಬಿಜೆಪಿ ಅಡ್ಡಗಾಲು

• ಕೆ.ಜೆ. ಮರಿಯಪ್ಪ



ತುಮಕೂರು: ಜಿಲ್ಲೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಎರಡೂ ಬಲ ಹೆಚ್ಚಿಸಿಕೊಳ್ಳಲು ಪೈಪೋಟಿ ನಡೆಸಿದ್ದರೆ, ಬಿಜೆಪಿ ಈಗಿರುವ ಕ್ಷೇತ್ರಗಳನ್ನು ಉಳಿಸಿಕೊಳ್ಳಲು ಪ್ರಯಾಸ ಪಡುತ್ತಿದೆ. ಜಿಲ್ಲೆಯ 11 ಕ್ಷೇತ್ರಗಳಲ್ಲಿ ಒಂದೆರಡು ಕ್ಷೇತ್ರ ಹೊರತುಪಡಿಸಿದರೆ ಬಹುತೇಕ ಕಡೆಗಳಲ್ಲಿ ತ್ರಿಕೋನ ಸ್ಪರ್ಧೆಯಿದೆ.

ತೆಂಗು ಸೀಮೆಯಲ್ಲಿ ತ್ರಿಕೋನ ಸ್ಪರ್ಧೆ ಇದ್ದರೆ, ಶೇಂಗಾ ಬೆಳೆಯುವ ನಾಡು ಪಾವಗಡ ಭಾಗದಲ್ಲಿ ಜೆಡಿಎಸ್, ಕಾಂಗ್ರೆಸ್ ನಡುವೆ ಹಣಾಹಣಿ ಏರ್ಪಟ್ಟಿದೆ. ಮೂರು ಪಕ್ಷಗಳಿಗೂ ಪಕ್ಷಾಂತರ, ಬಂಡಾಯದ ಬಿಸಿ ಜೋರಾಗಿಯೇ ತಟ್ಟಿದೆ.

ಮಾಜಿ ಸಂಸದ ಎಸ್.ಪಿ.ಮುದ್ದಹನುಮೇಗೌಡ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದರೆ, ಮತ್ತೊಬ್ಬ ಮಾಜಿ ಶಾಸಕ ಎಸ್.ಶಫಿ ಅಹ್ಮದ್ 'ಕೈ' ಬಿಟ್ಟು 'ತೆನೆ' ಹೊತ್ತಿದ್ದಾರೆ. ಜೆಡಿಎಸ್ ಶಾಸಕರಾಗಿದ್ದ ಎಸ್.ಆರ್.ಶ್ರೀನಿವಾಸ್ (ಗುಬ್ಬಿ ಅಭ್ಯರ್ಥಿ), ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎಲ್. ಕಾಂತರಾಜ್ (ತುರುವೇಕೆರೆ ಅಭ್ಯರ್ಥಿ) ತೆನೆ ಹೊರೆ ಇಳಿಸಿ 'ಕೈ' ಹಿಡಿದಿದ್ದಾರೆ.

ಮಾಜಿ ಶಾಸಕ ಕೆ.ಎಸ್.ಕಿರಣ್ ಕುಮಾರ್ (ಚಿಕ್ಕನಾಯಕನಹಳ್ಳಿ) ಬಿಜೆಪಿ ಬಿಟ್ಟು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಟಿಕೆಟ್ ಸಿಗದೆ ಅಸಮಾಧಾನಗೊಂಡಿದ್ದ ಬಿಜೆಪಿ ಮಾಜಿ ಸಚಿವ ಸೊಗಡು ಶಿವಣ್ಣ (ತುಮಕೂರು ನಗರ) ಸ್ವತಂತ್ರವಾಗಿ ಸ್ಪರ್ಧಿಸಿದ್ದು, ಪಕ್ಷದ ಅಭ್ಯರ್ಥಿಗೆ ತಲೆನೋವಾಗಿದ್ದಾರೆ.

ಒಂದು ವರ್ಷದಿಂದಲೂ ಕಾಂಗ್ರೆಸ್ ಪರವಾಗಿ ಅಲೆ ಎಬ್ಬಿಸಲು ವಿವಿಧ ಜಾತಿ, ಸಮುದಾಯಗಳ ಸಮಾವೇಶ ಮಾಡಿಕೊಂಡು ಬಂದಿದ್ದು, ಈಗ ಅದರ ಮುಂದುವರಿದ ಭಾಗವೆಂಬಂತೆ 'ಗ್ಯಾರಂಟಿ ಕಾರ್ಡ್' ನೀಡುವ ಮೂಲಕ ನಾಯಕರು ಮತದಾರರ ಮನ ಮುಟ್ಟುತ್ತಿದ್ದಾರೆ.

ಆದರೆ, ಡಾ.ಜಿ.ಪರಮೇಶ್ವರ (ಕೊರಟಗೆರೆ), ಟಿ.ಬಿ. ಜಯಚಂದ್ರ (ಶಿರಾ), ಕೆ.ಎನ್.ರಾಜಣ್ಣ (ಮಧುಗಿರಿ) ಅವರಂತಹ ಹಿರಿಯ ನಾಯಕರಿದ್ದರೂ ತಮ್ಮ ಕ್ಷೇತ್ರ ಬಿಟ್ಟು ಹೊರಗೆ ಬಂದು ಪ್ರಚಾರ ಮಾಡುತ್ತಿಲ್ಲ. ಇದು ಇತರ ಕ್ಷೇತ್ರಗಳ ಮೇಲೂ ಪರಿಣಾಮ ಬೀರುತ್ತಿದೆ.

ಜೆಡಿಎಸ್ 'ಭದ್ರಕೋಟೆ'ಯ ಬಾಗಿಲನ್ನು ಮತ್ತಷ್ಟು ಭದ್ರಪಡಿಸಲು ದಳಪತಿಗಳು 'ಶಕ್ತಿ' ತುಂಬುವ ಕೆಲಸದಲ್ಲಿ ನಿರತರಾಗಿದ್ದಾರೆ. ಜಿಲ್ಲೆಯಲ್ಲಿ ಹಲವು ನಾಯಕರು ಜೆಡಿಎಸ್‌ನಿಂದ ಹೊರಗೆ ಹೋಗಿದ್ದು, ಮನೆ ಖಾಲಿಯಾಗಿದೆ. ತಳಮಟ್ಟದಲ್ಲಿ ಪಕ್ಷದ ನೆಲೆ ಗಟ್ಟಿಯಾಗಿದ್ದರೂ ಮತಗಳಾಗಿ ಪರಿವರ್ತಿಸುವ ನಾಯಕತ್ವ ಇಲ್ಲದಿರುವುದು ಕೊರತೆಯಾಗಿ ಕಾಡುತ್ತಿದೆ.

'ಲೋಕಸಭೆಯಲ್ಲಿ ಸೋಲಿಸಿ, ಕಣ್ಣಲ್ಲಿ ನೀರು ತರಿಸಿದವರ ಕಣ್ಣಲ್ಲೂ ನೀರು ತರಿಸಬೇಕು' ಎಂದು ಎಚ್.ಡಿ.ದೇವೇಗೌಡ ಪ್ರಚಾರದ ವೇಳೆ ಹೇಳಿರುವುದು ಸಾಕಷ್ಟು ಸದ್ದು ಮಾಡುತ್ತಿದೆ.

ಸರ್ಕಾರದ ಸಾಧನೆ, ನರೇಂದ್ರ ಮೋದಿ ಬಲದ ಮೇಲೆ ಬಿಜೆಪಿ ಚುನಾವಣೆ ಕಾರ್ಯತಂತ್ರ ಹೆಣೆದಿದೆ. ಆದರೆ ಇದಕ್ಕೆ ಬಂಡಾಯದ ಬಿಸಿ ತಟ್ಟಿದೆ. ಮತ್ತೊಂದೆಡೆ ಆಡಳಿತ ವಿರೋಧಿ ಅಲೆ ಬೆನ್ನು ಹತ್ತಿದೆ. ತುಮಕೂರು ನಗರ ಕ್ಷೇತ್ರದಲ್ಲಿ ಜಿ.ಬಿ.ಜ್ಯೋತಿಗಣೇಶ್ ಎದುರು ಮಾಜಿ ಸಚಿವ ಸೊಗಡು ಶಿವಣ್ಣ ಬಂಡಾಯವಾಗಿ ಸ್ಪರ್ಧಿಸಿದ್ದಾರೆ. ಶಿವಣ್ಣ 'ಶಕ್ತಿ' ಹೆಚ್ಚಾದಷ್ಟೂ ಜ್ಯೋತಿಗಣೇಶ್ ಅವರಿಗೆ ಸಂಕಷ್ಟ ಎದುರಾಗಲಿದೆ. ಕುಣಿಗಲ್‌ನಲ್ಲಿ ಎಸ್.ಪಿ.ಮುದ್ದಹನುಮೇಗೌಡ, ರಾಜೇಶ್‌ಗೌಡ ಬಂಡಾಯವನ್ನು ತಣಿಸಿದ್ದರೂ, ಚುನಾವಣೆ ಮೇಲೆ ಪರಿಣಾಮ ಇದ್ದೇ ಇದೆ. ಕೊರಟಗೆರೆ, ಗುಬ್ಬಿಯಲ್ಲೂ ಬಂಡಾಯದ ಬಿಸಿ ಬಿರುಸಾಗಿದೆ.

ಮುಖ್ಯಮಂತ್ರಿ ಸ್ಥಾನದ ರೇಸ್‌ನಲ್ಲಿ ಇರುವ ಡಾ.ಜಿ. ಪರಮೇಶ್ವರ ಸ್ಪರ್ಧೆಯಿಂದ ಕೊರಟಗೆರೆ (ಪರಿಶಿಷ್ಟ ಜಾತಿ ಮೀಸಲು) 'ಹೈ ವೋಲ್ಟೇಜ್' ಕ್ಷೇತ್ರವಾಗಿದೆ. ಸುಧಾಕರ್‌ಲಾಲ್ (ಜೆಡಿಎಸ್) ಎದುರಾಳಿ. ಈವರೆಗೆ ನೇರ ಹಣಾಹಣಿಯ ಕ್ಷೇತ್ರವಾಗಿದ್ದು, ನಿವೃತ್ತ ಐಎಎಸ್ ಅಧಿಕಾರಿ ಅನಿಲ್ ಕುಮಾರ್ (ಬಿಜೆಪಿ) ಸ್ಪರ್ಧೆಯಿಂದ ತ್ರಿಕೋನ ಸ್ಪರ್ಧೆ ಇದೆ. ಅಧಿಕ ಸಂಖ್ಯೆಯಲ್ಲಿರುವ ಪರಿಶಿಷ್ಟ ಜಾತಿಯ ಎಡಗೈ–ಬಲಗೈ ಸಮುದಾಯದ ಮತಗಳ ಮೇಲೆ ಮೂವರೂ ಕೇಂದ್ರೀಕರಿಸಿದ್ದಾರೆ. ಅನಿಲ್ ಕುಮಾರ್ ಎಡಗೈ ಸಮುದಾಯಕ್ಕೆ ಸೇರಿದ್ದು, ಆ ಮತಗಳನ್ನು ಹೆಚ್ಚು ಸೆಳೆಯಬಹುದು ಎಂದು ಹೇಳಲಾಗುತ್ತಿದೆ. ಈವರೆಗೆ ಪರಮೇಶ್ವರ ಕೈ ಹಿಡಿದಿದ್ದ ಈ ಸಮುದಾಯ ಕೈಕೊಡಬಹುದು ಎಂಬ ಆತಂಕ ಕಾಡುತ್ತಿದೆ. ಪರಮೇಶ್ವರ ತಲೆ ಮೇಲೆ ಕಲ್ಲುಬಿದ್ದ ವಿಚಾರ ಹೆಚ್ಚು ಸದ್ದು ಮಾಡುತ್ತಿದ್ದು, ಒಂದಷ್ಟು ನೆರವಾಗಬಹುದು ಎಂದು ಹೇಳಲಾಗುತ್ತಿದೆ. ಬಿಜೆಪಿಗೆ ಬಂಡಾಯ (ಕೆ.ಎಂ.ಮುನಿಯಪ್ಪ ಸ್ಪರ್ಧೆ) ತೊಡಕಾಗಿದೆ.

ಈವರೆಗೆ ಬಿಜೆಪಿ, ಕಾಂಗ್ರೆಸ್ ಹೋರಾಟದ ಕಣವಾಗಿದ್ದ ತಿಪಟೂರಿನಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಸಚಿವ ಬಿ.ಸಿ.ನಾಗೇಶ್ (ಬಿಜೆಪಿ), ಕೆ.ಷಡಕ್ಷರಿ (ಕಾಂಗ್ರೆಸ್), ಕೆ.ಟಿ.ಶಾಂತಕುಮಾರ್ (ಜೆಡಿಎಸ್) ಕಣದಲ್ಲಿ ಇದ್ದಾರೆ. ಆಡಳಿತ ವಿರೋಧಿ ಅಲೆಯನ್ನು ಹಿಮ್ಮೆಟ್ಟಿಸಲು ನಾಗೇಶ್ ಪ್ರಯಾಸ ಪಡುತ್ತಿದ್ದರೆ, ಅದನ್ನೇ ಲಾಭ ಮಾಡಿಕೊಳ್ಳಲು ಕಾಂಗ್ರೆಸ್ ಹವಣಿಸುತ್ತಿದೆ.

ಶಿರಾದಲ್ಲಿ ಟಿ.ಬಿ.ಜಯಚಂದ್ರ (ಕಾಂಗ್ರೆಸ್) ಇದೇ ಕೊನೆ ಚುನಾವಣೆ ಎಂದು ಅನುಕಂಪದ ಮೊರೆ ಹೋಗಿದ್ದಾರೆ. ಕಾಂಗ್ರೆಸ್ ತೊರೆದು ಬಂದ ನಾಯಕರು ಜೆಡಿಎಸ್‌ಗೆ (ಆರ್.ಉಗ್ರೇಶ್) ಬಲ ತುಂಬಿದ್ದರೆ, ಬಿಜೆಪಿಯ ಡಾ.ಸಿ.ಎಂ.ರಾಜೇಶ್‌ಗೌಡ ಅವರಿಗೆ ಉಪಚುನಾವಣೆಯಲ್ಲಿ ಶಕ್ತಿ ಕೊಟ್ಟ ನಾಯಕರು ಈಗ ಜತೆಯಲ್ಲಿ ಇಲ್ಲದಿರುವುದು ಫಲಿತಾಂಶದ ಮೇಲೆ ಪರಿಣಾಮ ಬೀರಬಹುದು.

ಎಸ್.ಆರ್.ಶ್ರೀನಿವಾಸ್ (ಗುಬ್ಬಿ) ಕಾಂಗ್ರೆಸ್ ಸೇರುತ್ತಿದ್ದಂತೆ ಆ ಪಕ್ಷದ ನಾಯಕರು ಹೊರನಡೆದರು. ಆದ್ದರಿಂದ ಏಕಾಂಗಿ ಹೋರಾಟ ನಡೆಸಿದ್ದಾರೆ. ಎಸ್.ಡಿ.ದಿಲೀಪ್ ಕುಮಾರ್ (ಬಿಜೆಪಿ) ಟಿಕೆಟ್ ಘೋಷಣೆ ನಂತರ ಹಲವು ಮುಖಂಡರು ಪಕ್ಷ ತೊರೆದಿದ್ದು, ಅವರದ್ದೂ ಇದೇ ಕಥೆ. ಕೈ, ಕಮಲ ಬಿಟ್ಟವರು ಜೆಡಿಎಸ್ (ಬಿ.ಎಸ್.ನಾಗರಾಜು) ಬಲ ಹೆಚ್ಚಿಸಿದ್ದಾರೆ.

ಕುಣಿಗಲ್‌ನಲ್ಲಿ ಶಾಸಕ, ಕಾಂಗ್ರೆಸ್ ಅಭ್ಯರ್ಥಿ ಡಾ.ಎಚ್.ಡಿ.ರಂಗನಾಥ್‌ಗೆ ಮಾಜಿ ಶಾಸಕ ಬಿ.ಬಿ.ರಾಮಸ್ವಾಮಿಗೌಡ ಬಂಡಾಯ ಸ್ಪರ್ಧೆ ದುಬಾರಿಯಾಗಿದೆ. ಇಲ್ಲಿ ಸತತ ಮೂರು ಬಾರಿ ಸೋಲುಂಡಿರುವ ಡಿ.ಕೃಷ್ಣಕುಮಾರ್ ಕೊನೆಯ ಅವಕಾಶಕ್ಕೆ ಬೇಡಿಕೆ ಸಲ್ಲಿಸಿದ್ದಾರೆ. ಜೆಡಿಎಸ್ ಹೊಸ ಮುಖ ಡಾ.ಎನ್.ಬಿ.ರವಿ ಅವರನ್ನು ಕಣಕ್ಕಿಳಿಸಿದೆ.

ತುಮಕೂರು ಗ್ರಾಮಾಂತರದಲ್ಲಿ ಕ್ಷೇತ್ರದ ಪರಿಚಯವೇ ಇಲ್ಲದ ಷಣ್ಮುಖಪ್ಪ (ಕಾಂಗ್ರೆಸ್) ಅವರನ್ನು ಕಣಕ್ಕಿಳಿಸಿದೆ. ಜೆಡಿಎಸ್ (ಡಿ.ಸಿ.ಗೌರಿಶಂಕರ್)– ಕಾಂಗ್ರೆಸ್ ನಡುವಿನ ಒಳ ಒಪ್ಪಂದ ಬಿಜೆಪಿ (ಬಿ.ಸುರೇಶ್‌ಗೌಡ) ಮೇಲೆ ಪರಿಣಾಮ ಬೀರಲಿದೆ.

ಜೆ.ಸಿ.ಮಾಧುಸ್ವಾಮಿಗೆ ಪ್ರಬಲ ಸವಾಲು

ಸಚಿವ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಅವರಿಗೆ ಗೆಲ್ಲುವುದು ಪ್ರತಿಷ್ಠೆಯಾಗಿದ್ದು, ಹಿಂದೆ ತಮ್ಮದೇ ಪಕ್ಷದಲ್ಲಿದ್ದ ಕೆ.ಎಸ್.ಕಿರಣ್ ಕುಮಾರ್ (ಕಾಂಗ್ರೆಸ್) ಎದುರಾಳಿ. ಜೆಡಿಎಸ್‌ನ ಬಿ.ಸಿ.ಸುರೇಶ್ ಬಾಬು ಸಾಕಷ್ಟು ಪೈಪೋಟಿ ನೀಡುತ್ತಿದ್ದಾರೆ. ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಠೇವಣಿ ಕಳೆದುಕೊಂಡಿದ್ದೇ ಹೆಚ್ಚು. ಈಗ ಕಿರಣ್ ಕುಮಾರ್ ಸ್ಪರ್ಧೆಯಿಂದ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಅವರಿಗೆ ಬಿಜೆಪಿ ನಂಟು ಇನ್ನೂ ಬಿಟ್ಟಿಲ್ಲ. ಆ ಪಕ್ಷದ ಮತಬುಟ್ಟಿಗೆ ಕೈ ಹಾಕಿದ್ದು, ಅವರ ತಕ್ಕಡಿ ತುಂಬಿದಷ್ಟೂ ಮಾಧುಸ್ವಾಮಿ ಅವರಿಗೆ ಸಂಕಷ್ಟ ಎದುರಾಗಬಹುದು.

ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ತುಮಕೂರು	ಕಾಂಗ್ರೆಸ್	ಬಿಜೆಪಿ
ತುಮಕೂರು ಗ್ರಾಮಾಂತರ	ಬಿಜೆಪಿ	ಜೆಡಿಎಸ್
ಕೊರಟಗೆರೆ	ಜೆಡಿಎಸ್	ಕಾಂಗ್ರೆಸ್
ಮಧುಗಿರಿ	ಕಾಂಗ್ರೆಸ್	ಜೆಡಿಎಸ್
ಪಾವಗಡ	ಜೆಡಿಎಸ್	ಕಾಂಗ್ರೆಸ್
ಶಿರಾ	ಕಾಂಗ್ರೆಸ್	ಜೆಡಿಎಸ್
ಚಿಕ್ಕನಾಯಕನಹಳ್ಳಿ	ಜೆಡಿಎಸ್	ಬಿಜೆಪಿ
ತಿಪಟೂರು	ಕಾಂಗ್ರೆಸ್	ಬಿಜೆಪಿ
ತುರುವೇಕೆರೆ	ಜೆಡಿಎಸ್	ಬಿಜೆಪಿ
ಗುಬ್ಬಿ	ಜೆಡಿಎಸ್	ಜೆಡಿಎಸ್
ಕುಣಿಗಲ್	ಜೆಡಿಎಸ್	ಕಾಂಗ್ರೆಸ್
2020ರ ಉಪಚುನಾವಣೆ		
ಶಿರಾ	ಬಿಜೆಪಿ	

ಸಾಕ್ಷಾತ್ ಸಮೀಕ್ಷೆ

ಬೆಂಗಳೂರು ಗ್ರಾಮಾಂತರ ಅಭಿವೃದ್ಧಿ ಗೌಣ; ಕುಟುಂಬ ಪ್ರತಿಷ್ಠೆಯ ರಾಜಕಾರಣದ್ದೇ ಮೇಲಾಟ

'ಕೋಟಿ ಕುಳ'ಗಳಿಂದ ರಂಗೇರಿದ ಅಖಾಡ!

• ಸುಬ್ರಮಣ್ಯ ಎಚ್.ಎಂ.

ಬೆಂಗಳೂರು: ದೇವನಹಳ್ಳಿಯಲ್ಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದೊಂದಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚಿತ್ರಣವೇ ಬದಲಾಗಿದೆ. ಪಾಳು ಬಿದ್ದಿದ್ದ ಭೂಮಿಗೂ ಚಿನ್ನದ ಬೆಲೆ ಕುದುರಿದ ಕಾರಣ ರಿಯಲ್ ಎಸ್ಟೇಟ್ ಉದ್ಯಮ ರಾಜಧಾನಿ ಬೆಂಗಳೂರು ನಗರದಿಂದ ಗ್ರಾಮಾಂತರ ಜಿಲ್ಲೆಗೂ ಕಾಲಿಟ್ಟಿತು.

ರಾಜಧಾನಿ ಸೆರಗಿನಲ್ಲಿದ್ದರೂ ಗ್ರಾಮೀಣ ಸೊಗಡು ಉಳಿಸಿಕೊಂಡಿದ್ದ ಜಿಲ್ಲೆ ಎರಡು, ಮೂರು ದಶಕಗಳಿಂದ ಈಚೆಗೆ ಸಂಪೂರ್ಣವಾಗಿ ಬದಲಾಗಿದೆ. ಗಗನಚುಂಬಿ ಕಟ್ಟಡ, ವಿಲಾಸಿ ಅಪಾರ್ಟ್‌ಮೆಂಟ್, ಪ್ರತಿಷ್ಠಿತ ಶಿಕ್ಷಣ ಸಂಸ್ಥೆ, ಬಹುರಾಷ್ಟ್ರೀಯ ಮತ್ತು ಸಾಫ್ಟ್‌ವೇರ್ ಕಂಪನಿ, ತಾರಾ ಹೋಟೆಲ್ ತಲೆ ಎತ್ತಿವೆ.

ಜೀವನ ವಿಧಾನದ ಮೇಲೆ ಮಾತ್ರವಲ್ಲ, ಜಿಲ್ಲೆಯ ರಾಜಕಾರಣದ ಮೇಲೂ ರಿಯಲ್ ಎಸ್ಟೇಟ್ ಉದ್ಯಮದ ಹಣ ದಟ್ಟ ಪ್ರಭಾವ ಬೀರಿದೆ. ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಕ್ಷೇತ್ರಗಳ ಜೊತೆ ರಾಜಕಾರಣದ ಮೇಲೆಯೂ ರಿಯಲ್ ಎಸ್ಟೇಟ್ ಕುಳಗಳು ಹಿಡಿತ ಸಾಧಿಸಿದ್ದಾರೆ.

ಇದರೊಂದಿಗೆ ಸಭ್ಯ ರಾಜಕಾರಣ ನೇಪಥ್ಯಕ್ಕೆ ಸರಿದು ಕೋಟಿ ಕುಳಗಳ ಅಬ್ಬರದ ರಾಜಕಾರಣ ಶುರುವಾಗಿದೆ. ಭೂಮಿಯನ್ನು ಖರೀದಿಸಿದಂತೆ ರಾಜಕಾರಣವನ್ನೂ ಖರೀದಿಸುವ ವಿಶ್ವಾಸದೊಂದಿಗೆ ರಿಯಲ್ ಎಸ್ಟೇಟ್ ಉದ್ಯಮಿಗಳು ರಾಜಕಾರಣ ಪ್ರವೇಶಿಸಿದ್ದಾರೆ. ಚುನಾವಣೆಗೂ ಮೊದಲೇ ಸಮಾಜ ಸೇವೆ, ಮಕ್ಕಳಿಗೆ ಸಮವಸ್ತ್ರ, ನೋಟ್‌ಬುಕ್, ಮಹಿಳೆಯರಿಗೆ ಕುಕ್ಕರ್ ವಿತರಣೆ, ಯುವಕರಿಗೆ ಕ್ರೀಡಾ ಪಂದ್ಯಾವಳಿ, ಆಸ್ತಿಕರಿಗೆ ಪುಣ್ಯಕ್ಷೇತ್ರಗಳ ಪ್ರವಾಸ ಆಯೋಜಿಸಿದ್ದಾರೆ.

ಹೊಸಕೋಟೆ, ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಗೆ ಸೇರುತ್ತದೆ. ಬಹುತೇಕ ಕ್ಷೇತ್ರಗಳಲ್ಲಿ ರಿಯಲ್ ಎಸ್ಟೇಟ್ ಹಣ ಮತ್ತು ಕುಟುಂಬ ರಾಜಕಾರಣದ ಸದ್ದು ಜೋರಾಗಿದೆ. ಇಲ್ಲಿ ಅಭಿವೃದ್ಧಿ ಚರ್ಚೆ ಗೌಣ. ಜಾತಿ ಸಮೀಕರಣ, ಹಣಬಲ, ತೋಳ್ಬಲ ಮತ್ತು ಕುಟುಂಬ ಪ್ರತಿಷ್ಠೆಯೇ ಇಲ್ಲಿಯ ರಾಜಕಾರಣದ ಹೂರಣ!

ರಾಜ್ಯದಲ್ಲಿಯೇ ಅತ್ಯಂತ ಶ್ರೀಮಂತ ಅಭ್ಯರ್ಥಿ ಎಂಬ ಹೆಗ್ಗಳಿಕೆ ಹೊಂದಿರುವ ಸಾವಿರಾರು ಕೋಟಿಗಳ ಒಡೆಯ ಎಂಟಿಬಿ ನಾಗರಾಜ್ ಹೊಸಕೋಟೆ ಅಖಾಡದಲ್ಲಿದ್ದಾರೆ. ಸಾಂಪ್ರದಾಯಿಕ ಎದುರಾಳಿಗಳಾದ ಚಿಕ್ಕಬಳ್ಳಾಪುರ ಬಿಜೆಪಿ ಸಂಸದ ಬಿ.ಎನ್. ಬಚ್ಚೇಗೌಡ ಮತ್ತು ಎಂಟಿಬಿ ನಾಗರಾಜ್ ಕುಟುಂಬಗಳ ನಡುವಿನ ಜಿದ್ದಾಜಿದ್ದಿನಿಂದಾಗಿ ಹೊಸಕೋಟೆ ರಾಜ್ಯದ ಗಮನ ಸೆಳೆದಿದೆ.

ಬಚ್ಚೇಗೌಡ ಕುಟುಂಬದ ಕುಡಿ, ಶಾಸಕ ಶರತ್ ಬಚ್ಚೇಗೌಡ ಮತ್ತು ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್ ಮತ್ತೆ ಮುಖಾಮುಖಿಯಾಗಿದ್ದಾರೆ. 2018ರಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಎಂಟಿಬಿ ನಾಗರಾಜ್ ಈ ಬಾರಿ ಬಿಜೆಪಿಯಿಂದಲೂ ಮತ್ತು ಬಿಜೆಪಿಯಿಂದ ಸ್ಪರ್ಧಿಸಿದ್ದ ಶರತ್ ಬಚ್ಚೇಗೌಡ ಕಾಂಗ್ರೆಸ್‌ನಿಂದಲೂ ಸ್ಪರ್ಧಿಸುತ್ತಿದ್ದಾರೆ. ಇಲ್ಲಿ ಪಕ್ಷಕ್ಕಿಂತ ವ್ಯಕ್ತಿ ಮತ್ತು ಕುಟುಂಬ ಪ್ರತಿಷ್ಠೆ ಮುಖ್ಯವಾಗಿದೆ.



ಆರನೇ ಬಾರಿ ವಿಧಾನ ಸಭಾ ಚುನಾವಣೆಗೆ ಸ್ಪರ್ಧಿಸುತ್ತಿರುವ ಎಂಟಿಬಿ ನಾಗರಾಜ್ ಇದು ತಮ್ಮ ಕೊನೆಯ ಚುನಾವಣೆ ಎಂದು ಘೋಷಿಸಿಕೊಂಡಿದ್ದಾರೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿದ್ದ ನಾಗರಾಜ್ 2019ರ ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸ್ವತಂತ್ರ ಅಭ್ಯರ್ಥಿ ಶರತ್ ಬಚ್ಚೇಗೌಡ ಎದುರು ಸೋತಿದ್ದರು. ಶರತ್ ಕಾಂಗ್ರೆಸ್ ಸೇರಿದರೆ, ವಿಧಾನ ಪರಿಷತ್‌ಗೆ ಆಯ್ಕೆಯಾಗುವ ಮೂಲಕ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿ ಎಂಟಿಬಿ ಸಮಾಧಾನಪಟ್ಟುಕೊಂಡಿದ್ದರು.

ಉಪ ಚುನಾವಣೆಯಲ್ಲಿ ಎಂಟಿಬಿ ಮತದಾರರ ಕೋಪ ಎದುರಿಸಬೇಕಾಯಿತು. ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಭೈರತಿ ಸುರೇಶ್ ಪತ್ನಿ ಪದ್ಮಾವತಿ ಹಾಗೂ ಎಂಟಿಬಿ ನಡುವೆ ಕುರುಬ ಸಮುದಾಯದ ಮತಗಳು ಚದುರಿ ಹೋಗಿ ಶರತ್ ಗೆಲುವು ಸುಲಭವಾಗಿತ್ತು. ಈ ಬಾರಿ ಆ ವಾತಾವರಣ ಇಲ್ಲ. ಶರತ್ ಮತ್ತು ಎಂಟಿಬಿ ನಡುವೆ ನೇರ ಹಣಾಹಣಿ ಇದೆ.

ಶರತ್ ಹಾಗೂ ಪತ್ನಿ ಪ್ರತಿಭಾ ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಿದವರು. ಯುವ ಸಮೂಹವನ್ನು ಸೆಳೆಯುವಲ್ಲಿ ದಂಪತಿ ಯಶ ಕಂಡಿದ್ದಾರೆ. ಯುವ ಜನರ ನಿರೀಕ್ಷೆಗೆ ತಕ್ಕಂತೆ ಕ್ಷೇತ್ರದಲ್ಲಿ ಕೆಲಸ ಮಾಡಿರುವುದು ಅವರ 'ಪ್ಲಸ್ ಪಾಯಿಂಟ್'. ಒಕ್ಕಲಿಗ ಸಮುದಾಯದ ಶರತ್ ತಮ್ಮ ಸಮುದಾಯದ ಮತಗಳು ಚದುರದಂತೆ ಭದ್ರ ಮಾಡಿಕೊಂಡಿದ್ದಾರೆ.

ನಿರಂತರವಾಗಿ ಒಂದಲ್ಲ ಒಂದು ವಿಷಯದಲ್ಲಿ ಉಭಯ ನಾಯಕರು ಸುದ್ದಿಯಲ್ಲಿದ್ದರು. ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರ ಉಲ್ಲಂಘನೆ,ಶಕ್ತಿ ಪ್ರದರ್ಶನದ ಮೂಲಕ ರಾಜಕೀಯ ಮೇಲಾಟ ನಡೆಸಿದ್ದರು.

ಬೂತ್ ರಿಗ್ಗಿಂಗ್, ಅಡ್ಡ ಮತದಾನಗಳ ಮೂಲಕ ರಾಜ್ಯ ಮಟ್ಟದಲ್ಲಿ 'ಮಿನಿ ಬಿಹಾರ' ಎಂದು ಕುಖ್ಯಾತಿಗೆ ಒಳಗಾ ಗಿದ್ದ ಹೊಸಕೋಟೆ ಕ್ಷೇತ್ರದಲ್ಲಿ ಈಗ ಕೊಂಚ ಬದಲಾವಣೆ ಗಾಳಿ ಬೀಸಿ ತೊಡಗಿದೆ.

ಕಾಂಗ್ರೆಸ್ ಹಿರಿಯ ನಾಯಕ, ಕೇಂದ್ರ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ ಸ್ಪರ್ಧೆಯಿಂದ ದೇವನಹಳ್ಳಿ ಮೀಸಲು ಕ್ಷೇತ್ರ ಗಮನ ಸೆಳೆದಿದೆ. ಇಷ್ಟು ವರ್ಷ ರಾಷ್ಟ್ರ ರಾಜಕಾರಣಕ್ಕೆ ಸೀಮಿತವಾಗಿದ್ದ ಅವರು ಕೋಲಾರದಿಂದ ದೇವನಹಳ್ಳಿಗೆ ವಲಸೆ ಬಂದಿದ್ದಾರೆ.

ಅಪಾರ ರಾಜಕೀಯ ಅನುಭವ ಅವರ ಬೆನ್ನಿಗಿದೆ. ಗೆಲುವಿನ ತಂತ್ರ ರೂಪಿಸುವಲ್ಲಿ ಅವರು ರಾಜಕೀಯ ನಿಪುಣರು. ಪರಿಶಿಷ್ಟ ಜಾತಿಯ ಎಡಗೈ ಸಮುದಾಯ ಹಾಗೂ ಕಾಂಗ್ರೆಸ್ ಸಾಂಪ್ರದಾಯಿಕ ಮತಗಳನ್ನು ನೆಚ್ಚಿಕೊಂಡಿದ್ದಾರೆ.

ಜೆಡಿಎಸ್ ಅಭ್ಯರ್ಥಿ ನಿಸರ್ಗ ನಾರಾಯಣಸ್ವಾಮಿ ಎರಡನೇ ಬಾರಿಗೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಗ್ರಾಮಗಳಿಗೆ ಸಿಮೆಂಟ್ ರಸ್ತೆ, ಚರಂಡಿ, ಕುಡಿಯುವ ನೀರಿನಂತಹ ಅಭಿವೃದ್ಧಿ ಕೆಲಸಗಳನ್ನು ಮುಂದಿಟ್ಟುಕೊಂಡು ಮತ ಕೇಳುತ್ತಿದ್ದಾರೆ. ಜೆಡಿಎಸ್ ಸಾಂಪ್ರದಾಯಿಕ ಮತ (ಒಕ್ಕಲಿಗ) ಹಾಗೂ ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ಮತ ನೆಚ್ಚಿಕೊಂಡಿದ್ದಾರೆ.

2018ರ ಚುನಾವಣೆಯಲ್ಲಿ ಜೆಡಿಎಸ್ 'ಬಿ' ಫಾರಂ ಪಡೆದಿದ್ದರೂ ಅಂತಿಮ ಕ್ಷಣದಲ್ಲಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದ ಮಾಜಿ ಶಾಸಕ ಪಿಳ್ಳಮುನಿಶಾಮಪ್ಪ ಈಗ ಬಿಜೆಪಿ ಅಭ್ಯರ್ಥಿ. ಸ್ಥಳೀಯವಾಗಿ ಬಿಜೆಪಿಗೆ ಕಾರ್ಯಕರ್ತರ ಪಡೆ ಇಲ್ಲದಿರುವುದು ಅವರಿಗೆ 'ಮೈನಸ್ ಪಾಯಿಂಟ್'. ಎಡಗೈ ಸಮುದಾಯದ ಪಿಳ್ಳಮುನಿಶಾಮಪ್ಪ ಮತ್ತು ಅದೇ ಸಮುದಾಯದ ಕಾಂಗ್ರೆಸ್‌ನ ಕೆ.ಎಚ್ ಮುನಿಯಪ್ಪ ನಡುವೆ ಮತಗಳು ಹಂಚಿ ಹೋಗುವ ಸಾಧ್ಯತೆ ಇದೆ. ಕ್ಷೇತ್ರದಲ್ಲಿ ಮೇಲ್ನೋಟಕ್ಕೆ ತ್ರಿಕೋನ ಸ್ಪರ್ಧೆ ರೀತಿಯಂತೆ ಕಂಡರೂ ನೇರಾ ಹಣಾಹಣಿ ಇರುವುದು ನಿಸರ್ಗ ನಾರಾಯಣಸ್ವಾಮಿ ಹಾಗೂ ಕೆ.ಎಚ್ ಮುನಿಯಪ್ಪ ನಡುವೆ.

ಎಸ್.ಸಿ ಮೀಸಲು ಕ್ಷೇತ್ರವಾಗಿರುವ ನೆಲಮಂಗಲದಲ್ಲಿ ಎರಡು ಬಾರಿ ಜೆಡಿಎಸ್‌ನಿಂದ ಆಯ್ಕೆಯಾಗಿರುವ ಡಾ.ಕೆ.ಶ್ರೀನಿವಾಸಮೂರ್ತಿ ಮೂರನೇ ಸಲವೂ ಜೆಡಿಎಸ್ ಹುರಿಯಾಳು. ಒಕ್ಕಲಿಗ ಮತಗಳ ಜೊತೆ ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ಮತಗಳನ್ನು ನೆಚ್ಚಿಕೊಂಡಿದ್ದಾರೆ. ಹೊಸ ಮುಖಗಳಿಗೆ ಟಿಕೆಟ್ ನೀಡಿ ಹೊಸ ಪ್ರಯೋಗಕ್ಕೆ ಮುಂದಾಗಿರುವ ಬಿಜೆಪಿಯು ನೆಲಮಂಗಲದಲ್ಲೂ ಇಂತಹ ಪ್ರಯೋಗ ನಡೆಸಿದೆ. ಈ ಬಾರಿ ಬಿಜೆಪಿಯಿಂದ ಲಂಬಾಣಿ ಸಮುದಾಯದ ಸಪ್ತಗಿರಿ ಶಂಕರ್ ನಾಯ್ಕ್ ಅಭ್ಯರ್ಥಿ.

ಕಾಂಗ್ರೆಸ್ ಮಹಿಳಾ ಕಾರ್ಮಿಕ ಘಟಕದ ಅಧ್ಯಕ್ಷೆಯಾಗಿದ್ದ ಉಮಾದೇವಿ ಕಾಂಗ್ರೆಸ್ ಟಿಕೆಟ್ ಪ್ರಬಲ ಆಕಾಂಕ್ಷಿಯಾಗಿದ್ದರು. ಅವರಿಗೆ ಟಿಕೆಟ್ ಗ್ಯಾರಂಟಿ ಎಂಬ ವಾತಾವರಣ ಇತ್ತು. ಆದರೆ, ಏಕಾಏಕಿ ಎನ್. ಶ್ರೀನಿವಾಸ್ ಅವರಿಗೆ ಟಿಕೆಟ್ ನೀಡಿದ್ದು ಸಹಜವಾಗಿ ಬಣ ರಾಜಕೀಯಕ್ಕೆ ನಾಂದಿ ಹಾಡಿದಂತಾಗಿದೆ.

ನೆಲಮಂಗಲ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಒಕ್ಕಲಿಗ ಮತದಾರರೇ ನಿರ್ಣಾಯಕರಾಗಿದ್ದಾರೆ. ನಗರ ಪ್ರದೇಶದಲ್ಲಿ ಬಿಜೆಪಿ ಹಿಡಿತವಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಜೆಡಿಎಸ್ ಹಾಗೂ ಕಾಂಗ್ರೆಸ್ ಸರಿಸಮನಾದ ಮತ ಬ್ಯಾಂಕ್ ಹೊಂದಿವೆ.

ಹ್ಯಾಟ್ರಿಕ್ ಕನಸಿಗೆ ಬಿಜೆಪಿ ತೊಡರುಗಾಲು

ದೊಡ್ಡಬಳ್ಳಾಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಟಿ.ವೆಂಕಟರಮಣಯ್ಯ ಹ್ಯಾಟ್ರಿಕ್ ಗೆಲುವು ಸಾಧಿಸುವ ತವಕದಲ್ಲಿ ಇದ್ದಾರೆ. ಬಿಜೆಪಿಯ ಯುವ ಅಭ್ಯರ್ಥಿ ಧೀರಜ್ ಮುನಿರಾಜು, ಜೆಡಿಎಸ್‌ನ ಮುನೇಗೌಡ ಪ್ರಬಲ ಸ್ಪರ್ಧೆಯಿಂದ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ವೆಂಕಟರಮಣಯ್ಯ ಅವರಿಗೆ ಈ ಬಾರಿ ಟಿಕೆಟ್ ನೀಡಬಾರದು ಎಂದು ಪಕ್ಷದಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು. ಡಿಕೆಶಿ ಸಹೋದರರು ಖುದ್ದು ಭಿನ್ನಮತ ಶಮನಕ್ಕೆ ಮುಂದಾದರೂ ಯಶ ಕಾಣಲಿಲ್ಲ. ಅಂತಿಮವಾಗಿ ಕಾಂಗ್ರೆಸ್ ಭಿನ್ನಮತೀಯರು ಬಿಜೆಪಿ ಸೇರುವ ಮೂಲಕ ಸಮಸ್ಯೆ ಬಗೆಹರಿಯಿತು. ಇದನ್ನೇ ಸವಾಲಾಗಿ ಸ್ವೀಕರಿಸಿದ ಶಾಸಕರು, ಬಿಜೆಪಿ ನಗರ ಘಟಕದ ಅಧ್ಯಕ್ಷ, ಕೆಲ ನಗರಸಭೆ ಸದಸ್ಯರನ್ನು ತಮ್ಮತ್ತ ಸೆಳೆದು ತಿರುಗೇಟು ನೀಡಿದರು.

ಮೂರು ಬಾರಿ ಸೋತಿರುವ ಬಿ.ಮುನೇಗೌಡ ಅನುಕಂಪದ ಆಧಾರದ ಮೇಲೆ ಮತ ಕೇಳುತ್ತಿದ್ದಾರೆ. ಕೋವಿಡ್ ಸಮಯದಲ್ಲಿ ಕಿಟ್ ಹಂಚಿಕೆ ಮೂಲಕ ರಾಜಕೀಯ ಪ್ರವೇಶ ಮಾಡಿದ ಧೀರಜ್ ಮುನಿರಾಜು ನಂತರದಲ್ಲಿ ಹಲವು ಸಮಾಜ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಬಿಜೆಪಿ ಟಿಕೆಟ್ ಪಡೆಯುವಲ್ಲಿ ಯಶ ಕಂಡಿದ್ದಾರೆ. ಧೀರಜ್‌ಗೆ ಯುವ ಜನರ ಬೆಂಬಲ ಕಾಣುತ್ತಿದೆ. ಆದರೆ, ಅದು ಎಷ್ಟರ ಮಟ್ಟಿಗೆ ಮತಗಳಾಗಿ ಪರಿವರ್ತನೆಯಾಗುತ್ತದೆ ಗೊತ್ತಿಲ್ಲ.

ಕಾಂಗ್ರೆಸ್‌ನ ವೆಂಕಟರಮಣಯ್ಯ, ಜೆಡಿಎಸ್‌ನ ಮುನೇಗೌಡ ಒಕ್ಕಲಿಗ ಸಮುದಾಯಕ್ಕೆ, ಬಿಜೆಪಿಯ ಧೀರಜ್ ಮುನಿರಾಜು ಯಾದವ ಸಮುದಾಯಕ್ಕೆ ಸೇರಿದ್ದಾರೆ. ಕ್ಷೇತ್ರದಲ್ಲಿ ಒಕ್ಕಲಿಗ ಮತದಾರರು ಬಹು ಸಂಖ್ಯೆಯಲ್ಲಿ ಇದ್ದಾರೆ.

ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ದೊಡ್ಡಬಳ್ಳಾಪುರ	ಕಾಂಗ್ರೆಸ್	ಕಾಂಗ್ರೆಸ್
ದೇವನಹಳ್ಳಿ	ಜೆಡಿಎಸ್	ಜೆಡಿಎಸ್
ನೆಲಮಂಗಲ	ಜೆಡಿಎಸ್	ಜೆಡಿಎಸ್
ಹೊಸಕೋಟೆ	ಕಾಂಗ್ರೆಸ್	ಕಾಂಗ್ರೆಸ್

ಹೊಸಕೋಟೆ: 2019ರ ವಿಧಾನಸಭೆ ಉಪಚುನಾವಣೆಯಲ್ಲಿ ಎಂಟಿಬಿ ನಾಗರಾಜ್ ಕಾಂಗ್ರೆಸ್ ತೊರೆದು ಬಿಜೆಪಿಯಿಂದ ಸ್ಪರ್ಧಿಸಿ ಪರಾಭವಗೊಂಡಿದ್ದರು. ಶರತ್ ಬಚ್ಚೇಗೌಡ ಪಕ್ಷೇತರ ಅಭ್ಯರ್ಥಿಯಾಗಿ ಗೆದ್ದು, ನಂತರ ಕಾಂಗ್ರೆಸ್ ಸೇರಿದ್ದರು

ಕಾಂಗ್ರೆಸ್ ಮುಖಂಡನ ಮನೆ ಮೇಲೆ ಐಟಿ ದಾಳಿ

ಪ್ರಜಾವಾಣಿ ವಾರ್ತೆ

ವಾಹೇದ್ ಅಲಿ ಫಾತೆಖಾನಿ

ಕಲಬುರಗಿ: ನಗರದ ನೂರ್‌ಬಾಗ್ ಕಾಲೊನಿಯ ರಿಯಲ್ ಎಸ್ಟೇಟ್ ಉದ್ಯಮಿ ಮತ್ತು ಜಿಲ್ಲಾ ಕಾಂಗ್ರೆಸ್‌ನ ಅಲ್ಪಸಂಖ್ಯಾತರ ವಿಭಾಗದ ಮಾಜಿ ಅಧ್ಯಕ್ಷ ವಾಹೇದ್ ಅಲಿ ಫಾತೆಖಾನಿ ಅವರ ನಿವಾಸದ ಮೇಲೆ ಆದಾಯ ತೆರಿಗೆ ಇಲಾಖೆ(ಐಟಿ) ಅಧಿಕಾರಿಗಳು ಶನಿವಾರ ದಾಳಿ ನಡೆಸಿ, ದಾಖಲೆಗಳನ್ನು ಪರಿಶೀಲಿಸಿದರು.

ಆದಾಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹಣ ಗಳಿಕೆ ಆರೋಪದ ಹಿನ್ನೆಲೆಯಲ್ಲಿ ಮನೆಯಲ್ಲಿ ತಪಾಸಣೆ ನಡೆಸಿದ ಐಟಿ ಅಧಿಕಾರಿಗಳು, ದಾಖಲಾತಿಗಳು, ಬ್ಯಾಂಕ್ ಪಾಸ್‌ಬುಕ್ ತಪಾಸಣೆ ನಡೆಸಿದರು ಎಂದು ಮೂಲಗಳು ತಿಳಿಸಿವೆ. ವಶಕ್ಕೆ ಪಡೆದ ಸ್ವತ್ತು, ಆಸ್ತಿಯ ಪ್ರಮಾಣ ಬಹಿರಂಗ ಪಡಿಸಿಲ್ಲ.

ವಾಹೇದ್ ಅಲಿ ಅವರು ಮಾಜಿ ಸಚಿವ ದಿ. ಖಮರುಲ್ ಇಸ್ಲಾಂ ಅವರ ಆಪ್ತರಾಗಿದ್ದು, ಅವರ ಹಣಕಾಸಿನ ವ್ಯವಹಾರ, ಚುನಾವಣೆ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದರು. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಶಾಸಕಿ ಕನೀಜ್ ಫಾತೀಮ್ ಅವರ ಗೆಲುವಿನಲ್ಲಿ ವಾಹೇದ್ ಅಲಿ ಪ್ರಮುಖ ಪಾತ್ರವಹಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಸುಡಾನ್‌ನಿಂದ ಕನ್ನಡಿಗರ ಕರೆತಂದ 'ಆಪರೇಷನ್ ಕಾವೇರಿ' ಈಗ ಚುನಾವಣಾ ವಿಷಯ

ಹಕ್ಕಿಪಿಕ್ಕಿ ಸಮುದಾಯದ ಮತಬೇಟೆ

• ಡಿ.ಕೆ. ಬಸವರಾಜು

ದಾವಣಗೆರೆ: ಸಂಘರ್ಷಪೀಡಿತ ಸುಡಾನ್‌ನಲ್ಲಿ ಸಿಲುಕಿದ್ದ ಕನ್ನಡಿಗರಲ್ಲಿ ಬಹುತೇಕ ಜನ ತಾಯ್ನಾಡಿಗೆ ಮರಳಿದ್ದಾರೆ. ಕೇಂದ್ರ ಸರ್ಕಾರ 'ಆಪರೇಷನ್ ಕಾವೇರಿ' ಕಾರ್ಯಾಚರಣೆ ಮೂಲಕ ಸುರಕ್ಷಿತವಾಗಿ ತವರಿಗೆ ಕರೆತಂದ ವಿಷಯವನ್ನೇ ಚುನಾವಣಾ ಅಸ್ತ್ರವಾಗಿಟ್ಟುಕೊಂಡು ಹಕ್ಕಿಪಿಕ್ಕಿ ಸಮುದಾಯದವರ ಮತ ಸೆಳೆಯುವ ಪ್ರಯತ್ನವೂ ಇದೀಗ ನಡೆಯುತ್ತಿದೆ.

ಸುಡಾನ್‌ನಲ್ಲಿ ಭಾರತೀಯರು ಸಿಲುಕಿಕೊಂಡಿದ್ದ ವಿಚಾರದಲ್ಲೂ ಕಾಂಗ್ರೆಸ್ 'ಚುನಾವಣಾ ರಾಜಕೀಯ' ಮಾಡಲು ಮುಂದಾಗಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ಬಳ್ಳಾರಿಯ ಸಮಾವೇಶದಲ್ಲಿ ವಾಗ್ದಾಳಿ ನಡೆಸಿದ್ದರು. 'ಆದರೆ, ನಾವು ಅದಕ್ಕೆ ಆಸ್ಪದ ನೀಡದೇ ಕನ್ನಡಿಗರೂ ಸೇರಿದಂತೆ ಭಾರತೀಯರನ್ನು ಸುರಕ್ಷಿತವಾಗಿ ಕರೆ ತಂದಿದ್ದೇವೆ' ಎಂದು ಹೇಳುವ ಮೂಲಕ ಪ್ರಧಾನಿ ಅವರು ಹಕ್ಕಿಪಕ್ಕಿ ಸಮುದಾಯದವರನ್ನು ಸೆಳೆಯಲು ದಾಳ ಉರುಳಿಸಿದ್ದಾರೆ. ಚುನಾವಣಾ ಹೊಸ್ತಿಲಿನಲ್ಲಿ ನಡೆದ ಕಾರ್ಯಾಚರಣೆಗೆ ರಾಜ್ಯದ ನದಿಯಾದ 'ಕಾವೇರಿ' ಹೆಸರು ಇಡುವುದರ ಹಿಂದೆಯೂ 'ಮತಬೇಟೆ'ಯ ಉದ್ದೇಶವಿದೆ ಎಂಬ ಮಾತು ಕೇಳಿ ಬಂದಿತ್ತು.



'ಆಪರೇಷನ್ ಕಾವೇರಿ' ಹೆಸರಿನಡಿ ಸುಡಾನ್‌ನಿಂದ ಭಾರತಕ್ಕೆ ತೆರಳಲು ಸಜ್ಜಾಗಿದ್ದ ಕನ್ನಡಿಗರು (ಸಂಗ್ರಹ ಚಿತ್ರ).

> **ಬಿಜೆಪಿಯವರು ಏನೇ ಆಮಿಷ ಒಡ್ಡಿದ್ದರೂ ಹಕ್ಕಿಪಿಕ್ಕಿ ಸಮುದಾಯದವರು ಅದಕ್ಕೆ ಆಸ್ಪದ ಕೊಡುವುದಿಲ್ಲ. ವಿವೇಚನೆಯಿಂದ ಮತ ಚಲಾಯಿಸುತ್ತಾರೆ**
> **ಎಚ್.ಬಿ. ಮಂಜಪ್ಪ**
> ಕಾಂಗ್ರೆಸ್ ದಾವಣಗೆರೆ ಜಿಲ್ಲಾ ಘಟಕದ ಅಧ್ಯಕ್ಷ

> **ಮತದ ಸಲುವಾಗಿ ಸಂತ್ರಸ್ತರನ್ನು ಪ್ರಧಾನಿ ಕರೆತಂದಿಲ್ಲ. ನಮಗೆ ಮತ ಹಾಕಿ ಎಂದು ಕೇಳುವುದಿಲ್ಲ. ಆದರೆ ಯಾರು ಕರೆತಂದರು ಎಂಬುದು ಸಂತ್ರಸ್ತರಿಗೆ ಗೊತ್ತಿದೆ**
> **ಬಿ.ಎಸ್. ಜಗದೀಶ**
> ಪ್ರಧಾನ ಕಾರ್ಯದರ್ಶಿ, ಬಿಜೆಪಿ ದಾವಣಗೆರೆ ಜಿಲ್ಲಾ ಘಟಕ

ಮೈಸೂರು, ಶಿವಮೊಗ್ಗ, ದಾವಣಗೆರೆ ಜಿಲ್ಲೆ ಸೇರಿ ಕೆಲವೆಡೆ ಹಕ್ಕಿಪಿಕ್ಕಿ ಸಮುದಾಯದವರು ನೆಲೆಸಿದ್ದಾರೆ. ಗಿಡಮೂಲಿಕೆ ವ್ಯಾಪಾರಕ್ಕೆ ತೆರಳಿದ್ದವರ ಪೈಕಿ ರಾಜ್ಯದ 800ಕ್ಕೂ ಹೆಚ್ಚು ಜನ ಸುಡಾನ್‌ನಲ್ಲಿ ಸಿಲುಕಿಕೊಂಡಿದ್ದರು. ಮೈಸೂರು ಜಿಲ್ಲೆಯ ಪಕ್ಷಿರಾಜಪುರ ಸುತ್ತಮುತ್ತಲ 300 ಜನ, ಶಿವಮೊಗ್ಗ ಜಿಲ್ಲೆಯ 300 ಹಾಗೂ ದಾವಣಗೆರೆ ಜಿಲ್ಲೆಯ 40ಕ್ಕೂ ಹೆಚ್ಚು ಜನ ಸುರಕ್ಷಿತವಾಗಿ ವಾಪಸ್ಸಾಗಿದ್ದಾರೆ. ಹಕ್ಕಿಪಿಕ್ಕಿ ಸಮುದಾಯದವರು ನೆಲೆಸಿರುವ ಕ್ಷೇತ್ರಗಳಲ್ಲಿ ಇದೀಗ ಈ ವಿಷಯವನ್ನೇ ಮುಂದಿಟ್ಟುಕೊಂಡು ಆಡಳಿತ ಪಕ್ಷದವರಾದ ಬಿಜೆಪಿಯವರು ಮತಗಳಿಕೆಗೆ ತಂತ್ರ ಹೆಣೆಯುತ್ತಿದ್ದಾರೆ. ಸುಡಾನ್ ಸಂತ್ರಸ್ತರ ವಿಚಾರದಲ್ಲೂ ಬಿಜೆಪಿ ರಾಜಕೀಯ ಮಾಡುತ್ತಿದೆ ಎಂದು ಕಾಂಗ್ರೆಸ್‌ನವರು ಪ್ರಚಾರದ ವೇಳೆ ದೂರುತ್ತಿದ್ದಾರೆ.

'ನಿಮ್ಮನ್ನು ಕರೆ ತಂದಿದ್ದು ನಮ್ಮ ಪಕ್ಷದ ಸರ್ಕಾರ. ನಮಗೇ ಮತ ನೀಡಬೇಕು ಎಂದು ಮನೆಬಾಗಿಲಿಗೆ ಬಂದು ಬಿಜೆಪಿ ಕಾರ್ಯಕರ್ತರು ಒತ್ತಡ ಹಾಕುತ್ತಿದ್ದಾರೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ, ಸುಡಾನ್‌ನಿಂದ ಈಚೆಗೆ ವಾಪಸ್ಸಾದ ಚನ್ನಗಿರಿ ಕ್ಷೇತ್ರದ ಹಕ್ಕಿಪಿಕ್ಕಿ ಸಮುದಾಯದವರೊಬ್ಬರು ಬೇಸರ ವ್ಯಕ್ತಪಡಿಸಿದರು.

'ಪ್ರಧಾನಿ ಯಾವುದೇ ಪಕ್ಷದವರಾಗಿದ್ದರೂ ನಮ್ಮನ್ನು ಸುರಕ್ಷಿತವಾಗಿ ಕರೆತರುವುದು ಅವರ ಕರ್ತವ್ಯ. ಸಂಕಷ್ಟದಲ್ಲಿರುವವರನ್ನು ಬೇಗ ಕರೆತನ್ನಿ ಎಂದು ಒತ್ತಡ ಹಾಕುವ ಮೂಲಕ ವಿರೋಧ ಪಕ್ಷದವರು ತಮ್ಮ ಕರ್ತವ್ಯವನ್ನು ಮಾಡಿದ್ದಾರೆ. ಇದರಲ್ಲಿ ಯಾವುದೇ ಪಕ್ಷದವರ ಹೆಚ್ಚುಗಾರಿಕೆಯೇನೂ ಇಲ್ಲ' ಎಂಬುದು ಅವರ ವಾದ.

'ಯಾವುದೇ ಸರ್ಕಾರವಿದ್ದರೂ ಸಂವಿಧಾನದ ಆಶಯದಂತೆ ನಮ್ಮನ್ನು ರಕ್ಷಿಸುವುದು ಅದರ ಕರ್ತವ್ಯ. ನಮ್ಮನ್ನು ಕರೆತರುವಂತೆ ಮಾಡಿದ್ದು ಭಾರತದ ಸಂವಿಧಾನವೇ ಹೊರತು ಯಾವುದೇ ಪಕ್ಷವಲ್ಲ. ಸಂಕಷ್ಟ ಎದುರಾದಾಗ ಹಿಂದಿನ ಸರ್ಕಾರಗಳು ಕೂಡ ನಮ್ಮನ್ನು ರಕ್ಷಿಸುವ ಕೆಲಸ ಮಾಡಿವೆ' ಎಂದು ಹಕ್ಕಿಪಿಕ್ಕಿ ಬುಡಕಟ್ಟು ಸಂಘಟನೆ ರಾಜ್ಯ ಘಟಕದ ಅಧ್ಯಕ್ಷ ಪುನೀತ್ ಕುಮಾರ್ ಅವರು ಪ್ರತಿಕ್ರಿಯೆ ನೀಡಿದರು.

ಮತದಾನ ಅವಕಾಶ

ವರ್ಷದಲ್ಲಿ 8ರಿಂದ 9 ತಿಂಗಳು ಗಿಡಮೂಲಿಕೆ ವ್ಯಾಪಾರಕ್ಕಾಗಿ ವಿದೇಶಗಳಿಗೆ ತೆರಳುವ ಹಕ್ಕಿಪಿಕ್ಕಿ ಸಮುದಾಯದವರಿಗೆ ಚುನಾವಣೆ ಸಂದರ್ಭದಲ್ಲಿ ಮತದಾನ ಮಾಡಲು ಅವಕಾಶ ಸಿಗುವುದು ವಿರಳ. ಮತಚಲಾಯಿಸಲು ರಾಜ್ಯಕ್ಕೆ ಬರಬೇಕಾದರೆ ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅಷ್ಟು ಹಣ ಖರ್ಚು ಮಾಡಿ ಮತದಾನದ ಹಕ್ಕನ್ನು ಚಲಾಯಿಸಲು ಯಾರೂ ಬರುತ್ತಿರಲಿಲ್ಲ. ಆದರೆ, ಈ ಬಾರಿ ಅನಿವಾರ್ಯ ಕಾರಣಕ್ಕೆ ತವರಿಗೆ ಮರಳಿದ್ದು, ಮತದಾನ ಮಾಡುವ ಅವಕಾಶ ಲಭಿಸಿದೆ. ಹೀಗಾಗಿ ಇವರ ಮತವನ್ನು ಸೆಳೆಯಲು ರಾಜಕೀಯ ಪಕ್ಷಗಳು ಪೈಪೋಟಿಗೆ ಇಳಿದಿವೆ.

ಭ್ರಷ್ಟಾಚಾರ ಜಾಹೀರಾತು: ಕಾಂಗ್ರೆಸ್‌ಗೆ ನೋಟಿಸ್

ನವದೆಹಲಿ (ಪಿಟಿಐ): ಕರ್ನಾಟಕದಲ್ಲಿ ಬಿಜೆಪಿ ಆಡಳಿತಾವಧಿಯಲ್ಲಿನ ಭ್ರಷ್ಟಾಚಾರ, ವಿವಿಧ ಹುದ್ದೆಗಳ ನೇಮಕಕ್ಕೆ ಸಂಬಂಧಿಸಿದ ದರಪಟ್ಟಿಯನ್ನು ಉಲ್ಲೇಖಿಸಿ ಕಾಂಗ್ರೆಸ್ ಪಕ್ಷವು ನೀಡಿದ್ದ ಜಾಹೀರಾತು ಪ್ರಶ್ನಿಸಿ ಬಿಜೆಪಿಯು ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ಈ ದೂರು ಆಧರಿಸಿ ಆಯೋಗ ಕಾಂಗ್ರೆಸ್ ಪಕ್ಷಕ್ಕೆ ನೋಟಿಸ್ ಜಾರಿ ಮಾಡಿದೆ. ಜಾಹೀರಾತಿನ ಅಂಶಗಳನ್ನು ಸಮರ್ಥಿಸುವ ಪೂರಕ ಸಾಕ್ಷ್ಯಗಳನ್ನು ಭಾನುವಾರ ಸಂಜೆಯೊಳಗೆ ಸಲ್ಲಿಸಬೇಕು ಎಂದೂ ಸೂಚಿಸಿದೆ.

ಬಿಜೆಪಿ ಸರ್ಕಾರದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದೆ ಎಂದು ಆರೋಪಿಸಿರುವ ಕಾಂಗ್ರೆಸ್ ಪಕ್ಷವು, ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ 2019–2023 ಅವಧಿಯ ಅಂಶಗಳನ್ನು ಉಲ್ಲೇಖಿಸಿ ಜಾಹೀರಾತು ಬಿಡುಗಡೆ ಮಾಡಿತ್ತು. ಬಿಜೆಪಿ ಸರ್ಕಾರವನ್ನು ಟ್ರಬಲ್ ಎಂಜಿನ್ ಸರ್ಕಾರ ಎಂದು ಅದರಲ್ಲಿ ಟೀಕಿಸಿತ್ತು.

ಕಾಂಗ್ರೆಸ್‌ಗೆ ವಿಎಚ್‌ಪಿ ನೋಟಿಸ್

₹100 ಕೋಟಿ ಪರಿಹಾರ ನೀಡಿ

ನವದೆಹಲಿ (ಪಿಟಿಐ): ಕರ್ನಾಟಕ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಬಿಡುಗಡೆ ಮಾಡಿರುವ ಪಕ್ಷದ ಪ್ರಣಾಳಿಕೆಯಲ್ಲಿ ಬಜರಂಗದಳ ವಿರುದ್ಧ ಮಾನಹಾನಿಕರ ಹೇಳಿಕೆಗಳನ್ನು ಪ್ರಕಟಿಸಲಾಗಿದೆ ಎಂದು ಆರೋಪಿಸಿರುವ ವಿಶ್ವಹಿಂದೂ ಪರಿಷತ್ (ವಿಎಚ್‌ಪಿ), ₹ 100 ಕೋಟಿ ಪರಿಹಾರ ನೀಡುವಂತೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವಕೀಲರ ಮೂಲಕ ನೋಟಿಸ್ ಜಾರಿಗೊಳಿಸಿದೆ.

ವಿಎಚ್‌ಪಿ ಹಾಗೂ ಬಜರಂಗದಳದ ಚಂಡೀಗಢ ಘಟಕಗಳು ಈ ನೋಟಿಸ್ ನೀಡಿವೆ. ವಿಎಚ್‌ಪಿ ಪರ ವಕೀಲ ಹಾಗೂ ಸಂಘಟನೆಯ ಕಾನೂನು ಘಟಕದ ಉಪಾಧ್ಯಕ್ಷ ಸಾಹಿಲ್ ಬನ್ಸಲ್ ಈ ನೋಟಿಸ್ ನೀಡಿದ್ದು, 14 ದಿನಗಳ ಒಳಗಾಗಿ ಪರಿಹಾರಧನ ನೀಡುವಂತೆ ಸೂಚಿಸಿದ್ದಾರೆ.

'ಪಕ್ಷದ ಪ್ರಣಾಳಿಕೆಯ ಪುಟ 10ರಲ್ಲಿ, ವಿಎಚ್‌ಪಿ ಅಂಗಸಂಸ್ಥೆಯಾದ ಬಜರಂಗ ದಳ ಕುರಿತು ಮಾನಹಾನಿಕರ ಹೇಳಿಕೆಗಳನ್ನು ಪ್ರಕಟಿಸಲಾಗಿದೆ. ನಿಷೇಧಿತ ಪಿಎಫ್‌ಐ, ಸಿಮಿ ಜೊತೆ ಬಜರಂಗದಳವನ್ನು ಹೋಲಿಕೆ ಮಾಡಿದ್ದು, ಸಂಘಟನೆಯನ್ನು ನಿಷೇಧಿಸುವುದಾಗಿ ಘೋಷಿಸಲಾಗಿದೆ' ಎಂದು ಬನ್ಸಲ್ ನೋಟಿಸ್‌ನಲ್ಲಿ ಆರೋಪಿಸಿದ್ದಾರೆ.

ಪ್ರಚಾರ ಸಾಮಗ್ರಿ ಬಿಟ್ಟು ಕಾಲ್ಕಿತ್ತ ಯುವಕರ ತಂಡ

ಪ್ರಜಾವಾಣಿ ವಾರ್ತೆ

ಕುಣಿಗಲ್: ತಾಲ್ಲೂಕಿನ ಕಗ್ಗರೆಯಲ್ಲಿ ಶನಿವಾರ ಕಾಂಗ್ರೆಸ್ ಅಭ್ಯರ್ಥಿ ಡಾ.ರಂಗನಾಥ್ ಪರ ಚುನಾವಣಾ ಪ್ರಚಾರ ಸಾಮಗ್ರಿ ಹಂಚಲು ಸಿದ್ಧತೆ ನಡೆಸಿದ್ದ ಯುವಕರ ಗುಂಪಿನ ಮೇಲೆ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ದಾಳಿ ನಡೆಸಿದ್ದಾರೆ. ಪ್ರಚಾರ ಸಾಮಗ್ರಿಗಳನ್ನು ಸ್ಥಳದಲ್ಲಿಯೇ ಬಿಟ್ಟು ಯುವಕರ ತಂಡ ಪರಾರಿಯಾಗಿದೆ.

ಬೆಂಗಳೂರಿನ ವಿವಿಧ ಕಾಲೇಜಿನ 300ಕ್ಕೂ ಹೆಚ್ಚು ವಿದ್ಯಾರ್ಥಿಗಳ ತಂಡ ಎರಡು ಖಾಸಗಿ ಬಸ್ ಮತ್ತು ಎರಡು ಕಾರುಗಳಲ್ಲಿ ಕಗ್ಗರೆ ಗ್ರಾಮಕ್ಕೆ ಬಂದು ದೇವಾಲಯದ ಸಮೀಪ ಮಾದರಿ ಮತಯಂತ್ರ, ಸ್ಕ್ಯಾನರ್ ಕೋಡ್‌ಗಳಿದ್ದ ಡಿಜಿಟಲ್ ಕಾರ್ಡ್‌ಗಳನ್ನು ಜೋಡಿಸುತ್ತಿದ್ದರು.

ಇದನ್ನು ಕಂಡ ಗ್ರಾಮಸ್ಥರು ಈ ಬಗ್ಗೆ ಯುವಕರನ್ನು ಪ್ರಶ್ನಿಸಿದ್ದಾರೆ. ವಿದ್ಯಾರ್ಥಿಗಳು ಸಮರ್ಪಕ ಉತ್ತರ ನೀಡದ ಕಾರಣ ಗ್ರಾಮಸ್ಥರು ಬಿಜೆಪಿ ಮತ್ತು ಜೆಡಿಎಸ್ ಮುಖಂಡರಿಗೆ ಮಾಹಿತಿ ನೀಡಿದ್ದಾರೆ. ಆ ಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರು ಬಸ್‌ನಲ್ಲಿದ್ದ ಪ್ರಚಾರ ಸಾಮಗ್ರಿಗಳನ್ನು ರಸ್ತೆಗೆ ಎಸೆದು ಧಿಕ್ಕಾರ ಕೂಗಿದರು. ಯುವಕರ ತಂಡ ಪ್ರಚಾರ ಸಾಮಗ್ರಿಗಳನ್ನುಅಲ್ಲಿಯೇ ಬಿಟ್ಟು ಕಾಲ್ಕಿತ್ತಿದೆ.

ಯಡಿಯೂರು ವಿಭಾಗದ ಎಫ್.ಎಸ್.ಟಿ. ಅಧಿಕಾರಿ ಕೆಂಪಯ್ಯ ಅವರು ಅಮೃತೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ನ್ಯಾಯಾಲಯದ ಅನುಮತಿ ಪಡೆದು ಪ್ರಕರಣ ದಾಖಲಿಸುವುದಾಗಿ ಪೊಲೀಸರು ತಿಳಿಸಿದ್ದಾರೆ.

ಅನುಮತಿ ಇಲ್ಲದೆ ಬಳಸಿದ ಎರಡು ಬಸ್, ಎರಡು ಕಾರು ಮತ್ತು ಪ್ರಚಾರ ಸಾಮಗ್ರಿಗಳನ್ನು ವಶಕ್ಕೆ ಪಡೆಯಲಾಗಿದೆ. ಕಾಲೇಜು ವಿದ್ಯಾರ್ಥಿಗಳ ಹೇಳಿಕೆ ಪಡೆದು ಎಚ್ಚರಿಕೆ ನೀಡಿ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಾಸಕ ಡಾ.ರಂಗನಾಥ್ ಅವರು ಕೊತ್ತಗೆರೆ ರಾಜೇಶ್ ಮತ್ತು ದೀಪೂ ಎಂಬುವರ ನೇತೃತ್ವದಲ್ಲಿ ಕನಕಪುರದ ಯುವಕರ ತಂಡವನ್ನು ಕಳಿಸಿ ಚುನಾವಣಾ ಅಕ್ರಮಕ್ಕೆ ಸಿದ್ಧರಾಗಿದ್ದಾರೆ. ಅಧಿಕಾರಿಗಳು ಚುನಾವಣಾ ಅಕ್ರಮ ತಡೆಯದಿದ್ದರೆ ಬಿಜೆಪಿ ಕಾರ್ಯಕರ್ತರೆ ತಡೆಯುವ ಪ್ರಯತ್ನ ಮಾಡುತ್ತಾರೆ ಎಂದು ಬಿಜೆಪಿ ಅಭ್ಯರ್ಥಿ ಡಿ.ಕೃಷ್ಣಕುಮಾರ್ ಪ್ರತಿಕ್ರಿಯಿಸಿದ್ದಾರೆ.

ಚುನಾವಣಾ ಕಾರ್ಯಕ್ಕೆ ಬಸ್ಸುಗಳನ್ನು ಕಾಯ್ದಿರಿಸಿದ ಅಭ್ಯರ್ಥಿಗಳು

ಇದೇ 9–10: ಪ್ರಯಾಣಕ್ಕೆ ಬಸ್ ಅಲಭ್ಯ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಕಾರ್ಯಕ್ಕೆ ಬಳಕೆಯಾಗುವ ಕೆಎಸ್‌ಆರ್‌ಟಿಸಿ ಬಸ್‌ಗಳು, ಮತದಾರರನ್ನು ಕರೆದೊಯ್ಯಲು ಖಾಸಗಿ ಬಸ್‌ಗಳನ್ನು ಕಾಯ್ದಿರಿಸಿರುವ ಅಭ್ಯರ್ಥಿಗಳು; ಮತದಾನದ ಹಿಂದಿನ ದಿನ ಪ್ರಯಾಣಿಕರಿಗೆ ಉಂಟಾಗಲಿದೆ ಬಸ್‌ಗಳ ಕೊರತೆ...

ವಿಧಾನಸಭೆ ಚುನಾವಣೆಯ ಮತದಾನ ಬುಧವಾರ (ಮೇ 10) ನಡೆಯಲಿದ್ದು, ಹಿಂದಿನ ದಿನ ಮತ್ತು ಮತದಾನದ ದಿನ ಹೊರ ಊರಿಗೆ ತೆರಳಬೇಕಾದವರು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ.

ಕೆಎಸ್‌ಆರ್‌ಟಿಸಿಯಲ್ಲಿ 8,100 ಬಸ್‌ಗಳಿದ್ದು, ಮತಯಂತ್ರಗಳನ್ನು ಕೊಂಡೊಯ್ಯಲು ಮತ್ತು ಪೊಲೀಸ್ ಸಿಬ್ಬಂದಿ ಕರೆದೊಯ್ಯಲು 3,700 ಬಸ್‌ಗಳನ್ನು ಚುನಾವಣಾ ಆಯೋಗ ಬಳಸಿಕೊಳ್ಳಲಿದೆ. ಬಾಕಿ ಉಳಿಯುವ 4,400 ಬಸ್‌ಗಳು ಸಾಮಾನ್ಯ ಪ್ರಯಾಣಿಕರಿಗೆ ಲಭ್ಯವಾಗಲಿವೆ.

ಬೆಂಗಳೂರಿನಲ್ಲಿ ಕೆಲಸ ಅರಸಿ ಬಂದವರಲ್ಲಿ ಬಹುತೇಕರು ತಮ್ಮ ಹುಟ್ಟೂರುಗಳಲ್ಲಿನ ಮತಪಟ್ಟಿಯಲ್ಲೇ ಹೆಸರು ಉಳಿಸಿಕೊಂಡಿದ್ದಾರೆ.

ಮತದಾನ ಮಾಡಲು ಹೊರ ಊರಿಗೆ ತೆರಳಲು ಇಚ್ಛಿಸುವವರು ಬಸ್‌ಗಳಿಲ್ಲದೆ ಪರದಾಡುವ ಸ್ಥಿತಿ ಎದುರಾಗುವ ಸಾಧ್ಯತೆ ಇದೆ.

ಮತದಾರರನ್ನು ಗುಂಪು ಗುಂಪಾಗಿ ಕರೆದೊಯ್ಯಲು ಅಭ್ಯರ್ಥಿಗಳೇ ಪ್ರಯತ್ನ ಮಾಡುತ್ತಿದ್ದಾರೆ. ಬಹುತೇಕ ಅಭ್ಯರ್ಥಿಗಳು ತಮ್ಮ ಪರವಾಗಿ ಮತ ಚಲಾಯಿಸಬಹುದಾದ ಜನ ಬೆಂಗಳೂರಿನಲ್ಲಿ ಎಲ್ಲಿ ನೆಲೆಸಿದ್ದಾರೆ ಎಂಬುದನ್ನು ಗುರುತಿಸಿಕೊಂಡಿದ್ದಾರೆ. ಅಲ್ಲಿಂದ ಮತದಾರರನ್ನು ಕರೆತರುವ ಜವಾಬ್ದಾರಿಯನ್ನು ಬೆಂಬಲಿಗರಿಗೆ ವಹಿಸಿ ಅವರ ಮೂಲಕವೇ ಖಾಸಗಿ ಬಸ್‌ಗಳನ್ನು ಕಾಯ್ದಿರಿಸಿ ಕೊಂಡಿದ್ದಾರೆ. ಬೆಂಗಳೂರಿನಿಂದ ಮಂಗಳೂರು, ಹುಬ್ಬಳ್ಳಿ, ಶಿವಮೊಗ್ಗ, ಬೆಳಗಾವಿ, ಚಿಕ್ಕಮಗಳೂರು ಹೀಗೆ ದೂರದ ಊರುಗಳಿಗೆ ಪ್ರಯಾಣಿಸುವ ಸಾಕಷ್ಟು ಜನ ಕೆಎಸ್‌ಆರ್‌ಟಿಸಿ ಜತೆ ಖಾಸಗಿ ಬಸ್‌ಗಳ ಮೇಲೆಯೂ ಅವಲಂಬಿತರಾಗಿದ್ದಾರೆ. ಖಾಸಗಿ ಬಸ್‌ಗಳನ್ನು ಅಭ್ಯರ್ಥಿಗಳ ಬೆಂಬಲಿಗರೇ ಕಾಯ್ದಿರಿಸಿರುವುದರಿಂದ ಆ ಬಸ್‌ಗಳ ಸಂಚಾರವೂ ಕಡಿಮೆಯಾಗಲಿದೆ.

ಹಾಸನ, ತುಮಕೂರು, ಮಂಡ್ಯ, ಚಿಕ್ಕಬಳ್ಳಾಪುರ, ಕೋಲಾರ, ನಾಗಮಂಗಲ, ಚನ್ನರಾಯಪಟ್ಟಣ ಹೀಗೆ ಸಮೀಪದ ಊರುಗಳ ಜನಕೆಎಸ್‌ಆರ್‌ಟಿಸಿ ಬಸ್‌ಗಳನ್ನೇ ಅವಲಂಬಿಸುತ್ತಾರೆ. ಸ್ವಯಂ ಪ್ರೇರಿತವಾಗಿ ಮತದಾನಕ್ಕೆ ತೆರಳಲು ಬಯಸಿದರೆ ಕಷ್ಟಕ್ಕೆ ಸಿಲುಕಲಿದ್ದಾರೆ. ಖಾಸಗಿ ಬಸ್‌ಗಳ ಕಾರ್ಯಾಚರಣೆ ಇಲ್ಲ, ಇತ್ತ ಕೆಎಸ್‌ಆರ್‌ಟಿಸಿ ಬಸ್‌ಗಳೂ ಇಲ್ಲದಿದ್ದರೆ ಪರದಾಡಬೇಕಾಗುತ್ತದೆ ಎಂದು ಹೋಟೆಲ್‌ನಲ್ಲಿ ಕೆಲಸ ಮಾಡುವ ಸೋಮಶೇಖರ್ ಹೇಳುತ್ತಾರೆ.

ಪ್ರಯಾಣದರ ನಾಲ್ಕು ಪಟ್ಟು ಏರಿಕೆ!

ಬಸ್‌ಗಳಲ್ಲಿ ಪ್ರಯಾಣಕ್ಕೆ ಬೇಡಿಕೆ ಹೆಚ್ಚಾಗಲಿದ್ದು, ಖಾಸಗಿ ಬಸ್‌ಗಳ ಪ್ರಯಾಣ ದರ ದುಬಾರಿಯಾಗಲಿದೆ. ಮೇ 9ರಂದು ಪ್ರಯಾಣ ಮಾಡಲು ಆಸನಗಳನ್ನು ಕಾಯ್ದಿರಿಸಲು ಆನ್‌ಲೈನ್‌ನಲ್ಲಿ ಪ್ರಯತ್ನಿಸಿದರೆ ದುಬಾರಿ ದರ ನಿಗದಿಯಾಗಿರುವುದು ಗೊತ್ತಾಗುತ್ತಿದೆ.

ಬೆಂಗಳೂರಿನಿಂದ ಹುಬ್ಬಳ್ಳಿಗೆ ಮೇ 9ರಂದು ಗರಿಷ್ಠ ₹5,696 ಮತ್ತು ಕನಿಷ್ಠ ₹999 ದರ ಇದೆ. ಬೆಂಗಳೂರಿನಿಂದ ಮಂಗಳೂರಿಗೆ ಗರಿಷ್ಠ ದರ ₹2,500 ಮತ್ತು ಕನಿಷ್ಠ ₹600 ನಿಗದಿಯಾಗಿದೆ. ಈ ದರಗಳಲ್ಲಿ ಮತ್ತೆ ವ್ಯತ್ಯಾಸವಾಗುವ ಸಾಧ್ಯತೆಯೂ ಇದೆ.

ಬಸ್ ವ್ಯತ್ಯಯ: ಕೆಎಸ್‌ಆರ್‌ಟಿಸಿ

ಚುನಾವಣಾ ಕಾರ್ಯಕ್ಕೆ ಬಸ್‌ಗಳನ್ನು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಪಡೆದುಕೊಂಡಿವೆ. ಆದ್ದರಿಂದ ಮೇ 9 ಮತ್ತು 10ರಂದು ಬಸ್‌ಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

₹15.53 ಕೋಟಿ ನಗದು, 10.14 ಕೆಜಿ ಚಿನ್ನ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಮತದಾರರಿಗೆ ಆಮಿಷ ಒಡ್ಡುವುದಕ್ಕಾಗಿ ಲೇವಾದೇವಿಗಾರರಲ್ಲಿ ಹಣ ಸಂಗ್ರಹಿಸಿಟ್ಟಿರುವ ಮಾಹಿತಿ ಆಧರಿಸಿ ಬೆಂಗಳೂರು ನಗರ ಮತ್ತು ರಾಯಚೂರಿನಲ್ಲಿ ಗುರುವಾರ ಶೋಧ ನಡೆಸಿರುವ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, ₹ 15.53 ಕೋಟಿ ನಗದು ಹಾಗೂ ₹ 7.08 ಕೋಟಿ ಮೌಲ್ಯದ 10.14 ಕೆ.ಜಿ. ಚಿನ್ನ ವಶಪಡಿಸಿಕೊಂಡಿದ್ದಾರೆ.

ಬೆಂಗಳೂರಿನ ಒಂಬತ್ತು ವಿಧಾನಸಭಾ ಕ್ಷೇತ್ರಗಳ 15 ಹಾಗೂ ರಾಯಚೂರಿನ ಒಂದು ಸ್ಥಳಗಳ ಮೇಲೆ ದಾಳಿ ಮಾಡಿ ಶೋಧ ನಡೆಸಿದ್ದರು. ಬಡ್ಡಿ ವಹಿವಾಟು ನಡೆಸುತ್ತಿದ್ದ ಲೇವಾದೇವಿಗಾರರ ಮನೆ, ಕಚೇರಿಗಳಲ್ಲಿ ನಗದು ತುಂಬಿಸಿ ಇರಿಸಿದ್ದ ಚೀಲಗಳು ಮತ್ತು ಸೂಟ್‌ಕೇಸ್‌ಗಳು ಪತ್ತೆಯಾಗಿವೆ. ಕೆಲವರ ಮನೆಗಳಲ್ಲಿ ಚಿನ್ನಾಭರಣಗಳನ್ನು ದಾಸ್ತಾನು ಮಾಡಿದ್ದು, ಅವುಗಳನ್ನೂ ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಹೆಬ್ಬಾಳ, ಶಿವಾಜಿನಗರ, ಚಿಕ್ಕಪೇಟೆ ಮತ್ತು ಜಯನಗರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ನಾಲ್ಕು ಸ್ಥಳಗಳಲ್ಲಿ ನಡೆದ ಪ್ರತ್ಯೇಕ ಕಾರ್ಯಾಚರಣೆಯಲ್ಲಿ ₹ 23.50 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ.

'ಫ್ಲೈಯಿಂಗ್ ಸ್ಕ್ವಾಡ್' ಕಾರ್ಯಾಚರಣೆಗಳಲ್ಲಿ ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ₹ 38 ಲಕ್ಷ ನಗದು ಮತ್ತು ಕೋಲಾರ ಜಿಲ್ಲೆಯ ಬಂಗಾರಪೇಟೆ ರೈಲ್ವೆ ನಿಲ್ದಾಣದಲ್ಲಿ 21 ಕೆ.ಜಿ. ಗಾಂಜಾ ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿರುವ ನಗದು

ಯಾವ ಕ್ಷೇತ್ರ	ಎಷ್ಟು ಮೊತ್ತ
ಶಿವಾಜಿನಗರ	₹4.77 ಕೋಟಿ
ರಾಜರಾಜೇಶ್ವರಿ	₹3.44 ಕೋಟಿ
ಮಲ್ಲೇಶ್ವರ	₹3.35 ಕೋಟಿ
ಪುಲಕೇಶಿನಗರ	₹2.30 ಕೋಟಿ
ಶಾಂತಿನಗರ	₹62.83 ಲಕ್ಷ
ಗಾಂಧಿನಗರ	₹55 ಲಕ್ಷ
ರಾಯಚೂರು	₹30 ಲಕ್ಷ

10.14ಕೆ.ಜಿ ಚಿನ್ನ ಎಲ್ಲೆಲ್ಲಿ ವಶ

- ಹೆಬ್ಬಾಳ, ಶಾಂತಿನಗರ ಮತ್ತು ಗಾಂಧಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ನಾಲ್ಕು ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಿ ₹ 5 ಕೋಟಿ ಮೌಲ್ಯದ 6.59 ಕೆ.ಜಿ. ಚಿನ್ನ ವಶ
- ರಾಯಚೂರು ಕ್ಷೇತ್ರದ ಸ್ಥಳವೊಂದರಲ್ಲಿ ದಾಸ್ತಾನು ಮಾಡಿದ್ದ ₹ 2.08 ಕೋಟಿ ಮೌಲ್ಯದ 3.55 ಕೆ. ಚಿನ್ನ ವಶ

ಸ್ವತ್ತು ವಶದಲ್ಲಿ ದುಪ್ಪಟ್ಟು ಸಾಧನೆ

'2018ರ ವಿಧಾನಸಭಾ ಚುನಾವಣೆಯಲ್ಲಿ ಚುನಾವಣಾ ಅಕ್ರಮ ತಡೆಗೆ ನಡೆಸಿದ ಕಾರ್ಯಾಚರಣೆಗಳಲ್ಲಿ ಒಟ್ಟು ₹ 185.74 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಚುನಾವಣೆಯಲ್ಲಿ ಶುಕ್ರವಾರದವರೆಗೆ ₹ 365.22 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರು ತಿಳಿಸಿದ್ದಾರೆ.

ಮತದಾರರ ಮುಂದೆ ಅಳುವೇ ಅಸ್ತ್ರ; ಭಾವೋದ್ವೇಗದ ಹೇಳಿಕೆ

ರಾಮನಗರದಲ್ಲಿ 'ಕಣ್ಣೀರ ರಾಜಕಾರಣ'

• ಆರ್. ಜಿತೇಂದ್ರ

ರಾಮನಗರ: ಚುನಾವಣೆ ಪ್ರಚಾರದ ಸಂದರ್ಭ ಅಭ್ಯರ್ಥಿಗಳು, ಪ್ರಚಾರಕರು ಭಾವೋದ್ವೇಗಕ್ಕೆ ಒಳಗಾಗುವ ದೃಶ್ಯ ಈಗ ಸಾಮಾನ್ಯವಾಗಿದೆ. ಹೀಗೆ ಕಣ್ಣೀರು ಹಾಕುವವರಲ್ಲಿ ಎಲ್ಲ ಪಕ್ಷದವರೂ ಇದ್ದಾರೆ. ಈ ಕಣ್ಣೀರು ಕೆಲವೊಮ್ಮೆ ಗೆಲುವಿನ ಟಾನಿಕ್‌ನಂತೆ ಕೆಲಸ ಮಾಡಲಿದೆ ಎಂಬುದು ಬಲ್ಲವರ ಹೇಳಿಕೆ.

ಚುನಾವಣೆ ಘೋಷಣೆ ಆಗುತ್ತಲೇ ಉದ್ವೇಗಕ್ಕೆ ಒಳಗಾಗಿದ್ದ ಟಿಕೆಟ್ ಆಕಾಂಕ್ಷಿಗಳಲ್ಲಿ ಹಲವರು, ಟಿಕೆಟ್ ಕೈ ತಪ್ಪಿದ ಸಂದರ್ಭ ಮಾಧ್ಯಮಗಳ ಮುಂದೆ ಕಣ್ಣೀರು ಸುರಿಸಿದ್ದರು. ಟಿಕೆಟ್ ಪಡೆದವರು ಖುಷಿಯಿಂದ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರು. ಆದಾಗ್ಯೂ ಆಗಾಗ್ಗೆ ಆನಂದ ಭಾಷ್ಪ, ಉದ್ವೇಗದ ಕಂಬನಿ ಮಿಡಿಯುತ್ತಲೇ ಇದ್ದಾರೆ.

ಚನ್ನಪಟ್ಟಣ ಹಾಗೂ ರಾಮನಗರದಲ್ಲಿ ಶುಕ್ರವಾರ ಸಂಜೆ ಪ್ರಚಾರ ಕೈಗೊಂಡ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ತಾವು ಕಣ್ಣೀರು ಹಾಕಿದ್ದಲ್ಲದೆ, ಮತದಾರರ ಕಣ್ಣಂಚಿನಲ್ಲೂ ನೀರು ತರಿಸಿದರು. '90ರ ವಯಸ್ಸಿನಲ್ಲಿ ನಿಮ್ಮ ಮುಂದೆ ಬಂದು ನಿಂತಿದ್ದೇನೆ. ಈ ಚುನಾವಣೆಯಲ್ಲಿ ಪ್ರಾದೇಶಿಕ ಪಕ್ಷ ಗೆಲ್ಲಿಸಿ ಕಣ್ಣು ಮುಚ್ಚುತ್ತೇನೆ' ಎಂದು ಗೌಡರು ಹೇಳುವಾಗ, ಜನರ ಕಣ್ಣಾಲಿಗಳು ತುಂಬಿದ್ದವು. ಸುಗ್ಗನಹಳ್ಳಿಯಲ್ಲಿ ಪ್ರಚಾರದ ವೇಳೆ ಗೌಡರು ಗದ್ಗದಿತರಾಗಿ ಕಂಬನಿ ಮಿಡಿದರು.

ಮಾಗಡಿ ಜೆಡಿಎಸ್ ಅಭ್ಯರ್ಥಿ ಎ. ಮಂಜುನಾಥ್ ತಮ್ಮ ಭಾಷಣಗಳಲ್ಲಿ ಆಗಾಗ್ಗೆ ಪಕ್ಷ ನಿಷ್ಠೆ ಪ್ರದರ್ಶಿಸುತ್ತ ಬಂದಿದ್ದಾರೆ. ಏ. 29ರಂದು ಮಾಗಡಿಯಲ್ಲಿ ನಡೆದ ಸಮಾವೇಶದಲ್ಲೂ ಅದು ವ್ಯಕ್ತವಾಗಿತ್ತು. 'ನಾನು ದೇವೇಗೌಡರ ಮನೆಯ ನಿಯತ್ತಿನ ನಾಯಿ. ಎಂದಿಗೂ ಪಕ್ಷಕ್ಕೆ ದ್ರೋಹ ಬಗೆಯಲಾರೆ' ಎಂದು ಮಂಜುನಾಥ್ ಮನ ಮಿಡಿಯುವಂತೆ ಮಾತನಾಡುವಾಗ ಅವರ ಕಣ್ಣಲ್ಲೂ ನೀರು ಜಿನುಗಿತ್ತು. ಅದನ್ನು ಕಂಡ ದೇವೇಗೌಡರ ಕಣ್ಣು ಸಹ ಒಸರಿತ್ತು.

ಕಣ್ಣೀರು ಹಾಕುವಲ್ಲಿ ಕಾಂಗ್ರೆಸ್ ನಾಯಕರು ಸಹ ಹಿಂದೆ ಬಿದ್ದಿಲ್ಲ. ರಾಮನಗರ ಕ್ಷೇತ್ರದಲ್ಲಿ ಕಳೆದ ಬಾರಿಯ ಪರಾಜಿತ ಅಭ್ಯರ್ಥಿ ಇಕ್ಬಾಲ್ ಹುಸೇನ್ ಅವರು ಈ ಬಾರಿಯೂ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದಾರೆ. ಆಗಾಗ್ಗೆ ಅವರು ಭಾವೋದ್ವೇಗಕ್ಕೆ ಒಳಗಾಗುವುದೂ ಇದೆ. ಹಾರೋಹಳ್ಳಿ ತಾಲ್ಲೂಕಿನ ಮೇಡಮಾರನಹಳ್ಳಿಯಲ್ಲಿ ಮಾತನಾಡುವ ವೇಳೆ ಇಕ್ಬಾಲ್ 'ನಿಮ್ಮ ಮನೆ ಮಗನಂತೆ ನನ್ನನ್ನು ಸಲಹಿದ್ದೀರಿ' ಎಂದು ಕಣ್ಣೀರು ಹಾಕಿದ್ದಾರೆ.

ಆದರೆ ಜಿಲ್ಲೆಯಲ್ಲಿ ಈವರೆಗೆ ಬಿಜೆಪಿ ಅಭ್ಯರ್ಥಿಗಳಾಗಲೀ, ಅವರ ಪ್ರಚಾರಕರಾಗಲಿ ಕಣ್ಣೀರು ಹಾಕಿದ ಉದಾಹರಣೆಗಳು ಸಿಕ್ಕಿಲ್ಲ.

ಕಾಂಗ್ರೆಸ್ ಅಭ್ಯರ್ಥಿ ಇಕ್ಬಾಲ್ ಹುಸೇನ್ ಕಣ್ಣೀರಿಟ್ಟ ಕ್ಷಣ

ಗಡ್ಡ ಬಿಟ್ಟ ಡಿಕೆಶಿ; ಸುರೇಶ್ ಕಣ್ಣೀರು!

ಡಿ.ಕೆ. ಸಹೋದರರು ಬಂಡೆಯಷ್ಟೇ ಗಟ್ಟಿ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ಸಂಸದ ಡಿ.ಕೆ. ಸುರೇಶ್ ಸಹ ಭಾವನೆಗಳನ್ನು ತಡೆಯಲಾಗದೇ ಭಾಷ್ಪ ಸುರಿದಿದ್ದಾರೆ.

ಕನಕಪುರದಲ್ಲಿ ಕೆಲ ದಿನಗಳ ಹಿಂದೆ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡುತ್ತಿದ್ದ ವೇಳೆ ಸುರೇಶ್ 'ಡಿ.ಕೆ. ಶಿವಕುಮಾರ್ ಗಡ್ಡ ಏಕೆ ಬಿಟ್ಟಿದ್ದಾರೆ ಎಂದು 13ರಂದು ತೀರ್ಮಾನ ಆಗುತ್ತದೆ' ಎನ್ನುತ್ತಲೇ ಮಾತು ನಿಲ್ಲಿಸುತ್ತಾರೆ. ಅಷ್ಟರಲ್ಲೇ ಅವರ ಕಣ್ಣಿಂದ ನೀರು ಜಿನುಗುತ್ತದೆ. ಕೆಲ ಕ್ಷಣ ಸುರೇಶ್ ಮಾತೇ ಬಾರದಂತೆ ನಿಲ್ಲುತ್ತಾರೆ. ನಂತರ ಶಾಲಿನಲ್ಲಿ ಕಣ್ಣೀರು ಒರೆಸಿಕೊಂಡು ಮಾತು ಆರಂಭಿಸುತ್ತಾರೆ. ಇದೀಗ ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲೂ ಸದ್ದು ಮಾಡುತ್ತಿದೆ.

ರಾಜ್ಯದ ವಿವಿಧೆಡೆ ಧಾರಾಕಾರ ಮಳೆ

ಮನೆಗೋಡೆ ಕುಸಿತ, ನೆಲಕ್ಕುರುಳಿದ ಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮೈಸೂರು, ಚಾಮರಾಜನಗರ, ಹಾಸನ, ಕೊಡಗು, ಬೀದರ್, ಶಿವಮೊಗ್ಗ, ದಾವಣಗೆರೆ ಜಿಲ್ಲೆ ಸೇರಿದಂತೆ ವಿವಿಧೆಡೆ ಶನಿವಾರ ಮಳೆಯಾಯಿತು. ಮಳೆಯಿಂದಾಗಿ ಅನೇಕ ಕಡೆ ಮರಗಳು ಉರುಳಿಬಿದ್ದಿವೆ.

ಹಾಸನ, ಮೈಸೂರು ನಗರದಲ್ಲಿ ಧಾರಾಕಾರ ಮಳೆ ಸುರಿಯಿತು. ಅರಕಲಗೂಡು, ಜಾವಗಲ್, ಹಳೇಬೀಡು, ಅರಸೀಕೆರೆಯಲ್ಲಿ ಉತ್ತಮ ಮಳೆಯಾಗಿದೆ. ಚಾಮರಾಜನಗರ, ಹನೂರು, ಯಳಂದೂರು, ಕೊಳ್ಳೇಗಾಲ, ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಸಾಧಾರಣ ಮಳೆಯಾಗಿದೆ.

ಚಾಮರಾಜನಗರದಲ್ಲಿ ಮಳೆಗೆ ಅನೇಕ ಮರಗಳು ಉರುಳಿ ಬಿದ್ದಿವೆ. ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲದಲ್ಲಿ ಶುಕ್ರವಾರ ರಾತ್ರಿ ಸುರಿದ ಭಾರಿ ಮಳೆಗೆ ಪಾರ್ವತಮ್ಮ ಎಂಬುವರ ಮನೆ ಗೋಡೆ ಸಂಪೂರ್ಣ ಕುಸಿದಿದೆ.

ಹನೂರು ತಾಲ್ಲೂಕಿನ ಮಹದೇಶ್ವರ ಬೆಟ್ಟ– ಕೊಳ್ಳೇಗಾಲ ಮಾರ್ಗ ಮಧ್ಯೆ ಶನಿಮಹಾತ್ಮ ದೇವಾಲಯದ ಬಳಿ ಉರುಳಿ ಬಿದ್ದ ಒಣಗಿದ ಬೃಹತ್ ಮರದ ಸಣ್ಣ ರೆಂಬೆ ಕೊಂಬೆಗಳನ್ನು ಮುರಿದು ಭಕ್ತರೇ ತೆರವುಗೊಳಿಸಿದರು. ಹೊಗೇನಕಲ್ ಬಳಿ, ಹೊಗೇನಕಲ್–ಗೋಪಿನಾಥಂ ಮಾರ್ಗ ಮಧ್ಯೆ ತಿರುವಿನಲ್ಲಿ ಬಿದ್ದ ಬೃಹತ್ ಮರವನ್ನು ಗ್ರಾಮಸ್ಥರು ತೆರವುಗೊಳಿಸಿದರು.

ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಹೋಬಳಿ ಸುತ್ತಲಿನ ಸೋಮಹಳ್ಳಿ, ಕಲ್ಲಹಳ್ಳಿ, ಹಾಲನಹಳ್ಳಿ, ಮರಳಪುರದಲ್ಲಿ ಉತ್ತಮ ಮಳೆಯಾಯಿತು. ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ದುಮ್ಮಿ ಗ್ರಾಮದಲ್ಲಿ ತೆಂಗಿನ ಮರಕ್ಕೆ ಸಿಡಿಲು ಬಡಿದು ಹಾನಿಯಾಯಿತು.

ಶಿವಮೊಗ್ಗ ವರದಿ: ಜಿಲ್ಲೆಯ ಸೊರಬ, ಕೋಣಂದೂರು, ಆನಂದಪುರ, ರಿಪ್ಪನ್‌ಪೇಟೆ ಭಾಗದಲ್ಲಿ ತುಂತುರು ಮಳೆಯಾಗಿದೆ. ದಾವಣಗೆರೆ ಜಿಲ್ಲೆಯ ಮಲೇಬೆನ್ನೂರಿನಲ್ಲಿ ಮಳೆಯಾಗಿದೆ.

ಬೀದರ್ ವರದಿ: ಬೀದರ್ ನಗರ ಸೇರಿ ಜಿಲ್ಲೆಯ ಭಾಲ್ಕಿಯಲ್ಲಿ ಮಳೆಯಾಗಿದೆ. ಚಿಟಗುಪ್ಪದಲ್ಲಿ ಬಿರುಗಾಳಿ, ಗುಡುಗು ಸಹಿತ ಮಳೆಯಾಯಿತು.

ದಿನಸಿ ನೀರುಪಾಲು

ಆನೇಕಲ್ (ಬೆಂಗಳೂರು ಗ್ರಾಮಾಂತರ): ತಾಲ್ಲೂಕಿನಾದ್ಯಂತ ಶನಿವಾರ ಸಂಜೆ ಮೂರು ತಾಸಿಗೂ ಹೆಚ್ಚು ಭಾರಿ ಮಳೆ ಸುರಿಯಿತು.

ಇದರಿಂದ ಆನೇಕಲ್-ಚಂದಾಪುರ ರಸ್ತೆಯ ಮರಸೂರು, ಬ್ಯಾಗಡದೇನಹಳ್ಳಿಯಲ್ಲಿ ಅಂಗಡಿಗಳಿಗೆ ಮಳೆ ನೀರು ನುಗ್ಗಿತು. ಅಂಗಡಿಯಲ್ಲಿದ್ದ ದಿನಸಿಗಳು, ಗೋಣಿಚೀಲದಲ್ಲಿದ್ದ ಕಾಳುಕಡಿಗಳು, ಆಹಾರಧಾನ್ಯಗಳು ತೋಯ್ದಿವೆ.

ನಾಳೆಯಿಂದ ಭಾರಿ ಮಳೆ: 8 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಮೇ 8ರಿಂದ ಮೂರು ದಿನಗಳ ಕಾಲ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಮೇ 8ರಂದು ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, 9ರಂದು ಮೈಸೂರು, ಚಾಮರಾಜನಗರ, 10ರಂದು ಚಿಕ್ಕಬಳ್ಳಾಪುರ, ಮೈಸೂರು, ಚಾಮರಾಜನಗರ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಭಾನುವಾರ ಸಹ ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗಲಿದೆ. ಕರಾವಳಿಯ ದಕ್ಷಿಣ ಕನ್ನಡ, ಉಡುಪಿ, ಉತ್ತರ ಒಳನಾಡಿನ ರಾಯಚೂರು, ಗದಗ, ಬೀದರ್, ಕೊಪ್ಪಳ, ಬಾಗಲಕೋಟೆ, ಕಲಬುರಗಿ ಜಿಲ್ಲೆಯ ಅಲ್ಲಲ್ಲಿ ಮಳೆಯಾಗಲಿದೆ ಎಂದು ಐಎಂಡಿ ಸೂಚನೆ ನೀಡಿದೆ.

ಬೆಂಗಳೂರಿನಲ್ಲೂ ದಿನವಿಡೀ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ವೇಳೆ ಹಗುರದಿಂದ ಸಾಧಾರಣ ಮಳೆಯಾಗಲಿದೆ. ಗರಿಷ್ಠ 29 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ, ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ಇರಲಿದೆ.

ನಕಲಿ ಸುದ್ದಿ ಹರಡಿದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: 'ನಾವು ಹಿಂದುತ್ವದಲ್ಲಿ ಮುಂದುವರಿಯುತ್ತೇವೆ. ಲಿಂಗಾಯತರ ಅಗತ್ಯವಿಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೇಳಿಕೆ ನೀಡಿರುವಂತೆ ನಕಲಿ ಸುದ್ದಿ ತುಣುಕನ್ನು ಸಾಮಾಜಿಕ ಜಾಲತಾಣದಲ್ಲಿ ಹರಡಿದ್ದ ಆರೋಪದ ಮೇಲೆ ವ್ಯಕ್ತಿಯನ್ನು ಇಲ್ಲಿನ ಲಕ್ಷ್ಮೀಪುರಂ ಠಾಣೆ ಪೊಲೀಸರು ಶನಿವಾರ ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

'ನಕಲಿ ಸುದ್ದಿ ಹರಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿ ಬಿ.ನಿರಂಜನ ಮೂರ್ತಿ ಎಂಬುವವರು ಮೇ 5ರಂದು ದೂರು ನೀಡಿದ್ದರು. ತನಿಖೆ ನಡೆಸಿದ ಪೊಲೀಸರು, ಆರೋಪಿಯನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು' ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ತಿಳಿಸಿದ್ದಾರೆ.

ಆರೋಪಿಯ ಹೆಸರು ಬಹಿರಂಗಪಡಿಸಲು ಅವರು ನಿರಾಕರಿಸಿದರು.

ಮನೆಯಿಂದ 94,326 ಮಂದಿ ಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಮತದಾನ ಪ್ರಕ್ರಿಯೆ ಶನಿವಾರ ಸಂಜೆಗೆ ಮುಕ್ತಾಯಗೊಂಡಿದ್ದು, ನೋಂದಾಯಿಸಿಕೊಂಡಿದ್ದ 99,529 ಮಂದಿ ಪೈಕಿ 94,326 (ಶೇಕಡ 94.77) ಜನರು ಮನೆಗಳಿಂದಲೇ ಹಕ್ಕು ಚಲಾಯಿಸಿದ್ದಾರೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

80 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಾಗಿರುವವರು ಹಾಗೂ ಅಂಗವಿಕಲರಿಗೆ ಮನೆಯಿಂದ ಮತದಾನ ಮಾಡಲು ಈ ಚುನಾವಣೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಏಪ್ರಿಲ್ 29ರಂದು ಆರಂಭವಾಗಿದ್ದ ಮನೆ ಮತದಾನ ಪ್ರಕ್ರಿಯೆ ಶನಿವಾರ ಸಂಜೆಯವರೆಗೂ ನಡೆಯಿತು.

80,250 ಹಿರಿಯ ನಾಗರಿಕರು ಮನೆಯಿಂದ ಮತದಾನಕ್ಕೆ ನೋಂದಣಿ ಮಾಡಿಸಿಕೊಂಡಿದ್ದರು. ಅವರಲ್ಲಿ 75,690 ಜನರು (ಶೇ 94.32) ಹಕ್ಕು ಚಲಾಯಿಸಿದ್ದಾರೆ. 19,279 ಅಂಗವಿಕಲರು ನೋಂದಾಯಿಸಿಕೊಂಡಿದ್ದು, ಅವರಲ್ಲಿ 18,636 ಜನರು (ಶೇ 96.66) ಮತ ಚಲಾಯಿಸಿದ್ದಾರೆ ಎಂದು ಮೀನಾ ಅವರು ಮಾಹಿತಿ ನೀಡಿದ್ದಾರೆ.

ಭಾರತ ಪ್ರವಾಸ ಯಶಸ್ವಿ: ಬಿಲಾವಲ್

ಇಸ್ಲಾಮಾಬಾದ್ (ಪಿಟಿಐ): 'ನನ್ನ ಭಾರತ ಪ್ರವಾಸ ಯಶಸ್ವಿಯಾಗಿದ್ದು, ಪ್ರತಿಯೊಬ್ಬ ಮುಸ್ಲಿಮನೂ ಭಯೋತ್ಪಾದಕನೇ ಆಗಿರುತ್ತಾನೆ ಎಂಬ ಅಭಿಪ್ರಾಯ ಹೋಗಲಾಡಿಸಲು ನೆರವಾಗಿದೆ' ಎಂದು ಪಾಕಿಸ್ತಾನ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಅವರು ಪ್ರತಿಪಾದಿಸಿದ್ದಾರೆ.

ಶಾಂಘೈ ಸಹಕಾರ ಸಂಘಟನೆ (ಎಸ್‌ಇಒ) ವಿದೇಶಾಂಗ ಸಚಿವರ ಸಮಾವೇಶದಲ್ಲಿ ಪಾಲ್ಗೊಂಡು ಸ್ವದೇಶಕ್ಕೆ ಮರಳಿದ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ನಾವು ಈ ಕಟ್ಟುಕಥೆ ಹೋಗಲಾಡಿಸುವ ಪ್ರಯತ್ನ ಮಾಡಿದ್ದೇವೆ' ಎಂದು ಹೇಳಿದರು.

ಭಾರತದ ಜತೆಗಿನ ಮಾತುಕತೆ ಕುರಿತ ಪ್ರಶ್ನೆಗೆ ಉತ್ತರಿಸಿದ ಬಿಲಾವಲ್, ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಮರುಸ್ಥಾಪಿಸುವ ಮೂಲಕ ಮಾತುಕತೆಗೆ ಅನುಕೂಲಕರ ವಾತಾವರಣವನ್ನು ಭಾರತವು ಸೃಷ್ಟಿಸಬೇಕು ಎಂದರು.

ಎಸ್‌ಇಒ ಸಮಾವೇಶದಲ್ಲಿ ಭಯೋತ್ಪಾದನೆಯ ವಿಷಯವಾಗಿ ಭಾರತ ಮತ್ತು ಪಾಕಿಸ್ತಾನ ವಿದೇಶಾಂಗ ಸಚಿವರು ಪರಸ್ಪರ ಟೀಕಿಸಿದ್ದರು.

'ಭಯೋತ್ಪಾದಕರ ಪೋಷಕರೊಂದಿಗೆ ಮಾತುಕತೆ ಸಾಧ್ಯವಿಲ್ಲ. ಬಿಲಾವಲ್ ಭುಟ್ಟೊ ಭಯೋತ್ಪಾದಕರ ವಕ್ತಾರ' ಎಂದು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಶುಕ್ರವಾರ ಟೀಕಿಸಿದ ಬೆನ್ನಲ್ಲೆ ಬಿಲಾವಲ್ ಈ ಹೇಳಿಕೆ ನೀಡಿದ್ದಾರೆ.

ಖಾಲಿಸ್ತಾನ ಉಗ್ರ ಪರಮ್‌ಜಿತ್ ಸಿಂಗ್ ಹತ್ಯೆ

ಚಂಡೀಗಢ/ಲಾಹೋರ್ (ಪಿಟಿಐ): ಖಾಲಿಸ್ತಾನ ಭಯೋತ್ಪಾದಕ ಪರಮ್‌ಜಿತ್ ಸಿಂಗ್ ಪಂಜ್ವಾರ್‌ನನ್ನು ಪಾಕಿಸ್ತಾನದ ಲಾಹೋರ್‌ನಲ್ಲಿ ಶನಿವಾರ ದುಷ್ಕರ್ಮಿಗಳು ಗುಂಡಿಟ್ಟು ಹತ್ಯೆ ಮಾಡಿದ್ದಾರೆ ಎಂದು ಮೂಲಗಳು ಹೇಳಿವೆ.

ಲಾಹೋರ್‌ನಲ್ಲಿರುವ ತನ್ನ ಮನೆಯ ಸಮೀಪ ನಡೆದು ಹೋಗುತ್ತಿದ್ದ ಪರಮ್‌ಜಿತ್ ಮೇಲೆ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಗುಂಡು ಹಾರಿಸಿ ಸಾಯಿಸಿದ್ದಾರೆ ಎಂದು ತಿಳಿಸಿವೆ.

ಪಂಜಾಬ್‌ನ ತರನ್ ತಾರನ್ ಮೂಲದ 63 ವರ್ಷದ ಪರಮ್‌ಜಿತ್ ಸಿಂಗ್ ನಿಷೇಧಿತ ಖಾಲಿಸ್ತಾನ ಕಮಾಂಡೊ ಪಡೆಯ ಪಂಜ್ವಾರ್ ಗುಂಪನ್ನು ಮುನ್ನಡೆಸುತ್ತಿದ್ದ ಎಂದಿವೆ.

ಕಳ್ಳನೋಟು, ಮಾದಕವಸ್ತು, ಶಸ್ತ್ರಾಸ್ತ್ರ ಕಳ್ಳಸಾಗಣೆ ಪ್ರಕರಣಗಳಲ್ಲಿ ಶಾಮೀಲಾಗಿದ್ದ ಈತನನ್ನು 2020ರ ಜುಲೈನಲ್ಲಿ ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ ಅಡಿಯಲ್ಲಿ ಭಯೋತ್ಪಾದಕ ಎಂದು ಘೋಷಿಸಲಾಗಿತ್ತು. ಪರಮ್‌ಜಿತ್ 1986ರಲ್ಲಿ ಖಾಲಿಸ್ತಾನ ಕಮಾಂಡೊ ಪಡೆಗೆ ಸೇರ್ಪಡೆಗೊಂಡಿದ್ದ. ಬಳಿಕ ಪಾಕಿಸ್ತಾನಕ್ಕೆ ತೆರಳಿದ್ದ ಎಂದೂ ಹೇಳಿವೆ.

ಲಾಹೋರ್‌ನಲ್ಲಿದ್ದು ಸಂಘಟನೆಯನ್ನು ಮುನ್ನಡೆಸುತ್ತಿದ್ದ ಈತ, ಪಾಕಿಸ್ತಾನದ ಯುವಕರಿಗೆ ಶಸ್ತ್ರಾಸ್ತ್ರ ತರಬೇತಿ ನೀಡುತ್ತಿದ್ದ ಮತ್ತು ಭಾರತದೊಳಕ್ಕೆ ನುಸುಳುವ ಉಗ್ರರಿಗೂ ಸಹಾಯ ಮಾಡುತ್ತಿದ್ದ. ಆದರೆ 2 ವರ್ಷಗಳಿಂದ ಸಕ್ರಿಯನಾಗಿರಲಿಲ್ಲ ಎಂದೂ ತಿಳಿಸಿವೆ. ಪಾಕಿಸ್ತಾನದ ರೇಡಿಯೊದ ಮೂಲಕ ಭಾರತ ವಿರೋಧಿ ಮತ್ತು ಪ್ರತ್ಯೇಕತಾವಾದದ ಪರವಾಗಿರುವ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದರಲ್ಲೂ ಶಾಮೀಲಾಗಿದ್ದ ಮತ್ತು ಭಾರತ ಸರ್ಕಾರದ ವಿರುದ್ಧ ಅಲ್ಪಸಂಖ್ಯಾತರನ್ನು ಎತ್ತಿಕಟ್ಟುವ ಹುನ್ನಾರ ನಡೆಸುತ್ತಿದ್ದ ಎಂದಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಎರಡನೇ ವರುಷದ ಚಿರಸ್ಮರಣೆ

ಜೆ. ನಾಗಮ್ಮ
ಜನನ: 16–05–1960 ಮರಣ: 10–05–2021
ಧ್ರುವತಾರೆಯಾದ ನೀನು ನನಗಾಗಿ ಧರೆಗೆ ಇಳಿದು ಬಂದೆ. ನಾಲ್ಕು ದಶಕಗಳ ಕಾಲ ನನ್ನ ಸಹಧರ್ಮಿಣಿಯಾಗಿ ಬಾಳಿಗೆ ಬೆಳಕಾದೆ.
ನನ್ನ ಜೀವನದ ಸಂಗಾತಿಯಾಗಿ ನನ್ನ ಯಶಸ್ಸಿಗೂ ಕೀರ್ತಿಗೂ ಕಾರಣಳಾದೆ.
ನಮ್ಮ ಮಕ್ಕಳನ್ನು ನನ್ನನ್ನು ಪ್ರೀತಿಯಿಂದ ತಾಯಿಯಂತೆ ಸಾಕಿ ಸಲುಹಿದೆ.
ನಮ್ಮ ಸುಖ ಸಂಸಾರದ ಸಂಧ್ಯಾ ಕಾಲದಲ್ಲಿ ದಿನಾಂಕ: 10–05–2021 ಭಾನುವಾರ ರಾತ್ರಿ ಒಂದು ಸಣ್ಣ ಸುಳಿವನ್ನು ನೀಡದೆ ಚಿರನಿದ್ರೆಯಲ್ಲೇ, ನಿನ್ನ ಕೊನೆಯ ಪಯಣವ ಮುಗಿಸಿ, ನೀ ಬಂದ ಜಾಗಕ್ಕೆ ಮರಳಿ ಸೇರಿಕೊಂಡೆ. ನೀನಿಲ್ಲದ ನನ್ನ ಈ ಜೀವನ ಶೂನ್ಯವಾಗಿದೆ.
ಸದಾ ಸ್ಮರಿಸುವ: ಇಂತಿ ನಿನ್ನ ಪತಿ: ಜಿ. ಚಿನ್ನಪ್ಪ ರೆಡ್ಡಿ ಮತ್ತು ಮಕ್ಕಳು

ಎರಡನೇ ವಾರ್ಷಿಕ ಪುಣ್ಯಸ್ಮರಣೆ

ಶ್ರೀ.ಕೆ. ನಾಗರಾಜಯ್ಯ ನವರು
(ಹರಿಕಥೆ ವಿದ್ವಾನ್, ಜ್ಯೋತಿಷ್ಯ ಪಂಡಿತರು)
ಜನನ: 8.6.1943 ಮರಣ : 6.5.2021
ತಾ॥ 7.5.2023ನೇ ಭಾನುವಾರ ಬೆಳಿಗ್ಗೆ 10:30ಕ್ಕೆ ಓಬಳಾಪುರ, ತುಮಕೂರು. ಇಲ್ಲಿ ಏರ್ಪಡಿಸಲಾಗಿದೆ ತಾವು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ನಿಮ್ಮ ನೆನಪಿನಲ್ಲಿರುವ ಕುಟುಂಬವರ್ಗದವರು
ಮೊ: 9538111239, 9742299833

ಎರಡನೇ ವರ್ಷದ ಚಿರಸ್ಮರಣೆ



ಶ್ರೀ. ನಾರಾಯಣಸ್ವಾಮಿ ವಕೀಲರು
ನಿಧನ: 07.05.2021
ನಿಮ್ಮ ನೆನಪು ನಮ್ಮ ಹೃದಯಗಳಲ್ಲಿ ಸದಾಹಚ್ಚಹಸಿರಾಗುಳಿದಿದೆ, ಅನುದಿನವೂ, ಅನುಕ್ಷಣವೂ ನಿಮ್ಮ ಸ್ಮರಣೆಯೇ ನಮಗೆ ದಿವ್ಯಚೇತನವಾಗಿದೆ. ಸದಾ ನಿಮ್ಮನ್ನು ಸ್ಮರಿಸುವ ಧರ್ಮಪತ್ನಿ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕಳು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

40ನೇ ರಾಜನಾಗಿ ಪಟ್ಟಾಭಿಷೇಕ • ವಿವಿಧ ದೇಶಗಳ 2,200ಕ್ಕೂ ಹೆಚ್ಚು ಗಣ್ಯರು ಭಾಗಿ

ಬ್ರಿಟನ್: ದೊರೆ ಚಾರ್ಲ್ಸ್ ಯುಗಾರಂಭ

ಲಂಡನ್ (ಪಿಟಿಐ): ವೆಸ್ಟ್‌ಮಿನ್‌ಸ್ಟರ್ ಚರ್ಚ್‌ನಲ್ಲಿ ಸಂಪ್ರದಾಯಬದ್ಧವಾಗಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಬ್ರಿಟನ್‌ನ 40ನೇ ರಾಜನಾಗಿ 3ನೇ ಚಾರ್ಲ್ಸ್ ಅವರ ಪಟ್ಟಾಭಿಷೇಕ ಶನಿವಾರ ನಡೆಯಿತು.

74 ವರ್ಷದ ನೂತನ ರಾಜನ ಕಿರೀಟ ಧಾರಣೆಯ ಸಂಭ್ರಮವನ್ನು ಬ್ರಿಟನ್ ಸೇರಿದಂತೆ ವಿದೇಶಗಳಿಂದ ಆಗಮಿಸಿದ್ದ 2,200ಕ್ಕೂ ಹೆಚ್ಚು ಗಣ್ಯರು ಕಣ್ತುಂಬಿಕೊಂಡರು.

ಬ್ರಿಟನ್ ರಾಜ ಅಥವಾ ರಾಣಿಯ ಹಿರಿಯ ಪುತ್ರ ಅಥವಾ ಪುತ್ರಿ ಉತ್ತರಾಧಿಕಾರಿಯಾಗಿ ಆಯ್ಕೆಯಾಗುತ್ತಾರೆ. ಇದು ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ಪದ್ಧತಿ. ಹಾಗಾಗಿ, ರಾಣಿ 2ನೇ ಎಲಿಜಬೆತ್ ಅವರ ಹಿರಿಯ ಪುತ್ರ ಚಾರ್ಲ್ಸ್ ಈಗ ರಾಜ ಆಗಿದ್ದಾರೆ.

2ನೇ ಎಲಿಜಬೆತ್ 1953ರಲ್ಲಿ ಬ್ರಿಟನ್ ರಾಣಿಯಾಗಿ ಕಿರೀಟ ಧರಿಸಿದ್ದರು. 70 ವರ್ಷಗಳ ಬಳಿಕ ವೆಸ್ಟ್‌ಮಿನ್‌ಸ್ಟರ್ ಚರ್ಚ್‌ನಲ್ಲಿ ಚಾರ್ಲ್ಸ್ ಪಟ್ಟಾಭಿಷೇಕಸಮಾರಂಭನಡೆಯಿತು.

ಇದಕ್ಕೂ ಮೊದಲು ಚಾರ್ಲ್ಸ್ ಮತ್ತು ಅವರ ಪತ್ನಿ ಕಮೀಲ ಅವರು ಬಕಿಂಗ್‌ಹ್ಯಾಮ್ ಅರಮನೆಯಿಂದ 2.2 ಕಿ.ಮೀ ದೂರದ ಚರ್ಚ್‌ಗೆ ಸಾರೋಟಿನಲ್ಲಿ ಆಗಮಿಸಿದರು. ಪಶ್ಚಿಮ ದ್ವಾರದ ಮೂಲಕ ಚಾರ್ಲ್ಸ್, ಚರ್ಚ್ ಪ್ರವೇಶಿಸಿದರು. ಅವರ ಹಿಂದೆಯೇ ಕಮೀಲ ಹೆಜ್ಜೆ ಹಾಕಿದರು.

ಕ್ಯಾಂಟರ್‌ಬರಿ ಚರ್ಚ್‌ನ ಆರ್ಚ್ ಬಿಷಪ್ ಜಸ್ಟಿನ್ ವೆಲ್ಬಿ ಸಾಂಪ್ರದಾಯಿಕ ವಿಧಿವಿಧಾನದ ಅನ್ವಯ ಚಾರ್ಲ್ಸ್‌ಗೆ ಪವಿತ್ರ ತೈಲದ ಪ್ರೋಕ್ಷಣೆ ಮಾಡಿ ರಾಜವಂಶದ ದ್ಯೋತಕಗಳಾದ ಮಂಡಲ ಮತ್ತು ರಾಜದಂಡ ನೀಡಿದರು. ನಂತರ ವಜ್ರ ಖಚಿತ ಅಲಂಕೃತವಾದ 'ಸೇಂಟ್ ಎಡ್ವರ್ಡ್ ಕಿರೀಟ'ವನ್ನು ರಾಜನಿಗೆ ತೊಡಿಸಿ ಪ್ರತಿಜ್ಞಾ ವಿಧಿ ಬೋಧಿಸಿದರು.

'ಬ್ರಿಟನ್ ಜನರಿಗೆ ನ್ಯಾಯ ಒದಗಿಸುತ್ತೇನೆ. ಅವರ ನಂಬಿಕೆ ಮತ್ತು ವಿಶ್ವಾಸ ಉಳಿಸಲು ಸದಾ ಸಿದ್ಧನಿದ್ದೇನೆ' ಎಂದು ಬೈಬಲ್ ಮೇಲೆ ಕೈಇಟ್ಟು ಚಾರ್ಲ್ಸ್ ಪ್ರತಿಜ್ಞೆ ಸ್ವೀಕರಿಸಿದರು. ಬಳಿಕ ಬೈಬಲ್ ಪುಸ್ತಕಕ್ಕೆ ಮುತ್ತಿಟ್ಟರು.

ವಿವಿಧ ಕ್ಷೇತ್ರದ ಪ್ರಮುಖರು ಈ ಐತಿಹಾಸಿಕ ಸಮಾರಂಭಕ್ಕೆ ಸಾಕ್ಷಿಯಾದರು. ಭಾರತದ ಪ್ರತಿನಿಧಿಯಾಗಿ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಹಾಗೂ ಅವರ ಪತ್ನಿ ಡಾ.ಸುದೇಸ ಧನಕರ್ ಭಾಗಿಯಾಗಿದ್ದರು. ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರತಿನಿಧಿಗಳು, ಹಿಂದೂ, ಸಿಖ್, ಮುಸ್ಲಿಂ, ಬೌದ್ಧ, ಯಹೂದಿ ಸಮುದಾಯದ ಧಾರ್ಮಿಕ ನಾಯಕರು ಪಾಲ್ಗೊಂಡಿದ್ದರು.

ಪ್ರಧಾನಿ ರಿಷಿ ಸುನಕ್ ಅವರು ಆರ್ಚ್ ಬಿಷಪ್ ಸೂಚಿಸಿದ ಬೈಬಲ್‌ನ ವಾಕ್ಯಗಳನ್ನು ಓದಿಸಿದರು.

ಭಾರತ ಮೂಲದ ಹಿಂದೂ ವ್ಯಕ್ತಿಯೊಬ್ಬರು ಬ್ರಿಟನ್ ರಾಜನ ಪಟ್ಟಾಭಿಷೇಕ ಕಾರ್ಯಕ್ರಮದಲ್ಲಿ ಈ ಕರ್ತವ್ಯ ನಿಭಾಯಿಸಿದ್ದು ವಿಶೇಷವಾಗಿತ್ತು. ಈ ಅಪೂರ್ವ ಕ್ಷಣಕ್ಕೆ ಅವರ ಪತ್ನಿ ಅಕ್ಷತಾ ಮೂರ್ತಿ ಸಾಕ್ಷಿಯಾದರು.

'ಚಾರ್ಲ್ಸ್ ಮತ್ತು ಕಮೀಲ ದೇಶದ ಹೆಮ್ಮೆಯ ಪ್ರತೀಕವಾಗಿದ್ದಾರೆ. ರಾಜಪ್ರಭುತ್ವವನ್ನು ಗೌರವಿಸುವುದು ಕಾಮನ್‌ವೆಲ್ತ್ ರಾಷ್ಟ್ರಗಳು ಸೇರಿದಂತೆ ಬ್ರಿಟನ್ ಪ್ರಜೆಗಳ ಆದ್ಯ ಕರ್ತವ್ಯ. ಇಂತಹ ವೈಭವಯುತ ಮೆರವಣಿಗೆ, ಸಮಾರಂಭವನ್ನು ಬೇರೆ ಯಾವುದೇ ದೇಶದಲ್ಲೂ ಕಾಣಲು ಸಾಧ್ಯವಿಲ್ಲ' ಎಂದು ರಿಷಿ ಸುನಕ್ ಹೇಳಿದರು.

'70 ವರ್ಷದ ಬಳಿಕ ಬ್ರಿಟನ್‌ನಲ್ಲಿ ರಾಜನ ಪಟ್ಟಾಭಿಷೇಕ ಸಮಾರಂಭ ನಡೆಯುತ್ತಿದೆ. ಇದು ಚರಿತ್ರೆ, ಸಂಸ್ಕೃತಿ ಹಾಗೂ ಸಂಪ್ರದಾಯ ಬೆರೆತ ಹೆಮ್ಮೆಯ ಕ್ಷಣ' ಎಂದು ಬಣ್ಣಿಸಿದರು.

ಸುಮಾರು ಎರಡು ಗಂಟೆಗಳ ಕಾಲ ಸಮಾರಂಭ ನಡೆಯಿತು. ಚರ್ಚ್‌ನಲ್ಲಿ ಗಂಟೆಯ ಸದ್ದು ಮೊಳಗಿದ ಬಳಿಕ ಮುಕ್ತಾಯಗೊಂಡಿತು. ಬಳಿಕ ಚಾರ್ಲ್ಸ್ ದಂಪತಿ ಬಕಿಂಗ್‌ಹ್ಯಾಮ್ ಅರಮನೆಗೆ ಸಾರೋಟಿನಲ್ಲಿ ತೆರಳಿದರು.

ಬಕಿಂಗ್‌ಹ್ಯಾಮ್ ಅರಮನೆಯಿಂದ ವೆಸ್ಟ್‌ಮಿನ್‌ಸ್ಟರ್ ಚರ್ಚ್‌ಗೆ ಸಾರೋಟಿನಲ್ಲಿ ತೆರಳಿದ 3ನೇ ಚಾರ್ಲ್ಸ್ ಮತ್ತು ಅವರ ಪತ್ನಿ ಕಮೀಲ –ಎಎಫ್‌ಪಿ ಚಿತ್ರ

ಬ್ರಿಟನ್‌ನ ವೆಸ್ಟ್‌ಮಿನ್‌ಸ್ಟರ್ ಚರ್ಚ್‌ನಲ್ಲಿ ರಾಜನಾಗಿ 3ನೇ ಚಾರ್ಲ್ಸ್ ಪಟ್ಟಾಭಿಷೇಕ ನಡೆಯಿತು –ಎಪಿ/ಪಿಟಿಐ ಚಿತ್ರ

'ಚಾರ್ಲ್ಸ್ ನಮ್ಮ ರಾಜನಲ್ಲ!'

ಲಂಡನ್ (ಎಎಫ್‌ಪಿ): ಪಟ್ಟಾಭಿಷೇಕದ ಮೆರವಣಿಗೆಗೆ ಅಡ್ಡಿಪಡಿಸಲು ಮುಂದಾಗಿದ್ದ ಬ್ರಿಟನ್ ಅರಸೊತ್ತಿಗೆ ವಿರೋಧಿಸುವ ರಿಪಬ್ಲಿಕ್ ಸಂಘಟನೆಯ ಸದಸ್ಯರನ್ನು ಪೊಲೀಸರು ಮುಂಜಾಗ್ರತೆಯಾಗಿ ಬಂಧಿಸಿದ ಕ್ರಮವನ್ನು ಬ್ರಿಟನ್ ಮಾನವ ಹಕ್ಕುಗಳ ಘಟಕ ಖಂಡಿಸಿದೆ.

ಸಂಘಟನೆಯ ಸದಸ್ಯರು ಟಫಾಲ್ಗರ್ ವೃತ್ತದಲ್ಲಿ ಪ್ರತಿಭಟನೆ ನಡೆಸಲು ಜಮಾವಣೆಗೊಂಡು 'ಚಾರ್ಲ್ಸ್ ನಮ್ಮ ರಾಜನಲ್ಲ' ಎಂದು ಘೋಷಣೆ ಕೂಗಿದರು. ಈ ವೇಳೆ ಅಲ್ಲಿಗೆ ಆಗಮಿಸಿದ ಲಂಡನ್ ಮೆಟ್ರೊಪಾಲಿಟನ್ ಪೊಲೀಸರು ಪ್ರತಿಭಟನಕಾರರನ್ನು ಬಂಧಿಸಿ ಭಿತ್ತಿಪತ್ರಗಳನ್ನು ವಶಪಡಿಸಿಕೊಂಡರು.

'ನಾಗರಿಕರಿಗೆ ತೊಂದರೆ ಕೊಡುತ್ತಿರುವುದರಿಂದ ಬಂಧಿಸಲಾಗಿದೆ' ಎಂದು ಪೊಲೀಸರು ಸಮಜಾಯಿಷಿ ನೀಡಲು ಮುಂದಾದರು. ಇದಕ್ಕೆ ಪ್ರತಿಭಟನಕಾರರು ಆಕ್ಷೇಪ ವ್ಯಕ್ತಪಡಿಸಿದರು.

'ಜನರಿಂದ ಆಯ್ಕೆಯಾದವರಷ್ಟೇ ರಾಜನಾಗಬೇಕು. ಅರಸೊತ್ತಿಗೆಯ ರಾಜ ನಮಗೆ ಬೇಡ. ನಾವು ಮೆರವಣಿಗೆಗೆ ಅಡ್ಡಿಪಡಿಸುವ ಉದ್ದೇಶ ಹೊಂದಿರಲಿಲ್ಲ. ಆದರೂ, ನಮ್ಮ ವಿರುದ್ಧ ಪೊಲೀಸರು ಕ್ರಮಕೈಗೊಂಡಿದ್ದಾರೆ' ಎಂದು ಸಂಘಟನೆಯ ಮುಖ್ಯಸ್ಥ ಗ್ರಹಾಂ ಸ್ಮಿತ್ ದೂರಿದರು.

'ಇಂತಹ ಘಟನೆಯನ್ನು ಮಾಸ್ಕೊದಲ್ಲಿ ಮಾತ್ರ ಕಾಣಬಹುದು. ಲಂಡನ್‌ನಲ್ಲಿ ಇದಕ್ಕೆ ಅವಕಾಶ ಇಲ್ಲ' ಎಂದು ಮಾನವ ಹಕ್ಕುಗಳ ಘಟಕದ ನಿರ್ದೇಶಕ ಯಾಸ್ಮಿನ್ ಅಹ್ಮದ್ ಪ್ರತಿಕ್ರಿಯಿಸಿದರು.

ಭಾರತ ಅಚ್ಚುಮೆಚ್ಚು...

ಲಂಡನ್(ಪಿಟಿಐ): ಚಾರ್ಲ್ಸ್‌ಗೆ ಭಾರತವೆಂದರೆ ಅಚ್ಚುಮೆಚ್ಚು. 2007ರಲ್ಲಿ ಅವರು ಬ್ರಿಟಿಷ್ ಏಷಿಯನ್ ಟ್ರಸ್ಟ್ ಸ್ಥಾಪಿಸಿದ್ದಾರೆ. ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿನ ಬಡತನದ ನಿರ್ಮೂಲನೆಗೆ ಇದು ಶ್ರಮಿಸುತ್ತಿದೆ. ಇದಕ್ಕೆ ನೆರವು ಕೋರಿ ಹಲವು ಬಾರಿ ಅವರು ಭಾರತಕ್ಕೂ ಭೇಟಿ ನೀಡಿದ್ದಾರೆ.

'ಚಾರ್ಲ್ಸ್ ಅವರು ವೇಲ್ಸ್‌ನ ರಾಜ ಕುಮಾರನಾಗಿದ್ದ ದಿನದಿಂದಲೂ ಅವರೊಂದಿಗೆ ನನಗೆ ಒಡನಾಟವಿದೆ. ಹಲವು ಬಾರಿ ಅವರೊಂದಿಗೆ ಚರ್ಚೆ ಮಾಡಿದ್ದೇನೆ. ಇತರರ ನಂಬಿಕೆಗಳನ್ನು ಗೌರವಿಸುವ ಅವರ ನಿಲುವಿನಲ್ಲಿ ಇಂದಿಗೂ ಯಾವುದೇ ಬದಲಾವಣೆಯಾಗಿಲ್ಲ' ಎಂದು ಸಿಖ್ ಧರ್ಮದ ಪ್ರತಿನಿಧಿಯಾಗಿ ಪಾಲ್ಗೊಂಡಿದ್ದ ಲಾರ್ಡ್ ಇಂದ್ರಜಿತ್ ಸಿಂಗ್ ಹೇಳಿದರು. 'ಅವರದು ಬಹುಸಂಸ್ಕೃತಿಯನ್ನು ಮೇಳೈಸಿದ ವ್ಯಕ್ತಿತ್ವ. ಇದು ಭಾರತದೊಂದಿಗೆ ಅವರ ಬೆಸುಗೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ. ಭಾರತದ ಯೋಗ ಮತ್ತು ಆಯುರ್ವೇದ ಬಗ್ಗೆ ಅವರಿಗೆ ವಿಶೇಷ ಪ್ರೀತಿ ಇದೆ' ಎಂದರು.

ಬಕಿಂಗ್‌ಹ್ಯಾಮ್ ಅರಮನೆಯ ಬಾಲ್ಕನಿಯಲ್ಲಿ ನಿಂತು ರಾಯಲ್ ಏರ್ ಫೋರ್ಸ್‌ನ ಪ್ರದರ್ಶನ ವೀಕ್ಷಿಸಿದ 3ನೇ ಚಾರ್ಲ್ಸ್ ಅವರ ಪತ್ನಿ ಕಮೀಲ

ಪುತ್ರ ಹ್ಯಾರಿ ಭಾಗಿ

ಚಾರ್ಲ್ಸ್ ಅವರ ಕಿರಿಯ ಪುತ್ರ ಹಾಗೂ ರಾಜಕುಮಾರ ಹ್ಯಾರಿ ಅಪ್ಪನ ಪಟ್ಟಾಭಿಷೇಕ ಸಮಾರಂಭವನ್ನು ಕಣ್ತುಂಬಿಕೊಂಡರು.

ರಾಜ ಮನೆತನದವರಿಗೆ ಮೀಸಲಾಗಿದ್ದ ಆಸನದಲ್ಲಿ ಅವರು ಆಸೀನರಾಗಿದ್ದರು. ಹ್ಯಾರಿ ಅವರ ಪತ್ನಿ ಮೇಘನ್ ತಮ್ಮ ಇಬ್ಬರು ಮಕ್ಕಳಾದ ಲಿಲಿಬೆಟ್ ಮತ್ತು ಅರ್ಚಿ ಜೊತೆಗೆ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿದ್ದು, ಸಮಾರಂಭಕ್ಕೆ ಗೈರುಹಾಜರಾಗಿದ್ದರು.

ರಾಣಿಯ ಬಟ್ಟೆ ವಿನ್ಯಾಸಗೊಳಿಸಿದ್ದು ಪಶ್ಚಿಮ ಬಂಗಾಳದ ಮಹಿಳೆ

ಕೋಲ್ಕತ್ತ (ಪಿಟಿಐ): ಬ್ರಿಟನ್‌ನ ರಾಣಿ ಕಮೀಲ ಅವರ ಉಡುಪು ಮತ್ತು 3ನೇ ಚಾರ್ಲ್ಸ್ ಅವರು ತಮ್ಮ ಪೋಷಾಕಿನ ಜೊತೆಗೆ ಧರಿಸಿದ್ದ ಪದಕ ಸೂಚಿ ಅನ್ನು ವಿನ್ಯಾಸಗೊಳಿಸಿದ್ದು ಪಶ್ಚಿಮ ಬಂಗಾಳದ ವಸ್ತ್ರ ವಿನ್ಯಾಸಕಿ ಪ್ರಿಯಾಂಕಾ ಮಲ್ಲಿಕ್.

ಉಡುಪು ಮತ್ತು ಪದಕಸೂಚಿ ವಿನ್ಯಾಸಕ್ಕಾಗಿ ಬ್ರಿಟನ್‌ನ ರಾಜಮನೆತನವು ಕೃತಜ್ಞತೆ ಸೂಚಿಸಿ ವಸ್ತ್ರವಿನ್ಯಾಸಕಿಗೆ ಪತ್ರವನ್ನು ಬರೆದಿದ್ದು, ಪಟ್ಟಾಭಿಷೇಕ ಸಮಾರಂಭದಲ್ಲಿ ಭಾಗವಹಿಸಬೇಕು ಎಂದು ಆಹ್ವಾನವನ್ನು ನೀಡಿತ್ತು.

ಹೂಗ್ಲಿ ಜಿಲ್ಲೆಯ ಬಡಿನಾನ್ ಗ್ರಾಮದ, 29 ವರ್ಷದ ವಸ್ತ್ರವಿನ್ಯಾಸಕಿ ಪ್ರಿಯಾಂಕಾ ಅವರು ಇಟಲಿಯ ಮಿಲನ್ ಯೂನಿವರ್ಸಿಟಿಯಿಂದ ವಸ್ತ್ರವಿನ್ಯಾಸ ವಿಷಯದಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

'ಬಕಿಂಗ್‌ಹ್ಯಾಮ್ ಅರಮನೆಯಿಂದ ಬರುವ ಪತ್ರ, ಇ–ಮೇಲ್‌ಗೆ ಹೆಚ್ಚಿನ ತೂಕವಿದೆ. ಪಟ್ಟಾಭಿಷೇಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಹ್ವಾನವಿದ್ದರೂ ಆರೋಗ್ಯದ ಕಾರಣಕ್ಕೆ ವೈದ್ಯರ ಸಲಹೆಯ ಮೇರೆಗೆ ಹೋಗಲು ಆಗಿಲ್ಲ' ಎಂದು ಪ್ರಿಯಾಂಕಾ ಅವರು ಹೇಳಿದರು.

ಹಿಂದೆ ರಾಜಮನೆತನದ ಕುಟುಂಬವನ್ನು ಸಂಪರ್ಕಿಸಿದ್ದ ಪ್ರಿಯಾಂಕಾ ಅವರು, ರಾಣಿಗೆ ವಸ್ತ್ರವಿನ್ಯಾಸ ಮಾಡುವ ಬಯಕೆ ತೋಡಿಕೊಂಡಿದ್ದರು. ವಿನ್ಯಾಸವನ್ನು ಕಳುಹಿಸಿದ್ದರು. ಅದಕ್ಕೆ ಮೆಚ್ಚುಗೆ ಜೊತೆಗೆ ಶ್ಲಾಘನಾ ಪತ್ರವೂ ಕೈಸೇರಿತು ಎಂದು ಹೇಳಿದರು.

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹900-1300
ಮಧ್ಯಮ	₹600-800
ಸಣ್ಣ	₹300-500

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹62,850
ಒಡವೆ ಚಿನ್ನ 1ಗ್ರಾಂ	₹5,782
ಬೆಳ್ಳಿ ಕೆ.ಜಿಗೆ	₹78,300

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹480

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660 (1640)
ಸೋಯಾ (ರಿಫೈನ್ಡ್)	₹995 (970)
ಸೂರ್ಯಕಾಂತಿ (ರಿಫೈನ್ಡ್)	₹100 (990)
ಪಾಮೋಲಿನ್	₹950 (945)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151.50
ಆರ್‌ಎಸ್‌ಎಸ್-5	₹146.50
ಗುಡ್ ಲಾಟ್	₹133

ಹಣಕಾಸು ಸೇವೆ: ಹೆಚ್ಚು ವಿದೇಶಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಭಾರತದ ಷೇರುಪೇಟೆಗಳಲ್ಲಿ ಏಪ್ರಿಲ್ 26 ರಿಂದ ಮೇ 5ರವರೆಗೆ ನಡೆದ ವಹಿವಾಟಿನಲ್ಲಿ ₹11,700 ಕೋಟಿ ಹೂಡಿಕೆ ಮಾಡಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದರು.

ಬಾರತದ ಷೇರುಪೇಟೆಗಳು ಏಪ್ರಿಲ್‌ನಲ್ಲಿ ಉತ್ತಮ ವಹಿವಾಟು ನಡೆಸಿವೆ. ವಿದೇಶಿ ಹೂಡಿಕೆದಾರರು ನಿರಂತರವಾಗಿ ಷೇರುಗಳನ್ನು ಖರೀದಿಸುತ್ತಿರುವುದು ಷೇರುಪೇಟೆಗಳ ಉತ್ತಮ ವಹಿವಾಟಿಗೆ ಪ್ರಮುಖ ಕಾರಣವಾಗಿದೆ. ಏಪ್ರಿಲ್‌ನ ದ್ವಿತೀಯಾರ್ಧದಲ್ಲಿ ಹಣಕಾಸು ಸೇವೆಗಳಿಗೆ ಸಂಬಂಧಿಸಿದ ಕಂಪನಿಗಳ ಷೇರುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದ್ದಾರೆ ಎಂದು ವಿಜಯಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಂಡವಾಳ ಸರಕುಗಳ ವಲಯದ ಷೇರುಗಳಲ್ಲಿ ಹೂಡಿಕೆ ಮಾಡುವುದನ್ನು ಮುಂದುವರಿಸಿದ್ದಾರೆ. ಆದರೆ, ಐ.ಟಿ. ವಲಯದಿಂದ ಹೆಚ್ಚಿನ ಬಂಡವಾಳ ಹಿಂದಕ್ಕೆ ಪಡೆಯುತ್ತಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ವಿದೇಶಿ ಹೂಡಿಕೆದಾರರು ಭಾರತದಲ್ಲಿ ಹೂಡಿಕೆ ಮಾಡುವುದನ್ನು ಮುಂದುವರಿಸುವ ಸಾಧ್ಯತೆ ಇದೆ. ರೂಪಾಯಿ ಮೌಲ್ಯ ಹೆಚ್ಚಾಗುತ್ತಿರುವುದು ಮತ್ತು ನಾಲ್ಕನೇ ತ್ರೈಮಾಸಿಕದ ಫಲಿತಾಂಶ ಉತ್ತಮವಾಗಿರುವುದು ಭಾರತದ ಮಾರುಕಟ್ಟೆಗೆ ಬಂಡವಾಳ ಒಳಹರಿವು ಹೆಚ್ಚಲು ನೆರವಾಗಲಿವೆ ಎಂದು ಅವರು ಅಭಿಪ್ರಾಯಪಟ್ಟರು.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹245-461
ದ್ವಿತಳಿ (ಬಿ.ವಿ)	₹272-623

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹15300
ಎಸಿ	₹7980
ಆರ್‌ಪಿ	₹10400
ಆರ್‌ಸಿ	₹5860

ಮುಂಬೈ ಧಾರಣೆ

ಶೇಂಗಾ
6-5-2023

ಜಾವಾ 70/80(ಹೊಸ)	11450-11500
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1650)
ಒಂದು ವಾರದ ಡೆಲಿವರಿ	1665 (1645)
ಸೋಯಾ ಕಚ್ಚಾ	900 (895)
ಪಾಮ್ ವಾರದ ಡೆಲಿವರಿ	948 (943)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
60,450 (60,850)
ಬೆಳ್ಳಿ ಕೆ.ಜಿ. 76,200 (77,000)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹಣದುಬ್ಬರ ನಿಯಂತ್ರಣ ಕ್ರಮ ಜಾರಿಯಲ್ಲಿ: ನಿರ್ಮಲಾ

ನವದೆಹಲಿ (ರಾಯಿಟರ್ಸ್): ಭಾರತದಲ್ಲಿ ಹಣದುಬ್ಬರವು ಸಹಿಸಿಕೊಳ್ಳಬಹುದಾದ ಮಟ್ಟಕ್ಕಿಂತ ತುಸು ಹೆಚ್ಚಿಗೆ ಇದ್ದು, ಅದನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶನಿವಾರ ಹೇಳಿದ್ದಾರೆ.

ಸೂಕ್ತವಾದ ಕ್ರಮಗಳನ್ನು ತೆಗೆದುಕೊಂಡಿರುವುದರಿಂದಲೇ ಸದ್ಯ ಹಣದುಬ್ಬರವು ಗರಿಷ್ಠ ಮಟ್ಟಕ್ಕಿಂತಲೂ ತುಸುವೇ ಹೆಚ್ಚಿಗೆ ಇದೆ. ಅದನ್ನು ಸಹ ಕಡಿಮೆ ಮಾಡಲು ನಿರಂತರವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಚಿಲ್ಲರೆ ಹಣದುಬ್ಬರವನ್ನು ಶೇ 4 ರಿಂದ ಗರಿಷ್ಠ ಶೇ 6ರ ಮಟ್ಟದಲ್ಲಿ ನಿಯಂತ್ರಿಸುವ ಗುರಿಯನ್ನು ಕೇಂದ್ರ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ನೀಡಿದೆ. ಜನವರಿ ಮತ್ತು ಫೆಬ್ರುವರಿಯಲ್ಲಿ ಹಣದುಬ್ಬರವು ಶೇ 6ರ ಗರಿಷ್ಠ ಮಟ್ಟವನ್ನು ಮೀರಿತ್ತು. ಆದರೆ ಮಾರ್ಚ್‌ನಲ್ಲಿ ಶೇ 5.66ರಷ್ಟು ದಾಖಲಾಗುವ ಮೂಲಕ 15 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ. ಆಹಾರ ವಸ್ತುಗಳ ದರ ಇಳಿಕೆ ಆಗಿರುವುದರಿಂದ ಮಾರ್ಚ್‌ನಲ್ಲಿ ಚಿಲ್ಲರೆ ಹಣದುಬ್ಬರ ಇಳಿಕೆ ಕಾಣಲು ಕಾರಣ.

ಮುಖ್ಯಾಂಶಗಳು

- ಗರಿಷ್ಠ ಶೇ 6ರಲ್ಲಿ ನಿಯಂತ್ರಿಸುವ ಗುರಿ
- ಮಾರ್ಚ್‌ನಲ್ಲಿ ಶೇ 6ಕ್ಕಿಂತ ಕೆಳಕ್ಕಿಳಿದ ಹಣದುಬ್ಬರ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40000
ಹಳತು	48000-53000
ದಾವಣಗೆರೆ	
ರಾಶಿ	36189-47969
ಚನ್ನಗಿರಿ	
ರಾಶಿ	47599-49100
ಶಿರಸಿ	
ಬೆಟ್ಟೆ	37209-43399
ಬಿಳಿಗೋಟು	22199-32011
ಚಾಲಿ	34499-37139
ಕೆಂಪುಗೋಟು	21099-32989
ರಾಶಿ	41899-45699
ಸೊರಬ	
ಬಿಳಿಗೋಟು	28609-32109
ಚಾಲಿ	35299-36611
ಕೋಕ	27099-32099
ರಾಶಿ	42319-46539

₹167 ಕೋಟಿಗೆ ತಗ್ಗಿದ ಪೇಟಿಎಂ ನಷ್ಟ

ನವದೆಹಲಿ (ಪಿಟಿಐ): ಪೇಟಿಎಂನ ಮಾತೃಸಂಸ್ಥೆ ಒನ್97 ಕಮ್ಯುನಿಕೇಷನ್ಸ್ ನಷ್ಟವು 2023ರ ಮಾರ್ಚ್ 31ಕ್ಕೆ ಕೊನೆಗೊಂಡ ನಾಲ್ಕನೇ ತ್ರೈಮಾಸಿಕದಲ್ಲಿ ₹167.5 ಕೋಟಿಗೆ ಇಳಿಕೆ ಕಂಡಿದೆ.

2022ರ ಮಾರ್ಚ್ 31ಕ್ಕೆ ಕೊನೆಗೊಂಡ ನಾಲ್ಕನೇ ತ್ರೈಮಾಸಿಕದಲ್ಲಿ ಕಂಪನಿಯ ನಷ್ಟವು ₹762.5 ಕೋಟಿಯಷ್ಟು ಇತ್ತು.

ಕಾರ್ಯಾಚರಣಾ ವರಮಾನವು ಶೇ 51.5ರಷ್ಟು ಹೆಚ್ಚಾಗಿ ₹2,334 ಕೋಟಿಗೆ ತಲುಪಿದೆ. ಅದಕ್ಕೂ ಹಿಂದಿನ ಅವಧಿಯಲ್ಲಿ ಕಾರ್ಯಾಚರಣಾ ವರಮಾನವು ₹1,540 ಕೋಟಿಯಷ್ಟು ಇತ್ತು.

ಅದಾನಿ ಪವರ್ ಲಾಭ ಶೇ 13 ಏರಿಕೆ

ನವದೆಹಲಿ (ಪಿಟಿಐ): ಅದಾನಿ ಪವರ್ ಲಿಮಿಟೆಡ್ (ಎಪಿಎಲ್) ನಿವ್ವಳ ಲಾಭವು 2022–23ರ ಮಾರ್ಚ್ ತ್ರೈಮಾಸಿಕದಲ್ಲಿ ಶೇ 13ರಷ್ಟು ಹೆಚ್ಚಾಗಿ ₹5,242 ಕೋಟಿಗೆ ತಲುಪಿದೆ.

2021–22ರ ಮಾರ್ಚ್ ತ್ರೈಮಾಸಿಕದಲ್ಲಿ ನಿವ್ವಳ ಲಾಭವು ₹4,654 ಕೋಟಿಯಷ್ಟು ಇತ್ತು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers
ಬೇಕಾಗಿದ್ದಾರೆ ಬೆಂಗಳೂರಿನಲ್ಲಿರುವ ಸರ್ಕಾರಿ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕರು (2-3 ವರ್ಷಗಳ ಅನುಭವವಿರಬೇಕು) ತಕ್ಷಣಬೇಕಾಗಿದ್ದಾರೆ. ಉತ್ತಮ ವೇತನ (ರೂ.20,000-25,000) ಟಿಎ/ಡಿಎ ಸೌಲಭ್ಯವಿರುತ್ತದೆ. ಸಂಪರ್ಕಿಸಿ:- ಕೆಎಸ್‌ಎಫ್-9 ಕಾರ್ಪೊರೇಟ್ ಸರ್ವೀಸಸ್ ಪ್ರೈ.ಲಿ, ಮಲ್ಲತ್ತಹಳ್ಳಿ, ಬೆಂಗಳೂರು- 560056 ಫೋ:- 9845432589/ 080 23185599

General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Situation Required
PVT LTD Lighting ಕಂಪನಿಯು ಎಲೆಕ್ಟ್ರಿಷಿಯನ್ ವಯಸ್ಸು 40 ಬೆಂಗಳೂರಿನ ಕೆಳಗೆ ಹುಡುಕುತ್ತಿದೆ. 9845054158

Wanted
ಬೆಂಗಳೂರಿನ ವೃದ್ಧಾಶ್ರಮಕ್ಕೆ ಅನುಭವವುಳ್ಳ ಗಂಡಸರು/ಹೆಂಗಸರು, Staff Nurse, Care Taker ಮತ್ತು ಕೆಲಸದವರು ಬೇಕಾಗಿದ್ದಾರೆ. ವೇತನ 10,000/- ರಿಂದ 15,000/- ಹೊರಗಿನವರಿಗೆ ಮೊದಲ ಆದ್ಯತೆ. ಊಟ, ವಸತಿ, ಸೌಲಭ್ಯವಿದೆ. 9845290458, 9663923971

ಬೆಂಗಳೂರಿನಲ್ಲಿ ಮನೆ ಕೆಲಸ ಮಾಡುವವರು, ಮಕ್ಕಳನ್ನು ನೋಡಿ ಕೊಳ್ಳುವವರು (ಮಹಿಳೆ) ಬೇಕಾಗಿದ್ದಾರೆ. ಸಂಬಳ :10k ರಿಂದ 15k ಉಚಿತ ಊಟ ವಸತಿ ಸೌಲಭ್ಯವಿದೆ ಸಂಪರ್ಕಿಸಿ: 8296577964

ವೈವಾಹಿಕ
Brides Wanted
Second Marriage
ವಧು ಬೇಕಾಗಿದೆ
ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಾಸವಾಗಿರುವ ಸ್ವಂತ ವ್ಯಾಪಾರ ಹೊಂದಿರುವ 49 ವರ್ಷ ವಯಸ್ಸಿನ ಒಕ್ಕಲಿಗ ಸಮುದಾಯದ ವ್ಯಕ್ತಿಗೆ ಎರಡನೇ ಸಂಬಂಧಕ್ಕೆ, 40 ವರ್ಷ ವಯಸ್ಸು ಮೇಲ್ಪಟ್ಟು ಒಳ್ಳೆಯ ವ್ಯಕ್ತಿತ್ವವುಳ್ಳ ಯಾವುದೇ ಜಾತಿಯ ಅಭ್ಯಂತರವಿಲ್ಲದ ಒಳ್ಳೆಯ ಮನಸ್ಥಿತಿಯುಳ್ಳ ವಿಧವೆ ಅಥವಾ ವಿಚ್ಛೇದಿತ ಮಹಿಳೆ ಬೇಕಾಗಿದ್ದಾರೆ. ವಿ.ಸೂ: Brokers & Time passers stay away please. ಆಸಕ್ತಿಯುಳ್ಳವರು ನೇರವಾಗಿ ಸಂಪರ್ಕಿಸಿ: Ph: 9945936661

ಶಿಕ್ಷಣ
Training
EVS TRAINING Center Haswini Tech Bangalore Electrical Car Scooter Manufacturing Assembly Servicing Repairing Placements Call 8790471108

ಪ್ರವಾಸ
Travel
"ಶ್ರೇಯಸ್‌ಟೂರ್ಸ್: 15.05.2023 13/06/21ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್‌ಸಿಸ್ಟರ್ಸ್ ಪ್ರವಾಸ) ಅಸ್ಸಾಂ,ಅರುಣಾಚಲ, ಮೇಘಾಲಯ,ಮಣಿಪುರ ತ್ರಿಪುರ,ನಾಗಲ್ಯಾಂಡ್, ಮಿಝೋರಾಂ.22.05.2023 10ದಿನಗಳು 6ವಿಮಾನಗಳಲ್ಲಿ ಸಂಪೂರ್ಣ ನೇಪಾಳರಾಷ್ಟ್ರ ಪ್ರವಾಸ ಕಠ್ಮಂಡು ಪೋಕ್ರಾ ಮುಕ್ತಿನಾಥ ಮನಕಾಮನ,ಜನಕಪುರಿ, ಚಿತ್ವಾನ್ 10.07.2023 04/10ದಿನಗಳು ಅಮರನಾಥಯಾತ್ರಾ ವಿಶೇಷ ಲೇ ಲಡಾಖ್ ಶ್ರೀನಗರ ಕಾರ್ಗಿಲ್. 8073824856/ 6366322639/ 9206979202"

Pilgrimage Tours
05.06.2023, ಕಾಶಿ,ಪ್ರಯಾಗರಾಜ್,ಅಯೋಧ್ಯ 16,500/-. 14.06.2023,ಕಾಶಿ,ಗಯಾ, ಪ್ರಯಾಗರಾಜ್,ಅಯೋಧ್ಯ 26,000/- 08.06.2023,ಚಾರ್ ದಾಮ್ ಯಾತ್ರ, ಅನುಗ್ರಹಯಾತ್ರ. 9880079351

ರಿಯಲ್ ಎಸ್ಟೇಟ್ ಸೆಲ್ಲಿಂಗ್
General
South
ಜಾಗ ಮಾರಾಟ: 0.65 ಎಕ್ರೆ ಮೂರು ಗದ್ದೆ+ 1ಎಕ್ರೆ ಕುಮ್ಕಿ, 30+30 ತೆಂಗು, ಅಡಿಕೆ+ ಮನೆ+ ಕೊಟ್ಟಿಗೆ+ 2 ಬಾವಿ. ತೆಂಕ ಸಟ್ವಾಡಿ, ಮೂಡ್ಲಕಟ್ಟೆ ಅಂಚೆ, ಕುಂದಾಪುರ ರೈಲ್ವೆ ಸ್ಟೇಶನ್ ರಸ್ತೆಯ ದಕ್ಷಿಣಕ್ಕೆ 2ಫರ್ಲಾಂಗ್. ಮೊಬೈಲ್:9481979039

ಬಿಲ್ಡರ್ ಎಸೆನ್ಶಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
conditions apply*
For More Details Contact:
9731810277 | 9901641752
9845114560 | 9886213331
080- 45557163 | 45557164

ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್: 55 ಕೆಜಿ ವಿಭಾಗದಲ್ಲಿ ಸಾಧನೆ

ಬಿಂದ್ಯಾರಾಣಿ ದೇವಿ ಬೆಳ್ಳಿ ಬೆಡಗು

ಜಿಂಜು, ಕೊರಿಯಾ (ಪಿಟಿಐ): ಭಾರತದ ಬಿಂದ್ಯಾರಾಣಿ ದೇವಿ ಅವರು ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.

ಇಲ್ಲಿ ನಡೆಯುತ್ತಿರುವ ಕೂಟದಲ್ಲಿ ಮಹಿಳೆಯರ 55 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಬಿಂದ್ಯಾರಾಣಿ ಶನಿವಾರ, ಒಟ್ಟು 194 ಕೆಜಿ (ಸ್ನ್ಯಾಚ್ 83 ಕೆಜಿ + ಕ್ಲೀನ್ ಮತ್ತು ಜರ್ಕ್ 111 ಕೆಜಿ) ಭಾರ ಎತ್ತಿದರು. ಈ ಆವೃತ್ತಿಯಲ್ಲಿ ಭಾರತಕ್ಕೆ ಇದು ಮೊದಲ ಪದಕವಾಗಿದೆ.

ಕ್ಲೀನ್ ಮತ್ತು ಜರ್ಕ್ ವಿಭಾಗದಲ್ಲೂ ಬಿಂದ್ಯಾರಾಣಿ ಬೆಳ್ಳಿ ಜಯಿಸಿದರು. ಅದಾಗ್ಯೂ 55 ಕೆಜಿ ತೂಕ ವಿಭಾಗಕ್ಕೆ ಒಲಿಂಪಿಕ್ಸ್‌ನಲ್ಲಿ ಅವಕಾಶ ಇಲ್ಲ.

ಮಣಿಪುರದ ಬಿಂದ್ಯಾ, ತಲಾ ಒಂದು ಸ್ನ್ಯಾಚ್ ಮತ್ತು ಕ್ಲೀನ್– ಜರ್ಕ್ ಪ್ರಯತ್ನಗಳನ್ನು ಕೈಚೆಲ್ಲಿದರು. ಚೀನಾ ತೈಪೆಯ ಚೆನ್ ಗುವನ್ ಲಿಂಗ್ (204 ಕೆಜಿ: 90 + 114) ಚಿನ್ನದ ಪದಕ ಜಯಿಸಿದರೆ, ವಿಯೆಟ್ನಾಂನ ವೊ ಥಿ ಕ್ಯುನ್ ನು (192 ಕೆಜಿ: 88 + 104) ಕಂಚು ಗಳಿಸಿದರು.

55 ಕೆಜಿ ವಿಭಾಗದಲ್ಲಿ ಸ್ಪರ್ಧಿಸುವ ಲಿಫ್ಟರ್‌ಗಳು, 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಬೇಕೆಂದರೆ ತಮ್ಮ ತೂಕ ವಿಭಾಗವನ್ನು ಹೆಚ್ಚು ಅಥವಾ ಕಡಿಮೆಗೆ ಬದಲಾಯಿಸಿಕೊಳ್ಳಬೇಕಾಗಿದೆ. 2022ರ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲೂ ಬಿಂದ್ಯಾರಾಣಿ ಬೆಳ್ಳಿ ಪದಕ ಜಯಿಸಿದ್ದರು.

2024ರ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ನಿಯಮಗಳ ಪ್ರಕಾರ, ಲಿಫ್ಟರ್‌ಗಳು 2023ರ ವಿಶ್ವ ಚಾಂಪಿಯನ್‌ಷಿಪ್ ಮತ್ತು 2024ರ ವಿಶ್ವಕಪ್ ಟೂರ್ನಿಗಳಲ್ಲಿ ಸ್ಪರ್ಧಿಸಬೇಕು. ಅಲ್ಲದೆ ಹೆಚ್ಚುವರಿಯಾಗಿ, 2022ರ ವಿಶ್ವ ಚಾಂಪಿಯನ್‌ಷಿಪ್, 2023ರ ಕಾಂಟಿನೆಂಟಲ್ ಚಾಂಪಿಯನ್‌ಷಿಪ್ಸ್, 2023ರ ಗ್ರ್ಯಾನ್‌ಪ್ರಿ 1 ಮತ್ತು ಗ್ರ್ಯಾನ್‌ಪ್ರಿ 2 ಮತ್ತು 2024ರ ಕಾಂಟಿನೆಂಟಲ್ ಚಾಂಪಿಯನ್‌ಷಿಪ್‌ಗಳ ಪೈಕಿ ಕನಿಷ್ಠ ಮೂರರಲ್ಲಿ ಪಾಲ್ಗೊಂಡಿರಬೇಕು.

ಈ ಚಾಂಪಿಯನ್‌ಷಿಪ್ ಮತ್ತು ಕಳೆದ ವರ್ಷದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿರುವ ಬಿಂದ್ಯಾರಾಣಿ ಮತ್ತು ಮೀರಾಬಾಯಿ ಚಾನು, ಇನ್ನು ಎರಡು ಕಡ್ಡಾಯ ಟೂರ್ನಿಗಳಲ್ಲಿ ಮತ್ತು ಹೆಚ್ಚುವರಿ ಟೂರ್ನಿಯೊಂದರಲ್ಲಿ ಸ್ಪರ್ಧಿಸಬೇಕಿದೆ.


ಬಿಂದ್ಯಾರಾಣಿ ದೇವಿ

ಕಣ್ಣೀರು

ಬೆಳ್ಳಿ ಪದಕದ ಸಾಧನೆ ಮಾಡಿದ್ದರೂ ಬಿಂದ್ಯಾರಾಣಿ ಅವರಿಗೆ ಖುಷಿಯಿಲ್ಲ. ಅವರ ತವರು ರಾಜ್ಯ ಮಣಿಪುರದಲ್ಲಿ ಹಿಂಸಾಚಾರ ನಡೆಯುತ್ತಿದೆ. ಈ ಮಧ್ಯೆ ಪೋಷಕರಿಗೆ ಪದಕ ಗೆದ್ದ ಸುದ್ದಿ ತಿಳಿದಿದೆಯೋ, ಇಲ್ಲವೋ ಎಂಬ ಅನುಮಾನದಲ್ಲಿದ್ದರು.

ಮಣಿಪುರದಲ್ಲಿ ಇಂಟರ್‌ನೆಟ್ ಸ್ಥಗಿತದಿಂದಾಗಿ ಅವರ ಪೋಷಕರೊಂದಿಗೆ ಮಾತನಾಡಲು ಬಿಂದ್ಯಾರಾಣಿ ಅವರಿಗೆ ಸಾಧ್ಯವಾಗಿಲ್ಲ.

'ನಾನು ಎರಡು ದಿನಗಳಿಂದ ಪೋಷಕರೊಂದಿಗೆ ಮಾತನಾಡಿಲ್ಲ. ಸ್ಪರ್ಧೆಯ ಮೊದಲು ನನ್ನ ತಾಯಿ ಕರೆ ಮಾಡಿ ಆಶೀರ್ವಾದ ಮಾಡುತ್ತಿದ್ದರು. ಆದರೆ ಈಗ ಅದು ಸಾಧ್ಯವಾಗಿಲ್ಲ' ಎಂದು ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದ ಬಿಂದ್ಯಾರಾಣಿ ಕಣ್ಣೀರಾದರು.

ಟೈಗರ್ ಕಪ್: ಸಿಕ್ಸ್ ಅಕಾಡೆಮಿಗೆ ಜಯ

ಬೆಂಗಳೂರು: ಸಿಕ್ಸ್ ಕ್ರಿಕೆಟ್ ಅಕಾಡೆಮಿ ತಂಡವು 12 ವರ್ಷದೊಳಗಿನವರ ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಗೆದ್ದಿತು.

ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಅಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಸಿಕ್ಸ್ ಅಕಾಡೆಮಿ ತಂಡವು ಮೇವರಿಕ್ ಮಾಸ್ಟರ್ ಅಕಾಡೆಮಿ ತಂಡಕ್ಕೆ ಸೋಲುಣಿಸಿತು.

ಇನ್ನೊಂದು ಪಂದ್ಯದಲ್ಲಿ ಜಸ್ಟ್ ಕ್ರಿಕೆಟ್ ತಂಡವು 10 ವಿಕೆಟ್‌ಗಳಿಂದ ಗೋಪಾಲನ್ ತಂಡದ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಮೇವರಿಕ್ ಮಾಸ್ಟರ್: 20.5 ಓವರ್‌ಗಳಲ್ಲಿ 92 (ಆರವ್ 20, ಫರ್ಹಾನ್ ಶೇಖ್ 7ಕ್ಕೆ 4). ಸಿಕ್ಸ್ ಅಕಾಡೆಮಿ: 12.5 ಓವರ್‌ಗಳಲ್ಲಿ 4 ವಿಕೆಟ್‌ಗೆ 94 (ಶೌರ್ಯ ಗೌಡ 50, ನಿಹಾಲ್ ಖಾನ್ 21ಕ್ಕೆ 2)

ಗೋಪಾಲನ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 74 (ವಿಷ್ಣುಯ್ 17ಕ್ಕೆ 2). ಜಸ್ಟ್ ಕ್ರಿಕೆಟ್: 10.5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 77 (ಶ್ರೀಹರಿಸಿಂಗ್ ರಜಪೂತ್ 35, ರಾಘವ್ ಕೆ. 21)

ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್

16ರ ಘಟ್ಟಕ್ಕೆ ಆಕಾಶ್, ನಿಶಾಂತ್

ತಾಷ್ಕೆಂಟ್, ಉಜ್ಬೆಕಿಸ್ತಾನ (ಪಿಟಿಐ): ಶ್ರೇಷ್ಠ ಸಾಮರ್ಥ್ಯ ತೋರಿದ ಭಾರತದ ಆಕಾಶ್ ಸಂಗ್ವಾನ್ ಮತ್ತು ನಿಶಾಂತ್ ದೇವ್ ಅವರು ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರೀ-ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 67 ಕೆಜಿ ವಿಭಾಗದ ಎರಡನೇ ಸುತ್ತಿನ ಬೌಟ್‌ನಲ್ಲಿ ಶನಿವಾರ ಆಕಾಶ್ 5–0ಯಿಂದ ಚೀನಾದ ಫು ಮಿಂಗ್‌ಕೆ ಅವರನ್ನು ಪರಾಭವಗೊಳಿಸಿದರು.

ಬೌಟ್‌ನ ಆರಂಭದಿಂದಲೇ ಆಕಾಶ್, ಎದುರಾಳಿಯ ಮೇಲೆ ಚುರುಕಿನ ದಾಳಿ ನಡೆಸಿದರು. ಸ್ವಲ್ಪ ದೂರದಿಂದಲೇ ಚೀನಾ ಬಾಕ್ಸರ್ ಮೇಲೆ ಪಂಚ್‌ಗಳನ್ನು ಪ್ರಯೋಗಿಸಿ ಯಶಸ್ವಿಯಾದರು.

16ರ ಘಟ್ಟದ ಬೌಟ್‌ನಲ್ಲಿ ಆಕಾಶ್ ಅವರಿಗೆ ಕಜಕಸ್ತಾನದ ದುಲಾತ್ ಬೆಕ್‌ಬವೊವ್ ಸವಾಲು ಎದುರಾಗಿದೆ.

ಆಕಾಶ್ ಸಂಗ್ವಾನ್

71 ಕೆಜಿ ವಿಭಾಗದ ಎರಡನೇ ಸುತ್ತಿನ ಹಣಾಹಣಿಯಲ್ಲಿ ನಿಶಾಂತ್ ದೇವ್ 5–0ಯಿಂದ ಕೊರಿಯಾದ ಲೀ ಸಾಂಗ್‌ಮಿನ್ ಅವರನ್ನು ಮಣಿಸಿದರು.

ಬೌಟ್‌ನಲ್ಲಿ ತಾಂತ್ರಿಕ ಶ್ರೇಷ್ಠತೆ ಮೆರೆದ ನಿಶಾಂತ್ ಎದುರಾಳಿಯನ್ನು ಗಲಿಬಿಲಿಗೊಳಿಸಿದರು. ಸ್ಪರ್ಧೆಯ ಮೊದಲ ಸುತ್ತಿನಲ್ಲಿ ಭಾರತದ ಬಾಕ್ಸರ್ ಸುಲಭ ಗೆಲುವು ಪಡೆದರು. ಎರಡು ಮತ್ತು ಮೂರನೇ ಸುತ್ತುಗಳಲ್ಲಿ ಇಬ್ಬರ ಮಧ್ಯೆ ಬಿರುಸಿನ ಪಂಚ್‌ಗಳ ವಿನಿಮಯ ನಡೆಯಿತು. ಆದರೆ ನಿಶಾಂತ್ ಹೊಡೆತಗಳಲ್ಲಿ ಹೆಚ್ಚು ನಿಖರತೆ ಇತ್ತು.

ಮುಂದಿನ ಸುತ್ತಿನಲ್ಲಿ ನಿಶಾಂತ್, ಪ್ಯಾಲೆಸ್ಟೀನ್‌ನ ಫೊಕಹಾ ನಿದಾಲ್ ಎದುರು ಸೆಣಸುವರು.

ಭಾನುವಾರ ನಡೆಯಲಿರುವ ವಿವಿಧ ಬೌಟ್‌ಗಳಲ್ಲಿ ದೀಪಕ್ (51 ಕೆಜಿ), ಮೊಹಮ್ಮದ್ ಹುಸಾಮುದ್ದೀನ್ (57 ಕೆಜಿ), ಸುಮಿತ್ (75 ಕೆಜಿ) ಮತ್ತು ನರೇಂದರ್ (92 + ಕೆಜಿ) ಅಂಗಣಕ್ಕಿಳಿಯುವರು.

ಪ್ಯಾರಾ ಅಥ್ಲೆಟಿಕ್ಸ್: ಸುಮಿತ್, ಪುಷ್ಪೇಂದ್ರ ವಿಶ್ವದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮಿತ್ ಅಂತಿಲ್ ಮತ್ತು ಪುಷ್ಪೇಂದ್ರ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ಇಂಡಿಯನ್ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಇಂಟರ್‌ನ್ಯಾಷನಲ್ ಚಾಂಪಿಯನ್‌ಷಿಪ್‌ನಲ್ಲಿ ವಿಶ್ವದಾಖಲೆ ಮಾಡಿದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಸುಮಿತ್ ಅವರು ಎಫ್64 ವಿಭಾಗದ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ 70.17 ಮೀ. ದೂರ ಸಾಧನೆ ಮಾಡಿದರು. ಈ ಮೂಲಕ ತಮ್ಮದೇ ಹೆಸರಿನಲ್ಲಿದ್ದ ವಿಶ್ವದಾಖಲೆ (68.62 ಮೀ.) ಉತ್ತಮಪಡಿಸಿಕೊಂಡರು.

ಪುಷ್ಪೇಂದ್ರ ಅವರು ಎಫ್43 ವಿಭಾಗದ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ 61.60 ಮೀ. ಸಾಧನೆಯೊಂದಿಗೆ ವಿಶ್ವದಾಖಲೆ ಸ್ಥಾಪಿಸಿದರು.

ಈ ಸಾಧನೆ ಮೂಲಕ ಇವರಿಬ್ಬರು ಇದೇ ವರ್ಷ ನಡೆಯಲಿರುವ ವಿಶ್ವ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿದರು.

ಬೋಪಣ್ಣ– ಎಬ್ಡೆನ್ 'ರನ್ನರ್ಸ್ ಅಪ್'

ಮ್ಯಾಡ್ರಿಡ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯು ಎಬ್ಡೆನ್ ಜೋಡಿ, ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಸೋತು ರನ್ನರ್ಸ್ ಅಪ್ ಆಯಿತು.

ಶನಿವಾರ ನಡೆದ ಫೈನಲ್‌ನಲ್ಲಿ ಬೋಪಣ್ಣ– ಎಬ್ಡೆನ್ 3-6, 6-3, 3-10 ರಲ್ಲಿ ರಷ್ಯಾದ ಕರೆನ್ ಕಚನೊವ್– ಆ್ಯಂಡ್ರೆ ರುಬ್ಲೆವ್ ಎದುರು ಪರಾಭವಗೊಂಡರು.

ಉದಕಮಂಡಲ ರೇಸ್

ಸಂಥಿಂಗ್ ರಾಯಲ್ ಗೆಲ್ಲುವ ನಿರೀಕ್ಷೆ

ನೀಲ್‌ಗಿರೀಸ್ ಡರ್ಬಿ ಸ್ಟೇಕ್ಸ್ ಭಾನುವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಂಥಿಂಗ್ ರಾಯಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 10.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ರಾಯಲ್ ಐಕಾನ್ 1, ಶೀರ್ ಎಲಿಗೆನ್ಸ್ 3, ಸೆಮಿನೋಲ್ ವಿಂಡ್ 4
2ನೇ ರೇಸ್: ಆಟಮ್‌ಲೈಟ್ 4, ಆರ್ಮರಿ 3, ನಾಟಿ ವಂಡರ್ 8
3ನೇ ರೇಸ್: ಇಂಪೀರಿಯಲ್ ಬ್ಲೂ 4, ಪ್ರೈಸ್‌ಲೆಸ್ ಗೋಲ್ಡ್ 2, ನಾಟಿ ಡ್ಯಾನ್ಸರ್ 1
4ನೇ ರೇಸ್: ಸಂಥಿಂಗ್ ರಾಯಲ್ 8, ಟೈಮ್ ಅಂಡ್ ಟೈಡ್ 5, ನಾಟಿ ಚಾರ್ಮರ್ 3
5ನೇ ರೇಸ್: ವಂಡರ್‌ಫುಲ್ ಎರಾ 4, ವಾಕಿಂಗ್ ಬ್ರೇವ್ 1, ಸೂಪರಾಕಿಗ 7
6ನೇ ರೇಸ್: ಶೀರ್ ರಾಕ್ಸ್ 1, ಡಿಯರ್ ಲೇಡಿ 3, ಸೆಲೆಸ್ಟ್ 2
7ನೇ ರೇಸ್: ಸ್ಲೈಂಟ್ 5, ವಿನ್ನಿಂಗ್ ಲೆಗಸಿ 9, ಅಗಸ್ತ 3
8ನೇ ರೇಸ್: ಬೆರೆಟಿನಿ 1, ಅಡ್ಮಿರಲ್ ಷಾ 2, ಅಂಗವಾಯ್ 3

ಉತ್ತಮ ಬೆಟ್: ರಾಯಲ್ ಐಕಾನ್

ಜಾಕ್‌ಪಾಟ್	1ನೇ ಟ್ರೆಬಲ್	2ನೇ ಟ್ರೆಬಲ್	3ನೇ ಟ್ರೆಬಲ್
4,5,6,7,8	1,2,3	4,5,6	6,7,8

ಮಹಾಪಂಚಾಯತ್ ಯಶಸ್ವಿ: ವಿಶ್ವಾಸ

ನವದೆಹಲಿ (ಪಿಟಿಐ): ಜಂತರ್‌ಮಂಥರ್‌ನಲ್ಲಿ ಭಾನುವಾರ ನಿಗದಿಯಾಗಿರುವ ಖಾಪ್ ಮಹಾಪಂಚಾಯತ್ ಭಾರಿ ಯಶಸ್ವಿಯಾಗಲಿದೆ ಎಂದು ಪ್ರತಿಭಟನನಿರತ ಕುಸ್ತಿಪಟುಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧದ ಹೋರಾಟಕ್ಕೆ ಇದರಿಂದ ಹೆಚ್ಚು ಬೆಂಬಲ ದೊರೆಯಲಿದೆ ಎಂದು ಅವರು ಹೇಳಿದ್ದಾರೆ.

ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ ಮಾಡಿರುವ ದೇಶದ ಪ್ರಮುಖ ಕುಸ್ತಿಪಟುಗಳು ಕ್ರಮಕ್ಕೆ ಒತ್ತಾಯಿಸಿ ಏಪ್ರಿಲ್ 23ರಿಂದ ಪ್ರತಿಭಟನೆ ನಡೆಸುತ್ತಿದ್ದಾರೆ.

'ಜಂತರ್ ಮಂಥರ್‌ನಲ್ಲಿ ನಾವು ಧರಣಿ ಕುಳಿತು 14 ದಿನಗಳಾದವು. ನಮ್ಮನ್ನು ಬೆಂಬಲಿಸುತ್ತಿರುವ ಎಲ್ಲರಿಗೂ ಧನ್ಯವಾದಗಳು. ಈ ಖಾಪ್ (ಸಮುದಾಯದ ಹಿರಿಯರ ಪಂಚಾಯ್ತಿ) ಮಹಾ ಪಂಚಾಯತ್ ಯಶಸ್ವಿಯಾಗಲಿದೆ' ಎಂದು ಕುಸ್ತಿಪಟು ವಿನೇಶಾ ಪೋಗಟ್ ಹೇಳಿದ್ದಾರೆ.

'ಪ್ರತಿಭಟನೆಯನ್ನು ದುಷ್ಟಶಕ್ತಿಗಳು ಹೈಜಾಕ್ ಮಾಡಲು ಅವಕಾಶ ನೀಡಬಾರದು' ಎಂದೂ ಅವರು ಮನವಿ ಮಾಡಿಕೊಂಡಿದ್ದಾರೆ.

ಪಾಕ್ ಕ್ರಿಕೆಟ್ ಮಂಡಳಿಯಿಂದ ಚೌಕಾಸಿ

ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡುವ ಖಾತರಿ ಕೊಟ್ಟರಷ್ಟೇ ವಿಶ್ವಕಪ್‌ನಲ್ಲಿ ಭಾಗಿ

ಕರಾಚಿ (ಪಿಟಿಐ): ಪಾಕಿಸ್ತಾನದಲ್ಲಿ ನಡೆಯುವ 2025ರ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಭಾಗವಹಿಸುವುದಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಲಿಖಿತವಾಗಿ ಖಾತರಿ ನೀಡಿದರೆ ಮಾತ್ರ, ಪಾಕ್ ತಂಡವು ಭಾರತದಲ್ಲಿ ಅಕ್ಟೋಬರ್– ನವೆಂಬರ್‌ನಲ್ಲಿ ನಡೆಯುವ ಏಕದಿನ ವಿಶ್ವಕಪ್‌ನಲ್ಲಿ ಭಾಗವಹಿಸುತ್ತದೆ ಎಂದು ಪಾಕಿಸ್ತಾನ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷ ನಜಾಂ ಸೇಥಿ ಹೇಳಿದ್ದಾರೆ.

ಏಕದಿನ ವಿಶ್ವಕಪ್ ಈ ವರ್ಷದ ಅಕ್ಟೋಬರ್ 5ರಿಂದ ನಡೆಯ ಲಿದೆ. ಬಾಬರ್ ಆಜಂ ಬಳಗಕ್ಕೆ ಅಹಮದಾಬಾದ್ (ಭಾರತ ವಿರುದ್ಧ ಪಂದ್ಯಕ್ಕೆ), ಚೆನ್ನೈ, ಬೆಂಗಳೂರು ಮತ್ತು ಕೋಲ್ಕತ್ತದಲ್ಲಿ ಪಂದ್ಯಗಳನ್ನು ಆಡಿಸುವುದಕ್ಕೆ ಬಿಸಿಸಿಐ ಗಮನಹರಿಸಿದೆ.

ಏಷ್ಯಾ ಕಪ್‌ಗೆ ಸಂಬಂಧಿಸಿದಂತೆ ಪಾಕಿಸ್ತಾನ ಮುಂದಿಟ್ಟಿರುವ ಪ್ರಸ್ತಾವಿತ 'ಹೈಬ್ರಿಡ್ ಮಾದರಿ'ಗೆ ಜಯ್ ಶಾ ಅಧ್ಯಕ್ಷತೆಯ ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಅಂತಿಮ ನಿಲುವು ಸ್ಪಷ್ಟಪಡಿಸಿಲ್ಲ. ಈ ಮಾದರಿಯಂತೆ ಭಾರತ ತನ್ನ ಪಂದ್ಯಗಳನ್ನು ಯುಎಇಯಲ್ಲಿ ಮತ್ತು ಪಾಕಿಸ್ತಾನ ತನ್ನ ಪಂದ್ಯಗಳನ್ನು ಸ್ವದೇಶದಲ್ಲಿ ಆಡಲಿದೆ.

ಸೇಥಿ ಸೋಮವಾರ ದುಬೈಗೆ ತೆರಳಲಿದ್ದು ಎಸಿಸಿ ಮತ್ತು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಅಧಿಕಾರಿಗಳ ಜೊತೆ ಸಭೆ ನಡೆಸಲಿದ್ದಾರೆ ಎಂದು ವಿಶ್ವಾಸಾರ್ಹ ಮೂಲಗಳು ತಿಳಿಸಿವೆ.

ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಭಾಗವಹಿಸುವುದಾಗಿ ಬಿಸಿಸಿಐ ಮುಖ್ಯಸ್ಥ ಜಯ್ ಶಾ ಅವರು ಲಿಖಿತವಾಗಿ ಗ್ಯಾರಂಟಿ ನೀಡಿದರೆ ಮಾತ್ರ, ಪಾಕ್ ತಂಡವು ಭಾರತದಲ್ಲಿ ನಡೆಯುವ ಏಕದಿನ ವಿಶ್ವಕಪ್‌ನಲ್ಲಿ ಆಡುತ್ತದೆ ಎಂಬ ತಮ್ಮ ದೇಶದ ಧೋರಣೆಗೆ ಬೆಂಬಲ ಗಿಟ್ಟಿಸಲು ದುಬೈ ಭೇಟಿಯ ವೇಳೆ ಸೇಥಿ ಮುಂದಾಗುವ ನಿರೀಕ್ಷೆಯಿದೆ ಎಂದು ಪಿಸಿಬಿಯ ಮೂಲವೊಂದು ತಿಳಿಸಿದೆ.

ಏಷ್ಯಾ ಕಪ್‌ಅನ್ನು ಲಾಹೋರ್ ಮತ್ತು ದುಬೈನಲ್ಲಿ ನಡೆಸುವ ಸಂಬಂಧ ಪಿಸಿಬಿಯು, ಎಸಿಸಿಗೆ ಸಲ್ಲಿಸಿರುವ ಉದ್ದೇಶಿತ ಹೈಬ್ರಿಡ್ ಮಾದರಿ ಕಾರ್ಯರೂಪಕ್ಕೆ ಬರದೇಹೋದಲ್ಲಿ, ಪಾಕಿಸ್ತಾನ ಏಷ್ಯಾ ಕಪ್‌ನಲ್ಲಿ ಆಡಬೇಕೆ ಬೇಡವೇ ಎಂಬ ಬಗ್ಗೆಯೂ ಸೇಥಿ ಅವರು ಕೆಲವು ಸರ್ಕಾರಿ ಅಧಿಕಾರಿಗಳ ಸಲಹೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸೆಪ್ಟೆಂಬರ್‌ನಲ್ಲಿ ಏಷ್ಯಾ ಕಪ್ ಆತಿಥ್ಯಕ್ಕೆ ಸಂಬಂಧಿಸಿದಂತೆ ಎಸಿಸಿ ಸದಸ್ಯ ರಾಷ್ಟ್ರಗಳಿಗೆ ಕಠಿಣ ಮತ್ತು ದೃಢವಾದ ನಿಲುವು ರವಾನಿಸಲು ಸೇಥಿ ಅವರಿಗೆ ಸರ್ಕಾರದ ಕಡೆಯಿಂದ ಸಮ್ಮತಿ ದೊರೆತಿದೆ ಎಂದೂ ತಿಳಿಸಿವೆ.

ಪಾಕಿಸ್ತಾನದ ಹೈಬ್ರಿಡ್ ಮಾದರಿ ಒಪ್ಪಬೇಕು, ಪಾಕ್‌ನಿಂದ ಆತಿಥ್ಯ ಕಿತ್ತುಕೊಂಡಲ್ಲಿ ಪಿಸಿಬಿಯು ಈ ವರ್ಷ ಬೇರೆ ಟೂರ್ನಿಗಳಲ್ಲಿ ಭಾಗವಹಿಸುವುದಿಲ್ಲ ಎಂದು ಎಸಿಸಿ ಸದಸ್ಯರಿಗೆ ಸೇಥಿ ಅವರು ಸ್ಪಷ್ಟ ಮಾತುಗಳಲ್ಲಿ ಹೇಳುವ ನಿರೀಕ್ಷೆಯಿದೆ.

ಬಾಬರ್ ಅಜಂ –ಎಎಫ್‌ಪಿ ಚಿತ್ರ

ಬಾಬರ್ ಅಜಂ ಶತಕ; ಪಾಕಿಸ್ತಾನಕ್ಕೆ ಗೆಲುವು

ಕರಾಚಿ (ಎಎಫ್‌ಪಿ/ ಎಪಿ): ನಾಯಕ ಬಾಬರ್ ಅಜಂ ಗಳಿಸಿದ ಶತಕದ ನೆರವಿನಿಂದ ಪಾಕಿಸ್ತಾನ ತಂಡ, ಶುಕ್ರವಾರ ನಡೆದ 4ನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 102 ರನ್‌ಗಳಿಂದ ಮಣಿಸಿತು.

ಈ ಮೂಲಕ ಐದು ಪಂದ್ಯಗಳ ಸರಣಿಯಲ್ಲಿ 4–0 ರಲ್ಲಿ ಮುನ್ನಡೆ ಸಾಧಿಸಿತಲ್ಲದೆ, ಐಸಿಸಿ ಏಕದಿನ ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿತು.

ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 334 ರನ್ ಗಳಿಸಿದರೆ, ಟಾಮ್ ಲಥಾಮ್ ಬಳಗ 43.4 ಓವರ್‌ಗಳಲ್ಲಿ 232 ರನ್‌ಗಳಿಗೆ ಆಲೌಟಾಯಿತು. ಬಾಬರ್ 117 ಎಸೆತಗಳಲ್ಲಿ 107 ರನ್ ಗಳಿಸಿದರು. ಏಕದಿನ ಕ್ರಿಕೆಟ್‌ನಲ್ಲಿ ಅವರ 18ನೇ ಶತಕ ಇದು.

ಅತಿವೇಗದಲ್ಲಿ 5 ಸಾವಿರ ರನ್: ಏಕದಿನ ಕ್ರಿಕೆಟ್‌ನಲ್ಲಿ ಅತಿ ಕಡಿಮೆ ಇನಿಂಗ್ಸ್‌ಗಳಲ್ಲಿ 5 ಸಾವಿರ ರನ್ ಪೂರೈಸಿದ ಸಾಧನೆಯನ್ನು ಬಾಬರ್ ಮಾಡಿದರು. ಇದು ಅವರ 97ನೇ ಇನಿಂಗ್ಸ್ ಆಗಿತ್ತು. ದಕ್ಷಿಣ ಆಫ್ರಿಕಾದ ಹಾಶಿಮ್ ಆಮ್ಲಾ (101 ಇನಿಂಗ್ಸ್) ಹೆಸರಲ್ಲಿದ್ದ ದಾಖಲೆಯನ್ನು ಮುರಿದರು. ಏಕದಿನ ಕ್ರಿಕೆಟ್‌ನಲ್ಲಿ 5 ಸಾವಿರ ರನ್‌ಗಳ ಗಡಿ ದಾಟಿದ ಪಾಕಿಸ್ತಾನದ 14ನೇ ಬ್ಯಾಟ್ಸ್‌ಮನ್ ಎನಿಸಿಕೊಂಡರು.

ಪಾಕ್ ತಂಡ ರ‍್ಯಾಂಕಿಂಗ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಹಿಂದಿಕ್ಕಿ, ಅಗ್ರಸ್ಥಾನ ಪಡೆಯಿತು. ಐಸಿಸಿಯು 2005 ರಲ್ಲಿ ಅಧಿಕೃತವಾಗಿ ರ‍್ಯಾಂಕಿಂಗ್ ಆರಂಭಿಸಿದ ಬಳಿಕ ಪಾಕ್ ತಂಡ ಏಕದಿನ ಕ್ರಿಕೆಟ್‌ನಲ್ಲಿ ಅಗ್ರಸ್ಥಾನಕ್ಕೇರಿದ್ದು ಇದೇ ಮೊದಲು.

'ಭ್ರಷ್ಟಾಚಾರದ ವಿರುದ್ಧ ಹೋರಾಟ ನಿಲ್ಲದು'

ಜೈಪುರ (ಪಿಟಿಐ): 'ಭ್ರಷ್ಟಾಚಾರದ ವಿರುದ್ಧ ಕೈಗೊಂಡಿರುವ ಹೋರಾಟವನ್ನು ಕೆಲವರು ಇಷ್ಟಪಡದಿದ್ದರೂ ನನ್ನ ಹೋರಾಟವನ್ನು ಮುಂದುವರಿಸುತ್ತೇನೆ' ಎಂದು ಕಾಂಗ್ರೆಸ್ ಮುಖಂಡ ಹಾಗೂ ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ಶನಿವಾರ ಹೇಳಿದ್ದಾರೆ.

ಅರಣ್ಯ ಸಚಿವ ಹೇಮಾರಾಮ್ ಚೌಧರಿ ಅವರು ಬಾರ್ಮೇಡ್‌ದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದೇಶ ಹಾಗೂ ರಾಜ್ಯದಲ್ಲಿ ನಡೆಯುತ್ತಿರುವ ಲೂಟಿ ಹಾಗೂ ಭ್ರಷ್ಟಾಚಾರದ ವಿರುದ್ಧ ನಾವು ಧ್ವನಿ ಎತ್ತಬೇಕು' ಎಂದರು.

'ಭ್ರಷ್ಟಾಚಾರದ ವಿರುದ್ಧ ನಾನು ಧ್ವನಿ ಎತ್ತಿದ್ದು, ಇದನ್ನು ಕೆಲವರು ಇಷ್ಟಪಡುತ್ತಿಲ್ಲ. ಆದರೆ, ನಾನು ತಲೆಕೆಡಿಸಿಕೊಳ್ಳುವುದಿಲ್ಲ. ನನ್ನ ಹೋರಾಟವನ್ನು ಮುಂದುವರಿಸುತ್ತೇನೆ' ಎಂದು ಯಾರ ಹೆಸರನ್ನು ಉಲ್ಲೇಖಿಸದೇ ಹೇಳಿದರು.

ಪ್ರಶ್ನೆಪತ್ರಿಕೆ ಸೋರಿಕೆಯಾಗಿದ್ದನ್ನು ಪ್ರಸ್ತಾಪಿಸಿ ತಮ್ಮ ಪಕ್ಷದ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ನಮ್ಮ ಮಕ್ಕಳು ಕಷ್ಟಪಟ್ಟು ಓದುತ್ತಾರೆ. ಪಾಲಕರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಶುಲ್ಕ ಭರಿಸುತ್ತಾರೆ. ಆದರೆ, ಪರೀಕ್ಷೆ ಸಮಯದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿ, ಪರೀಕ್ಷೆಯೇ ರದ್ದಾಗುತ್ತದೆ. ಈ ಬಗ್ಗೆ ನಮಗೆ ದುಃಖವಾಗುವುದಿಲ್ಲವೇ' ಎಂದು ಕೇಳಿದರು.

'ಇಂಥ ಬೆಳವಣಿಗೆಗಳಿಂದ ಯಾರಿಗೆ ನೋವಾಗುವುದಿಲ್ಲವೋ, ಯಾರಿಗೆ ಶಿಕ್ಷಣಕ್ಕಾಗಿ ಖರ್ಚು ಮಾಡುವ ಹಣದ ಮೌಲ್ಯ ತಿಳಿದಿಲ್ಲವೋ ಅಂಥವರೇ ಉನ್ನತ ಹುದ್ದೆಗಳಲ್ಲಿ ಕುಳಿತಿದ್ದಾರೆ. ಹೀಗಾಗಿ, ಪ್ರಶ್ನೆಪತ್ರಿಕೆ ಸೋರಿಕೆ ಕೃತ್ಯದಲ್ಲಿ ಶಾಮೀಲಾದವರ ವಿರುದ್ಧ ಕ್ರಮ ಕೈಗೊಳ್ಳಲು ಬಹಳ ವಿಳಂಬವಾಗುತ್ತಿದೆ' ಎಂದು ಟೀಕಿಸಿದರು.

ಒಳ್ಳೆಯ ವಿಚಾರ, ಉತ್ತಮ ನಡತೆ ಇರುವವರು ರಾಜಕೀಯಕ್ಕೆ ಬರಬೇಕು. ಮತದಾರರು ಕೂಡ ಇಂತ ನಾಯಕರನ್ನೇ ಆಯ್ಕೆ ಮಾಡಬೇಕು
ಸಚಿನ್ ಪೈಲಟ್, ಕಾಂಗ್ರೆಸ್ ಮುಖಂಡ

ಕಳೆದ ಜನವರಿಯಲ್ಲಿ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿದ್ದವು. ಆಗ, 'ಮೇಲಿಂದ ಮೇಲೆ ಪ್ರಶ್ನೆಪತ್ರಿಕೆ ಸೋರಿಕೆ ಘಟನೆಗಳು ನಡೆಯುತ್ತಿದ್ದು, ಈ ಕುರಿತು ಹೊಣೆಗಾರಿಕೆ ನಿಗದಿ ಮಾಡುವುದು ಅಗತ್ಯ' ಎಂದು ಸಚಿನ್ ಹೇಳಿದ್ದರು.

ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಹಾಗೂ ಸಚಿನ್ ಪೈಲಟ್ ನಡುವಣ ಮುಸುಕಿನ ಗುದ್ದಾಟ ಆಗಾಗ ಬಹಿರಂಗಗೊಳ್ಳುತ್ತಲೇ ಇದೆ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿನ ಭ್ರಷ್ಟಾಚಾರ ಕುರಿತು ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಆರೋಪಿಸಿ ಸಚಿನ್ ಅವರು ಕಳೆದ ತಿಂಗಳು ಒಂದು ದಿನ ಉಪವಾಸ ಸತ್ಯಾಗ್ರಹ ನಡೆಸಿದ್ದರು.

ಕುಸ್ತಿಪಟುಗಳ ಪ್ರತಿಭಟನೆ: ಮೌನ ಏಕೆ, ಮೋದಿಗೆ ಸಿಬಲ್ ಪ್ರಶ್ನೆ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್‌ನ ಮುಖ್ಯಸ್ಥ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ವಿರುದ್ಧ ಕೇಳಿಬಂದಿರುವ ಲೈಂಗಿಕ ಕಿರುಕುಳ ಆರೋಪಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮೌನವಾಗಿರುವುದು ಏಕೆ ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಪ್ರಶ್ನಿಸಿದ್ದಾರೆ.


ಕಪಿಲ್ ಸಿಬಲ್

ಆರೋಪ ಕುರಿತ ತನಿಖೆಯು ಪೂರ್ಣಗೊಳ್ಳುವವರೆಗೂ ಬ್ರಿಜ್ ಭೂಷಣ್ ಅವರನ್ನು ಅಧ್ಯಕ್ಷ ಸ್ಥಾನದಿಂದ ಪದಚ್ಯುತಗೊಳಿಸುವುದಿಲ್ಲವೇ? ಚುನಾವಣೆ ದೃಷ್ಟಿಯಿಂದ ಉತ್ತರ ಪ್ರದೇಶದಲ್ಲಿ ಅವರಿಗೆ ಅಷ್ಟೊಂದು ಮಹತ್ವ ಇದೆಯೇ ಎಂದೂ ಪ್ರಶ್ನಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಅಧ್ಯಕ್ಷ ಸ್ಥಾನದಿಂದ ತೆಗೆಯದಷ್ಟು ಮುಖ್ಯವಾದ ವ್ಯಕ್ತಿಯೆ? ಹಾಗಿದ್ದರೆ ಬೇಟಿ ಬಚಾವೋ ಘೋಷಣೆ ಏನಾಯ್ತು' ಎಂದು ಕೇಳಿದ್ದಾರೆ.

ಲೈಂಗಿಕ ಕಿರುಕುಳ ಆರೋಪ ಕುರಿತಂತೆ ಏಳು ಮಂದಿ ಕುಸ್ತಿಪಟುಗಳ ಹೇಳಿಕೆಗಳನ್ನು ಪೊಲೀಸರು ದಾಖಲಿಸಿದ ಹಿಂದೆಯೇ ಸಿಬಲ್ ಈ ಬಗ್ಗೆ ಪ್ರಶ್ನಿಸಿ ಟ್ವೀಟ್ ಮಾಡಿದ್ದಾರೆ. ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಕುಸ್ತಿಪಟುಗಳ ಪರವಾಗಿ ಸಿಬಲ್ ಅವರು ವಾದ ಮಂಡಿಸುತ್ತಿದ್ದಾರೆ. ದೆಹಲಿ ಪೊಲೀಸರು ಏಪ್ರಿಲ್ 28ರಂದು ಕುಸ್ತಿ ಫೆಡರೇಷನ್‌ನ ಮುಖ್ಯಸ್ಥರ ವಿರುದ್ಧ ಎರಡು ಎಫ್‌ಐಆರ್ ದಾಖಲಿಸಿದ್ದರು.

ಕ್ರಮಕ್ಕೆ ಆಗ್ರಹ: ಎಎಪಿ ಧರಣಿ

ಮುಂಬೈ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ವಿರುದ್ಧದ ಲೈಂಗಿಕ ಕಿರುಕುಳ ಆರೋಪ ಕುರಿತು ತನಿಖೆಗೆ ಒತ್ತಾಯಿಸಿ ಆಮ್ ಆದ್ಮಿ ಪಕ್ಷ (ಎಎಪಿ) ಕಾರ್ಯಕರ್ತರು ಇಲ್ಲಿ ಪ್ರತಿಭಟಿಸಿದರು.

ಕುಸ್ತಿಪಟುಗಳ ಆರೋಪ ಕುರಿತು ತನಿಖೆ ನಡೆಸಿ, ಫೆಡರೇಷನ್ ಮತ್ತು ಅದರ ಅಧ್ಯಕ್ಷರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಮಧ್ಯಪ್ರದೇಶ: 'ದಿ ಕೇರಳ ಸ್ಟೋರಿ'ಗೆ ತೆರಿಗೆ ವಿನಾಯಿತಿ

ಭೋಪಾಲ್ (ಪಿಟಿಐ): 'ದಿ ಕೇರಳ ಸ್ಟೋರಿ' ಸಿನಿಮಾಕ್ಕೆ ರಾಜ್ಯದಲ್ಲಿ ತೆರಿಗೆ ವಿನಾಯಿತಿ ನೀಡುವುದಾಗಿ ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಶನಿವಾರ ಘೋಷಿಸಿದ್ದಾರೆ.

ಕರ್ನಾಟಕದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, 'ಸಿನಿಮಾವು ಭಯೋತ್ಪಾದಕರ ಮುಖವಾಡವನ್ನು ಕಳಚಿಹಾಕಿದೆ' ಎಂದು ಹೇಳಿಕೆ ನೀಡಿದ ಬೆನ್ನಲ್ಲೇ ಚೌಹಾಣ್ ಈ ನಿರ್ಧಾರ ಪ್ರಕಟಿಸಿದ್ದಾರೆ.

'ರಾಜ್ಯದಲ್ಲಿ ಮತಾಂತರ ವಿರೋಧಿ ಕಾನೂನನ್ನು ಈಗಾಗಲೇ ಜಾರಿ ಮಾಡಲಾಗಿದೆ. ಈ ಸಿನಿಮಾವು ಮತಾಂತರದ ವಿರುದ್ಧ ಅರಿವು ಮೂಡಿಸುತ್ತದೆ. ಪೋಷಕರು, ಮಕ್ಕಳು ಸೇರಿದಂತೆ ಪ್ರತಿಯೊಬ್ಬರೂ ಈ ಸಿನಿಮಾವನ್ನು ನೋಡಬೇಕು. ಹಾಗಾಗಿ ರಾಜ್ಯದಲ್ಲಿ ಸಿನಿಮಾಗೆ ತೆರಿಗೆ ವಿನಾಯಿತಿ ನೀಡಲಾಗುತ್ತಿದೆ' ಎಂದು ಹೇಳಿದರು.

'ಚಲನಚಿತ್ರವು 'ಲವ್ ಜಿಹಾದ್', ಮತಾಂತರ ಮತ್ತು ಭಯೋತ್ಪಾದನೆಯ ಕರಾಳ ಮುಖವನ್ನು ಬಯಲಿಗೆಳೆದಿದೆ. ಹೆಣ್ಣುಮಕ್ಕಳು 'ಲವ್ ಜಿಹಾದ್' ಜಾಲಕ್ಕೆ ಸಿಲುಕಿ ತಮ್ಮ ಬದುಕನ್ನು ಹೇಗೆ ಹಾಳು ಮಾಡಿಕೊಳ್ಳುತ್ತಾರೆ ಎಂಬ ಕಥಾಹಂದರವು ಇದರಲ್ಲಿದೆ' ಎಂದು ಹೇಳಿದರು.

ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಗೆಲುವು; ವಿರಾಟ್ ಕೊಹ್ಲಿ– ಮಹಿಪಾಲ್ ಆಟ ವ್ಯರ್ಥ

ಸಾಲ್ಟ್ ಅಬ್ಬರ; ಆರ್‌ಸಿಬಿಗೆ ಆಘಾತ

ನವದೆಹಲಿ (ಪಿಟಿಐ): ಫಿಲ್ ಸಾಲ್ಟ್ ಅವರ ಅಬ್ಬರದ ಆಟದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಆಘಾತ ನೀಡಿತು. ವಿರಾಟ್ ಕೊಹ್ಲಿ ಅವರು ತವರೂರಿನ ಅಂಗಳದಲ್ಲಿ ಅರ್ಧಶತಕದ ಮೂಲಕ ಮಿಂಚಿದರೂ, ಆರ್‌ಸಿಬಿಗೆ ಗೆಲುವು ದಕ್ಕಲಿಲ್ಲ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯವನ್ನು ಡೇವಿಡ್ ವಾರ್ನರ್ ಬಳಗ ಏಳು ವಿಕೆಟ್‌ಗಳಿಂದ ಗೆದ್ದುಕೊಂಡಿತು. ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 181 ರನ್ ಗಳಿಸಿದರೆ, ಡೆಲ್ಲಿಯ ತಂಡ 3 ವಿಕೆಟ್‌ಗಳಿಗೆ 187 ರನ್ ಗಳಿಸಿ ಗೆದ್ದಾಗ ಇನ್ನೂ 20 ಎಸೆತಗಳು ಬಾಕಿಯಿದ್ದವು.

ಆರ್‌ಸಿಬಿ ಬೌಲಿಂಗ್ ದಾಳಿಯನ್ನು ಪುಡಿಗಟ್ಟಿದ ಸಾಲ್ಟ್ (87 ರನ್, 45 ಎ., 4X8, 6X6) ಅವರು ಕ್ಯಾಪಿಟಲ್ಸ್‌ನ ಗೆಲುವಿನ ರೂವಾರಿ. ಸವಾಲಿನ ಗುರಿ ಬೆನ್ನಟ್ಟಿದ ತಂಡಕ್ಕೆ ನಾಯಕ ವಾರ್ನರ್ (22 ರನ್) ಮತ್ತು ಸಾಲ್ಟ್ ಮೊದಲ ವಿಕೆಟ್‌ಗೆ 5.1 ಓವರ್‌ಗಳಲ್ಲಿ 60 ರನ್ ಸೇರಿಸಿ ಭರ್ಜರಿ ಆರಂಭ ನೀಡಿದರು.

ಎರಡನೇ ವಿಕೆಟ್‌ಗೆ ಸಾಲ್ಟ್ ಹಾಗೂ ಮಿಚೆಲ್ ಮಾರ್ಷ್ 59 ರನ್ ಸೇರಿಸಿದರು. ಆರ್‌ಸಿಬಿ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಜತೆ ಮಾತಿನ ಚಕಮಕಿ ನಡೆಸಿದ ಸಾಲ್ಟ್, ಮತ್ತಷ್ಟು ಆಕ್ರಮಣಕಾರಿಯಾಗಿ ಕಂಡುಬಂದರು. ಅವರ ಬ್ಯಾಟ್‌ನಿಂದ ಆರು ಸಿಕ್ಸರ್‌ಗಳು ಸಿಡಿದವು. ಜಯಕ್ಕೆ 11 ರನ್‌ಗಳು ಬೇಕಿದ್ದಾಗ ಸಾಲ್ಟ್ ಔಟ್ ಆದರು. ರಿಲೀ ರೊಸ್ಸೊ ಮತ್ತು ಅಕ್ಷರ್ ಪಟೇಲ್ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಕೊಹ್ಲಿ–ಮಹಿಪಾಲ್ ಆಸರೆ: ಇದಕ್ಕೂ ಮುನ್ನ ಟಾಸ್ ಗೆದ್ದ ಆರ್‌ಸಿಬಿ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಕೊಹ್ಲಿ(55), ನಾಯಕ ಫಫ್ ಡುಪ್ಲೆಸಿ (45) ಮತ್ತು ಮಹಿಪಾಲ್ ಲೊಮ್ರೊರ್ (ಅಜೇಯ 54) ಉತ್ತಮ ಆಟದ ನೆರವಿನಿಂದ ತಂಡ ಸವಾಲಿನ ಮೊತ್ತ ಕಲೆಹಾಕಿತು.

ಈ ಹಿಂದಿನ ಪಂದ್ಯಗಳ ಮಾದರಿಯಲ್ಲಿಯೇ ವಿರಾಟ್ ಮತ್ತು ಡುಪ್ಲೆಸಿ ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 82 ರನ್ ಸೇರಿಸಿದರು. ಇದರಿಂದಾಗಿ ಮೊದಲ ಹತ್ತು ಓವರ್‌ಗಳಲ್ಲಿ ಡೆಲ್ಲಿ ಬೌಲರ್‌ಗಳಿಗೆ ವಿಕೆಟ್ ಲಭಿಸಲಿಲ್ಲ.

ಆದರೆ 11ನೇ ಓವರ್‌ನಲ್ಲಿ ಮಿಚೆಲ್ ಮಾರ್ಷ್ ಆಘಾತ ನೀಡಿದರು. ಮಾರ್ಷ್ ಎಸೆತವನ್ನು ಆಡುವ ಭರಾಟೆಯಲ್ಲಿ ಫಫ್ ಡುಪ್ಲೆಸಿ ಅವರು ಅಕ್ಷರ್ ಪಟೇಲ್‌ಗೆ ಕ್ಯಾಚಿತ್ತರು. ನಂತರದ ಎಸೆತದಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್‌ಗೂ ಡಗ್‌ಔಟ್ ದಾರಿ ತೋರಿಸಿದರು.

ಆರ್‌ಸಿಬಿ ತಂಡವು ಟೂರ್ನಿಯುದ್ದಕ್ಕೂ ಈ ಮೂವರು ಬ್ಯಾಟರ್‌ಗಳ ಮೇಲೆಯೇ ಅವಲಂಬಿತವಾಗಿತ್ತು. ಅದರಿಂದಾಗಿ ಗ್ಲೆನ್ ಔಟಾದಾಗ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಾಗಿತ್ತು.

ಆದರೆ ರಾಜಸ್ಥಾನದ ಬ್ಯಾಟರ್ ಮಹಿಪಾಲ್ ತಮ್ಮ ಸಾಮರ್ಥ್ಯ ಮೆರೆದರು. ಅವರು ವಿರಾಟ್ ಜೊತೆಗೂಡಿ ಮೂರನೇ ವಿಕೆಟ್‌ಗೆ 55 ರನ್ ಸೇರಿಸಿದರು.

16ನೇ ಓವರ್‌ನಲ್ಲಿ ಮುಕೇಶ್ ಕುಮಾರ್ ಎಸೆತದಲ್ಲಿ ವಿರಾಟ್ ಔಟಾದರು. ಅದರ ನಂತರ ಇನಿಂಗ್ಸ್ ಹೊಣೆಯನ್ನು ತಮ್ಮ ಮೇಲೆಳೆದುಕೊಂಡ ಮಹಿಪಾಲ್ ಚೆಂದದ ಆಟವಾಡಿದರು. 186.21ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.ಇದರಲ್ಲಿ ಮೂರು ಸಿಕ್ಸರ್‌ಗಳು ಮತ್ತು ಆರು ಬೌಂಡರಿಗಳು ಸೇರಿದ್ದವು. ದಿನೇಶ್ ಕಾರ್ತಿಕ್ ಹಾಗೂ ಅನುಜ್ ರಾವತ್ ಕೂಡ ತಲಾ ಒಂದು ಸಿಕ್ಸರ್ ಸಿಡಿಸಿದರು.

ಫಿಲ್ ಸಾಲ್ಟ್ ಬ್ಯಾಟಿಂಗ್ ಸೊಬಗು –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 4ಕ್ಕೆ 181 (20 ಓವರ್)

ವಿರಾಟ್ ಸಿ ಖಲೀಲ್ ಬಿ ಮುಕೇಶ್ 55 (46ಎ, 4X5)
ಡುಪ್ಲೆಸಿ ಸಿ ಅಕ್ಷರ್ ಬಿ ಮಾರ್ಷ್ 45 (32ಎ, 4X5, 6X1)
ಮ್ಯಾಕ್ಸ್‌ವೆಲ್ ಸಿ ಸಾಲ್ಟ್ ಬಿ ಮಾರ್ಷ್ 0 (1ಎ)
ಲೊಮ್ರೊರ್ ಔಟಾಗದೆ 54 (29ಎ, 4X6, 6X3)
ದಿನೇಶ್ ಸಿ ವಾರ್ನರ್ ಬಿ ಖಲೀಲ್ 11 (9ಎ, 6X1)
ಅನುಜ್ ಔಟಾಗದೆ 8 (3ಎ, 6X1)
ಇತರೆ: 8 (ಲೆಗ್‌ಬೈ 2, ವೈಡ್ 6)
ವಿಕೆಟ್ ಪತನ: 1-82 (ಫಫ್ ಡುಪ್ಲೆಸಿ, 10.3), 2-82 (ಗ್ಲೆನ್ ಮ್ಯಾಕ್ಸ್‌ವೆಲ್, 10.4), 3-137 (ವಿರಾಟ್ ಕೊಹ್ಲಿ, 15.6), 4-172 (ದಿನೇಶ್ ಕಾರ್ತಿಕ್, 19.1)
ಬೌಲಿಂಗ್: ಖಲೀಲ್ ಅಹಮದ್ 4-0-45-1, ಅಕ್ಷರ್ ಪಟೇಲ್ 3-0-17-0, ಇಶಾಂತ್ ಶರ್ಮಾ 3-0-29-0, ಮುಕೇಶ್ ಕುಮಾರ್ 3-0-30-1, ಮಿಚೆಲ್ ಮಾರ್ಷ್ 3-0-21-2, ಕುಲದೀಪ್ ಯಾದವ್ 4-0-37-0

ಡೆಲ್ಲಿ ಕ್ಯಾಪಿಟಲ್ಸ್ 3ಕ್ಕೆ 187 (16.4 ಓವರ್)

ವಾರ್ನರ್ ಸಿ ಡುಪ್ಲೆಸಿ ಬಿ ಹ್ಯಾಜಲ್‌ವುಡ್ 22 (14ಎ, 4X3, 6X1)
ಸಾಲ್ಟ್ ಬಿ ಕರ್ಣ 87 (45ಎ, 4X8, 6X6)
ಮಾರ್ಷ್ ಸಿ ಲೊಮ್ರೊರ್ ಬಿ ಹರ್ಷಲ್ 26 (17ಎ, 4X3, 6X1)
ರೊಸ್ಸೊ ಔಟಾಗದೆ 35 (22ಎ, 4X1, 6X3)
ಅಕ್ಷರ್ ಔಟಾಗದೆ 8 (3ಎ, 6X1)
ಇತರೆ: 9 (ಬೈ 4, ಲೆಗ್‌ಬೈ 2, ನೋಬಾಲ್ 1, ವೈಡ್ 2)
ವಿಕೆಟ್ ಪತನ: 1-60 (ಡೇವಿಡ್ ವಾರ್ನರ್, 5.1), 2-119 (ಮಿಚೆಲ್ ಮಾರ್ಷ್, 10.3), 3-171 (ಫಿಲ್ ಸಾಲ್ಟ್, 15.3)
ಬೌಲಿಂಗ್: ಮೊಹಮ್ಮದ್ ಸಿರಾಜ್ 2-0-28-0, ಗ್ಲೆನ್ ಮ್ಯಾಕ್ಸ್‌ವೆಲ್ 1.4-0-14-0, ಜೋಶ್ ಹ್ಯಾಜಲ್‌ವುಡ್ 3-0-29-1, ವನಿಂದು ಹಸರಂಗ 4-0-32-0, ಕರ್ಣ ಶರ್ಮಾ 3-0-33-1, ಮಹಿಪಾಲ್ ಲೊಮ್ರೊರ್ 1-0-13-0, ಹರ್ಷಲ್ ಪಟೇಲ್ 2-0-32-1

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 7 ವಿಕೆಟ್‌ಗಳ ಜಯ

ವಿರಾಟ್ 7000 ರನ್; 50ನೇ ಅರ್ಧಶತಕ

ವಿರಾಟ್ ಕೊಹ್ಲಿ ಐಪಿಎಲ್‌ನಲ್ಲಿ ಏಳು ಸಾವಿರ ರನ್‌ಗಳನ್ನು ಗಳಿಸಿದ ಸಾಧನೆ ಮಾಡಿದರು. ಇದರೊಂದಿಗೆ ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್ ಆದರು. ಅವರ ನಂತರದ ಸ್ಥಾನಗಳಲ್ಲಿ ಶಿಖರ್ ಧವನ್ (6536), ಡೇವಿಡ್ ವಾರ್ನರ್ (6189) ಹಾಗೂ ರೋಹಿತ್ ಶರ್ಮಾ (6063) ಇದ್ದಾರೆ.

2008ರಿಂದ ಇಲ್ಲಿಯವರೆಗೆ 233 ಪಂದ್ಯಗಳನ್ನು ವಿರಾಟ್ ಆಡಿದ್ದಾರೆ. ಸದ್ಯ ಅವರ ಖಾತೆಯಲ್ಲಿ 7043 ರನ್‌ಗಳಿವೆ. ಅವರು ಇಲ್ಲಿ ಗಳಿಸಿದ ಅರ್ಧಶತಕವು ಐಪಿಎಲ್‌ನಲ್ಲಿ ಐವತ್ತನೇಯದ್ದಾಗಿದೆ. ಈ ಸಾಧನೆ ಮಾಡಿದ ಎರಡನೇ ಬ್ಯಾಟರ್ ಎಂಬ ಹೆಗ್ಗಳಿಕೆ ಅವರದ್ದಾಗಿದೆ. ಡೇವಿಡ್ ವಾರ್ನರ್ ಒಟ್ಟು 59 ಅರ್ಧಶತಕ ಗಳಿಸಿದ್ದಾರೆ.

ಮೊಟೇರಾದಲ್ಲಿ ಗುಜರಾತ್–ಲಖನೌ ಹಣಾಹಣಿ

ಅಣ್ಣ–ತಮ್ಮ ಮುಖಾಮುಖಿ ಇಂದು

ಅಹಮದಾಬಾದ್ (ಪಿಟಿಐ): ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಅಣ್ಣ, ತಮ್ಮಂದಿರಾದ ಕೃಣಾಲ್ ಪಾಂಡ್ಯ ಹಾಗೂ ಹಾರ್ದಿಕ್ ಪಾಂಡ್ಯ ಅವರ ಬಳಗಗಳು ಭಾನುವಾರ ಮುಖಾಮುಖಿಯಾಗಲಿವೆ.

ಹಾರ್ದಿಕ್ ನಾಯಕತ್ವದ ಗುಜರಾತ್ ಸೂಪರ್ ಜೈಂಟ್ಸ್ ಮತ್ತು ಕೆ.ಎಲ್. ರಾಹುಲ್ ಗಾಯಗೊಂಡು ಹೊರಗುಳಿದ ಕಾರಣ ಕೃಣಾಲ್ ನಾಯಕರಾಗಿರುವ ಲಖನೌ ಸೂಪರ್‌ಜೈಂಟ್ಸ್ ತಂಡಗಳು ಹಣಾಹಣಿ ನಡೆಸಲಿವೆ.

ಉಭಯ ತಂಡಗಳೂ ಹೋದ ವರ್ಷದಿಂದ ಐಪಿಎಲ್ ಟೂರ್ನಿಯಲ್ಲಿ ಆಡುತ್ತಿವೆ. ಆಗಿನಿಂದಲೂ ಹಾರ್ದಿಕ್ ನಾಯಕತ್ವ ವಹಿಸಿದ್ದರು. ಚಾಂಪಿಯನ್ ಕೂಡ ಆಗಿತ್ತು. ಈ ಬಾರಿಯೂ ಅಂಕಪಟ್ಟಿಯ ಮೊದಲ ಸ್ಥಾನದಲ್ಲಿದೆ. ಲಖನೌ ತಂಡವು ಎರಡನೇ ಸ್ಥಾನದಲ್ಲಿದೆ.

ಲಖನೌ ತಂಡಕ್ಕೆ ಎಡಗೈ ಮಧ್ಯಮವೇಗಿ ಜೈದೇವ್ ಉನದ್ಕತ್ ಕೂಡ ಅಲಭ್ಯರಾಗಿದ್ದಾರೆ. ತಂಡವು ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್, ದೀಪಕ್ ಹೂಡಾ, ಬ್ಯಾಟರ್ ಆಯುಷ್ ಬಡೋಣಿ, ಕೈಲ್ ಮೇಯರ್ಸ್, ವಿಕೆಟ್‌ಕೀಪರ್ ನಿಕೊಲಸ್ ಪೂರನ್, ಸ್ಪಿನ್ನರ್ ರವಿ ಬಿಷ್ಣೋಯಿ, ಅಮಿತ್ ಮಿಶ್ರಾ ಅವರ ಆಟದ ಮೇಲೆ ಹೆಚ್ಚು ಭರವಸೆ ಇಟ್ಟಿದೆ.

ಆದರೆ ಗುಜರಾತ್ ತಂಡವು ಎಲ್ಲ ವಿಭಾಗಗಳಲ್ಲಿಯೂ ಉತ್ತಮವಾಗಿ ಆಡುತ್ತಿದೆ. ಆರಂಭಿಕ ಜೋಡಿ ಶುಭಮನ್ ಗಿಲ್ ಹಾಗೂ ವೃದ್ಧಿಮಾನ್ ಸಹಾ ಉತ್ತಮ ಅಡಿಪಾಯ ಹಾಕುತ್ತಿದ್ದಾರೆ. ಡೇವಿಡ್ ಮಿಲ್ಲರ್, ಅಭಿನವ್ ಮನೋಹರ್, ಸಾಯಿ ಸುದರ್ಶನ್ ಹಾಗೂ ಹಾರ್ದಿಕ್ ಅವರು ಬ್ಯಾಟಿಂಗ್ ವಿಭಾಗದಲ್ಲಿ ಮಿಂಚುತ್ತಿದ್ದಾರೆ.

ಸ್ಪಿನ್ ಜೋಡಿ ರಶೀದ್ ಖಾನ್ ಹಾಗೂ ನೂರ್ ಅಹಮದ್ ಅವರ ಮೋಡಿಯಿಂದಾಗಿ ಗುಜರಾತ್ ತಂಡವು ರಾಜಸ್ಥಾನ ರಾಯಲ್ಸ್ ಎದುರು ಜಯಿಸಿತ್ತು. ಒಟ್ಟು 14 ಅಂಕ ಗಳಿಸಿರುವ ಹಾರ್ದಿಕ್ ಬಳಗವು ತನ್ನ ಪಾಲಿಗೆ ಉಳಿದಿರುವ ನಾಲ್ಕು ಪಂದ್ಯಗಳಲ್ಲಿ ಎರಡರಲ್ಲಿ ಜಯಿಸಿದರೂ ಪ್ಲೇ ಆಫ್ ಪ್ರವೇಶಿಸುವ ಹಾದಿ ಸುಗಮವಾಗಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್.

ಮಥೀಷ್, ದೀಪಕ್ ಜಯದ ಕಾಣಿಕೆ

ಮುಂಬೈ ಇಂಡಿಯನ್ಸ್ ಎದುರು ಚೆನ್ನೈ ಸೂಪರ್ ಕಿಂಗ್ಸ್ ತಂಡ ಜಯಭೇರಿ

ಚೆನ್ನೈ (ಪಿಟಿಐ): ಮಧ್ಯಮವೇಗಿ ಮಥೀಷ್ ಪಥಿರಾಣ (15ಕ್ಕೆ3) ಹಾಗೂ ದೀಪಕ್ ಚಾಹರ್ (18ಕ್ಕೆ2) ಅವರ ಅಮೋಘ ಬೌಲಿಂಗ್‌ನಿಂದಾಗಿ ಚೆನ್ನೈ ತಂಡವು ಶನಿವಾರ ಇಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಎದುರು 6 ವಿಕೆಟ್‌ಗಳಿಂದ ಜಯಿಸಿತು.

ಟೂರ್ನಿಯ ಬಹುತೇಕ ಪಂದ್ಯಗಳಲ್ಲಿ ಚೆನ್ನೈ ಬೌಲರ್‌ಗಳು ನಿರಾಶಾದಾಯಕ ಪ್ರದರ್ಶನ ನೀಡಿ ನಾಯಕ ಧೋನಿಯ ಕೆಂಗಣ್ಣಿಗೆ ಗುರಿಯಾಗಿದ್ದರು. ಆದರೆ ಈ ಪಂದ್ಯದಲ್ಲಿ ಸುಧಾರಿತ ಆಟವಾಡಿದ ಬೌಲರ್‌ಗಳು ಮುಂಬೈ ಇಂಡಿಯನ್ಸ್ ಬಳಗವನ್ನು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 139 ರನ್‌ಗಳಿಗೆ ಕಟ್ಟಿಹಾಕಿದರು. ಸಾಧಾರಣ ಗುರಿ ಬೆನ್ನಟ್ಟಿದ ಚೆನ್ನೈ ತಂಡವು ಇನ್ನೂ 14 ಎಸೆತಗಳು ಬಾಕಿಯಿರುವಾಗಲೇ 4 ವಿಕೆಟ್‌ಗಳಿಗೆ 140 ರನ್ ಗಳಿಸಿ ಜಯಭೇರಿ ಬಾರಿಸಿತು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಸೇರಿದ್ದ ಅಭಿಮಾನಿಗಳ ದಂಡು ಸಂಭ್ರಮಿಸಿತು. ಈ ಗೆಲುವಿನೊಂದಿಗೆ ಚೆನ್ನೈ ಖಾತೆಯಲ್ಲಿ ಈಗ ಒಟ್ಟು 13 ಅಂಕಗಳು ಸಂಗ್ರಹವಾಗಿವೆ.

ಟಾಸ್ ಗೆದ್ದ ಚೆನ್ನೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಎರಡನೇ ಓವರ್‌ನಲ್ಲೇ ಕ್ಯಾಮರಾನ್ ಗ್ರೀನ್ ವಿಕೆಟ್ ಉರುಳಿಸಿದ ತುಷಾರ್ ದೇಶಪಾಂಡೆ ಚೆನ್ನೈಗೆ ಉತ್ತಮ ಆರಂಭ ನೀಡಿದರು. ದೀಪಕ್ ಚಾಹರ್ ಮೂರನೇ ಓವರ್‌ನಲ್ಲಿ ಇಶಾನ್ ಕಿಶನ್ ಹಾಗೂ ರೋಹಿತ್ ಶರ್ಮಾ ಅವರಿಬ್ಬರ ವಿಕೆಟ್‌ಗಳನ್ನೂ ಕಬಳಿಸಿದರು.

ಈ ಹಂತದಲ್ಲಿ ತಂಡಕ್ಕೆ ಚೇತರಿಕೆ ನೀಡುವ ಪ್ರಯತ್ನವನ್ನು ನೆಹಲ್ ವಡೇರಾ (64; 51ಎ, 4X8, 6X1) ಮತ್ತು ಸೂರ್ಯಕುಮಾರ್ ಯಾದವ್ (26; 22ಎ, 4X3) ಮಾಡಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 55 ರನ್ ಸೇರಿಸಿದರು.

ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಅವರು ಸೂರ್ಯಕುಮಾರ್ ವಿಕೆಟ್ ಉರುಳಿಸಿ ಜೊತೆಯಾಟ ಮುರಿದರು. ಆದರೆ ಈ ಹಂತದಲ್ಲಿ ಇನ್ನೊಂದು ಬದಿಯಲ್ಲಿದ್ದ ವಡೇರಾ ತಮ್ಮ ಆಟಕ್ಕೆ ವೇಗ ನೀಡಿದರು. ಅವರು, ಟ್ರಿಸ್ಟನ್ ಸ್ಟಬ್ಸ್ ಜೊತೆ 54 ರನ್ ಸೇರಿಸಿದರು. ಇದರಿಂದಾಗಿ ತಂಡವು ಉತ್ತಮ ಮೊತ್ತ ಗಳಿಸುವ ಭರವಸೆ ಮೂಡಿತ್ತು.

ಮಧ್ಯಮವೇಗಿ ಪಥಿರಾಣ 18ನೇ ಓವರ್‌ನಲ್ಲಿ ವಡೇರಾ ವಿಕೆಟ್ ಗಳಿಸಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ಅರ್ಷದ್ ಖಾನ್ ಹಾಗೂ ಸ್ಟಬ್ಸ್ ವಿಕೆಟ್ ಗಳಿಸಿ ರನ್ ಗಳಿಕೆಗೆ ಕಡಿವಾಣ ಹಾಕಿದರು.

ಚೆನ್ನೈ ಆರಂಭಿಕ ಬ್ಯಾಟರ್ ಡೆವೊನ್ ಕಾನ್ವೆ ಹಾಗೂ ಗಾಯಕವಾಡ ಅವರು ಮೊದಲ ವಿಕೆಟ್‌ಗೆ 46 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಅಜಿಂಕ್ಯ 17 ಎಸೆತಗಳಲ್ಲಿ 21 ರನ್ ಗಳಿಸಿದರು. ಶಿವಂ ದುಬೆ ಅಜೇಯ 26 ರನ್ ಹೊಡೆದು ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 139 (ನೆಹಲ್ ವಡೇರಾ 64, ಸೂರ್ಯಕುಮಾರ್ ಯಾದವ್ 26, ಟ್ರಿಸ್ಟನ್ ಸ್ಟಬ್ಸ್ 20, ದೀಪಕ್ ಚಾಹರ್18ಕ್ಕೆ2, ತುಷಾರ್ ದೇಶಪಾಂಡೆ 26ಕ್ಕೆ2, ಮಥೀಷ್ ಪಥಿರಾಣ 15ಕ್ಕೆ3) ಚೆನ್ನೈ ಸೂಪರ್ ಕಿಂಗ್ಸ್: 17.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 140 (ಋತುರಾಜ್ ಗಾಯಕವಾಡ 30, ಡೆವೊನ್ ಕಾನ್ವೆ 44, ಅಜಿಂಕ್ಯ ರಹಾನೆ 21, ಶಿವಂ ದುಬೆ ಔಟಾಗದೆ 26, ಚಾವ್ಲಾ 25ಕ್ಕೆ2, ಟ್ರಿಸ್ಟನ್ ಸ್ಟಬ್ಸ್ 14ಕ್ಕೆ1, ಆಕಾಶ್ ಮದ್ವಾಲ್ 4ಕ್ಕೆ1) ಫಲಿತಾಂಶ: ಚೆನ್ನೈಗೆ 6 ವಿಕೆಟ್‌ಗಳ ಜಯ.

ಚೆನ್ನೈ ಬೌಲರ್ ಮಥೀಷ್ ಪಥಿರಾಣ ಕ್ಯಾಚ್‌ಗೆ ಪ್ರಯತ್ನಿಸಿದರು –ಪಿಟಿಐ ಚಿತ್ರ

ಎಎಫ್‌ಸಿ ಸಮಿತಿಗೆ ಶಾಜಿ ಪ್ರಭಾಕರನ್

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಶಾಜಿ ಪ್ರಭಾಕರನ್ ಮತ್ತು ಏಷ್ಯನ್ ಫುಟ್‌ಬಾಲ್ ಒಕ್ಕೂಟ (ಎಎಫ್‌ಸಿ)ದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಶನಿವಾರ ಆಯ್ಕೆಯಾಗಿದ್ದಾರೆ.

ಪ್ರಭಾಕರನ್ ಅವರು ದಕ್ಷಿಣ ಏಷ್ಯಾ ಫುಟ್‌ಬಾಲ್ ಫೆಡರೇಷನ್ (ಎಸ್‌ಎಎಫ್‌ಎಫ್) ಪ್ರತಿನಿಧಿಯಾಗಿ ಎಎಫ್‌ಸಿಗೆ ಆಯ್ಕೆಯಾಗಿದ್ದಾರೆ.

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)		
ಆಟಗಾರ	ತಂಡ	ವಿಕೆಟ್
ತುಷಾರ್	ಚೆನ್ನೈ	19

ಆರೆಂಜ್ ಕ್ಯಾಪ್ (ಹೆಚ್ಚು ರನ್)		
ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	511

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	10	7	3	0	14	0.752
ಚೆನ್ನೈ	11	6	4	1	13	0.409
ಲಖನೌ	10	5	4	1	11	0.639
ರಾಜಸ್ಥಾನ	10	5	5	0	10	0.448
ಬೆಂಗಳೂರು	10	5	5	0	10	-0.209
ಮುಂಬೈ	10	5	5	0	10	-0.454
ಪಂಜಾಬ್	10	5	5	0	10	-0.472
ಕೋಲ್ಕತ್ತ	10	4	6	0	8	-0.103
ಡೆಲ್ಲಿ	10	4	6	0	8	-0.529
ಹೈದರಾಬಾದ್	9	3	6	0	6	-0.540

ಶನಿವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ರಾಯಲ್ಸ್ ತಂಡದ ಸಂಜು ಸ್ಯಾಮ್ಸನ್ ಬ್ಯಾಟಿಂಗ್ ಅಭ್ಯಾಸ

ಜಯದ ಹಾದಿಗೆ ಮರಳುವತ್ತ ರಾಜಸ್ಥಾನ ರಾಯಲ್ಸ್ ಚಿತ್ತ

ಜೈಪುರ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡವು ಹ್ಯಾಟ್ರಿಕ್ ಸೋಲು ತಪ್ಪಿಸಿಕೊಳ್ಳಲು ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು ಜಯಿಸಬೇಕು.

ಈ ಪಂದ್ಯದಲ್ಲಿ ಜಯಿಸಿದರೆ ಪ್ಲೇ ಆಫ್ ಪ್ರವೇಶದ ಕನಸು ಜೀವಂತವಾಗುಳಿಯಬಹುದು. ಸೋತರೆ ಹಾದಿ ಕಠಿಣವಾಗುವ ಸಾಧ್ಯತೆಯೂ ಇದೆ. ತನ್ನ ಕಳೆದೆರಡು ಪಂದ್ಯಗಳಲ್ಲಿಯೂ ರಾಜಸ್ಥಾನ ತಂಡವು ಮುಂಬೈ ಇಂಡಿಯನ್ಸ್ ಹಾಗೂ ಗುಜರಾತ್ ಎದುರು ಸೋತಿತ್ತು. ಯಶಸ್ವಿ ಜೈಸ್ವಾಲ್, ಜೊಸ್ ಬಟ್ಲರ್, ನಾಯಕ ಸಂಜು ಸ್ಯಾಮ್ಸನ್, ಶಿಮ್ರಾನ್ ಹೆಟ್ಮೆಯರ್, ದೇವದತ್ತ ಪಡಿಕ್ಕಲ್ ಅವರಂತಹ ಬ್ಯಾಟರ್‌ಗಳಿದ್ದೂ ಕಳೆದ ಪಂದ್ಯದಲ್ಲಿ ತಂಡವು ಕೇವಲ 118 ರನ್ ಮಾತ್ರ ಗಳಿಸಿತ್ತು. ಇದರಿಂದಾಗಿ ಬ್ಯಾಟರ್‌ಗಳಿಗೂ ತಮ್ಮ ಲಯಕ್ಕೆ ಮರಳುವ ಸವಾಲು ಇದೆ. ಸನ್‌ರೈಸರ್ಸ್ ತಂಡದ ಟಿ.ನಟರಾಜನ್, ಮಾರ್ಕೊ ಜೆನ್ಸನ್ ಹಾಗೂ ಮಯಂಕ್ ಮಾರ್ಕಂಡೆ ಅವರು ಉತ್ತಮ ಲಯದಲ್ಲಿದ್ದು ರಾಜಸ್ಥಾನ ಬ್ಯಾಟಿಂಗ್ ಪಡೆಯನ್ನು ಕಾಡುವ ಸಾಧ್ಯತೆ ಇದೆ.

ರಾಜಸ್ಥಾನ ತಂಡವು ಐದು ಪಂದ್ಯ ಗೆದ್ದು ಅಷ್ಟೇ ಸಂಖ್ಯೆಯ ಹಣಾಹಣಿಗಳಲ್ಲಿ ಸೋತಿದೆ. ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಆದರೆ ಸನ್‌ರೈಸರ್ಸ್ ತಂಡವು ಮೂರು ಪಂದ್ಯಗಳಲ್ಲಿ ಜಯಿಸಿ, ಅರರಲ್ಲಿ ಸೋತಿದೆ.

ಸಂಜು ಬಳಗದ ಸ್ಪಿನ್ನರ್‌ಗಳಾದ ಚಾಹಲ್, ಕುಲದೀಪ್, ವೇಗಿ ಟ್ರೆಂಟ್ ಬೌಲ್ಟ್ ಹಾಗೂ ಸಂದೀಪ್ ಶರ್ಮಾ ತಮ್ಮ ಉತ್ತಮ ಲಯದಲ್ಲಿಯೇ ಮುಂದುವರಿದರೆ ತಂಡಕ್ಕೆ ಅನುಕೂಲವಾಗುವುದರಲ್ಲಿ ಅನುಮಾನವಿಲ್ಲ. ಏಡನ್ ಮರ್ಕರಂ ನಾಯಕತ್ವದ ಸನ್‌ರೈಸರ್ಸ್ ತಂಡದ ಬ್ಯಾಟರ್‌ಗಳು ಅಸ್ಥಿರ ಪ್ರದರ್ಶನ ನೀಡುತ್ತಿರುವುದರಿಂದ ರಾಜಸ್ಥಾನ ಬೌಲರ್‌ಗಳಿಗೆ ಮೇಲುಗೈ ಸಾಧಿಸುವುದು ಕಷ್ಟವಾಗಲಿಕ್ಕಿಲ್ಲ.

ಪಂದ್ಯ ಆರಂಭ: ರಾತ್ರಿ 7.30



ಪ್ರಜಾವಾಣಿ
ಭಾನುವಾರದ
ಪುರವಣಿ
ಭಾನುವಾರ, 7 ಮೇ 2023

ಡಾರ್ಕ್ ಕಾಮಿಡಿಯ ನಗೆಬಿಲ್ಲು 3

ಒಟಿಟಿ ಗಾಳ ಧಾರಾವಾಹಿಗೆ ಅಕಾಲ

ಸುಮಲತಾ ಎನ್.

ನೆನ್ನೆ-ಮೊನ್ನೆವರೆಗೂ ಅಪ್ಪ ಅಮ್ಮನೊಟ್ಟಿಗೆ ಕೂತು ಸಂಜೆ ‘ಧಾರಾವಾಹಿ’ ನೋಡುತ್ತಾ ಕಾಫಿ ಕುಡಿಯುತ್ತಿದ್ದ ಮಗ ಈಗ ಕೆಲಸದಿಂದ ಬರುತ್ತಲೇ ಕೋಣೆ ಸೇರುತ್ತಾನೆ. ತನ್ನಿಷ್ಟದ ಹಾಡನ್ನೋ, ವೆಬ್‌ಸೀರೀಸನ್ನೋ ನೋಡಿಕೊಂಡು ತನ್ನದೇ ಲೋಕದಲ್ಲಿರುತ್ತಾನೆ. ಕಾಲೇಜು ಓದುತ್ತಿರುವ ಮಗಳಿಗೂ ಧಾರಾವಾಹಿ ಈಗ ಅಷ್ಟಕ್ಕಷ್ಟೆ. ಅವಳ ಮೊಬೈಲಲ್ಲೂ ಈಗ ಖುಷಿಗೆ ಸಾಕಷ್ಟು ಆಯ್ಕೆಗಳಿವೆ.

ಡಿಜಿಟಲ್ ಕಾಲಘಟ್ಟ ಮುಂದಿಟ್ಟಿರುವ ಮನರಂಜನೆಯ ಹೊಸ ದಾರಿಗಳಿಂದಾಗಿ ಧಾರಾವಾಹಿಯಿಂದ ದೂರವುಳಿಯುತ್ತಿರುವ ಇಂಥ ಯುವಜನರ ಪ್ರಮಾಣ ಹೆಚ್ಚಾದಂತೆ ತೋರುತ್ತಿದೆ.

ಟೀವಿಯೊಂದಿಗಿನ ನಮ್ಮ ಸಂಬಂಧವೀಗ ಬದಲಾಗುತ್ತಿದೆಯೇ? ಇದಕ್ಕೆ ಒತ್ತು ನೀಡುವಂಥ ವರದಿಯೊಂದು ಈಚೆಗೆ ಪ್ರಕಟಗೊಂಡಿದೆ. ‘ಮೀಡಿಯಾ ಪಾರ್ಟ್‌ನರ್ಸ್ ಏಷ್ಯಾ’ (ಎಂಪಿಎ) ಪ್ರಕಟಿಸಿದ ಈ ವರದಿ, ಒಟಿಟಿ ಸ್ಟ್ರೀಮಿಂಗ್ ವಿಡಿಯೊ ಮಾರುಕಟ್ಟೆ ಭಾರತದಲ್ಲಿ ಸದ್ಯ ಬೆಳವಣಿಗೆಯ ಎರಡನೇ ಹಂತದಲ್ಲಿರುವುದಾಗಿ ತಿಳಿಸಿದೆ. 2022ರಲ್ಲಿ ಮೂರು ಶತಕೋಟಿ ಡಾಲರ್ ಆದಾಯ ಮಾಡಿಕೊಂಡಿರುವ ಈ ಡಿಜಿಟಲ್ ವೇದಿಕೆ, ಮನರಂಜನಾ ಕ್ಷೇತ್ರದ ಶೇ 7-9ರಷ್ಟು ಷೇರು ಹಾಗೂ ಆದಾಯ ಪಡೆದುಕೊಂಡಿರುವುದಾಗಿ ಹೇಳಿದೆ.

ಮೇಲ್ನೋಟಕ್ಕೆ ಈ ಶೇಕಡಾವಾರು ಸಂಖ್ಯೆ ದೊಡ್ಡದಾಗಿ ಕಾಣಿಸದಿದ್ದರೂ ಅಲ್ಪಾವಧಿಯಲ್ಲಿಯೇ ಸಾಂಪ್ರದಾಯಿಕ ಮನರಂಜನಾ ಮಾಧ್ಯಮಗಳಿಗೆ ಕಠಿಣ ಸ್ಪರ್ಧೆ ಒಡ್ಡಿದೆ.

ಡಿಜಿಟಲ್ ಪರ್ವಕ್ಕೆ ನೆಪವಾದ ಕೊರೊನಾ

ಭಾರತದಲ್ಲಿ ಡಿಜಿಟಲ್ ವೇದಿಕೆ ರೂಪುಗೊಂಡು 10-15 ವರ್ಷಗಳೇ ಕಳೆದಿವೆ. 2008ರಲ್ಲಿ ಮೊಟ್ಟ ಮೊದಲ ಬಾರಿಗೆ ರಿಲಯನ್ಸ್ ಎಂಟರ್‌ಟೇನ್‌ಮೆಂಟ್ ‘ಬಿಗ್‌ಫ್ಲಿಕ್ಸ್’ ಎಂಬ ಹೆಸರಿನಲ್ಲಿ ಒಟಿಟಿ ಲೋಕಕ್ಕೆ ಮುನ್ನುಡಿ ಬರೆಯಿತು. ಆನಂತರ ನೆಕ್ಸ್ ಜಿಟಿವಿ, 2013ರಲ್ಲಿ ಡಿಟ್ಟೊ, 2015ರಲ್ಲಿ ಹಾಟ್‌ಸ್ಟಾರ್... ಹೀಗೆ ಕೆಲವು ವರ್ಷಗಳ ಅಂತರದಲ್ಲಿ ಎಣಿಕೆಗೆ ನಿಲುಕುವ ಸಂಖ್ಯೆಯಲ್ಲಿ ಹುಟ್ಟಿಕೊಂಡವು. ಕೊರೊನಾ ಕಾಲಘಟ್ಟ ಡಿಜಿಟಲ್ ಲೋಕಕ್ಕೆ ಅವಕಾಶದ ದಿಡ್ಡಿಬಾಗಿಲಾಯಿತು.

ಪ್ರಮುಖ ಒಟಿಟಿ ವೇದಿಕೆಗಳ ಗುರಿ ‘ಮಿಲೇನಿಯಲ್ಸ್’ ಅಂದರೆ, 18-35ರ ವಯೋಮಾನದವರು. ಅವರನ್ನು ಧಾರಾವಾಹಿಗಳತ್ತ ಸೆಳೆಯುವ, ಉಳಿಸಿಕೊಳ್ಳುವ ಸಮರ್ಥ ಪ್ರಯತ್ನಗಳ ಕೊರತೆ ಡಿಜಿಟಲ್ ಮನರಂಜನಾ ಉತ್ಪನ್ನಗಳತ್ತ ವಾಲಲು ಒಂದು ನೆಪವಾಗಿದೆ.

> ವೆಬ್ ಸರಣಿಗಳ ಭರಾಟೆ, ಒಟಿಟಿ ಒಡ್ಡಿರುವ ಆಯ್ಕೆಗಳ ಉದ್ದನೆಯ ಪಟ್ಟಿಯಿಂದಾಗಿ ಧಾರಾವಾಹಿಗಳಿಗೆ ಮೊದಲಿನಷ್ಟು ಬೇಡಿಕೆ ಈಗಿಲ್ಲ. ಇದು ಮನರಂಜನಾ ಮಾಧ್ಯಮದ ಪಲ್ಲಟಕ್ಕೆ ನಾಂದಿಯಾದೀತೆ ಎನ್ನುವುದು ಜಿಜ್ಞಾಸೆ.

ಈ ಮಾತನ್ನು ಒಪ್ಪುತ್ತಲೇ, ಧಾರಾವಾಹಿ ನೋಡುಗರ ಸಂಖ್ಯೆ ಕೆಲ ವರ್ಷದಿಂದೀಚೆಗೆ ಕುಗ್ಗಿರುವುದನ್ನು ಅನುಮೋದಿಸುತ್ತಾರೆ ಕನ್ನಡ ಧಾರಾವಾಹಿ ನಿರ್ದೇಶಕ ಟಿ.ಎನ್. ಸೀತಾರಾಮ್.

‘ಧಾರಾವಾಹಿ ಪ್ರಸಾರಕ್ಕೆ ನಿರ್ದಿಷ್ಟ ಸಮಯವಿರುತ್ತದೆ. ಆದರೆ ಒಟಿಟಿಯಲ್ಲಿ ಅಂಥ ನಿರ್ಬಂಧವಿಲ್ಲ. ಯಾವಾಗ ಏನು ಬೇಕಾದರೂ ನೋಡಬಹುದು. ಇದು ಫಾಸ್ಟ್‌ಫುಡ್ ಯುಗ. ಎಲ್ಲಿ ಯಾವುದು ಬೇಗ ಸಿಗುತ್ತದೋ, ಎಲ್ಲಿ ಅನುಕೂಲ ಆಗುತ್ತದೋ ಅಲ್ಲಿಗೇ ಜನ ಓಡುವುದು. ಇದಕ್ಕೆ ಡಿಜಿಟಲ್ ಮನರಂಜನೆ ಒಂದು ಉದಾಹರಣೆ’ ಎನ್ನುವುದು ಅವರ ಮಾತು. ‘ಮುಂಚೆ ಧಾರಾವಾಹಿಗಳನ್ನು ಸಂಯಮದಿಂದ ಕುಳಿತು ನೋಡುತ್ತಿದ್ದರು. ಆದರೆ ಈಗ ಮನೆಯಲ್ಲಿ ಅಮ್ಮ ಅಡುಗೆ ಮಾಡುವವರೆಗೂ ಕಾಯದೆ ಆಹಾರ ಆರ್ಡರ್ ಮಾಡುತ್ತಾರೆ. ಇದೇ ಮನೋಭಾವ ಮನರಂಜನಾ ವಿಷಯದಲ್ಲೂ ಆಗಿದೆಯಷ್ಟೆ. ಹೀಗಾಗಿ ಧಾರಾವಾಹಿ ನೋಡುಗರ ಸಂಖ್ಯೆ ಅಥವಾ ಸಾಂದ್ರತೆ ಮುಂಚೆಗಿಂತ ಕಡಿಮೆಯಾಗಿದೆ. ಜೊತೆಗೆ, ಕೂಡು ಕುಟುಂಬ ವ್ಯವಸ್ಥೆ ಇದ್ದಾಗ ಧಾರಾವಾಹಿ ನೋಡುವವರ ಸಂಖ್ಯೆಯೂ ಹೆಚ್ಚಿತ್ತು. ಆದರೆ ಈಗ ಹಲವರ ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಟೀವಿ ಇರುತ್ತದೆ. ಅವರವರ ಅಭಿರುಚಿಗೆ ಆಯ್ಕೆಗಳೂ ಸಿಗುತ್ತಿರುವುದರಿಂದ ನೋಡುಗರ ಸಂಖ್ಯೆ ಚದುರಿದೆ’ ಎನ್ನುವುದು ಅವರ ವಿಶ್ಲೇಷಣೆ.



ಟಿ.ಎನ್. ಸೀತಾರಾಮ್

ವೈವಿಧ್ಯ ನೆಚ್ಚಿಕೊಂಡು ಒಟಿಟಿ ಕಡೆಗೆ ಹೋಗುತ್ತಾರೆ ಎನ್ನುವುದನ್ನು ಅಲ್ಲಗಳೆಯುವ ಅವರು, ‘ಇಂದಿಗೂ ಮಹಾಭಾರತದ ಕಥೆಯನ್ನು ಜನ ನೋಡುತ್ತಾರೆ. ಹಳೆಯದನ್ನೇ ಇಷ್ಟಪಡುತ್ತಾರೆ. ಆದರೆ ಅದನ್ನು ತೋರುವ ಸೌಕರ್ಯದ ಮೇಲೆ ಅವಲಂಬಿತ. ಅಂಥದ್ದೊಂದು ಸೌಕರ್ಯವನ್ನು ಒಟಿಟಿ ನೀಡುತ್ತಿದೆ. ಧಾರಾವಾಹಿಗಳು ಹೊಸತಿನ ಹೆಸರಿನಲ್ಲಿ ಏನೇನೋ ಮಾಡುತ್ತಿವೆ. ಉದಾಹರಣೆಗೆ, ಈಚೆಗೆ ಹೊಸ ವಿಷಯವೆಂದು ಹೇಳಿಕೊಂಡು ಬಂದ ಎಷ್ಟೋ ಧಾರಾವಾಹಿಗಳಲ್ಲಿ ‘ಲೇಡಿ ವಿಲನ್’ಗಳನ್ನೇ ತಂದರು, ವಿಜೃಂಭಿಸಿದರು. ಈ ಹೊಸತುಗಳ ಹಣೆಪಟ್ಟಿ ಹೊತ್ತಿರುವವೇ ಹಳಸುತ್ತಿವೆ, ಸೋಲುತ್ತಿವೆ. ಹಳತು ಎಂದಿಗೂ ಹಳಸುವುದಿಲ್ಲ’ ಎಂದು ವಿಶ್ಲೇಷಿಸುತ್ತಾರೆ. ಧಾರಾವಾಹಿಯಿಂದ ಒಟಿಟಿಗೆ ವಾಲುತ್ತಿರುವ ಈ ಪರಿವರ್ತನೆ ಶಾಶ್ವತವಲ್ಲ ಎಂಬುದು ಸೀತಾರಾಮ್ ಅವರ ಅನಿಸಿಕೆ. ‘ಪ್ರತಿ ಐದು ವರ್ಷಕ್ಕೆ ವ್ಯಕ್ತಿಯ ಅಭಿರುಚಿ ಬದಲಾಗುತ್ತದೆ. ಹಾಗೆ ಧಾರಾವಾಹಿಗಳೆಡೆಗಿನ ದೃಷ್ಟಿಕೋನವೂ ಬದಲಾಗಬಹುದು’ ಎನ್ನುವ ಆಶಾವಾದ ಅವರದ್ದು.

ತಾಜಾ ಕಂಟೆಂಟ್-ಮನರಂಜನೆಯ ಮಾರುಕಟ್ಟೆ

ಸದ್ಯ ಒಟಿಟಿ ಜಗತ್ತಿನಲ್ಲಿ ಚಾಲ್ತಿಯಲ್ಲಿರುವ ಪದ ‘ಕಂಟೆಂಟ್ ಕನ್ಸಂಪ್ಷನ್’. ಅಂದರೆ, ಮಾಹಿತಿ/ಮನರಂಜನೆಯ ಸ್ವೀಕೃತಿ. ಇದೇ, ಒಟಿಟಿ ಯಶಸ್ಸಿನ ಕೀಲಿಕೈ ಕೂಡ. ಟೀವಿ-ಕೌಟುಂಬಿಕ ವೀಕ್ಷಣೆ, ಸಿನಿಮಾ-ಸಮುದಾಯ ವೀಕ್ಷಣೆ ಹಾಗೂ ಡಿಜಿಟಲ್-ವೈಯಕ್ತಿಕ ವೀಕ್ಷಣೆ ಎನ್ನುವ ಅಡಿಪಾಯದ ಮೇಲೆ ಮನರಂಜನಾ ಮಾಧ್ಯಮ ತನ್ನ ಉತ್ಪನ್ನಗಳನ್ನು ನೀಡುತ್ತಿದೆ.

ಜಗತ್ತಿನ ಯಾವುದೇ ಮೂಲೆಯ, ಯಾವುದೇ ಭಾಷೆ, ಯಾವುದೇ ವಿಷಯದ, ಘಟನೆಯ ತಾಜಾ ಮನರಂಜನೆ ಅಥವಾ ಮಾಹಿತಿ ಅಂಗೈಗೆ ಸಿಗಲು ಆರಂಭವಾಗಿದ್ದು ಒಟಿಟಿ ವೇದಿಕೆಗಳಿಂದ.

2ನೇ ಪುಟಕ್ಕೆ...

ಕಾಂತಾರ ಚಿತ್ರದಲ್ಲಿ ಸ್ವರಾಜ್ ಶೆಟ್ಟಿ ಪಂಜುರ್ಲಿ ದೈವದ ಪಾತ್ರಧಾರಿಯಾಗಿ

ಇದು ಗುಳಿಗ ಗಳಿಗೆ

‘ಕಾಂತಾರ’ ಸಿನಿಮಾದ ಪ್ರಭಾವದಿಂದಾಗಿ ‘ಶಿವದೂತೆ ಗುಳಿಗೆ’ ಪೌರಾಣಿಕ ನಾಟಕ ಕರಾವಳಿಯಿಂದ ಆಚೆಗೂ ಚಾಚುವಂತಾಗಿದೆ. ಮಲಯಾಳಂ ಭಾಷೆಗೂ ಇದು ಡಬ್ ಆಗುತ್ತಿದೆ.

ಕೋಡಿಬೆಟ್ಟು ರಾಜಲಕ್ಷ್ಮಿ

ಸಾಮಾನ್ಯವಾಗಿ ಕಲಾಪ್ರಕಾರಗಳ ನಡುವೆ ಕೊಡುಕೊಳ್ಳುವಿಕೆಗಳು ಪರಸ್ಪರ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವ ಹುಕಿಯಲ್ಲಿರುತ್ತವೆ. ರಂಗಭೂಮಿಯಲ್ಲಿ ಕಸರತ್ತಿನ ಅಂಶಗಳು ಇದ್ದರೆ ಸರಿಯೇ, ಯಕ್ಷಗಾನದಲ್ಲಿ ನಾಟ್ಯವು ಎಷ್ಟರ ಮಟ್ಟಿಗೆ ಇರಬೇಕು, ಭರತನಾಟ್ಯದೊಳಗೆ ಯೋಗಾಸನವನ್ನು ನೆನಪಿಸುವ ಭಂಗಿಗಳು ಬೇಕೇ ಬೇಡವೇ... ಹೀಗೆಲ್ಲ ಸಾಗುವ ಚರ್ಚೆಗಳೇ ಒಂದು ಸೃಜನಶೀಲ ಪಥವಿದ್ದಂತೆ. ಅಷ್ಟೇ ಅಲ್ಲ, ಅವು ದೀರ್ಘಕಾಲದ ಪರಿವರ್ತನೆಯ ಹಾದಿಯನ್ನು ಆಧರಿಸಿ ನಡೆಯುವ ಚರ್ಚೆಗಳು. ಈ ನಡುವೆ ರಂಗಭೂಮಿಯ ಪಾತ್ರವೊಂದು ಸಿನಿಮಾದಲ್ಲಿ ಅರಳಿ, ಆ ಸಿನಿಮಾವು ಮತ್ತೆ ರಂಗಭೂಮಿಯ ಜನಪ್ರಿಯತೆಗೆ ಮತ್ತಷ್ಟು ಚೈತನ್ಯ ಕೊಡುವ ಪ್ರಕ್ರಿಯೆ ಕುತೂಹಲಕಾರಿ.

ಇತ್ತೀಚೆಗೆ ತೆರೆಕಂಡ ಕಾಂತಾರ ಸಿನಿಮಾವು ‘ದೈವಾರಾಧನೆ’ ಎಂಬ ಕ್ಷೇತ್ರವನ್ನು ಹೊಸ ಪ್ರೇಕ್ಷಕ ವರ್ಗಕ್ಕೆ ಅರ್ಥಮಾಡಿಸುವಲ್ಲಿ ಯಶಸ್ವಿಯಾಗಿದ್ದರಿಂದ, ಇತ್ತ ದೈವಾರಾಧನೆ ಎಂಬ ಭಕ್ತಿ ಮಾರ್ಗ ಹಾಗೂ ಅತ್ತ ದೈವರಾಧನಾ ಕ್ಷೇತ್ರದಿಂದ ಹೊಮ್ಮಿ ಬಂದ ಕಥೆಗಳ ರಂಗಪ್ರದರ್ಶನಗಳ ಮೇಲೆ ಅಗಾಧವಾದ ಪರಿಣಾಮ ಬೀರಿದೆ.

ದೃಶ್ಯ ಮಾಧ್ಯಮವು ಬಹುಜನರನ್ನು ಸುಲಭವಾಗಿ ತಲುಪುವ ಮಾಧ್ಯಮವಷ್ಟೆ. ಕಥೆಯೂ ಗಟ್ಟಿಯಾಗಿದ್ದಾಗ ಜನಾಕರ್ಷಣೆ ಹೆಚ್ಚು. ಈ ದೃಷ್ಟಿಯಿಂದ ‘ಕಾಂತಾರ’ ಚಿತ್ರವು ಅಪಾರ ಪ್ರೇಕ್ಷಕ ವರ್ಗವನ್ನು ತಲುಪುವುದರೊಂದಿಗೆ ಹೊಸದೊಂದು ಕ್ಷೇತ್ರವನ್ನು ಕರಾವಳಿಯ ಹೊರಗಿನ ಜಗತ್ತಿಗೆ ಪರಿಚಯಿಸಿದಂತಾಗಿದೆ. ಉದಾಹರಣೆಯೊಂದಿಗೆ ಹೇಳುವುದಾದರೆ, ‘ಕಾಂತಾರ’ ಚಿತ್ರ ವೀಕ್ಷಿಸಿದ ಬಳಿಕ, ಕರಾವಳಿಯಲ್ಲಿ ಜನಪ್ರಿಯವಾಗಿರುವ ಗುಳಿಗ ದೈವದ ಕುರಿತು ಬಯಲುಸೀಮೆಯ ಸ್ನೇಹಿತರ ಜೊತೆ ಚರ್ಚಿಸುವುದು ಈಗ ಸುಲಭವಾಗಿದೆ. ಅಷ್ಟೇ ಅಲ್ಲ, ಗುಳಿಗ ಅಥವಾ ಪಂಜುರ್ಲಿ ದೈವದಂತೆಯೇ ನಂಬಿಕೆ ಮತ್ತು ಭಕ್ತಿಯ ಶಾಖೆಯೊಂದು ಕರಾವಳಿಯಲ್ಲಿದೆ ಎಂಬುದನ್ನೂ, ಅದಕ್ಕೆ ಸಂಬಂಧಿಸಿದ ಕಥೆಗಳನ್ನು ಆಲಿಸುವುದಕ್ಕೂ ಅನೇಕರು ಕುತೂಹಲಿಗರಾಗಿದ್ದಾರೆ. ಈ ಕುತೂಹಲದಿಂದಾಗಿ, ತುಳು ರಂಗಭೂಮಿಯತ್ತಲೂ ಹೆಚ್ಚು ಜನರು ತಿರುಗಿ ನೋಡುವುದಕ್ಕೆ ಕಾರಣಗಳು ಸೃಷ್ಟಿಯಾಗಿವೆ.



ಸ್ವರಾಜ್ ಶೆಟ್ಟಿ

‘ಕಾಂತಾರ’ ಸಿನಿಮಾದಲ್ಲಿ ‘ಗುರುವ’ನ ಪಾತ್ರ ನಿರ್ವಹಿಸಿದ ಸ್ವರಾಜ್ ಶೆಟ್ಟಿ ತುಳು ರಂಗಭೂಮಿಯ ನುರಿತ ಕಲಾವಿದ. ಎರಡು ವರ್ಷಗಳ ಹಿಂದಷ್ಟೇ ವಿಜಯಕುಮಾರ್ ಕೊಡಿಯಾಲ್‌ಬೈಲ್ ನಿರ್ದೇಶಿಸಿದ ‘ಶಿವದೂತೆ ಗುಳಿಗೆ’ ಎಂಬ ಪೌರಾಣಿಕ ನಾಟಕದಲ್ಲಿ ಮುಖ್ಯಪಾತ್ರವಾದ ಗುಳಿಗ ದೈವದ ಪಾತ್ರ ನಿರ್ವಹಿಸುತ್ತಿದ್ದರು. ನಾಟಕದಲ್ಲಿ ಅವರ ಅಬ್ಬರದ ಪಾತ್ರವು ಹೊಸ ತಲೆಮಾರಿನ ಯುವಜನರನ್ನು ತುಳು ರಂಗಭೂಮಿಯತ್ತ ಸೆಳೆಯುವಂತೆ ಮಾಡಿದ್ದು ಸುಳ್ಳಲ್ಲ. ತಾವು ನಂಬುವ ದೈವದ ಪಾರಮ್ಯವನ್ನು ಹೇಳುವ ಕಥೆಯನ್ನು ಮತ್ತೆ ಮತ್ತೆ ಕೇಳುವುದು, ನೋಡುವುದು ಒಳಿತೆಂದೇ ಜನರು ಭಾವಿಸುವುದುಂಟು. ಇದೇ ಕಾರಣಕ್ಕೋ ಏನೋ ಸ್ವರಾಜ್ ಶೆಟ್ಟಿ ಸಮರ್ಥ ಅಭಿನಯದ ಮೂಲಕ, ‘ಕಾಂತಾರ’ ಚಿತ್ರಕಲಾವಿದರ ತಂಡಕ್ಕೆ ಆಯ್ಕೆಯಾಗಿದ್ದರು. ರಂಗಭೂಮಿಯಿಂದ ಸಿನಿಮಾ ಕ್ಷೇತ್ರಕ್ಕೆ ಕಲಾವಿದರೊಬ್ಬರು ವಲಸೆ ಹೋಗುವುದು ಹೊಸ ವಿಷಯವೇನಲ್ಲ. ಆದರೆ ಇಲ್ಲಿ ನಡೆದ ವಲಸೆಯು ಇತ್ತ ರಂಗಭೂಮಿಯ ವರ್ಚಸ್ಸನ್ನು ವೃದ್ಧಿಸುವಂತೆ ಮಾಡಿದೆ. ಈಗ ನಾಟಕದ ಕರಪತ್ರಗಳಲ್ಲಿ, ‘ಕಾಂತಾರ’ ಸಿನಿಮಾದಲ್ಲಿ ನಟಿಸಿದ ಸ್ವರಾಜ್ ಶೆಟ್ಟಿ ಮುಖ್ಯ ಪಾತ್ರಧಾರಿಯಾಗಿದ್ದಾರೆ ಎಂಬುದನ್ನು ಪ್ರಮುಖವಾಗಿ ಉಲ್ಲೇಖಿಸಲಾಗುತ್ತಿದೆ.

4ನೇ ಪುಟಕ್ಕೆ...



ಅಂಕೋಲೆಯ ಕರಿ ಇಶಾಡು

ಕರಿ ಇಶಾಡಿಗೆ ‘ಜಿಐ’ ಕೋಡು

ಸಂಧ್ಯಾ ಹೆಗಡೆ

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಅಂದಾಕ್ಷಣ ತಟ್ಟನೆ ನೆನಪಾಗುವುದು ಒಂದು ‘ಉಪ್ಪಿನ ಸತ್ಯಾಗ್ರಹ’, ಇನ್ನೊಂದು ‘ಕರಿ ಇಶಾಡು’.

ಹುಳಿಯನ್ನು ತಿರಸ್ಕರಿಸಿ ಸಿಹಿಯ ತಿರುಳನ್ನಷ್ಟೇ ಕವಚದೊಳಗೆ ತುಂಬಿಕೊಂಡಿರುವ ಅಂಕೋಲಾ ಕರಿ ಇಶಾಡು ಹಣ್ಣಿನ ಸವಿಯನ್ನು ತಿಂದೇ ಅನುಭವಿಸಬೇಕು. ಹಸಿರು-ಹಳದಿ ಮಿಶ್ರಿತ ಬಣ್ಣ ಹೊದ್ದುಕೊಂಡ ಈ ಹಣ್ಣುಗಳನ್ನು ಹಾಲಕ್ಕಿ ಮಹಿಳೆಯರು ಬಿದಿರು ಬುಟ್ಟಿಯಲ್ಲಿಟ್ಟು ಮಾರುತ್ತಾರೆ. ಐಷಾರಾಮಿ ಕಾರುಗಳಲ್ಲಿ ಹೆದ್ದಾರಿಯಲ್ಲಿ ಹೋಗುವವರೂ ಕರಿ ಇಶಾಡಿನ ಸುವಾಸನೆಗೆ ಮಾರುಹೋಗಿ, ಬ್ರೇಕ್ ಹಾಕಿ, ಇಡೀ ಬುಟ್ಟಿಯ ಹಣ್ಣನ್ನು ಖರೀದಿಸಿ ಕಾರಿನಲ್ಲಿ ತುಂಬಿಕೊಂಡು ಹೋಗುವುದೂ ಉಂಟು.

ಇದು ಅಂತಿಂತಹ ಮಾವು ಅಲ್ಲ, ಶತಮಾನದ ಹಿಂದೆ ವಿಶ್ವ ಪರ್ಯಟನೆ ಮಾಡಿದ ಹಿರಿಮೆ ಈ ಹಣ್ಣಿಗಿದೆ. 1908ನೇ ಇಸವಿಯಲ್ಲಿ ಅಂಕೋಲಾ ಕರಿ ಇಶಾಡು ಮೌಲ್ಯವರ್ಧನೆಗಾಗಿ ಆರಂಭವಾದ ಓರಿಯಂಟಲ್ ಕೆನರಾ ಇಂಡಸ್ಟ್ರಿ ಮೂಲಕ ಇದು ಅಮೆರಿಕ, ಯುರೋಪ್ ದೇಶಗಳ ಮಾವು ಪ್ರಿಯರ ರುಚಿ ಗ್ರಂಥಿಯನ್ನು ಉದ್ದೀಪಿಸಿತ್ತು. ಮೌಲ್ಯವರ್ಧನೆಯ ಪರಿಕಲ್ಪನೆ ಪ್ರಚಲಿತಕ್ಕೆ ಬರುವ ಮುನ್ನವೇ ಪಲ್ಪ್ ಆಗಿ ರೂಪಾಂತರಗೊಂಡು ವಿದೇಶಿ ಮೆನ್ಯುಗಳ ಪಟ್ಟಿಯಲ್ಲಿದ್ದ ಕರಿ ಇಶಾಡು, ಕಾಲಚಕ್ರದ ಓಟದಲ್ಲಿ ಕರಾವಳಿಯಲ್ಲಿ ರಸ್ತೆಯ ಬದಿಯ ಮಾರಾಟದ ಮಾವಿಗೆ ಸೀಮಿತವಾಯಿತು.

> ಅಂಕೋಲಾ ಕರಿ ಇಶಾಡು ಸಿಹಿಯನ್ನೇ ಇಡಿಯಾಗಿಸಿಕೊಂಡ ಮಾವಿನ ತಳಿ. ಬಿದಿರು ಬುಟ್ಟಿಯಲ್ಲಿಟ್ಟು ಸ್ಥಳೀಯವಾಗಿ ಮಾರಾಟಗೊಳ್ಳುವ ಈ ಹಣ್ಣು ವಿದೇಶಗಳನ್ನೆಲ್ಲ ಸುತ್ತಿ ಬಂದು, ಇದೀಗ ಭೌಗೋಳಿಕ ಚಿಹ್ನೆಯ ಮಾನ್ಯತೆಯನ್ನೂ ಪಡೆದುಕೊಂಡಿದೆ. ಈ ಹಣ್ಣಿನಂತೆ ಇದರ ಕಥನವೂ ರಸಭರಿತ.

ಆದರೆ, ಈಗ ಮತ್ತೆ ಕರಿ ಇಶಾಡಿಗೆ ಗಜಕೇಸರಿ ಯೋಗ ಬಂದೊದಗಿದೆ. ಅಂಕೋಲೆಯ ಹಿತ್ತಲ ಹಣ್ಣಿಗೀಗ ಭೌಗೋಳಿಕ ಚಿಹ್ನೆಯ (geographical indication) ಮಾನ್ಯತೆ.

ಕರಿ ಇಶಾಡಿನ ಯಶೋಗಾಥೆ: ಓರಿಯಂಟಲ್ ಕೆನರೀಸ್ ಇಂಡಸ್ಟ್ರಿಯ ಮಾವಿನ ಉತ್ಪನ್ನಗಳ ಮಾರಾಟದ ಹೊಣೆ ವಹಿಸಿಕೊಂಡಿದ್ದ ಮುಂಬೈನ ವೀರಚಂದ್ ಪನಚಂದ್ ಕಂಪನಿ ಪ್ರಕಟಿಸಿದ ಕರಪತ್ರದಲ್ಲಿ ಜ್ಯೂಸ್, ಸಿರಪ್, ಐಸ್‌ಕ್ರೀಂ ಸೇರಿದಂತೆ 48 ಅಮೆರಿಕನ್ ಪಾಕ ವೈವಿಧ್ಯಗಳನ್ನು ಉಲ್ಲೇಖಿಸಿತ್ತು. ಆಗ ಮುಂಬೈ ಸರ್ಕಾರವಿದ್ದ ಕಾಲ; ಓರಿಯಂಟಲ್ ಇಂಡಸ್ಟ್ರಿಗೆ ಸರ್ಕಾರದ ಪ್ರೋತ್ಸಾಹ ದೊರೆತು, ಲಂಡನ್, ಚೀನಾ ಮೊದಲಾದ ದೇಶಗಳಿಗೆ ಮಾವಿನ ಉತ್ಪನ್ನಗಳು ರಫ್ತಾದವು. ಅಂಕೋಲೆಯ ಹಿರಿಯ ವಾಮನ ಪೈ ಅವರ ಬಳಿ ಇದ್ದ ದಾಖಲೆಗಳಲ್ಲಿ ಇಂತಹ ಅನೇಕ ಕುತೂಹಲಕಾರಿ ಸಂಗತಿಗಳನ್ನು ತಿಳಿದುಕೊಳ್ಳಲು ಸಾಧ್ಯವಾಯಿತು ಎನ್ನುತ್ತಾರೆ ಪರಿಸರ ಕಾರ್ಯಕರ್ತ ಶಿವಾನಂದ ಕಳವೆ.

ಸಿಂಗಪುರದ ‘ದಿ ಸ್ಟೇಟ್ಸ್ ಟೈಮ್ಸ್’, ‘ಟೈಮ್ಸ್ ಆಫ್ ಇಂಡಿಯಾ ಬಾಂಬೆ’, ‘ಟೈಮ್ಸ್ ಆಫ್ ಸಿಲೋನ್’, ‘ದಿ ನಾರ್ಥ್ ಚೈನಾ ಡೈಲಿ ನ್ಯೂಸ್’ಗಳು ಅಂಕೋಲಾ ಮಾವನ್ನು ಮೆಚ್ಚಿ 100 ವರ್ಷಗಳ ಹಿಂದೆಯೇ ಲೇಖನ ಪ್ರಕಟಿಸಿದ್ದವು. ನ್ಯೂಯಾರ್ಕ್ ಫಿಸಿಕಲ್ ಕಲ್ಚರ್ ಮ್ಯಾಗಝೀನ್, ಕರಿ ಇಶಾಡಿನಲ್ಲಿರುವ ಪೌಷ್ಟಿಕಾಂಶದ ಬಗ್ಗೆ 1931ರ ಜೂನ್ 10ರಂದು ಅರ್ಹತಾ ಪತ್ರ ನೀಡಿ ಅಲ್ಲಿನ ಗ್ರಾಹಕರು ಇದನ್ನು ಬಳಸಬಹುದೆಂದು ಶಿಫಾರಸು ಮಾಡಿತ್ತು. ಅಂಕೋಲಾ ಕರಿ ಇಶಾಡು ವಿದೇಶದ ಐದು ಬಂಗಾರದ ಪದಕಗಳನ್ನು ಪಡೆದಿತ್ತು ಎಂಬುದನ್ನು ತಮ್ಮ ಸಂಗ್ರಹದಲ್ಲಿರುವ ದಾಖಲೆಯೊಂದಿಗೆ ವಿವರಿಸಿದರು ಕಳವೆ.

ಜಿಐ ಮಾನ್ಯತೆಯೊಂದಿಗೆ ಮತ್ತೊಮ್ಮೆ ಪ್ರಾದೇಶಿಕ ವಿಶೇಷತೆಯನ್ನು ಜಗತ್ತಿಗೆ ತೆರೆದುಕೊಳ್ಳುವ ಅವಕಾಶ ವಿಸ್ತರಿಸಿದೆ. ಮರವೊಂದಕ್ಕೆ ಮಾನ್ಯತೆ ದೊರೆತಿದ್ದರಿಂದ ಮರಗಳನ್ನು ನೋಡುವ ರೀತಿ ಬದಲಾಗಲಿದೆ. ನಿರ್ಮಾಣದ ನೆಪದಲ್ಲಿ ಬರಿದಾಗುತ್ತಿರುವ ಕರಾವಳಿಯನ್ನು ಪರಿಸರಸ್ನೇಹಿಯಾಗಿ ಕಾಣಲು ಇದೊಂದು ಒಳ್ಳೆಯ ಅಸ್ತ್ರ ಆಗಬೇಕಿದೆ.

ವಾಸ್ತವದಲ್ಲಿ ಏನು?: ಕರಿ ಇಶಾಡು ಅಂಕೋಲಿಗರ ಹಿತ್ತಲ ಹಣ್ಣು. 300 ವರ್ಷ ಆಯುಸ್ಸಿನ ಮರಗಳೂ ಇಲ್ಲಿವೆ. ವಾಣಿಜ್ಯಿಕವಾಗಿ ರೂಪುಗೊಂಡ ಪ್ಲಾಂಟೇಷನ್‌ಗಳು ವಿರಳ. ಮೊದಲೆಲ್ಲ ಕೆಲವು ವ್ಯಾಪಾರಸ್ಥರು ಮರಗಳನ್ನು ಗುತ್ತಿಗೆ ಪಡೆದು, ತಾವೇ ಕೊಯ್ಲು ಮಾಡಿ ಹಣ್ಣನ್ನು ಹುಬ್ಬಳ್ಳಿ ಮಾರುಕಟ್ಟೆಗೆ ಒಯ್ಯುತ್ತಿದ್ದರು. ಅಂಕೋಲಾ ಕರಿ ಇಶಾಡು ಅಂಕೋಲಕ್ಕಿಂತ ಹುಬ್ಬಳ್ಳಿಯಲ್ಲೇ ಹೆಚ್ಚು ಪ್ರಸಿದ್ಧವಾಗಿತ್ತು. ಈಚಿನ ವರ್ಷಗಳಲ್ಲಿ ಹೆದ್ದಾರಿ ಬದಿಯಲ್ಲಿ ಕುಳಿತು ವ್ಯಾಪಾರಸ್ಥರೇ ನೇರವಾಗಿ ಹಣ್ಣನ್ನು ಮಾರಾಟ ಮಾಡುತ್ತಿದ್ದಾರೆ. ಹೀಗಾಗಿ, ಹಿತ್ತಲಿನಲ್ಲಿರುವ ನಾಲ್ಕಾರು ಮರಗಳೂ ಕುಟುಂಬದ ತುತ್ತಿನ ಚೀಲ ತುಂಬಿಸುತ್ತಿವೆ. ಈ ಹಣ್ಣಿನ ಸೀಸನ್ ಹೆಚ್ಚೆಂದರೆ ಎರಡು ತಿಂಗಳು. ಇಷ್ಟೇ ಅವಧಿ ಕೆಲವರಿಗೆ ವಾರ್ಷಿಕ ದುಡಿಮೆಯ ಫಲ ಕೊಡುತ್ತಿವೆ ಎಂಬುದು ಸ್ಥಳೀಯರ ಅಂಬೋಣ.

‘ಮಣ್ಣಿನ ಗುಣದಲ್ಲಿ ಬೆಳೆಯುವ ಸಿರಿ ಇದು. ಅಂಕೋಲಾದಲ್ಲೂ ವಂದಿಗೆ, ಬೆಳಂಬಾರ, ಶೆಟಗೇರಿ, ಬೆಳಸೆ, ಹೊನ್ನೆಬೈಲು ಹೀಗೆ ನಾಲ್ಕಾರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬೆಳೆಯುವ ಹಣ್ಣು ಬಲು ಸಿಹಿ. ಒಣ ಮಣ್ಣು ಸಿಹಿ ಹೆಚ್ಚಿಸುತ್ತದೆ. ಇದೇ ಕರಿ ಇಶಾಡು ಗಿಡವನ್ನು ಇನ್ನೆಲ್ಲೋ ನಾಟಿ ಮಾಡಿದರೆ ಈ ರುಚಿ ಸಿಗಲಾರದು. ಕಾಯಿ ವಿಪರೀತ ಹುಳಿ, ಬಲಿತ ಹಣ್ಣು ಅಷ್ಟೇ ಸಿಹಿ. ಕಾಯಿಯನ್ನು ಹೋಳು ಮಾಡಿ ಒಣಗಿಸಿ ಅಡುಗೆಗೆ ಹುಳಿಯಾಗಿ ಬಳಸಬಹುದು. ಇದು ನಮ್ಮೂರ ಹಣ್ಣಿನ ವಿಶೇಷತೆ’ ಎನ್ನುತ್ತಾರೆ ಬೆಳೆಗಾರ ಹಾಗೂ ಮಾತಾ ತೋಟಗಾರ್ಸ್ ಫಾರ್ಮ್ ಪ್ರೊಡ್ಯೂಸರ್ ಕಂಪನಿಯ (ಎಫ್‌ಪಿಒ) ನಿರ್ದೇಶಕ ಮಹಾದೇವ ಗೌಡ.

4ನೇ ಪುಟಕ್ಕೆ...

ಹೆಸರಿನ ಕೌತುಕ

ಜಿಐ ನೋಂದಣಿಗೆ ಚಾರಿತ್ರಿಕ ದಾಖಲೆ ಮುಖ್ಯ. ಹೀಗೆ ದಾಖಲೆಗಾಗಿ ಗ್ರಂಥಾಲಯದಲ್ಲಿ ತಡಕಾಡಿದಾಗ 1920ರಲ್ಲಿ ಕೃಷಿ ಇಲಾಖೆ ಹೊರತಂದ ಬುಲೆಟಿನ್‌ನಲ್ಲಿ ಕರಿ ಇಶಾಡಿನ ಉಲ್ಲೇಖವಿತ್ತು. ಈ ಮಾವಿನ ನಾಮಕರಣ ಹೇಗೆ ಎಂಬುದೇ ಕೌತುಕ. ‘ಇಶಾಡು’ ಇದು ಹಳೆ ಟರ್ಕಿಷ್ ಪದ. ಟರ್ಕಿ ಭಾಷೆಯಲ್ಲಿ ಉನ್ನತ ಸ್ಥಾನಕ್ಕೆ ‘ಇಶಾಡು’ ಎನ್ನುವ ಕ್ರಮವಿತ್ತು. 14ನೇ ಶತಮಾನದ ಸಂದರ್ಭದಲ್ಲಿ ಸೇನೆಯಲ್ಲಿ ಉನ್ನತ ಸ್ಥಾನಕ್ಕೆ ಈ ಪದವನ್ನು ಬಳಸುತ್ತಿದ್ದರು. ಹಣ್ಣಿನಲ್ಲೇ ಉತ್ಕೃಷ್ಟವಾಗಿರುವ ಈ ಹಣ್ಣಿಗೆ ‘ಇಶಾಡು’ ಎಂದು ಕರೆದಿರಬಹುದು. ಆಗ ಮುಂಬೈ ಪ್ರೆಸಿಡೆನ್ಸಿಯ ಕಾಲ. ಬಹಮನಿ ಸಾಮ್ರಾಜ್ಯದಲ್ಲಿ ಆದಿಲ್ ಶಾಹಿ ಮನೆತನದ ಯುಸೂಫ್ ಆದಿಲ್ ಶಾ ಟರ್ಕಿಯವನಾಗಿದ್ದ ಎನ್ನುತ್ತಾರೆ ಸಂಶೋಧಕಿ ನಂದಿನಿ ದೋಲೆಪಟ್.

ಕಾರವಾರದ ಮಾರುಕಟ್ಟೆಯಲ್ಲಿ ಮಾರಾಟಕ್ಕೆ ಇಟ್ಟಿರುವ ಕರಿ ಇಶಾಡು ಮಾವಿನ ಹಣ್ಣು

ವ್ಯಾಕುಲ ನೀಗುವ ಕಲೆ ಆಧಾರಿತ ಚಿಕಿತ್ಸೆ

ಕಲಾ ಚಿಕಿತ್ಸೆ

ಕಲೆ ಆಧಾರಿತ ಚಿಕಿತ್ಸೆ ಎಂದರೆ ವಿವಿಧ ಕಲಾಪ್ರಕಾರಗಳನ್ನು ಬಳಸಿಕೊಂಡು ವ್ಯಕ್ತಿಗಳ ಮನಸ್ಸಿನಲ್ಲಿ ಗೋಜಲಾಗಿರುವ ಭಾವನೆಗಳನ್ನು ಮಂಥನ ಮಾಡಿಸುತ್ತಾ ಗುಣಮುಖರಾಗಿಸುವ ಪ್ರಕ್ರಿಯೆ. ಮನಕ್ಕೆ ನೆಮ್ಮದಿ ನೀಡುವ ಈ ಚಿಕಿತ್ಸೆ ಕುರಿತಾಗಿನ ಒಂದಷ್ಟು ಮಾಹಿತಿ ಇಲ್ಲಿದೆ..

ಸಂದರ್ಶನ ಮತ್ತು ನಿರೂಪಣೆ: ದಾದಾಪೀರ್ ಜೈಮನ್

ಬೆಂಗಳೂರಿನಲ್ಲಿ ವಾಸವಿರುವ ಲಲಿತಶ್ರೀ ಗಣೇಶ್ 'ಕಲೆ ಆಧಾರಿತ ಚಿಕಿತ್ಸೆ'ಯ ಅಭ್ಯಾಸದಲ್ಲಿ ನಿರತರಾಗಿರುವ ಸರ್ಟಿಫೈಡ್ ಚಿಕಿತ್ಸಕಿ. ಕಲಾವಿದೆ ಮತ್ತು ಕವಯಿತ್ರಿಯೂ ಆಗಿರುವ ಇವರು ಇಂಗ್ಲಿಷಿನಲ್ಲಿ ಬರೆಯುತ್ತಾರೆ. ಪುಣೆಯ ಬಾಪು ಟ್ರಸ್ಟ್‌ನಲ್ಲಿ ಆರ್ಟ್ ಬೇಸ್ಡ್ ಥೆರಪಿಯನ್ನು ಅಭ್ಯಾಸ ಮಾಡಿದ್ದಾರೆ. ಆಘಾತಕ್ಕೊಳಗಾಗಿರುವ ಹಾಗೂ ಮಾನಸಿಕ ಅಸ್ವಸ್ಥ ಮಕ್ಕಳು ಮತ್ತು ವಯಸ್ಕರಿಗೆ ಕಲೆ ಆಧಾರಿತ ಚಿಕಿತ್ಸೆ ನೀಡಿದ್ದಾರೆ. ಈಗ ಸ್ವಂತ ಸಂಸ್ಥೆಯ ಕನಸನ್ನು ನನಸಾಗಿಸುವಲ್ಲಿ ದುಡಿಯುತ್ತಿದ್ದಾರೆ. ಈ ನಿಟ್ಟಿನಲ್ಲಿ ಅವರನ್ನು ಮಾತಿಗೆಳೆದಾಗ, ಕಲೆ ಹೇಗೆ ನಮ್ಮೆಲ್ಲರ ಗಾಯಗಳನ್ನು ಮಾಯಿಸಬಲ್ಲದು ಎನ್ನುವ ಅಂಶಗಳನ್ನು ಹಂಚಿಕೊಂಡಿದ್ದಾರೆ.

ಕಲೆ ಆಧಾರಿತ ಚಿಕಿತ್ಸೆ ಎಂದರೆ ವಿವಿಧ ಕಲಾಪ್ರಕಾರಗಳನ್ನು ಬಳಸಿಕೊಂಡು ವ್ಯಕ್ತಿಗಳ ಮನಸ್ಸಿನಲ್ಲಿ ಗೋಜಲಾಗಿರುವ ಭಾವನೆಗಳನ್ನು ಮಂಥನ ಮಾಡಿಸುತ್ತಾ ಗುಣಮುಖರಾಗಿಸುವ ಪ್ರಕ್ರಿಯೆ. ಇಲ್ಲಿ ಕಲಾಪ್ರಕಾರಗಳು ಒಂದು ಟೂಲ್ ಆಗಿ ಕೆಲಸ ಮಾಡುತ್ತವೆ.

2019ರ ಮಾರ್ಚ್ ತಿಂಗಳಿಂದ ನಾನು 'ಕಲೆ ಆಧಾರಿತ ಚಿಕಿತ್ಸೆ' ಆರಂಭಿಸಿದೆ. ಇದಿನ್ನೂ ಭಾರತದಲ್ಲಿ ಅಷ್ಟೇನೂ ವ್ಯಾಪಕವಾಗಿ ಪ್ರಚಾರಗೊಂಡಿಲ್ಲ. ಇದರ ಕುರಿತು ಅಡ್ವೊಕಸಿ ನಡೆಯುತ್ತಿದೆ. ಇಲ್ಲಿ ವೈದ್ಯಕೀಯ ತಂಡದ ಸಹಭಾಗಿತ್ವ ಇರುವುದಿಲ್ಲ ಎಂಬುದೇ ಜನರಲ್ಲಿ ಅದೆಷ್ಟೋ ನೆಮ್ಮದಿ ತರುತ್ತದೆ. ನಮ್ಮೊಳಗಿನ ದಂದುಗವನ್ನು ನಾವು ಮಾತಿನ ಮೂಲಕವೇ ವ್ಯಕ್ತಪಡಿಸಬೇಕೆನ್ನುವ ಒತ್ತಡ ಇಲ್ಲಿಲ್ಲ. ಕಲೆಯ ಬೇರೆ ಬೇರೆ ವಿಧಾನಗಳ ಮೂಲಕ ತಮ್ಮ ಒಳಗನ್ನು ಅಭಿವ್ಯಕ್ತಿಸುವುದಕ್ಕೆ ಸೂಕ್ತ ವಾತಾವರಣ ಇಲ್ಲಿರುತ್ತದೆ. ಡ್ರಮ್ಮಿಂಗ್, ರಿದಂ ಸರ್ಕಲ್, ನಾಟಕ, ಧ್ವನಿ ಚಟುವಟಿಕೆ, ಚಿತ್ರಕಲೆ ಮುಂತಾದ ಹಲವು ಚಟುವಟಿಕೆಗಳು ನಮ್ಮಲ್ಲಿವೆ.

ನನ್ನ ಜೀವನದ ಮೊದಲ ಕಲೆ ಆಧಾರಿತ ಚಿಕಿತ್ಸೆ ಒಂದು ಅನಾಥಾಲಯದಿಂದ ಶುರುವಾಯಿತು. ಅಲ್ಲಿ ಒಂದಷ್ಟು ಹುಡುಗರ ಗುಂಪಿತ್ತು. ಅವರೆಲ್ಲಾ ಏಳರಿಂದ ಹದಿನಾರು ವರ್ಷಗಳ ನಡುವಿನ ವಯೋಮಾನದವರಾಗಿದ್ದರು. ಆ ಗುಂಪಿನಲ್ಲಿದ್ದ ಒಬ್ಬ ಹುಡುಗ ತುಂಬಾ ಆಘಾತಕ್ಕೊಳಗಾಗಿದ್ದ. ಬೇರೆಯವರ ಕಡೆಗೆ ತಿರುಗಿಯೂ ಮಾತನಾಡದಷ್ಟು, ಆಮೆ ತನ್ನ ಚಿಪ್ಪಿನೊಳಗೆ ಅಡಗಿಕೊಂಡ ಹಾಗೆ ತನ್ನ ಕೈ ಕಾಲು ಮತ್ತು ಕತ್ತನ್ನು ಅಡಗಿಸಿಟ್ಟಿದ್ದ. ತಾಯಿಯ ಗರ್ಭದಲ್ಲಿ ಅಡಗಿಕೊಂಡಷ್ಟೇ ಮುದುಡಿಕೊಂಡಿದ್ದ. ನನ್ನ ಯಾವ ಮಾತುಗಳೂ ಅವನ ಕಿವಿಗೆ ಬೀಳುವಂತಿರಲಿಲ್ಲ. ಅಲ್ಲಿಗೆ ಬಂದು ಅದೆಷ್ಟೋ ತಿಂಗಳಾದರೂ ಅವನು ಯಾರ ಜೊತೆಗೂ ಮಾತಾಡಿರಲಿಲ್ಲ. ನಾನು ಮೊದಲ ಚಟುವಟಿಕೆಯ ಭಾಗವಾಗಿ ಎಲ್ಲರಿಗೂ ಒಂದು ಹಾಳೆ ಹಾಗೂ ಪೆನ್ಸಿಲ್ ಕೊಟ್ಟು ಅದರಲ್ಲಿ ಅವರ ಹೆಸರನ್ನು ಬರೆಯಲು ಹೇಳಿದೆ. ನಾನು ಪ್ರೀತಿಯಿಂದ ಮಾತನಾಡಿಸಿದಾಗಲೂ ಒತ್ತಾಯ ಮಾಡಿದಾಗಲೂ ಮಾತನಾಡಿರಲಿಲ್ಲ. ಉಳಿದ ಹುಡುಗರು ಅವರಿಗೆ ಕೊಟ್ಟ ಹಾಳೆಯ ಮೇಲೆ ಹೆಸರು ಬರೆಯುವುದೋ ಚಿತ್ರ ಬರೆಯುವುದೋ ಮಾಡುತ್ತಿದ್ದರೆ ಈ ಹುಡುಗ ಪೆನ್ಸಿಲ್ ಎತ್ತಿಕೊಳ್ಳುವ ಯಾವ ಸುಳಿವೂ ಇರಲಿಲ್ಲ. ಕಡೆಗೆ ನಾನು ಉಳಿದ ಹುಡುಗರೊಂದಿಗೆ ಮಾತನಾಡುವುದನ್ನು ಕೇಳಿ ಅವನಿಗೆ ಸಮಾಧಾನವೆನಿಸಿತೋ ಏನೋ ಒಂದು ತಾಸಿನ ಬಳಿಕ ಆ ಪೆನ್ಸಿಲ್ ಹಿಡಿದು ಒಂದೇ ಒಂದು ಗೀಟು ಎಳೆದ. ಒಂದೇ ಒಂದು ಗೀಟು! ಅದೇ ಅವನ ಸಾಧನೆಯಾಗಿತ್ತು. ಅಷ್ಟು ದಿನಗಳಲ್ಲಿ ಅವನಿಗೆ ಅದನ್ನೂ ಮಾಡಲು ಸಾಧ್ಯವಾಗಿರಲಿಲ್ಲ. ಆ ಅನಾಥಾಲಯದಲ್ಲಿದ್ದ ಎಲ್ಲರೂ ಆ ಕ್ಷಣವನ್ನು ಸಂಭ್ರಮಿಸಿದ್ದರು. ಅದಾಗಿ ನಾಲ್ಕು ಸೆಷನ್ನುಗಳ ನಂತರ ಅವನು ಮೊದಲನೇ ಪದವನ್ನು ಬಾಯಿಬಿಟ್ಟಿದ್ದ.

ಲಲಿತಶ್ರೀ ಗಣೇಶ್

ನಾನು ಆ ದಿನ ಒಂದು ಚಟುವಟಿಕೆ ಕೊಟ್ಟಿದ್ದೆ. ಒಬ್ಬೊಬ್ಬ ಹುಡುಗನಿಗೆ ಒಂದೊಂದು ಹೆಸರು ಕೊಟ್ಟು ಅದರ ಹಾಗೆ ಅವರು ಅಭಿನಯಿಸಬೇಕು ಎಂದು ಹೇಳಿದ್ದೆ. ಒಬ್ಬರಿಗೆ ಬೆಂಕಿ, ಒಬ್ಬರಿಗೆ ನೀರು ಇತ್ಯಾದಿ. ಈ ಹುಡುಗನಿಗೆ ನಾನು ಗಾಳಿ ಎನ್ನುವ ಪದ ಕೊಟ್ಟಿದ್ದೆ. ಈ ಹುಡುಗ ಮತ್ತೊಬ್ಬ ಹುಡುಗನ ಹಿಂದೆ ಸುಮ್ಮನೆ ಅಡಗಿಕೊಂಡಿದ್ದ. ನಾನು ಮತ್ತು ಅವನ ಉಳಿದ ಸ್ನೇಹಿತರೆಲ್ಲಾ 'ಪ್ರಯತ್ನ ಮಾಡು, ಪ್ರಯತ್ನ ಮಾಡು' ಎಂದು ಗೋಗರೆದ ನಂತರ ನಿಧಾನವಾಗಿ ಅವನು ಅವನ ಕೈಗಳನ್ನು ಗಾಳಿಯಲ್ಲಿ ಅಲ್ಲಾಡಿಸಿದ್ದ. ಅದಾದ ಮೇಲೆ ಅವನು ನಿಧಾನವಾಗಿ ಉಳಿದ ಹುಡುಗರೊಂದಿಗೆ ಮಾತನಾಡಲು, ಓದಲು, ನಾಟಕ ಚಟುವಟಿಕೆಗಳಲ್ಲಿ ಭಾಗವಹಿಸಲು ಶುರು ಮಾಡಿದ. ಈ ಪ್ರಸಂಗ ನಾನು ಚಿಕಿತ್ಸಕಿಯಾಗಿ ಮುಂದುವರಿಯಲು ಮತ್ತಷ್ಟು ಹುರುಪು ತುಂಬಿತು.

ಅದೆಷ್ಟೋ ಹುಡುಗರಿಗೆ ಲೈಂಗಿಕ ಶೋಷಣೆ ಆಗಿರುತ್ತದೆ, ಅವರ ಮೇಲೆ ಮಾದಕ ವಸ್ತುಗಳ ಒತ್ತಾಯದ ಬಳಕೆಯಾಗಿರುತ್ತದೆ, ಮಾಫಿಯಾಗಳು ಅವರನ್ನು ಮತ್ತೇನಕ್ಕೋ ಬಳಸಿಕೊಂಡಿರುತ್ತವೆ. ಹೀಗೆ ಪ್ರತಿಯೊಂದು ಮಗುವಿನ ಹಿಂದೆಯೂ ಏನೇನೋ ಕಾರಣಗಳಿರುತ್ತವೆ. ಅವೆಲ್ಲವೂ ಮಕ್ಕಳಿಗೆ ಅಭಿವ್ಯಕ್ತಿ ಮಾರ್ಗವಾಗಿ ಹೊರಬರಲು ಕಲೆ ಸಹಾಯ ಮಾಡುತ್ತವೆ. ಹಿಂದೆ ಮನಸ್ಸಿನ ಮೇಲಾದ ಹಳೆಯ ಗಾಯಗಳ ಕಾರಣಗಳಿಂದ ಆಕ್ರೋಶದ ಜ್ವಾಲಾಮುಖಿಯನ್ನೇ ಬೆಳೆಸಿಕೊಂಡಿರುವ, ಯಾವುದಕ್ಕೂ ಸ್ಪಂದಿಸದೆ ಕಲ್ಲಾಗಿಹೋದ ಮಕ್ಕಳು ಕಲೆಗೆ ಸ್ಪಂದಿಸಿದ, ಕಲೆ ಆಧಾರಿತ ಚಿಕಿತ್ಸೆಗೆ ಸ್ಪಂದಿಸಿದ ಉದಾಹರಣೆಗಳು ನನ್ನ ಕಣ್ಣ ಮುಂದಿವೆ.

ಮತ್ತೊಂದು ಘಟನೆ ನನ್ನ ಕಣ್ಣ ಮುಂದಿದೆ. ಕೋವಿಡ್ ಸಮಯದಲ್ಲಿ ಒಂದು ಎಮರ್ಜೆನ್ಸಿ ಕರೆ ಬಂತು. ಆಗಿನ್ನೂ ಡೆಲ್ಟಾ ಅಲೆ ತಾರಕಕ್ಕೇರುವುದರಲ್ಲಿತ್ತು. ನಾನು ಭೇಟಿಯಾಗಬೇಕಿದ್ದ ಹುಡುಗನನ್ನ ಸ್ವತಃ ಅವರ ತಂದೆ ತಾಯಿಯೇ ಕೊಲ್ಲುವ ಪ್ರಯತ್ನ ಮಾಡಿದ್ದರು. ಆ ಕೂಸಿನ ಮೈಮೇಲೆಲ್ಲ ಗಾಯಗಳಿದ್ದವು. ಆ ಹುಡುಗ ಕೆಲವು ದಿನಗಳನ್ನುನ ಪೊಲೀಸ್ ಸ್ಟೇಷನ್ನಿನಲ್ಲಿ ಕೂಡ ಕಳೆದಿದ್ದ. ಅವನಿಗೆ ಕೇವಲ ಹದಿಮೂರು ವರ್ಷ ವಯಸ್ಸಾಗಿತ್ತು. ಅವನಿಗೆ ಆಘಾತವಾಗಿತ್ತು. ಕಲ್ಲಾಗಿಹೋಗಿದ್ದ. ಮುಖಕ್ಕೆ ಮುಖ ಕೊಟ್ಟು ಕೂಡ ಮಾತನಾಡುತ್ತಿರಲಿಲ್ಲ. ನಾನು ನಿಧಾನವಾಗಿ ಅವನ ಜೊತೆ ಮಾತನಾಡಲು ಶುರು ಮಾಡಿದ ಮೇಲೆ ಅವನು ತನ್ನ ದೈಹಿಕ ಗಾಯಗಳನ್ನು ತೋರಿಸಿದ. ನನ್ನ ಹತ್ತಿರ ಮಾತನಾಡತೊಡಗಿದ. ಕಷ್ಟಪಟ್ಟು ಆಡುವ ಮಾತಿಗೂ ಅರ್ಥವಿರುತ್ತಿರಲಿಲ್ಲ. ನಾನು ವಾರಕ್ಕೆ ಮೂರು ದಿನ ಹೋಗಿ ಅವನನ್ನು ಭೇಟಿ ಮಾಡಲು ಶುರುಮಾಡಿದೆ. ಅವನಿಗೆ ನಡುವೆ ಒಂದು ಧ್ವನಿ ಪ್ರೇರಿತ ಚಟುವಟಿಕೆಯೊಂದನ್ನು ನೀಡಿದ್ದೆ. ಅದರಲ್ಲಿ 'ಹ' ಶಬ್ದಕ್ಕೆ ನಿಂತು ಅದನ್ನು ಉಚ್ಚರಿಸು ಎಂದೆ. ಎಲ್ಲಾ ಶಬ್ದಗಳನ್ನು ಒಂದೇ ಬಾರಿ ಪುನರುಚ್ಚರಿಸಿದ ಆ ಹುಡುಗ ಆ 'ಹ' ಶಬ್ದವನ್ನು ಐವತ್ತಕ್ಕೂ ಹೆಚ್ಚು ಬಾರಿ ಉಚ್ಚರಿಸಿದ್ದ. ಅದರ ತರಂಗಗಳು ನನ್ನನ್ನೇ ಬೆಚ್ಚಿಬೀಳಿಸಿದ್ದವು. ಅದು ಹೇಗಿತ್ತೆಂದರೆ, ಟೇಪ್ ರೆಕಾರ್ಡರಿನಲ್ಲಿ ರೀಲು ಸಿಕ್ಕಿಹಾಕಿಕೊಂಡು ಒಂದೇ ಶಬ್ದ ಹೇಗೆ ಮತ್ತೆ ಮತ್ತೆ ಸದ್ದು ಮಾಡುತ್ತದೋ ಹಾಗೆ. ಅವನು 'ಹ'ಕಾರವನ್ನು ಮತ್ತೆ ಮತ್ತೆ ಹೇಳಿದ್ದ. ಅವನು ಅಷ್ಟು ಬಾರಿ ಹೇಳಿದ ಮೇಲೆ 'ಈಗ ನನಗೆ ಹಗುರ ಅನಿಸ್ತಾ ಇದೆ' ಎಂದ. ಈ ತರಹದ ಘಟನೆಗಳು ಮನುಷ್ಯನ ತುಂಬಾ ಸನಿಹಕ್ಕೆ ಹೋಗಿ ಕಲೆ ತಮ್ಮ ಚಮತ್ಕಾರವನ್ನು ಮಾಡುವ ಘಟನೆಗಳಾಗಿರುತ್ತವೆ. ಇಂತಹುದಕ್ಕೆ ಸಾಕ್ಷಿಯಾಗುವುದೇ ನಮ್ಮೊಳಗನ್ನು ಬೆಳಗುವ ಕ್ಷಣಗಳೂ ಆಗಿರುತ್ತವೆ. ಕಲೆಯ ಮೇಲಿನ ನಂಬಿಕೆಯಿಡುವ ನಮ್ಮ ನಿರ್ಧಾರಗಳನ್ನು ಗಟ್ಟಿಗೊಳಿಸುತ್ತವೆ.

ಪುಣೆ, ದೆಹಲಿ ಮತ್ತು ಮುಂಬಯಿಯಲ್ಲಿ ಈ ಕಲೆ ಆಧಾರಿತ ಚಿಕಿತ್ಸೆ ತುಂಬಾ ಮುಂಚೂಣಿಯಲ್ಲಿದೆ. ಬೆಂಗಳೂರಿನಲ್ಲಿ ಸ್ನೇಹಧಾರ ಫೌಂಡೇಶನ್ ಇದೆ. ಹಲಸೂರು ಹತ್ತಿರ ಸ್ಮಾರ್ಟ್ ಸ್ಟುಡಿಯೋ, ಡ್ರಾಮಾ ಥೆರಪಿ, ಎಸ್ಪ್ರೆಸಿವ್ ಆರ್ಟ್ ಥೆರಪಿ ಮುಂತಾದವು ಇವೆ. ಬೆಂಗಳೂರಿನಲ್ಲಿ ವಿಶ್ಯುಯಲ್ ಆರ್ಟ್ ಥೆರಪಿ ಸೆಂಟರ್ ಇದೆ. ಈ ನಡುವೆ ನನ್ನದೇ ಸ್ವಂತ ಸಂಸ್ಥೆಯನ್ನು ಕಟ್ಟುವ ಕನಸು ಕೂಡ ಇದೆ.

ಸ್ವತಃ ಕವಯಿತ್ರಿ. ಬರಹಗಾರರು ವ್ಯವಸ್ಥಿತವಾಗಿ ಬರವಣಿಗೆಯನ್ನು ವಿಮರ್ಶಾತ್ಮಕವಾಗಿ ನೋಡುತ್ತಾ ಹೋದರೆ, ಈ ರೀತಿ ಅದನ್ನು ಬರಹಗಾರರೇ ಬದಲಾವಣೆಗೆ ಒಗ್ಗಿಸಲು ಹೋದಾಗ ಬರವಣಿಗೆ ತುಂಬಾ ಶುಷ್ಕವಾಗುತ್ತದೆ ಎನ್ನುವ ನಂಬಿಕೆಯಿದೆ. ನನಗೆ ಹಾಗನಿಸುವುದಿಲ್ಲ. ನಾವೆಷ್ಟು ಜಗತ್ತನ್ನು ನೋಡುತ್ತಾ ಹೋಗುತ್ತೀವೋ ಅಷ್ಟೂ ನಮ್ಮ ಅನುಭವಗಳು ಹೆಚ್ಚುತ್ತವೆ. ನಾವೆಷ್ಟು ಕಲೆಯ ಬಗ್ಗೆ ತಿಳಿದುಕೊಳ್ಳುತ್ತೀವೋ ಅದರ ತಂತ್ರಗಳನ್ನು ಗಮನಿಸುತ್ತೀವೋ ಅದು ಹೊಸ ವಿಸ್ತಾರದ ಸಾಧ್ಯತೆಗಳನ್ನು ನಮ್ಮ ಮುಂದೆ ಇರಿಸುತ್ತದೆ. ಕಡೆಗೂ ಕಲೆಯ ಉದ್ದೇಶ ಜನರನ್ನು ಆತ್ಯಂತಿಕವಾಗಿ ತಲುಪುವುದೇ ಆದಲ್ಲಿ ನಾವು ಹೇಗೆ ತಲುಪುತ್ತೇವೆ ಎನ್ನುವುದು ಮುಖ್ಯವಾಗುವುದಿಲ್ಲ. ಕಲೆಯ ಕುರಿತು ನಮ್ಮೊಳಗಿರುವ ಅಚ್ಚನ್ನು ಹಿಗ್ಗಿಸಿಕೊಳ್ಳದೆ ಕಲೆ ಹಿಗ್ಗುವುದಿಲ್ಲ.

'ಎತ್ತರ'ದ ನೋಟ; ಅಸ್ಪಷ್ಟ ಹುಡುಕಾಟ

ಗೌರಿ



ಪು: 530 ₹500

ಎತ್ತರ
ಲೇ: ಇಂದ್ರಕುಮಾರ್ ಎಚ್.ಬಿ
ಪ್ರ: ಇಂಪನಾ ಪುಸ್ತಕ
ಸಂ: 9986465530

ವಿಮರ್ಶೆ

ಕಥಾ ಸಂಕಲನಗಳು, ಕಾವ್ಯ ಸಂಕಲನಗಳ ಮೂಲಕ ಕನ್ನಡ ಸಾಹಿತ್ಯ ಜಗತ್ತಿಗೆ ಪರಿಚಿತರಾಗಿರುವ ಇಂದ್ರಕುಮಾರ್ ಎಚ್.ಬಿ. ಅವರ ಮೂರನೇ ಕಾದಂಬರಿ 'ಎತ್ತರ'. ಗಾತ್ರದಲ್ಲಿಯಷ್ಟೇ ಅಲ್ಲ, ಮಹತ್ವಾಕಾಂಕ್ಷೆಯ ದೃಷ್ಟಿಯಿಂದಲೂ ಇದು ಅವರ ಹಿಂದಿನ ಎರಡು ಕಾದಂಬರಿಗಳಿಗಿಂತ ಎತ್ತರದಲ್ಲಿದೆ.

ತನ್ನ ಊರಿನಲ್ಲಿ, ಕೆಲಸದಲ್ಲಿ, ಕುಟುಂಬದಲ್ಲಿ ತಿರಸ್ಕೃತನಾದ ವ್ಯಕ್ತಿಯೊಬ್ಬ ತನಗೆ ಗೊತ್ತೇ ಇಲ್ಲದ ಕಾಡಿನ ಸೆರಗಿನ ಊರೊಂದಕ್ಕೆ ಹೊಸ ಬದುಕನ್ನು ಅರಸಿ ಹೋಗುತ್ತಾನೆ. ಆ ಜಗತ್ತಿಗೆ ಅವನು ತೆರೆದುಕೊಳ್ಳುತ್ತಿರುವ ಹಾಗೆಯೇ ಅವನಿಗೆ ಎದುರಾಗುವ ಅನುಭವಗಳು, ವ್ಯಕ್ತಿಗಳು, ಸಂಬಂಧಗಳು, ಸನ್ನಿವೇಶಗಳ ಮೂಲಕವೇ ಈ ಕಾದಂಬರಿ ವಿಸ್ತರಿಸಿಕೊಳ್ಳುತ್ತ ಹೋಗುತ್ತದೆ.

ಇದು ಒಮ್ಮುಖ ಚಲನೆಯಲ್ಲಿ ಬೆಳೆಯುತ್ತ ಹೋಗುವ ಕಥನವಲ್ಲ. ಭೂತ-ಭವಿಷ್ಯತ್-ವರ್ತಮಾನಗಳ ನಡುವೆ ಹೊಯ್ದಾಡುತ್ತ, ವಾಸ್ತವ-ಕನಸು-ಅಪೇಕ್ಷೆಗಳ ನಡುವೆ ತುಯ್ದಾಡುತ್ತ ಸಾಗುತ್ತದೆ. ಅಂಥದ್ದೊಂದು ಜಗತ್ತನ್ನು ಸೃಷ್ಟಿ ಮಾಡಿದ್ದು ಈ ಕಾದಂಬರಿಯ ಸಾಧನೆ. ಇಲ್ಲಿ ದಟ್ಟವಾದ ಕಾಡಿದೆ. ಗಟ್ಟಿಯಾದ ಹೆಂಗಸರಿದ್ದಾರೆ. ಬೆಟ್ಟದ ಮೇಲೊಂದು ನಿಗೂಢವಾದ ಮನೆಯಿದೆ. ಆ ಮನೆಯಷ್ಟೇ ನಿಗೂಢವಾದ ಮನುಷ್ಯರೂ ಇದ್ದಾರೆ. ಸತ್ತವರೂ ಒಮ್ಮೊಮ್ಮೆ ಕಾಣಿಸಿಕೊಳ್ಳುತ್ತಾರೆ; ಬದುಕಿದ್ದವರು ಸತ್ತಂತೆ ಭಾವ ಮೂಡಿಸುತ್ತಾರೆ. ಎಲ್ಲರೂ ತಮ್ಮ ಒಡಲೊಳಗೆ ಬಿಡಿಸಲಾಗದ ಗುಟ್ಟಿನ ಪೊಟ್ಟಣವನ್ನೇ ಇಟ್ಟುಕೊಂಡು ಅಡ್ಡಾಡುತ್ತಿದ್ದಾರೇನೋ ಎಂದು ಭಾಸವಾಗುತ್ತದೆ.

ಕ್ಯಾಮೆರಾ ಲೆನ್ಸ್ ಅನ್ನು ಫೋಕಸ್ ಮಾಡುತ್ತ ಹೋದಹಾಗೆ ಫ್ರೇಮಿನೊಳಗೆ ಬ್ಲರ್ ಆಗಿದ್ದ ದೃಶ್ಯ ಸ್ಪಷ್ಟವಾಗುತ್ತ ಹೋಗುವ ಹಾಗೆ ಈ ಕಾದಂಬರಿ ಆ ನಿಗೂಢ ಲೋಕವನ್ನು ಫೋಕಸ್ ಮಾಡುತ್ತ ಹೋಗುತ್ತದೆ. ಉತ್ತಮ ಪುರುಷ ನಿರೂಪಣೆಯಲ್ಲಿರುವ ಈ ಕಾದಂಬರಿ, ಮುಖ್ಯಪಾತ್ರದ ಕಣ್ಣಿನ ಮೂಲಕ ಆ ಜಗತ್ತಿನ ಬಿಡಿಬಿಡಿ ಚಿತ್ರಗಳನ್ನು ಸ್ಲೈಡ್ ಷೋ ರೀತಿಯಲ್ಲಿ ತೋರಿಸುತ್ತ ಹೋಗುತ್ತದೆ. ಹಾಗಾಗಿಯೇ ಈ ಕಥನ ಜಗತ್ತಿಗೊಂದು ಅಸ್ಪಷ್ಟತೆ ಮತ್ತು ನಿಗೂಢ ಗುಣ ಸಿಕ್ಕಿದೆ. ಇಂಥ ಜಗತ್ತನ್ನು ಕಟ್ಟಿಕೊಟ್ಟಿರುವುದು ಈ ಕಾದಂಬರಿಯ ಶಕ್ತಿ. ಆದರೆ ಅದನ್ನು ಮೀರಿ ಮಹತ್ವವಾದದ್ದೇನೂ ಮುಟ್ಟಲಾಗದೇ ಇರುವುದರಿಂದ ಆ ಶಕ್ತಿಯೇ ಈ ಕಾದಂಬರಿಯ ಮಿತಿಯೂ ಆಗಿಬಿಟ್ಟಿದೆ.

ಮುಖ್ಯಪಾತ್ರದ ಕಣ್ಣಿನಲ್ಲಿ ಕಂಡಷ್ಟೇ, ಕಂಡ ಹಾಗಷ್ಟೇ ನಾವು ಈ ಜಗತ್ತನ್ನು ಕಾಣುತ್ತೇವೆ. ಅವನು ದಿನವೂ ಸಾಗುವ ಅದೇ ಅದೇ ದಾರಿಯಲ್ಲಿ, ಅದೇ ಅದೇ ತಿರುವಿನಲ್ಲಿ, ಅದೇ ಅದೇ ವೃತ್ತಗಳಲ್ಲಿ ನಾವೂ ಸುತ್ತಬೇಕಾಗುತ್ತದೆ. ಆ ನಾಯಕನ ದೃಷ್ಟಿಯೂ ಸಹಜವಾದದ್ದಲ್ಲ. ಎದುರಿಗಿರುವ ವ್ಯಕ್ತಿ ಒಂದು ಹೆಜ್ಜೆ ಎತ್ತಿಟ್ಟರೆ ತನ್ನ ಕೊಲ್ಲಲೇ ಬಂದಂತೆ ಭಾಸವಾಗುವ, ಒಂದು ಮಾತು ಆಡಿದರೆ ಅದಕ್ಕೆ ನೂರು ಊಹೆ ಮಾಡಿಕೊಳ್ಳುವ ಅವನೂ ಒಂದು ರೀತಿಯಲ್ಲಿ ಭ್ರಮೆಯೊಳಗೆ ಸಿಕ್ಕಿಕೊಂಡವನು. ಈ ನಿರೂಪಣಾ ಶೈಲಿಗೆ ಇಷ್ಟು ದೊಡ್ಡ ಕಥನದ ಭಾರ ಹೊರುವಷ್ಟು ತ್ರಾಣವಿಲ್ಲ. ಹಾಗಾಗಿಯೇ ಒಂದು ಹಂತದ ನಂತರ ಇದರ ಓದು, ನಿಂತಲ್ಲೇ ಗಿರಗಿರ ತಿರುಗುತ್ತಿರುವ ಹಾಗೆ ಭಾಸವಾಗುತ್ತದೆ.

ಈ ಕಾದಂಬರಿಯ ಮೊದಲ ಭಾಗ ಇಂಥ ಅತಿಯಾದ ವಿವರಗಳಿಂದ ಬಳಲುತ್ತದೆ. ಮುಖ್ಯಪಾತ್ರದ ದೃಷ್ಟಿಯಿಂದಲೇ ಎಲ್ಲವನ್ನೂ ನೋಡುತ್ತ ಹೋಗುವುದರಿಂದ, ಎದುರಿನ ಪಾತ್ರಗಳ ಮನಸ್ಸಿನ ಒಳತೋಟಿ ನಮಗೆ ಸ್ಪಷ್ಟವಾಗಿ ದಕ್ಕುವುದೇ ಇಲ್ಲ. ಎಲ್ಲರೂ ನಾಯಕ ತನ್ನೊಳಗಿನ ಭ್ರಮಾವ್ಯಸನಕ್ಕೆ ತಕ್ಕಹಾಗೆ ಬಿಡಿಸಿಕೊಂಡ ಕ್ಯಾರಿಕೇಚರ್‌ಗಳ ಹಾಗೆ ಭಾಸವಾಗುತ್ತಾರೆ. ಈ ಜಗತ್ತು, ಇಲ್ಲಿನ ಪಾತ್ರಗಳು, ಪರಿಸ್ಥಿತಿಗಳು, ಮನುಷ್ಯ ಸಂಬಂಧಗಳು ಯಾವವೂ ಈ ಜಗತ್ತಿನದು ಅನಿಸದಿರುವುದರಿಂದ ಅವುಗಳ ಜೊತೆಗೆ ನಮಗೆ ಭಾವುಕ ಸಂಬಂಧ ಸ್ಥಾಪಿತಗೊಳ್ಳುವುದೇ ಇಲ್ಲ. ಆ ಅತಿವಾಸ್ತವದ ಜಗತ್ತಿನ ಮೂಲಕವೇ, ವಾಸ್ತವ ಪ್ರಪಂಚದ ವಿವರಗಳಿಂದ ಹೇಳಲು ಸಾಧ್ಯವಾಗದ ದರ್ಶನವನ್ನು ಕಟ್ಟಿಕೊಡಲು ಸಾಧ್ಯವಾಗಿದ್ದರೆ ಒಂದು ಯಶಸ್ವಿ ಕೃತಿ ಆಗಬಹುದಿತ್ತು.

ಕಾಡಿನೊಳಗಿನ ವಿಕ್ಷಿಪ್ತ ಲೋಕ, ಕಳ್ಳ ಸಾಗಾಣಿಕೆ, ಅರಣ್ಯ ನಾಶ, ಹಣದ ದಾಹ, ವೈಯಕ್ತಿಕ ಬದುಕಿನ ದುರಂತಗಳು ಎಷ್ಟೆಲ್ಲ ಆಘಾತಗಳ ನಂತರವೂ ಬದುಕು ಕಟ್ಟಿಕೊಳ್ಳುವ ಛಲ, ವಿಜ್ಞಾನದ ಅಪಸವ್ಯಗಳು, ಪ್ರೇಮ, ಕಾಮ, ಸ್ವಾರ್ಥ-ಈ ಎಲ್ಲವೂ ಇಲ್ಲಿನ ಕಥನ ಭಿತ್ತಿಯಲ್ಲಿವೆ. ಆದರೆ ಇವೆಲ್ಲವೂ ಕೊನೆಗೂ ನಾಯಕನ ಕಣ್ಣ ಫ್ರೇಮಿನಲ್ಲಿ ಹಾದುಹೋಗುವ ಛಾಯಾ ಚಿತ್ರಗಳೋ, ಅವನ ಡೈರಿಯಲ್ಲಿನ ಎರಡು ಸಾಲುಗಳೋ ಅಷ್ಟೇ ಆಗಲು ಸಾಧ್ಯವಾಗಿವೆ. ಹಾಗಾಗಿ ಅವುಗಳಿಗೊಂದು ಸ್ವತಂತ್ರವಾದ ಸ್ಪೇಸ್ ಇಲ್ಲ. ಅದೇ ಕಾರಣಕ್ಕೆ ಅವು ಹೊಮ್ಮಿಸಬಹುದಾಗಿದ್ದ ಜೀವನದರ್ಶನವೂ ಹೊಮ್ಮಿಲ್ಲ.

ಬಲು ಎತ್ತರದಿಂದ ನೋಡಿದಾಗ ಎಲ್ಲವೂ ಮನಮೋಹಕವಾಗಿ ಕಾಣಿಸುತ್ತದೆ. ಕಾಡು ಹಸಿರ ಸೆರಗಾಗಿ ಕಾಣಿಸುತ್ತದೆ. ಮನುಷ್ಯ ಸಣ್ಣಚುಕ್ಕಿಯಾಗಿ ಕಾಣಿಸುತ್ತಾನೆ. ಹಾಗೆ 'ಎತ್ತರದ ನೋಟ'ದಲ್ಲಿ ಕಟ್ಟಿಕೊಡಲಾದ ವಿಕ್ಷಿಪ್ತವೂ, ನಿಗೂಢವೂ ಆದ ಜಗತ್ತೊಂದು ಈ ಕಾದಂಬರಿಯಲ್ಲಿದೆ. ಆದರೆ ಎತ್ತರದಿಂದ ಕಾಣಲಾಗುವ ಸುಂದರ ಜಗತ್ತಿನೊಳಗೊಂದು ಸುತ್ತು ಹಾಕುವ, ನೀರ ಬೆಲಗಿನಲ್ಲಿ ಕಾಲುಬಿಟ್ಟು ಕೂತುಕೊಳ್ಳುವ, ಅನಾಮಿಕ ಹಕ್ಕಿಗಳ ಹಾಡಿಗೆ ಕಿವಿಯಾಗುವ, ತರಗೆಲೆಗಳ ಮೇಲೆ ಹರಿದುಹೋಗುವ ಹಾವಿಗೆ ಮೈಜುಮ್ ಅನಿಸಿಕೊಳ್ಳುವ 'ನಿಜ'ದ ಅನುಭವ ಪ್ರಪಂಚ ತುಸು ಹಿನ್ನೆಲೆಗೆ ಸರಿದಿದೆ.

ಮೊದಲ ಓದು

ಮನವನ್ನು ಆರ್ದ್ರಗೊಳಿಸುವ ಕವಿಸಮಯ

ಪು: 112 ₹110

ಮಾನವೀಯತೆಯ ಮಾತು
(ಕವನ ಸಂಕಲನ)
ಲೇ: ಪಾಲಾಕ್ಷಪ್ಪ ಎಸ್.ಎನ್.
ಪ್ರ: ಅಂತರಂಗ ಪ್ರಕಾಶನ, ಸಾಗರ
ಸಂ: 9972757725

ಕಥೆ-ಕಾದಂಬರಿಗಳ ಬಗ್ಗೆ ಮಾತಾಡುವಾಗ ಲೇಖಕರ ಅನುಭವ, ಅಧ್ಯಯನಶೀಲತೆ ಬಗ್ಗೆ ಚರ್ಚಿಸುತ್ತೇವೆ. ಆದರೆ, ಕಾವ್ಯಲೋಕದ ಬಗ್ಗೆ ಹೇಳುವಾಗ ಕವಿಯ ಭಾವಕೋಶವೇ ಪ್ರಧಾನವಾಗುತ್ತದೆ. ಒಂದು ಕವಿತೆ ಎಷ್ಟು ವಜನವಾಗಿದೆ ಎನ್ನುವುದು ಆತನ ಭಾವಕೋಶ ಎಷ್ಟು ಸಮೃದ್ಧವಾಗಿದೆ ಎನ್ನುವುದರ ಮೇಲೆಯೇ ಅವಂಬಿತವಾಗಿರುತ್ತದೆ.

ವೃತ್ತಿಯಿಂದ ಶಿಕ್ಷಕರಾಗಿರುವ, ಶಿವಮೊಗ್ಗ ಜಿಲ್ಲೆಯ ಪಾಲಾಕ್ಷಪ್ಪ ಎಸ್.ಎನ್. ಅವರ ಚೊಚ್ಚಲ ಕವನ ಸಂಕಲನ 'ಮಾನವೀಯತೆಯ ಮಾತು' ಇದಕ್ಕೊಂದು ನಿದರ್ಶನ. ಹದವಾದ ಭೂಮಿಗೆ ಬೀಳುವ ಬೀಜಗಳಂತೆ ಅವರ ಕವಿತೆಗಳು ಯಾವ ಪ್ರಯಾಸವೂ ಇಲ್ಲದೆ ಅಂತರಾಳಕ್ಕೆ ಇಳಿಯುತ್ತ ಹೋಗುತ್ತವೆ.

ತಮ್ಮ ಶಿಕ್ಷಕ ವೃತ್ತಿಯನ್ನು ಅವರು ಎಷ್ಟು ಆಳವಾಗಿ ಪ್ರೀತಿಸುತ್ತಾರೆ ಎನ್ನುವುದಕ್ಕೆ ಇಲ್ಲಿನ ಕೆಲವು ಕವಿತೆಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಮಕ್ಕಳಿಗೆ ತಿಳಿಹೇಳಬಿಚ್ಛಿಸುವ ವೈಜ್ಞಾನಿಕ ಸಂಗತಿಗಳನ್ನೂ ಅವರು ಕವಿತೆಯ ಶೀಶೆಯೊಳಗೆ ತುಂಬಿ ಆಕರ್ಷಕಗೊಳಿಸುತ್ತಾರೆ. ಕಾಗೆಯ ಸಾವು, ಹಾಡುಹಕ್ಕಿ, ಗೀಜಗನ ಗೂಡು, ಹಕ್ಕಿ ಸಂಸಾರ ಮೊದಲಾದ ಕವಿತೆಗಳು ಪಕ್ಷಿ ಸಂಕುಲದ ಮೇಲೆ ಅವರಿಗಿರುವ ಅಕ್ಕರೆಯನ್ನು ಪರಿಚಯಿಸುತ್ತವೆ. ಮಾನವೀಯ ಸಂಬಂಧಗಳು, ನಿಸರ್ಗದ ವಿಸ್ಮಯಗಳು, ಪಕ್ಷಿ ಸಂಕುಲದ ವೈಚಿತ್ರ್ಯಗಳನ್ನು ಅರ್ಥವತ್ತಾಗಿ, ಸರಳವಾಗಿ, ಸ್ನೇಹಮಯವಾಗಿ ನಿರೂಪಿಸಿರುವ, ಮಾನವೀಯತೆಯೇ ಪ್ರಧಾನವಾಗಿರುವ ಈ ಸಂಕಲನಕ್ಕೆ 'ಮಾನವೀಯತೆಯ ಮಾತು' ಶೀರ್ಷಿಕೆ ಅನ್ವರ್ಥವಾಗಿದೆ.

ಬಿಡಿ ಬರಹಗಳ ಅನುಭವ ಸಂಕಲನ



ಪು: 128 ₹150

ಸಭಾ ಮರ್ಯಾದೆ
ಲೇ: ಸಿ.ಬಿ.ಶೈಲಾ ಜಯಕುಮಾರ್
ಪ್ರ: ತೇಜಸ್ ಇಂಡಿಯಾ
ಸಂ: 9482200056

ವೃತ್ತಿಯಿಂದ ಇಂಗ್ಲಿಷ್ ಉಪನ್ಯಾಸಕಿಯಾಗಿರುವ ಸಿ.ಬಿ.ಶೈಲಾ ಬರವಣಿಗೆಯಿಂದ ಕನ್ನಡ ಸಾಹಿತ್ಯ ಲೋಕದಲ್ಲಿ ಪರಿಚಿತರು. ಈ ಹಿಂದೆ ಕೆಲ ಕಥೆ, ಕವನ ಸಂಕಲಗಳನ್ನು ರಚಿಸಿದ್ದ ಶೈಲಾ ಅವರು ಈಗ 'ಸಭಾ ಮರ್ಯಾದೆ' ಎಂಬ ಕೃತಿ ಪ್ರಕಟಿಸಿದ್ದಾರೆ. 18 ಲೇಖನಗಳನ್ನು ಒಳಗೊಂಡಿರುವ ಲೇಖನಗಳ ಸಂಗ್ರಹ ಇದಾಗಿದೆ. ತಮ್ಮ ನಿತ್ಯದ ಬದುಕಿಗೆ ಸಿಕ್ಕ ಅನುಭವಗಳನ್ನು ಚುಟುಕಾಗಿ ಹೇಳುತ್ತ ಹೋಗುತ್ತಾರೆ. ಚಿತ್ರದುರ್ಗದ ಆಕಾಶವಾಣಿಗಾಗಿ ಹಾಗೂ ಸಾಮಾಜಿಕ ಜಾಲತಾಣಕ್ಕಾಗಿ ಬರೆದ ಬರಹಗಳಿವು ಎಂದು ಲೇಖಕರು ಪ್ರಾರಂಭದಲ್ಲಿಯೇ ಹೇಳುತ್ತಾರೆ.

'ಭಾಷೆ ಬೇರೆ ಆತ್ಮವೊಂದೇ' ಎಂಬ ಲೇಖನದಲ್ಲಿ ಭಾಷಾಂತರದ ಎಡವಟ್ಟುಗಳನ್ನು, ಅನುವಾದವನ್ನು ನಮ್ಮದೇ ಮೂಲ ಎನ್ನುವಷ್ಟು ಸೊಗಸಾಗಿಸುವ ಪರಿಯನ್ನು ವಿವರಿಸುತ್ತಾರೆ. ಕನ್ನಡ ಅನುವಾದ ಜಗತ್ತಿಗೆ ದಿಗ್ಗಜರ ಕೊಡುಗೆಗಳನ್ನು ಸ್ಮರಿಸುತ್ತಾರೆ. ಭಾಷಾನುವಾದದ ಕುರಿತು ಮಾಹಿತಿಯೋಗ್ಯ ಬರಹ.

ಇಲ್ಲಿನ ಬಹುತೇಕ ಬರಹಗಳು ಎಲ್ಲರ ಬದುಕಿನಲ್ಲಿ ನಿತ್ಯವೂ ನೋಡಲು ಸಿಗುವ ವಿಷಯಗಳೇ ಆಗಿವೆ. ಹೀಗಾಗಿ ಬಹಳ ಬೇಗ ಮನಸ್ಸಿಗೆ ತಲುಪುತ್ತವೆ. 'ಬದಲಿ ವ್ಯವಸ್ಥೆ' ಎಂಬ ಲೇಖನ ನಾವು ಹೇಗೆ ಅಗತ್ಯಕ್ಕೆ ತಕ್ಕಂತೆ ಬದಲಾವಣೆಗಳಿಗೆ ಒಗ್ಗಿಕೊಳ್ಳುತ್ತೇವೆ ಎಂಬುದನ್ನು ವಿವರಿಸುತ್ತದೆ. ಗಟ್ಟಿಯಾದ ವಿವರಣೆಗಳೊಂದಿಗೆ, ಉದಾಹರಣೆಗಳೊಂದಿಗೆ ಲಘು ದಾಟಿಯ ಬರಹಗಳು ಇಲ್ಲಿವೆ. ಜಗತ್ತಿನಲ್ಲಿ ನಿತ್ಯವೂ ನಡೆಯುವ ನೂರೆಂಟು ಸಭೆ, ಸಮಾರಂಭಗಳು, ಅನುಕೂಲಕ್ಕೆ ತಕ್ಕಂತೆ ಅವುಗಳಲ್ಲಿನ ಮಾಪಾರ್ಡುಗಳು, ಸಭೆಗೆ ಇರಬೇಕಾದ ಗೌರವಗಳ ಕುರಿತು ವಿವರಿಸುವ 'ಸಭಾ ಮರ್ಯಾದೆ' ಲೇಖನ ಸಭೆಗಳ ಕುರಿತಾಗಿನ ಒಳನೋಟವನ್ನು ನೀಡುತ್ತದೆ.

ಒಟಿಟಿ ಗಾಳ ಧಾರಾವಾಹಿಗೆ ಅಕಾಲ

ಮೊದಲ ಪುಟದಿಂದ...

ಸ್ವಪ್ನ ಕೃಷ್ಣ

'ವಾಚ್ ಹಿಸ್ಟರಿ' ಬೆನ್ನ ಹಿಂದೆ ಹೋಗಿ ಅಭಿರುಚಿಗೆ ತಕ್ಕಂತೆ ಆಯ್ಕೆಗಳನ್ನೂ ಪದೇ ಪದೇ ಮುಂದಿಡುವ ಸೌಕರ್ಯ ಈ ಮಾಧ್ಯಮಕ್ಕೆ ನಿರಂತರವಾಗಿ ಅಂಟಿಕೊಳ್ಳುವಂತೆ ಮಾಡಲು ಪ್ರಚೋದಕವೂ ಆಗಿದೆ.

ಇದಕ್ಕೆ ಈಚಿನ ಅಂಕಿಅಂಶವೊಂದು ಇಂಬು ನೀಡುತ್ತಿದೆ. ಕಳೆದ ಅಕ್ಟೋಬರ್ ವೇಳೆಗೆ ಭಾರತದಲ್ಲಿ ಸುಮಾರು 46 ಒಟಿಟಿ ಪ್ರೊವೈಡರ್‌ಗಳಿರುವ ಮಾಹಿತಿಯಿದೆ. ಸದ್ಯ ಭಾರತದಲ್ಲಿ 45 ದಶಲಕ್ಷಕ್ಕೂ ಹೆಚ್ಚು ಒಟಿಟಿ ಚಂದಾದಾರರಿದ್ದು, 2023ರ ಕೊನೆಗೆ ಇದು 50 ದಶಲಕ್ಷ ಮುಟ್ಟುವ ನಿರೀಕ್ಷೆಯಿದೆ. ಒಂದೇ ವಿಧದ ಮಾಸಲು ಕಥೆಯ, ಏಕತಾನತೆ ಸೃಷ್ಟಿಸುವಂಥ ಧಾರಾವಾಹಿಗಳು ಮೂಲೆಗುಂಪಾಗುವ ಲಕ್ಷಣದಂತೆಯೂ ಈ ಅಂಕಿಸಂಖ್ಯೆ ಕಾಣಿಸುತ್ತಿದೆ.

ಆದರೆ ಟೀವಿ ಕಂಟೆಂಟ್‌ಗಳ ಸ್ಪರ್ಧೆಗೆ ಒಟಿಟಿ ಸಮವಲ್ಲ ಎಂಬುದು ಧಾರಾವಾಹಿ ನಿರ್ದೇಶಕಿ ಸ್ವಪ್ನಾ ಕೃಷ್ಣ ನಿಲುವು.

'ಧಾರಾವಾಹಿಗಳ ಒಲವು ಕಡಿಮೆಯಾಗಿಲ್ಲ'

'ಬದಲಾವಣೆ ಜಗದ ನಿಯಮ. ಟೀವಿ ಧಾರಾವಾಹಿಗೇ ಸೀಮಿತರಾದ ಜನ ಇದ್ದೇ ಇದ್ದಾರೆ. ಅವರ ಸಂಖ್ಯೆ ಬಹುಪಾಲಿದೆ. ಧಾರಾವಾಹಿಗಳಿಗಿರುವ ಆದ್ಯತೆ ಎಂದಿಗೂ ಕಡಿಮೆಯಾಗುವುದಿಲ್ಲ' ಎಂದು ಹೇಳುತ್ತಾರೆ ಸ್ವಪ್ನಾ ಕೃಷ್ಣ.

'ಎಲ್ಲಾ ವರ್ಗದವರನ್ನೂ ಗಮನದಲ್ಲಿಟ್ಟುಕೊಂಡು ಕಥೆ ಹೆಣೆಯುವುದೇ ಧಾರಾವಾಹಿಯ ವೈಶಿಷ್ಟ್ಯ. ಟೀವಿ ಎಂದರೆ ಕೌಟುಂಬಿಕ ವಾತಾವರಣ ತಂದುಕೊಡುವಂಥದ್ದು. ಆದರೆ ಒಟಿಟಿಯಲ್ಲಿ 'ಇಂಡಿವಿಷುಯಾಲಿಟಿ'ಗೆ ಪ್ರಾಶಸ್ತ್ಯ. ಇವರ ಪಾಲು ತುಂಬಾ ಕಡಿಮೆ. ಹೀಗಾಗಿ ದೊಡ್ಡ ಮಟ್ಟದಲ್ಲಿ ಬದಲಾವಣೆ ಆಗುವುದಿಲ್ಲ. ವಾರದ ಕೊನೆಯಲ್ಲಿ ಧಾರಾವಾಹಿಗಳಿಗೆ ಬರುವ ರೇಟಿಂಗ್‌ಗಳೇ ಇದಕ್ಕೆ ಸಾಕ್ಷಿ' ಎಂದು ಒಟಿಟಿ ಹಾಗೂ ಧಾರಾವಾಹಿ ನಡುವಿನ ವ್ಯತ್ಯಾಸ ಬಿಡಿಸಿಡುತ್ತಾರೆ ಸ್ವಪ್ನಾ.

'ಒಟಿಟಿಗೆ ಕಟ್ಟುಪಾಡುಗಳಿಲ್ಲ. ಜೊತೆಗೆ, ಕಾಲಕ್ಕೆ ತಕ್ಕಂತೆ ಧಾರಾವಾಹಿ ಫಾರ್ಮುಲಾಗಳೂ ಬದಲಾಗುತ್ತಿರುತ್ತವೆ. ಒಂದು ಉದಾಹರಣೆ ನೋಡಿ: ಶೋಷಣೆಗೆ ಒಳಗಾದ ಹೆಣ್ಣಿನ ಕಥೆ ಕೇಳಲು ಈಗ ಜನರಿಗೆ ಇಷ್ಟವಿಲ್ಲ. ಆದರೆ ನಾಯಕಿ, ಕಷ್ಟ ಮೆಟ್ಟಿನಿಂತು ಸಾಧನೆ ಹಾದಿಯಲ್ಲಿ ಹೋಗುವಂಥ ಕಥೆ ಹೇಳಿದರೆ ಮೆಚ್ಚುತ್ತಾರೆ. ಇದು ಈಗಿನ ಟ್ರೆಂಡ್' ಎನ್ನುತ್ತಲೇ, ಇದಕ್ಕೆ 'ಸತ್ಯ', 'ಅಂತರಪಟ'ದಂಥ ಧಾರಾವಾಹಿಗಳ ನಿದರ್ಶನ ನೀಡುತ್ತಾರೆ.

ಧಾರಾವಾಹಿಗೆ ಬಲ ತುಂಬಲು ಒಟಿಟಿ ತಂತ್ರ!

ಅತಿ ಕಡಿಮೆ ಅವಧಿಯಲ್ಲೇ ವ್ಯಾಪಕವಾಗಿರುವ ಒಟಿಟಿ ವೇಗ ಹಾಗೂ ಡಿಜಿಟಲ್ ಕ್ರಾಂತಿಯ ಅರಿವಿರುವ ಬಹುಪಾಲು ಟೀವಿ ಚಾನೆಲ್‌ಗಳು, ತಮ್ಮದೇ ಸ್ವಂತ ಒಟಿಟಿ ಹೊಂದುತ್ತಿರುವುದು ಇನ್ನೊಂದು ಬೆಳವಣಿಗೆ. ಆ ವೇದಿಕೆಯಲ್ಲಿಯೇ ತಮ್ಮ ಟೀವಿ ಚಾನೆಲ್‌ಗಳಲ್ಲಿ ಪ್ರಸಾರ ಮಾಡುವ ಧಾರಾವಾಹಿಗಳನ್ನೂ ಪ್ರಸಾರ ಮಾಡುತ್ತಿವೆ. ಧಾರಾವಾಹಿ, ಇತರೆ ಟೀವಿ ಕಾರ್ಯಕ್ರಮಗಳಿಗೆ ವೀಕ್ಷಕರನ್ನು ಸೆಳೆಯಲೆಂದೇ ಆರಂಭಿಸಿದ ಒಟಿಟಿ ಕೂಡ ಹೆಚ್ಚಿನ ನೋಡುಗರಿಲ್ಲದೇ ಸೋತ ಒಂದು ಗಟ್ಟಿ ಉದಾಹರಣೆ ಇಂತಹ ತಂತ್ರದ ವೈಫಲ್ಯಕ್ಕೆ ಸಾಕ್ಷಿಯಂತಿದೆ.

'ಒಟಿಟಿ ಬಂದಮೇಲೆ ಧಾರಾವಾಹಿ ವೀಕ್ಷಕರ ಸಂಖ್ಯೆ ಕುಗ್ಗಿದೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಮಾರುಕಟ್ಟೆ ಸಂಶೋಧನೆ ಕೂಡ ಇದನ್ನೇ ಬೊಟ್ಟು ಮಾಡಿ ತೋರುತ್ತಿದೆ. ನೋಡುಗರನ್ನಷ್ಟೇ ಅಲ್ಲ, ಟೀವಿಗೆ ಬರುವ ಜಾಹೀರಾತು ಆದಾಯದ ಪಾಲನ್ನೂ ಒಟಿಟಿ ಕಿತ್ತುಕೊಂಡಿದೆ. ಚಾನಲ್ ಸರ್ವೇ ಮಾಡಿದಾಗಲೂ, ಧಾರಾವಾಹಿ ನೋಡುಗರ ಸಂಖ್ಯೆ ಕಡಿಮೆಯಾಗಿರುವುದು ಕಂಡುಬಂದಿದೆ. ಹೀಗಾಗಿ ಚಾನಲ್‌ಗಳು ತಮ್ಮದೇ ಒಟಿಟಿ ವೇದಿಕೆ ಹೊಂದುವುದು ಈಗ ಅವಶ್ಯವಾಗಿದೆ' ಎಂದು ಹೇಳುತ್ತಾರೆ ಹೆಸರು ಹೇಳಲು ಇಚ್ಛಿಸದ ಚಾನಲ್ ಒಂದರ ಪ್ರಮುಖ ಹುದ್ದೆಯಲ್ಲಿರುವ ಸಿಬ್ಬಂದಿ.

ಟೀವಿ ಕಂಟೆಂಟ್‌ಗಳಿಗೆ ಒಟಿಟಿ ಒಡ್ಡಿರುವ ಸ್ಪರ್ಧೆ ಕುರಿತು ಅವರ ಇನ್ನಷ್ಟು ವಿವರಣೆ ಹೀಗಿದೆ: 'ಮನರಂಜನಾ ಮಾಧ್ಯಮದಲ್ಲಿ ಎರಡು ರೀತಿಯ ಸ್ಪರ್ಧೆ ಇರುತ್ತದೆ. ಒಂದು, ಮತ್ತೊಂದು ಚಾನಲ್ ಮೇಲಿನ ಸ್ಪರ್ಧೆ. ಎರಡನೆಯದು, ಬೇರೆ ಭಾಷೆಗಳ ಕಂಟೆಂಟ್‌ನ ಸ್ಪರ್ಧೆ. ಇದೀಗ ಒಟಿಟಿ ಪ್ರಬಲ ಪೈಪೋಟಿಯಾಗಿ ನಿಂತಿದೆ. ಈಗ 360 ಡಿಗ್ರಿ ಸ್ಪರ್ಧೆ'.

ಬಾರ್ಕ್ ಏಜೆನ್ಸಿ ಧಾರಾವಾಹಿಗಳಿಗೆ ನೀಡುವ ಟಿಆರ್‌ಪಿ ರೇಟಿಂಗ್‌ನ ಒಟ್ಟಾರೆ ಪ್ರಮಾಣವೇ ಈಚಿನ ವರ್ಷಗಳಲ್ಲಿ ಕುಸಿತ ಕಂಡಿದೆ.

ರೂಪಾ ರಾವ್

ತಾಜಾ ಮನರಂಜನೆಗೆ ಒತ್ತು

ಒಟಿಟಿಯ ಬಹುಆಯ್ಕೆಗಳು ಯುವಜನರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿವೆ. ಆ್ಯಕ್ಷನ್, ಹಾರರ್, ಡ್ರಾಮಾ, ಥ್ರಿಲ್ಲರ್, ಕಾಮಿಡಿ ಹಲವು ಜಾನರ್‌ಗಳ ತಾಜಾ ಆಯ್ಕೆಗಳು ಅಭಿರುಚಿ ತಣಿಸುವಂತಿವೆ. ಇಂಥದ್ದೊಂದು ಸಾಧ್ಯತೆ ಟೀವಿಯಲ್ಲಿದೆಯೇ ಎಂಬ ಪ್ರಶ್ನೆಯೂ ಏಳುತ್ತದೆ.

ಒಟಿಟಿ ಹೊಸ ಕಲಾವಿದರಿಗೂ ಮಣೆ ಹಾಕುತ್ತಿದೆ. ಟೀವಿಯಲ್ಲಿ ಅಸಾಧ್ಯವೆನಿಸಿದ ಹಲವು ಪ್ರಯೋಗ, ಪ್ರಯತ್ನಗಳಿಗೆ ಅವಕಾಶ ಒದಗಿಸುತ್ತಿದೆ. ಸದ್ಯ ವೆಬ್ ಸೀರೀಸ್‌ನಲ್ಲಿ ಇಂಥ ಪ್ರಯತ್ನಗಳು ಪ್ರತಿಫಲಿತವಾಗುತ್ತಿವೆ. ಕನ್ನಡದ ಸಿನಿಮಾ ನಿರ್ದೇಶಕಿ ರೂಪಾ ರಾವ್ ಕೂಡ ಒಟಿಟಿಗೆ ಅಂಥದ್ದೊಂದು ವೆಬ್ ಸೀರೀಸ್ ನಿರ್ದೇಶನ ಮಾಡುತ್ತಿದ್ದಾರೆ.

'ಇಷ್ಟು ವರ್ಷಗಳಲ್ಲಿ ಬೇರೇನನ್ನೋ ಹುಡುಕುತ್ತಿದ್ದ ಯುವಜನತೆಗೆ ಒಟಿಟಿ ಆಕಾಶವನ್ನೇ ಎದುರಿಗಿಟ್ಟಿದೆ. ವೆಬ್‌ಸೀರೀಸ್ ನೋಡುವವರ ಸಂಖ್ಯೆ ಹೆಚ್ಚಿದೆ. ಆದರೆ ಭಾರತದಲ್ಲಿ ಒಟಿಟಿಯಲ್ಲೂ ಗಟ್ಟಿಯಾಗಿ ಇನ್ನೂ ಯಾವುದೂ ಕುಳಿತುಕೊಳ್ಳುತ್ತಿಲ್ಲ. ಇನ್ನೂ ಪ್ರಾಯೋಗಿಕ ಹಂತದಲ್ಲಿದೆ. ಅದರಲ್ಲೂ ಕನ್ನಡದಲ್ಲಿ ಒಟಿಟಿ ಕಂಟೆಂಟ್‌ಗಳು ಪೂರ್ಣಪ್ರಮಾಣದಲ್ಲಿ ಸಿದ್ಧವಾಗಿಲ್ಲ. ಆದರೆ ಬದಲಾವಣೆಯ ಸಾಧ್ಯತೆಗಳು ಗಾಢವಾಗಿವೆ' ಎಂದು ಹೇಳುತ್ತಾರೆ. ಆದರೆ ಆಯ್ಕೆ ಜಾಸ್ತಿಯಾದಂತೆ ಗೊಂದಲವೂ ಹೆಚ್ಚಾಗುತ್ತದೆ ಎನ್ನುವುದು ಅವರ ಅಭಿಮತ.

ಕೆಲ ವರ್ಷಗಳ ಹಿಂದೆ ಕನ್ನಡದ ಕೆಲವು ಜನಪ್ರಿಯ ಧಾರಾವಾಹಿಗಳ ಟಿಆರ್‌ಪಿ 14 ರಿಂದ15ರವರೆಗೂ ತಲುಪುತ್ತಿತ್ತು. ಆನಂತರದ ವರ್ಷಗಳಲ್ಲಿ 11-12ಕ್ಕೆ ಇಳಿದದ್ದು ಮತ್ತೆ ಮೇಲೇರಲಿಲ್ಲ. ಈಚಿನ ಅಂಕಿ ಅಂಶವನ್ನೇ ಗಮನಿಸಿದರೆ, ಜನಪ್ರಿಯ ಧಾರಾವಾಹಿಯೊಂದರ ಗರಿಷ್ಠ ಟಿಆರ್‌ಪಿ 8 ಇದೆ. ಕ್ರಿಕೆಟ್- ಚುನಾವಣೆಯಂಥ ಕೆಲವು ತಾತ್ಕಾಲಿಕ ಕಾರಣಗಳ ಹೊರತಾಗಿಯೂ ಬಹುಪಾಲು ಧಾರಾವಾಹಿಗಳ ರೇಟಿಂಗ್ ಗಮನಾರ್ಹವಾಗಿ ಕುಗ್ಗಿರುವುದನ್ನು ಒಪ್ಪಲೇಬೇಕು.

ಇದಕ್ಕೆ ಕಾರಣಗಳೂ ಇಲ್ಲದಿಲ್ಲ. ಒಟಿಟಿಗೆಂದೇ ರೂಪಿಸುವ ಕಂಟೆಂಟ್‌ಗಳ ಬಜೆಟ್ ಹೆಚ್ಚಿದ್ದು, ಮೇಕಿಂಗ್ ಉತ್ತಮವಾಗಿರುತ್ತದೆ. ಕ್ರಿಯಾಶೀಲತೆಗೆ ಅವಕಾಶವೂ ಹೆಚ್ಚಿರುತ್ತದೆ. ಆದರೆ ಧಾರಾವಾಹಿ ಧಾಟಿಯೇ ಬೇರೆ. ಧಾರಾವಾಹಿಯಲ್ಲಿ ವರ್ಷಕ್ಕೆ ಕನಿಷ್ಠ 260 ಎಪಿಸೋಡ್‌ಗಳು ಅವಶ್ಯ. ಅದನ್ನು ನೀಡುವ ಧಾವಂತದಲ್ಲಿ ಒಟಿಟಿ ನೀಡುವಂಥ ತೀವ್ರತೆ ಕೊಡಲು ಸಾಧ್ಯವಾಗದೇ ಇರಬಹುದು. ಆದರೆ ಈಗ ಇದಕ್ಕೆ ಎದುರಾಳಿಗಳಂತೆ ಟೀವಿ ವಾಹಿನಿಗಳು ರಿಯಾಲಿಟಿ ಶೋಗಳನ್ನು ಸನ್ನದ್ಧಗೊಳಿಸುತ್ತಿವೆ.

ಮುಂದಿನ ದಿನಗಳಲ್ಲಿ ಇಂಟರ್‌ನೆಟ್ ಬಳಕೆ ಮತ್ತಷ್ಟು ಹೆಚ್ಚಾಗುವುದರಿಂದ ಒಟ್ಟಾರೆ ಒಟಿಟಿ ಅಭಿವೃದ್ಧಿ ದರ ಕೂಡ ಶರವೇಗ ಪಡೆಯಬಹುದಾಗಿದೆ. 2022ರಿಂದ 2030ರ ಅವಧಿಯಲ್ಲಿ ಜಾಗತಿಕವಾಗಿ ವಿಡಿಯೊ ಸ್ಟ್ರೀಮಿಂಗ್ ಮಾರುಕಟ್ಟೆ ವಾರ್ಷಿಕ ಶೇ 21.3ರಷ್ಟು ಅಭಿವೃದ್ಧಿ ದರ ಹೊಂದಲಿದೆ ಎಂಬ ಅಂದಾಜು ಮಾಡಲಾಗಿದೆ. 2023ರಲ್ಲಿಯೇ ವಾರ್ಷಿಕ ಅಭಿವೃದ್ಧಿ ದರ 36% ಏರಿಕೆಯಾಗುವ ನಿರೀಕ್ಷೆಯಿದೆ.

ಹೈಬ್ರಿಡ್ ಮನರಂಜನೆಯತ್ತ...

ಬೇರೆ ಮನರಂಜನಾ ಮಾಧ್ಯಮಗಳಂತೆ ಭದ್ರತೆ ಹಾಗೂ ಪೈರಸಿ ಪ್ರಶ್ನೆ ಒಟಿಟಿಯಲ್ಲೂ ಇದೆ. ಒಟಿಟಿಗೆ ಯಾವುದೇ ಸೆನ್ಸಾರ್‌ಶಿಪ್, ಕಡಿವಾಣ ಇಲ್ಲದಿರುವುದು ದುರ್ಬಳಕೆಯ ಮಟ್ಟವನ್ನು ಹೆಚ್ಚಿಸಬಲ್ಲದು. ಒಟಿಟಿ, ಸಾಮಾಜಿಕ ಬದುಕನ್ನು, ಕೌಟುಂಬಿಕ ವಾತಾವರಣವನ್ನು ಕಸಿದುಕೊಳ್ಳುತ್ತಿದೆಯೆಂಬ ದೂಷಣೆಯೂ ಅಲ್ಲಲ್ಲಿ ಕೇಳಿಬರುತ್ತಿದೆ.

ಇದೇ ಸಂದರ್ಭ, ಒಟಿಟಿ ಹಾಗೂ ಧಾರಾವಾಹಿ ನಡುವೆ ಸಾಮ್ಯತೆಯೂ ಕಾಣುತ್ತಿದೆ. ಒಟಿಟಿಯಲ್ಲಿ ಶೇ 40ರಷ್ಟು ಮಂದಿ ಪ್ರಾದೇಶಿಕ ಕಂಟೆಂಟ್ ವೀಕ್ಷಿಸುತ್ತಿರುವುದು ಇದಕ್ಕೆ ಉದಾಹರಣೆಯಂತಿದೆ.

ಹಾಗಿದ್ದರೆ ಭವಿಷ್ಯದ ಮನರಂಜನೆ ಏನಾಗಿರಬಹುದು? ಸಾಂಪ್ರದಾಯಿಕ ಮನರಂಜನಾ ಪದ್ಧತಿಗೆ ಸಡ್ಡು ಹೊಡೆದು ಒಟಿಟಿ ಏರುಗತಿಯಲ್ಲಿ ಹೋಗುವುದೇ ಅಥವಾ ಜಾಹೀರಾತು ಆದಾಯದ ಮೇಲೆ ಅವಲಂಬಿತವಾಗಿರುವ ವಾಹಿನಿಗಳು, ಟೀವಿ ಕಾರ್ಯಕ್ರಮ-ಧಾರಾವಾಹಿಗಳಿಗೆ ಒಟಿಟಿ ಬೆಂಬಲ ಪಡೆದ 'ಹೈಬ್ರಿಡ್ ಮನರಂಜನೆ'ಯನ್ನು ಮುನ್ನೆಲೆಗೆ ತರಬಹುದೇ? ಈ ಎರಡೂ ಆಯ್ಕೆಯನ್ನು ಹೊರತುಪಡಿಸಿ, ಜನರನ್ನು ಮರಳಿ ಧಾರಾವಾಹಿಗಳತ್ತ ಸೆಳೆಯುವಂಥ ಹೊಸ ಪ್ರಯತ್ನಗಳು ನಡೆಯಬಹುದೇ?

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಶ್ರೀಧರ ಗಸ್ತಿ ಧಾರವಾಡ ಅವರ ಚೌಡಕಿ ತಾಯವ್ವ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಸವಿತಾ ನಾಗಭೂಷಣ ಅವರ ಆಟ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಡಾರ್ಕ್ ಕಾಮಿಡಿಯ ನಗೆಬಿಲ್ಲು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವೃತ್ತಿ ರಂಗಭೂಮಿ ರಂಗಾಯಣ, ದಾವಣಗೆರೆ ಆಯೋಜಿಸಿದ್ದ ಕೃಷ್ಣಮೂರ್ತಿ ಗಾಂವ್ಕರ್ ನಿರ್ದೇಶನದ 'ಸಕ್ಕರೆ ತಿಂದ ಶಾಣ್ಯಾ' ನಾಟಕದ ದೃಶ್ಯ

ರಶ್ಮಿ ಎಸ್.

ಹಗಲುಗುರುಡು, ಇರುಳುಗುರುಡು ಯಾವ ಕುರುಡಿದ್ರೇನು, ಕನಸುಗಳಿಗೇನೂ ಕೊರತೆ ಇರೂದಿಲ್ಲ. ಜಾಣಗಿವುಡು, ಪೂರ್ಣ ಕಿವುಡು, ಯಾವುದಾದರೇನು ಮನಸಿನ ಮಾತುಗಳಿಗೆ ಕಿವಿ ಬೇಕಾಗಿಲ್ಲ. ಸಹಜ ಮರೆವು, ಮರೆಗುಳಿತನ, ಜಾಣ ಮರೆವು ಯಾವುದಾದರೇನು, ಸಾಂಗತ್ಯದಲ್ಲಿ ಎಲ್ಲವೂ ಸುಖಕರವೇ.

ಹಿಂಗ ತಮ್ಮ ತಮ್ಮ ಕೊರತೆಗಳನ್ನಿಟ್ಕೊಂಡೂ ಬದುಕನ್ನು ಸುಂದರಗೊಳಿಸಿಕೊಂಡಿರುವ ಕಥನವೇ 'ಸೂಪರ್ ಸಂಸಾರ'. ಏಳು ಪಾತ್ರಗಳ ಈ ನಾಟಕದ ಅಡಿಬರಹ ನಗೆಯ ಕಾಮನಬಿಲ್ಲು. ನಾಟಕ ಮುಗಿಯುವುದರಲ್ಲಿ ನಾವೆಲ್ಲ ಬಿದ್ದು ಬೆಂಡಾಗಿ ನಗುವುದರಲ್ಲಿ ದೇಹವೂ ಕಾಮನಬಿಲ್ಲಿನಂತೆ ಮಣಿದಿರುತ್ತದೆ.

> ಯಶವಂತ ಸರದೇಶಪಾಂಡೆ ಅನುವಾದಿಸಿ, ನಿರ್ದೇಶಿಸಿರುವ 'ಸೂಪರ್ ಸಂಸಾರ', ಸರದೇಶಪಾಂಡೆ ಅನುವಾದಿಸಿ, ಕೃಷ್ಣಮೂರ್ತಿ ಗಾಂವ್ಕರ್ ನಿರ್ದೇಶಿಸಿರುವ 'ಸಕ್ಕರೆ ತಿಂದ ಶಾಣ್ಯಾ' ನಾಟಕಗಳು ಉತ್ತರ ಕರ್ನಾಟಕದ ಆಡುಭಾಷೆಯೊಂದಿಗೆ ಪ್ರೇಕ್ಷಕರನ್ನು ನಗಿಸುತ್ತವೆ.

ಎರಡು ಸಂಸಾರಗಳ ನಡುವಿನ ಕತೆ. ಕಿವುಡು ದಾದಾನ ಕುಟುಂಬದಲ್ಲಿ, ಇರುಳುಗುರುಡಿರುವ ಯುವಕ, ಮಾತನಾಡುವಾಗ ಉಗ್ಗುವ ಸಹೋದರ, ಎಲ್ಲ ಸರಿ ಇರುವ ಅತ್ತಿಗೆ; ಸಂವಹನಕ್ಕಾಗಿ ಪರಸ್ಪರ ಅವಲಂಬಿಸಬೇಕಿರುವುದು ಅತ್ಯಗತ್ಯ. ಈ ಅವಲಂಬನೆಯೇ ಇವರನ್ನು ಕೂಡಿ ಬಾಳುವಂತೆ ಮಾಡಿದೆ.

ಎದುರು ಮನೆಯಲ್ಲಿರುವ ಕನಸುಕಂಗಳ ಚೆಲುವೆಯದ್ದು ಇನ್ನೊಂದು ಕುಟುಂಬ. ಅರಳು ಕಣ್ಣಿದ್ದರೂ ಹಗಲಿನಲ್ಲಿ ಏನೂ ಉಪಯೋಗವಿಲ್ಲ. ಹಗಲುಗುರುಡು. ಮರೆಗುಳಿ ಅಪ್ಪ, ಇವರಿಬ್ಬರ ನಡುವೆ ಸಮನ್ವಯ ಸಾಧಿಸುವ ಮನೆಯ ಯಜಮಾನ್ತಿ.

ತಮ್ಮ ಸಂಗಾತಿಯ ಕೊರತೆಗಳನ್ನು ಅರಿತ ನಂತರವೂ ಸಂಸಾರ ಸುಖಕರವಾಗಿ ಸಾಗಿಸಿಕೊಂಡು ಬಂದ ಗುಟ್ಟು ಹೇಳುತ್ತಲೇ ಪ್ರೇಕ್ಷಕರು ಹನಿಗಣ್ಣಾಗುವಂತೆ ಮಾಡುತ್ತಾರೆ.

ಮರೆವನ್ನು ಮರೆಮಾಚಲು ಅಹಂಕಾರದ ಪರದೆ ಹೊದೆಯುವುದು, ಕಿವುಡುತನದಿಂದ ಕಾಡುವ ಕೀಳರಿಮೆ ಹೋಗಿಸಲು ಪ್ರತಿಸಲವೂ 'ನಾನು ಹೇಳೂದೇನಂದ್ರ.' ಎಂದು ಆರಂಭಿಸುವ ಮಾತು, ಮರೆಗುಳಿ ಗಂಡ, ಮಗಳ ನಡುವೆ ಸಿಡುಕುವಂತಾದ ಗೃಹಿಣಿ, ಸಂಯಮವನ್ನೇ ಹೊದ್ದು ತಂದ ಇನ್ನೊಂದು ಕುಟುಂಬದ ಯಜಮಾನ್ತಿಯ ನಡುವಿನ ಜಗಳ ಇವೆಲ್ಲವೂ ನಗೆಬುಗ್ಗೆ ಹುಟ್ಟಿಸುತ್ತವೆ. ಆದರೆ ನಕ್ಕ ನಂತರವೂ ಮನೆಗೆ ಹೋಗುವಾಗ, ನಾವೂ ಎಷ್ಟೆಲ್ಲ ಸನ್ನಿವೇಶಗಳಲ್ಲಿ ಜಾಣಮರೆವು, ಜಾಣಕಿವುಡುತನ ಪ್ರದರ್ಶಿಸಿರ್ತೀವಿ? ಮತ್ತೆ ಎಲ್ಲೆಲ್ಲಿ ಇವುಗಳನ್ನು ಬಳಸಿಕೊಳ್ಳಬಹುದಿತ್ತು ಅನ್ನುವ ಪಾಠವನ್ನೂ ನೀಡುತ್ತವೆ.

ಮುಂಬೈ ಮೂಲದ ಕಲಾವಿದ ಸಂತೋಷ ಪವಾರ್ ಅವರ ರಚನೆಯನ್ನು ಕನ್ನಡಕ್ಕೆ ಅನುವಾದಿಸಿ, ರಂಗಭೂಮಿಗೆ ನಿರ್ದೇಶಿಸಿದ್ದು ಯಶವಂತ ಸರದೇಶಪಾಂಡೆ ಅವರು. ಗುರು ಇನ್‌ಸ್ಟಿಟ್ಯೂಟ್ ತಂಡ ಈ ನಾಟಕವನ್ನು ಪ್ರಸ್ತುತಪಡಿಸಿದೆ. ಕಿವುಡು ದಾದಾನ ಪಾತ್ರದಲ್ಲಿ ತಮ್ಮ ಅಮಾಯಕ ನಗೆಯಿಂದಲೇ ಪ್ರೇಕ್ಷಕರು ಬಿದ್ದುಬಿದ್ದು ನಗುವಂತೆ ಮಾಡುತ್ತಾರೆ. ಶಿಲ್ಪಾ ಪಾಂಡೆ, ಪೂಜಾ ಜಹಗೀರದಾರ ಸಹಜ ನಟನೆಯಿಂದಾಗಿ ನಮ್ಮ ಮನೆಯ ಸಾಲಿನಲ್ಲಿಯೇ ಇರುವ ಕುಟುಂಬಗಳಿವು ಎಂಬ ಭಾವನೆ ಮೂಡಿಸುತ್ತಾರೆ. ಪ್ರದೀಪ ಮುಧೋಳ, ಕೃಷ್ಣಮೂರ್ತಿ ಗಾಂವ್ಕರ್, ರವಿ ಕುಲಕರ್ಣಿ ಇವರೆಲ್ಲರ ನಟನೆಯೂ ಅಷ್ಟೇ ಸಹಜವಾಗಿ ಮೂಡಿಬಂದಿದ್ದು, ಲೈಟುಗಳು ಆನ್, ಆಫ್ ಆದಾಗಲೇ ದೃಶ್ಯದಿಂದ ಪ್ರೇಕ್ಷಕರು ಆಚೆ ಬಂದಂತಾಗುತ್ತದೆ.

ಇನ್ನೊಂದು ಕಹಿನಗೆಯೊಂದಿಗೆ ಬರುವ 'ಸಕ್ಕರೆ ತಿಂದ ಶಾಣ್ಯಾ' ನಾಟಕವನ್ನು ದಾವಣಗೆರೆಯ ವೃತ್ತಿರಂಗಭೂಮಿ ರಂಗಾಯಣ ಪ್ರಸ್ತುತಪಡಿಸಿದೆ. ಕನ್ನಡದ ಜಾಯಮಾನಕ್ಕೆ ಹೊಸತು ಎನ್ನುವಂಥ ಡಾರ್ಕ್ ಕಾಮಿಡಿಯನ್ನು ರಂಗರೂಪಕ್ಕೆ ತಂದಿದ್ದಾರೆ. ಕಾಂಡೋಮ್ ಬಳಕೆಯ ದೃಶ್ಯವನ್ನೂ ನಗೆಯ ವಸ್ತುವಾಗಿಸಿ, ಸ್ವಾತಂತ್ರ್ಯ ಮತ್ತು ಸ್ವೇಚ್ಛೆಯ ನಡುವಿನ ಗೆರೆಯನ್ನು ಸ್ಪಷ್ಟವಾಗಿ ಎಳೆಯುತ್ತಾರೆ. ಪ್ರಸ್ತುತ ಸಮಾಜದ ಯುವಕ–ಯುವತಿಯರ ತಲ್ಲಣವನ್ನು ನಾಟಕ ಬಿಡಿಸಿಡುತ್ತದೆ. ಜೊತೆಗೆ ಒಂದು ಕಾಲದ ಮೌಲ್ಯ, ಈ ಕಾಲದವರ ಆಯ್ಕೆ ಇವೆರಡರ ನಡುವಿನ ಸಂಘರ್ಷದಲ್ಲಿ ಹೆತ್ತವರು ಬಳಲುವ ಸ್ಥಿತಿಯನ್ನೂ ಎದುರಿಗಿಡುತ್ತದೆ.

ಎರಡೂ ನಾಟಕಗಳ ಜೀವಾಳ, ಉತ್ತರ ಕರ್ನಾಟಕದ ಆಡುಭಾಷೆ. ಕರಾರುವಾಕ್ಕಾಗಿ ಹೇಳಬೇಕೆಂದರೆ, ಧಾರವಾಡದ ಮಾಳಮಡ್ಡಿಯ ನುಡಿ. ಈ ಭಾಷೆಯಿಂದಾಗಿಯೇ ಯಾವುದೂ ಅಸಭ್ಯ ಎನಿಸದಷ್ಟು ಸಹಜವಾಗಿ ಮೂಡಿಬಂದಿವೆ.

ವಿದ್ಯಾಸಾಗರ ಅಧ್ಯಾಪಕ ಅವರ ಮೂಲ ನಾಟಕವನ್ನು ಯಶವಂತ ಸರದೇಶಪಾಂಡೆ ಭಾವಾನುವಾದ ಮಾಡಿದ್ದಾರೆ. ನಿರ್ದೇಶನ ಕೃಷ್ಣಮೂರ್ತಿ ಗಾಂವ್ಕರ್ ಅವರದ್ದು. ಮನೆ ಯಜಮಾನನ ಪಾತ್ರದಲ್ಲಿ ಕೃಷ್ಣಮೂರ್ತಿ ಗಾಂವ್ಕರ್ ಜೀವ ತುಂಬುತ್ತಾರೆ. ಹೆಂಡತಿಯ ಪಾತ್ರದಲ್ಲಿ ಪೂಜಾ ಜಹಗೀರದಾರ ಗಮನ ಸೆಳೆಯುತ್ತಾರೆ.

ಎರಡೂ ನಾಟಕಗಳಿಗೆ ಕಲಾವಿದ ನಾಗರಾಜ ಪಾಟೀಲ ಬೆಳಕಿನ ವ್ಯವಸ್ಥೆ ನೋಡಿಕೊಂಡರೆ ತಂತ್ರಜ್ಞನಾಗಿ ಜೀವನ್ ಫರ್ನಾಂಡಿಸ್ ಜೀವ ತುಂಬಿದ್ದಾರೆ.

ಹೊಟ್ಟೆ ತುಂಬ ನಕ್ಕು, ಕಣ್ಣಪಸೆ, ಮುಂಗೈಯಿಂದ ಒರೆಸಿಕೊಂಡು, ಹಗುರವಾಗಿ ಆಚೆ ಬರುವ ನಿರೀಕ್ಷೆಯಂತೂ ಸುಳ್ಳಾಗದು.

'ಅವಳ ನೆರಳು' ನಾಟಕದ ದೃಶ್ಯ

ಬೆಳಕಿನ ವಿನ್ಯಾಸದಲ್ಲಿ ಕಾಡುವ 'ಅವಳ' ನೆರಳು

ರಂಗಭೂಮಿ

ಎನ್. ಸಂಧ್ಯಾರಾಣಿ

'Don't tell me the moon is shining. Show me the glint of light on broken glass' – ಆಂಟನ್ ಚೆಕೋವ್ ಹೇಳಿದ ಈ ಮಾತನ್ನು ರಂಗಕರ್ಮಿ ಅಹಲ್ಯಾ ಬಲ್ಲಾಳ್ ಮತ್ತು ನಾನು ಆ ದಿನ ಬೆಳಿಗ್ಗೆ ತಾನೆ ಚರ್ಚಿಸಿದ್ದೆವು. ಯಾವುದೇ ಕಲಾಪ್ರಕಾರದಲ್ಲಿ 'ತೋರಿಸುವುದು' ಮತ್ತು 'ಹೇಳುವುದು' ಎರಡೂ ಮೆಟ್ಟಿಲುಗಳೇ. ಹೇಳುವುದು ಮೊದಲ ಮೆಟ್ಟಿಲಲ್ಲಿದ್ದರೆ, ಇನ್ನೊಂದಿಷ್ಟು ಎತ್ತರದಲ್ಲಿರುವುದು ತೋರಿಸುವುದು. ಹೇಳುವುದು ಸುಲಭ, ಆತ ಅದೆಷ್ಟು ಒಳ್ಳೆಯವ ಅಥವಾ ಕೆಟ್ಟವ ಎಂದು ಒಂದೇ ವಾಕ್ಯದಲ್ಲಿ ಹೇಳಿಬಿಡಬಹುದು. ಆದರೆ ಆಗ ಓದುಗ ಅಥವಾ ನೋಡುಗರ ಕಲ್ಪನೆ ಮತ್ತು ಆಲೋಚನೆಗಳಿಗೆ ನಾವೇ ಮಿತಿಯನ್ನು ಹಾಕಿದಂತಾಗುತ್ತದೆ. ಆದರೆ ಹಾಗೇನೂ 'ಹೇಳದೆ' ದೃಶ್ಯಗಳನ್ನು, ಸನ್ನಿವೇಶಗಳನ್ನು ಕಟ್ಟುತ್ತಾ ಹೋಗಿ ನಾವು ಹೇಳಬೇಕಾಗಿರುವುದು ಓದುಗರಿಗೆ ತಾನೇ ಸ್ಫುರಿಸುವ ಹಾಗೆ ಮಾಡುವುದು ಕಲಾವಿದರಿಗೆ ನಿಜವಾದ ಸವಾಲು, ಅದೇ ಸಂಜೆ, ಅಹಲ್ಯಾ ಇಂತಹ ಸವಾಲನ್ನು ಕೈಗೆತ್ತಿಕೊಂಡು, ಅದನ್ನು ಸಮರ್ಥವಾಗಿ ನಿಭಾಯಿಸಿದ್ದರು.

ಜಯಲಕ್ಷ್ಮಿ ಪಾಟೀಲ್ ಸಾರಥ್ಯದ 'ಈ ಹೊತ್ತಿಗೆ' ಸಂಸ್ಥೆಗೆ ಈಗ ದಶಕದ ಸಂಭ್ರಮ. ಮೊದಲು ತಿಂಗಳಿಗೊಮ್ಮೆ ಸೇರಿ ಒಂದು ಪುಸ್ತಕವನ್ನು ಕುರಿತು ಚರ್ಚಿಸುವ ಉದ್ದೇಶವನ್ನಿಟ್ಟುಕೊಂಡು ಪ್ರಾರಂಭವಾದ ಸಂಸ್ಥೆ ನಂತರ ಹಲವು ಮಗ್ಗಲುಗಳಿಗೆ ಹೊರಳಿಕೊಂಡಿದೆ. ಕಮ್ಮಟಗಳು, ಕಥಾಪ್ರಶಸ್ತಿ, ವಿಚಾರ ಸಂಕಿರಣಗಳು, ಕಾವ್ಯ ಪ್ರಶಸ್ತಿ- ಹೀಗೆ ಸಾಹಿತ್ಯ ಪರಿಚಾರಿಕೆಯ ಹಲವಾರು ಟಿಸಿಲುಗಳಲ್ಲಿ ತೊಡಗಿಸಿಕೊಂಡು ಬಂದಿದೆ. ಈ ದಶಮಾನೋತ್ಸವದ ಸಂಭ್ರಮಕ್ಕಾಗಿ ನಡೆದದ್ದು ರವೀಂದ್ರನಾಥ್ ಟ್ಯಾಗೂರರ ಕೆಲವು ಕತೆಗಳನ್ನಾಧರಿಸಿದ ರಂಗ ಪ್ರಯೋಗ 'ಅವಳ ಕಾಗದ'. ಇದರ ರಂಗರೂಪ ಸುಧಾ ಆಡುಕಳ, ವಿನ್ಯಾಸ ಶ್ವೇತಾ ಹಾಸನ, ಪರಿಕಲ್ಪನೆ ಮತ್ತು ನಿರ್ದೇಶನ ಶ್ರೀಪಾದ ಭಟ್ ಮತ್ತು ಪ್ರಸ್ತುತಿ ಅಹಲ್ಯಾ ಬಲ್ಲಾಳ್.

ಹೆಣ್ಣಿನ ಭಾವುಕತೆ ಮತ್ತು ಬುದ್ಧಿವಂತಿಕೆ ಅವಳಿಗೆ ವರವೋ ಅಥವಾ ಶಾಪವೋ? ಈ ಪ್ರಯೋಗ ಶುರುವಾಗುವುದು ಯಾವುದೋ ಕಡಲ ದಂಡೆಯಲ್ಲಿ. ಮರಳಿನಲ್ಲಿ ಪಾದದ ಆಸರೆಕೊಟ್ಟು, ಪ್ರೀತಿಯಿಂದ, ಆಸೆಯಿಂದ, ಆಸ್ಥೆಯಿಂದ 'ಅವಳು' ಕಟ್ಟುವ ಗೂಡುಗಳು ಯಾವುದೂ ಸರಿಯಾಗಿ ಬರುವುದೇ ಇಲ್ಲ. ಅಷ್ಟು ಜಾಣೆ, ಕವಯಿತ್ರಿಗೆ ಗೂಡು ಕಟ್ಟಿಕೊಳ್ಳುವುದಕ್ಕೆ ಆಗುವುದೇ ಇಲ್ಲ. ಆ ಪ್ರಯತ್ನ ನಿಲ್ಲಿಸಿ ಒಂದೂವರೆ ದಶಕ ಸಂಸಾರ ಮಾಡಿದ ಗಂಡನೊಡನೆ ಆಡಲಾಗದ ಅಥವಾ ಅವನೆಂದೂ ಕೇಳಲೊಲ್ಲದ ಮಾತುಗಳನ್ನು 'ಅವಳು' ಅಕ್ಷರವಾಗಿಸತೊಡಗುತ್ತಾಳೆ. ಕೋಲ್ಕತ್ತದ ಶ್ರೀಮಂತ ಜಮೀನ್ದಾರರ ಮನೆಗೆ ದೂರದ ಹಳ್ಳಿಯಿಂದ ತಂದ ವಧು ಆಕೆ, ಮನೆಯ ಛೋಟಿ ಬಹು, ಎರಡನೆಯ ಸೊಸೆ. ಮದುವೆಯಲ್ಲಿ ಮುಖ್ಯವಾಗುವುದು ಅವಳ ರೂಪ ಮಾತ್ರ. ಅವಳ ವಿದ್ಯೆ, ಬುದ್ಧಿವಂತಿಕೆ, ಬರವಣಿಗೆ ಯಾವುದೂ ಅಲ್ಲ. ಹಾಗಾಗಿ ಸಂಸಾರದಲ್ಲೂ ಅವಳ ಅಸ್ತಿತ್ವ ಎಂದರೆ ರೂಪ ಮಾತ್ರ. ಇಲ್ಲಿ 'ಅವಳು' ಸರ್ವನಾಮವಲ್ಲ, ಅದೊಂದು ನಾಮವಾಚಕ. ಏಕೆಂದರೆ ಯಾರದೋ ಮಗಳು, ಹೆಂಡತಿ, ಸೊಸೆ, ಓರಗಿತ್ತಿ, ಅಕ್ಕ ಆದ 'ಅವಳಿಗೆ' ಸ್ವಂತದ್ದಾದ ಒಂದು ಹೆಸರೂ ಇರುವುದಿಲ್ಲ. ಅವಳ ಬಂಡಾಯವೂ ಅಷ್ಟೇ ಘೋಷಣೆಯಲ್ಲ, ತಣ್ಣಗಿನ ಪ್ರತಿಭಟನೆ.

ಸರೋವರದ ಹಾಗೆ ಯಾವಾಗಲೂ ಶಾಂತ ಮತ್ತು ಅಗೋಚರ ಎಲ್ಲೆಕಟ್ಟಿನೊಳಗಿರುವ ಅಹಲ್ಯಾ, ನಾಟಕದ ಛೋಟಿಬಹು ಆಗಿ ನದಿಯಾಗುತ್ತಾರೆ, ಜಲಪಾತವಾಗುತ್ತಾರೆ, ಭೋರ್ಗರೆಯುತ್ತಾರೆ ಮತ್ತು ಕಡಲಿನ ಪಕ್ಕ ಬಂದು ಕಡಲೇ ಆಗುತ್ತಾರೆ. ಈ ಪರಿವರ್ತನೆ, ಅವರ ಧ್ವನಿಯಲ್ಲಿ ಭಾಷೆಗೆ ಸಿಕ್ಕುವ ಲಯ ಮತ್ತು ಚಾಕುವಿನ ತೀಕ್ಷ್ಣತೆ ಹೆಣ್ಣಿನ ಬದುಕಿನ ದುರಂತ ಅಭಿವ್ಯಕ್ತಗೊಂಡರೆ, ಅವರ ದೇಹಚಲನೆ ಹಸುವಿನಲ್ಲಿ, ಹಠದಲ್ಲಿ, ಭಾವಭಂಗಿಗಳಲ್ಲಿ, ಸೀರೆ, ಚಪ್ಪಲಿಗಂಟಿದ ಅಗೋಚರ ಮರಳು ಕಣಗಳನ್ನು ಕೊಡವಿಕೊಳ್ಳುವ ಲಾಲಿತ್ಯದಲ್ಲಿ ವ್ಯಕ್ತಗೊಳ್ಳುತ್ತದೆ. ಈ ಸಾಧ್ಯತೆಯೊಡನೆ ಇಟ್ಟು ನೋಡುವಾಗ ಇಡೀ ರಂಗವನ್ನು ಬಳಸಿಕೊಳ್ಳುವ ಹಾಗೆ ವಿನ್ಯಾಸ ಮಾಡಿ, ನಾಟಕಕ್ಕೊಂದಿಷ್ಟು ಬಿರುಸು ತರಬಹುದಿತ್ತೇನೋ ಅನ್ನಿಸುತ್ತದೆ. ಏಕೆಂದರೆ ಕಡಲದಂಡೆಯಲ್ಲಿ ಕುಳಿತ ಅವಳು ಮುದುಡಿ ಕೂರುವುದನ್ನು ನಿರಾಕರಿಸಿದವಳು.

ಬೆಳಕಿನ ವಿನ್ಯಾಸದ ನಮೂನೆ

ಕೆಲವು ಸಲ ಏನೂ ಅಂದುಕೊಳ್ಳದೆ ಪ್ರಯೋಗಗಳಿಗೆ ವಿಶೇಷತೆಯೊಂದು ಒದಗಿ ಬಂದುಬಿಡುತ್ತದೆ. ಈ ಪ್ರಯೋಗಕ್ಕೆ ಹಾಗೆ ಒದಗಿ ಬಂದ ವಿಶೇಷ ಕಪ್ಪಣ್ಣ ಅವರ ಬೆಳಕಿನ ವಿನ್ಯಾಸ. ಇದು ಪ್ರಯೋಗಕ್ಕೆ ಒಂದು ಹಿನ್ನೆಲೆ ಮತ್ತು ಭೂತಕಾಲ ಎರಡನ್ನೂ ಕಟ್ಟಿಕೊಟ್ಟಿತ್ತು. ನಾಟಕದ ನಂತರವೂ ನಾಟಕ ನಮ್ಮೊಳಗಿನಲ್ಲಿ ಮುಂದುವರೆಯುತ್ತಲೇ ಇತ್ತು.



ನಿಂಗನಗೌಡ ಶಿವನಗೌಡ ಪಾಟೀಲ

> ಸೌಲಭ್ಯಗಳು ಮರೀಚಿಕೆ ಎನ್ನುವ ಸಂದರ್ಭದಲ್ಲೂ ಸ್ಥಳೀಯ ಆಟಗಳಲ್ಲಿ ನುರಿತರನ್ನು ತಯಾರು ಮಾಡುತ್ತಿದ್ದವರು 'ಮಲ್ಲಕಂಬದ ಪಾಟೀಲ'ರು. ಮಲ್ಲಕಂಬವು ಈಗ ಖೇಲೊ ಇಂಡಿಯಾದಲ್ಲಿ ಸೇರ್ಪಡೆಯಾಗಿದೆ. ಇದಕ್ಕೆ ಅವರ ಕ್ರೀಡಾ ಪ್ರೀತಿಯೇ ಕಾರಣ. ಪಾಟೀಲರು ಇನ್ನು ಬರೀ ನೆನಪು...

ಗ್ರಾಮೀಣ ಕ್ರೀಡೆಗಳ ಕೊಂಡಿ ಮಲ್ಲಕಂಬ ಪಾಟೀಲರು

ನುಡಿ ನಮನ

ಗಿರೀಶ ದೊಡ್ಡಮನಿ

ಗದಗ ಜಿಲ್ಲೆಯ ಲಕ್ಷ್ಮೇಶ್ವರ ಮಲ್ಲಕಂಬದ ನೆಲೆಯೂರಾಗಲು ಕಾರಣರಾದವರು ನಿಂಗನಗೌಡ ಶಿವನಗೌಡ ಪಾಟೀಲರು. ಮಲ್ಲಕಂಬ ಕ್ರೀಡೆಯ ಮೂಲಕ ಗ್ರಾಮೀಣ ಭಾಗದ ದೊಡ್ಡ ಯುವಸಮುದಾಯವೊಂದನ್ನು, ದೇಹ ಕಟ್ಟಿ ದೇಶ ಕಟ್ಟಲು ಅಣಿ ಮಾಡಿದ ಶ್ರೇಯ ಅವರದ್ದು. ಅದಕ್ಕಾಗಿಯೇ ಅವರು 'ಮಲ್ಲಕಂಬದ ಪಾಟೀಲರು' ಎಂದೇ ಪರಿಚಿತರು.

ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ್ದ ಅವರು ಅದೇ ವಿಷಯದ ಪ್ರಾಧ್ಯಾಪಕರಾಗಬಹುದಿತ್ತು. ಆದರೆ, ಪಾಟೀಲರು ಎಂ.ಎ. ಜೊತೆಗೆ ದೈಹಿಕ ಶಿಕ್ಷಣ ಪದವಿ (ಬಿ.ಪಿ ಇಡಿ) ಕೂಡ ಮಾಡಿಕೊಂಡಿದ್ದರು. 1967ರಲ್ಲಿ ಲಕ್ಷ್ಮೇಶ್ವರದಲ್ಲಿ ಮುನ್ಸಿಪಲ್ ಕಾಲೇಜು ಆರಂಭವಾಗಿತ್ತು. ಆ ಸಂದರ್ಭದಲ್ಲಿ ಶಿರಹಟ್ಟಿಯ ಹೈಸ್ಕೂಲಿನಲ್ಲಿ ಪಾಟೀಲರು ದೈಹಿಕ ಶಿಕ್ಷಣ ಶಿಕ್ಷಕರಾಗಿದ್ದರು. ಮುನ್ಸಿಪಲ್ ಕಾಲೇಜು ಪ್ರಾಚಾರ್ಯರಾಗಿದ್ದ ಸದಾನಂದ ಕನವಳ್ಳಿ ಅವರು ಪಾಟೀಲರನ್ನು ತಮ್ಮ ಕಾಲೇಜಿಗೆ ಕರೆತಂದರು. ಅಲ್ಲಿ ಅವರಿಗೆ ಕ್ರೀಡಾ ವಿಭಾಗ ಬೆಳೆಸಲು ಬೆಂಬಲ ನೀಡಿದರು. ಪಾಟೀಲರು ಕ್ರೀಡೆ ಮತ್ತು ಇತಿಹಾಸವನ್ನು ಹದವಾಗಿ ಬೆರೆಸಿ ತರಬೇತಿಗೆ ಒಂದು ಸತ್ವಯುತ ನೆಲೆಗಟ್ಟು ನೀಡಿದ್ದನ್ನು ಕನವಳ್ಳಿಯವರೇ 'ಮಲ್ಲಕಂಬ ಪಾಟೀಲರು' ಅಭಿನಂದನಾ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

ಸೌಲಭ್ಯಗಳ ಕೊರತೆಯ ನೆಪಗಳನ್ನು ಅವರೆಂದೂ ಹೇಳಲಿಲ್ಲ. ಯಾರ ಮುಂದೆಯೂ ಸಹಾಯಕ್ಕಾಗಿ ಕೈಚಾಚಲಿಲ್ಲ. ತಮ್ಮ ಕೈಗೆಟುಕುವ ಸೌಲಭ್ಯಗಳನ್ನೇ ಬಳಸಿಕೊಂಡು ಸ್ಥಳೀಯ ಆಟಗಳಲ್ಲಿ ಸಾಧನೆ ಮಾಡುವ ಸೂತ್ರ ಕಂಡುಕೊಂಡರು. ಊರಿನಲ್ಲಿ ಈಜುಕೊಳವಿರದಿದ್ದರೂ ಹಳ್ಳಕೊಳ್ಳಗಳಲ್ಲಿ ಈಜುತ್ತಿದ್ದ ಯುವಕರನ್ನು ಗುರುತಿಸಿದರು. ಬಾವಿಯೊಂದರಲ್ಲಿಯೇ ಅಭ್ಯಾಸ ಮಾಡಿಸಿದರು. ಅವರು ವಿಶ್ವವಿದ್ಯಾಲಯದ ಸ್ಪರ್ಧೆಗಳಲ್ಲಿ ಪದಕ ಗೆಲ್ಲುವಂತೆ ಮಾಡಿದರು. ಯೋಗ, ವಾಲಿಬಾಲ್, ಕಬಡ್ಡಿ, ಕುಸ್ತಿ, ಸೈಕ್ಲಿಂಗ್ ಕ್ರೀಡಾಪಟುಗಳಿಗೆ ಪರಿಣತ ತರಬೇತುದಾರರನ್ನು ಕರೆತಂದು ತಾಲೀಮು ನೀಡಿದರು.

ದೈಹಿಕ ಶಿಕ್ಷಣ ಶಿಕ್ಷಕರು ಶಾಲೆ, ಕಾಲೇಜುಗಳ ಮೈದಾನ ಮತ್ತು ತರಗತಿಗಳಿಂದಾಚೆಯೂ ಯಾವ ರೀತಿಯ ಸಾಧನೆ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟವರು ಪಾಟೀಲರು. ಅದರಲ್ಲೂ ಮಲ್ಲಕಂಬ ಹಾಗೂ ಅಟ್ಯಾಪಟ್ಯಾ ಕ್ರೀಡೆಗಳ ಬಗ್ಗೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಕ್ರಿಕೆಟ್ ಭರಾಟೆಯ ನಡುವೆಯೂ ಈ ಕ್ರೀಡೆಗಳನ್ನು ರಾಜ್ಯ, ರಾಷ್ಟ್ರಮಟ್ಟದಲ್ಲಿ ಸಂಘಟಿಸುತ್ತಿದ್ದರು. ರಾಷ್ಟ್ರೀಯ ಮಲ್ಲಕಂಬ ಸಂಸ್ಥೆಯ ಸಂಸ್ಥಾಪನೆಗೆ ಶ್ರೀಕಾರ ಹಾಕಿದ್ದೇ ಪಾಟೀಲರು.

ಅದೂ ಪುಟ್ಟ ಊರುಗಳಲ್ಲಿಯೇ ಈ ಸ್ಪರ್ಧೆಗಳನ್ನು ಸ್ಥಳೀಯ ನಿವಾಸಿಗಳ ಸಹಭಾಗಿತ್ವದೊಂದಿಗೆ ಆಯೋಜಿಸುತ್ತಿದ್ದರು. ಗ್ರಾಮಸ್ಥರು ತಮ್ಮ ಮನೆಯಲ್ಲಿ ಮಾಡಿದ ಅಡುಗೆಯನ್ನೇ ಸ್ಪರ್ಧಿಗಳಿಗೂ ಉಣಬಡಿಸಿ ಆತಿಥ್ಯ ನೀಡುವ ಸಹಕಾರ ತತ್ವವನ್ನು ಕ್ರೀಡೆಯಲ್ಲಿಯೂ ತಂದವರು ಪಾಟೀಲರು. ಉತ್ತರ ಕರ್ನಾಟಕದ ಕುಗ್ರಾಮಗಳಿಂದ ಬಡಕುಟುಂಬದ ಮಕ್ಕಳನ್ನು ಆಯ್ಕೆ ಮಾಡಿಕೊಂಡು ಬಂದು ತರಬೇತಿಗೆ ಅಣಿಗೊಳಿಸಿದರು. ಕಳೆದ ನಾಲ್ಕು ದಶಕಗಳಲ್ಲಿ ಅವರ ಗರಡಿಯಲ್ಲಿ ತರಬೇತಿ ಪಡೆದ ಮಲ್ಲಕಂಬ ಪಟುಗಳು ರಾಷ್ಟ್ರೀಯ ಚಾಂಪಿಯನ್ನರಾದರು. ತರಬೇತುದಾರರೂ ಆಗಿ ಅವರೆಲ್ಲ ಬೇರೆ ರಾಜ್ಯಗಳಲ್ಲಿ, ವಿಶ್ವವಿದ್ಯಾಲಯ, ಕಾಲೇಜುಗಳಲ್ಲಿ ಮಲ್ಲಕಂಬ ಬೆಳೆಸುತ್ತಿದ್ದಾರೆ.

'ಮಲ್ಲಕಂಬ ಈಗ ಖೇಲೊ ಇಂಡಿಯಾದಲ್ಲಿ ಸೇರ್ಪಡೆಯಾಗಿದೆ. ಕೆಲವು ಇಲಾಖೆಗಳಲ್ಲಿ ಉದ್ಯೋಗ ಮೀಸಲಾತಿಯನ್ನೂ ಪಡೆದುಕೊಂಡಿದೆ. ಇದು ಪಾಟೀಲರ ಹೋರಾಟದ ಫಲ' ಎಂದು ಕರ್ನಾಟಕ ಅಮೆಚೂರ್ ಮಲ್ಲಕಂಬ ಸಂಸ್ಥೆ ಕಾರ್ಯದರ್ಶಿ ಎಸ್. ಎಫ್. ಕೊಡ್ಲಿ ಸ್ಮರಿಸುತ್ತಾರೆ.

ದಶಕಗಳ ಹಿಂದೆ ರಷ್ಯಾದಲ್ಲಿ ನಡೆದ ಉತ್ಸವದಲ್ಲಿಯೂ ಭಾರತ ಮಲ್ಲಕಂಬ ತಂಡಕ್ಕೆ ಪ್ರದರ್ಶನದ ಅವಕಾಶ ಸಿಕ್ಕಿದ್ದು ಪಾಟೀಲರ ಪ್ರಯತ್ನದಿಂದಾಗಿಯೇ. ಪ್ರತಿವರ್ಷವೂ ಕರ್ನಾಟಕದ ಒಂದೊಂದು ಜಿಲ್ಲೆಯಲ್ಲಿ ರಾಜ್ಯ ಮಲ್ಲಕಂಬ ಚಾಂಪಿಯನ್‌ಷಿಪ್ ನಡೆಸುವ ಮೂಲಕ ಕ್ರೀಡೆಯ ಬಗ್ಗೆ ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದ್ದರು. ತಮ್ಮ ಭಾಷಣ, ಬರವಣಿಗೆಯ ಮೂಲಕವೂ ಗ್ರಾಮೀಣ ಕ್ರೀಡೆಗಳಿಗೆ ಮಹತ್ವದ ಕೊಂಡಿಯಾಗಿದ್ದರು.

ಆ ಕ್ರೀಡೆಗಳ ಮೂಲಕ ಹಳ್ಳಿಗಾಡಿನ ಮಕ್ಕಳು ಸಮಾಜದ ಮುಖ್ಯವಾಹಿನಿಗೆ ಸೇರುವಂತಹ ಪ್ರಕ್ರಿಯೆಯು ಸದ್ದಿಲ್ಲದೇ ನಡೆಯುತ್ತಿತ್ತು. ಇಂತಹ ಸಾಧನೆಯ ರೂವಾರಿ 'ಮಲ್ಲಕಂಬ ಪಾಟೀಲರು' ಶನಿವಾರ(ಮೇ 5) ನಿಧನರಾದರು. ಅವರ ಹೆಜ್ಜೆಗುರುತುಗಳು ಮಾತ್ರ ಗ್ರಾಮೀಣ ಕ್ರೀಡಾಂಗಣದಲ್ಲಿ ಅಚ್ಚಳಿಯದೇ ಉಳಿದಿವೆ.

ಮುನ್ನೋಟ 07-05-2023 ರಿಂದ -13-05-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ಪ್ರಮುಖ ಯೋಜನೆಯಲ್ಲಿ ನಿಮಗೆ ಮುಂದಾಳತ್ವ ದೊರೆಯುತ್ತದೆ. ಬರಹಗಾರರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ವೃತ್ತಿಯಲ್ಲಿ ಬದಲಾವಣೆ ಅನಿವಾರ್ಯವೆನಿಸುತ್ತದೆ. ಹಣಕಾಸಿನ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸುತ್ತದೆ. ಸ್ವಂತ ಉದ್ಯೋಗಮಾಡುವವರಿಗೆ ಹೆಚ್ಚಿನ ಆದಾಯವಿರುತ್ತದೆ. ನಿಮ್ಮ ಕೆಲಸದ ಒತ್ತಡದಿಂದ ಹೊರಬಂದು ನೆಮ್ಮದಿ ಕಾಣುವಿರಿ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ಸರ್ಕಾರಿ ಕಚೇರಿಗಳ ಕೆಲಸಕ್ಕಾಗಿ ಹೆಚ್ಚಿನ ಓಡಾಟ ಆಗುತ್ತದೆ. ಅಲಂಕಾರ ವಸ್ತುಗಳನ್ನು ಖರೀದಿ ಮಾಡುವಿರಿ. ಮಕ್ಕಳ ಖುಷಿಗಾಗಿ ಆಟಿಕೆ ವಸ್ತುಗಳನ್ನು ಕೊಂಡುಕೊಳ್ಳುವಿರಿ. ಸಂಬಂಧಿಕರೊಡನೆ ಸಂಬಂಧಗಳು ಸುಧಾರಿಸುತ್ತದೆ. ದಿನಸಿ ವ್ಯಾಪಾರ ಮಾಡುವವರಿಗೆ ಹೆಚ್ಚಿನ ಆದಾಯವಿರುತ್ತದೆ. ಕೆಲವರಿಗೆ ಹಿರಿಯರ ಆಸ್ತಿ ದೊರೆಯುವ ಸಂದರ್ಭವಿದೆ. ವೈಯಕ್ತಿಕ ವಿಚಾರಗಳ ಬಗ್ಗೆ ಹೆಚ್ಚು ಎಚ್ಚರವಿರಲಿ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ಸಹೋದರರಲ್ಲಿ ಆಸ್ತಿಯ ವಿಚಾರವಾಗಿ ಕಾವೇರಿದ ಮಾತುಗಳು ಆಗಬಹುದು. ಈ ಬಗ್ಗೆ ನಿಮಗೆ ಬಂಧುಗಳ ಸಹಾಯ ದೊರೆಯುತ್ತದೆ. ಉದ್ಯೋಗರಹಿತರಿಗೆ ತಾತ್ಕಾಲಿಕ ಉದ್ಯೋಗ ದೊರೆತು ಆದಾಯ ಬರುತ್ತದೆ. ನಿಮ್ಮ ನೇರ ನುಡಿ ಬಹಳ ಜನಗಳಿಗೆ ಇಷ್ಟವಾಗುವುದಿಲ್ಲ. ವೃತ್ತಿಯಲ್ಲಿ ನಿಮ್ಮ ಸಲಹೆ ಸೂಚನೆಗಳನ್ನು ಮೇಲಧಿಕಾರಿಗಳು ಮಾನ್ಯ ಮಾಡಿದ್ದಕ್ಕಾಗಿ ಸಂತೋಷವಾಗುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ಹಿಂದಿನ ಕಠಿಣ ಪ್ರಯತ್ನಗಳು ಫಲಕಾರಿಯಾಗಿ ಬರುತ್ತವೆ. ಹಂಗಾಮಿ ಕೆಲಸ ಮಾಡುವವರಿಗೆ ಖಾಯಂ ಕೆಲಸ ದೊರೆಯುವ ಸಾಧ್ಯತೆ ಇದೆ. ವರ್ಗಾವಣೆಯನ್ನು ಬಯಸುತ್ತಿರುವವರಿಗೆ ಆಶಿಸಿದ ಸ್ಥಳಕ್ಕೆ ವರ್ಗಾವಣೆ ದೊರೆಯುತ್ತದೆ. ಉದ್ದಿಮೆಗಳಲ್ಲಿ ಕೆಲಸಗಾರರ ಕೆಲವೊಂದು ಬೇಡಿಕೆಗಳು ಈಡೇರುತ್ತವೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಅಂದುಕೊಂಡ ಕೆಲಸಗಳು ಯೋಜಿತ ರೀತಿಯಲ್ಲಿ ಆಗದೆ ಗೊಂದಲಗಳಾಗಬಹುದು. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆ ಮಾಡುವ ಯೋಗವಿದೆ. ಹೊಸ ಉದ್ಯೋಗವನ್ನು ಸೇರುವವರು ಸಂಬಳದ ಬಗ್ಗೆ ಸರಿಯಾಗಿ ತಿಳಿದುಕೊಳ್ಳಿರಿ. ಸಂತಾನ ಅಪೇಕ್ಷಿತರಿಗೆ ಶುಭ ಸುದ್ದಿಗಳು ದೊರೆತು ಸಂತಸವಾಗುತ್ತದೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ಕೃಷಿಕರಿಗೆ ಉತ್ತಮ ಫಸಲು ದೊರೆಯುವ ಸಂದರ್ಭವಿದೆ. ಅವರಿಗೆ ಬೇಕಾದ ಹಣಕಾಸಿನ ಸೌಲಭ್ಯಗಳು ದೊರೆಯುತ್ತವೆ. ನ್ಯಾಯಾಂಗ ಇಲಾಖೆಯವರಿಗೆ ಉತ್ತಮ ಸ್ಥಾನಮಾನ ಸಿಗುವ ಸಾಧ್ಯತೆ ಇದೆ ಮತ್ತು ವರಮಾನ ಹೆಚ್ಚುತ್ತದೆ. ಅನಾರೋಗ್ಯದಿಂದ ವಿದ್ಯಾರ್ಥಿಗಳ ಸಾಧನೆಗೆ ಅಡ್ಡಿಯಾಗಬಹುದು. ನೀವು ಎಂದಿಗೂ ಇನ್ನೊಬ್ಬರನ್ನು ಹೋಲಿಕೆ ಮಾಡಿಕೊಂಡು ಚಿಂತಿಸುವುದು ಸರಿಯಲ್ಲ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**

ಹಲವಾರು ಅಭಿವೃದ್ಧಿಯ ಅವಕಾಶಗಳು ಎದುರಿಗಿದ್ದರೂ ಗೊಂದಲ ಮಾಡಿಕೊಂಡು ಬಂದಿದ್ದ ಅವಕಾಶಗಳನ್ನು ಕೈ ಚೆಲ್ಲುವಿರಿ. ಹಣದ ಒಳಹರಿವು ಸ್ವಲ್ಪಮಟ್ಟಿಗೆ ಉತ್ತಮಗೊಳ್ಳುತ್ತದೆ. ಭಾಷಣಕಾರರಿಗೆ, ಸಂಗೀತಗಾರರಿಗೆ ಉತ್ತಮ ಅವಕಾಶಗಳು ದೊರೆಯುತ್ತವೆ. ಮಧ್ಯವರ್ತಿಗಳ ಸಹಾಯದಿಂದ ವಿವಾಹದ ವಿಷಯದಲ್ಲಿ ಶುಭ ವಾರ್ತೆ ಕೇಳಿ ಬರುತ್ತದೆ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**

ಮಕ್ಕಳ ಮೇಲಿದ್ದ ಮುನಿಸು ಕರಗುತ್ತದೆ ಹಾಗೂ ಅವರ ಮೇಲೆ ಅಭಿಮಾನ ಹೆಚ್ಚುತ್ತದೆ. ಕೋರ್ಟಿನಲ್ಲಿರುವ ವ್ಯಾಜ್ಯಗಳು ಮಾತುಕತೆಯ ಮೂಲಕ ಪರಿಹಾರವನ್ನು ಕಾಣುತ್ತವೆ. ಕೃಷಿ ಕಾರ್ಯಗಳು ಬಿಡುವಿಲ್ಲದೆ ಸಾಗುತ್ತವೆ. ಈ ಹಿಂದೆ ಅಪೇಕ್ಷಿಸಿದ್ದ ಸಾಲಗಳು ಈಗ ಸಿಗುತ್ತವೆ. ಸ್ತ್ರೀಯರೊಡನೆ ಹಣದ ವ್ಯವಹಾರ ಮಾಡುವುದು ನಷ್ಟಕ್ಕೆ ಕಾರಣವಾಗಬಹುದು.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**

ಹೊಸ ರೀತಿಯ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಇದು ಸಕಾಲ. ಪಾಲುದಾರಿಕೆ ವ್ಯವಹಾರಗಳಲ್ಲಿ ಸ್ವಲ್ಪ ಮಟ್ಟಿನ ಲಾಭ ದೊರೆಯುತ್ತದೆ. ಕಾನೂನು ಪಂಡಿತರಿಗೆ ಹೆಚ್ಚಿನ ಬೇಡಿಕೆ ಬರುತ್ತದೆ. ಸಂತಾನ ಅಪೇಕ್ಷಿತರಿಗೆ ಶುಭ ಸುದ್ದಿ ದೊರೆಯುತ್ತದೆ. ಆಸ್ತಿ ಕೊಳ್ಳುವ ವಿಚಾರದಲ್ಲಿ ಪುನಃ ಪರಿಶೀಲನೆ ಮಾಡುವುದು ಬಹಳ ಉತ್ತಮ. ಆಧ್ಯಾತ್ಮಿಕ ವಿಚಾರಗಳಲ್ಲಿ ಹೆಚ್ಚು ಆಸಕ್ತಿ ಮೂಡುತ್ತದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ಅಭಿವೃದ್ಧಿಯಲ್ಲಿ ಕೆಲವು ಅಡೆ-ತಡೆಗಳು ಬಂದರೂ ಧೈರ್ಯವಾಗಿ ಮುನ್ನುಗ್ಗುವಿರಿ. ನಿಮ್ಮ ತೀರ ಪರಿಚಿತರಿಂದ ವಂಚನೆಯ ಪ್ರಕರಣಗಳು ಆಗುವ ಸಾಧ್ಯತೆ ಇದೆ, ಎಚ್ಚರವಹಿಸಿರಿ. ಸಂದರ್ಭಕ್ಕೆ ಅನುಗುಣವಾಗಿ ನಡೆದುಕೊಳ್ಳುವ, ಪಾಠವನ್ನು ಈ ಸಮಾಜವೇ ನಿಮಗೆ ಕಲಿಸುತ್ತದೆ. ದೈನಂದಿನ ವ್ಯವಹಾರಗಳಲ್ಲಿ ಖರ್ಚು ಕಡಿಮೆ ಮಾಡಿಕೊಳ್ಳುವುದು ಒಳ್ಳೆಯದು.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ನಿರುದ್ಯೋಗಿಗಳು ಸಿಕ್ಕ ಕೆಲಸವನ್ನು ಮಾಡುವುದು ಉತ್ತಮ. ರಾಜಕೀಯ ವ್ಯಕ್ತಿಗಳಿಗೆ ಸೂಕ್ತ ಸ್ಥಾನ ದೊರೆಯುತ್ತದೆ. ಕಟ್ಟಡ ನಿರ್ಮಾಣಕಾರರಿಗೆ ಹೊಸ ಗುತ್ತಿಗೆಗಳು ದೊರೆಯುತ್ತವೆ. ರಿಯಲ್ ಎಸ್ಟೇಟ್ ಉದ್ಯಮದವರಿಗೆ ಆದಾಯ ಹೆಚ್ಚುವ ಸಾಧ್ಯತೆ ಇದೆ. ನಿಮಗೆ ಎದುರಾಗುವ ಸಮಸ್ಯೆಗಳಿಗೆ ಸಂಬಂಧಿಸಿದ ವ್ಯಕ್ತಿಯೊಡನೆ ಮಾತನಾಡುವುದು ಒಳ್ಳೆಯದು. ಶೇರು ಮಾರುಕಟ್ಟೆಯ ವ್ಯವಹಾರ ಅಷ್ಟು ಒಳ್ಳೆಯದಲ್ಲ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ತಾಯಿಯಿಂದ ಕೋಪದ ನುಡಿಗಳನ್ನು ಕೇಳಬೇಕಾಗಬಹುದು. ಚಿನ್ನ, ಬೆಳ್ಳಿ ವ್ಯಾಪಾರಿಗಳಿಗೆ ಹೆಚ್ಚು ವ್ಯಾಪಾರವಾಗಿ ಲಾಭ ಹೆಚ್ಚುವುದು. ಹೊರದೇಶದಲ್ಲಿರುವ ಮಕ್ಕಳು ನಿಮ್ಮನ್ನು ಕಾಣಲು ಬರುವ ಸಾಧ್ಯತೆ ಇದೆ. ವಿದೇಶಿ ಪ್ರವಾಸ ಮಾಡಬೇಕೆನ್ನುವವರಿಗೆ ಈಗ ಸೂಕ್ತ ಅವಕಾಶಗಳು ದೊರೆಯುತ್ತವೆ. ಕುಟುಂಬದಲ್ಲಿ ಕಾವೇರಿದ ಮಾತುಗಳು ಆಗಬಹುದು.

ಪದಬಂಧ 2788



ಮೇಲಿನಿಂದ ಕೆಳಕ್ಕೆ

1. ಸಿನಿಮಾ ನಾಟಕಗಳಲ್ಲಿ ದುಷ್ಟಬುದ್ಧಿಯ ಮುಖ್ಯ ಪಾತ್ರ 5
2. ಆನೆ ಮೊಗದವಳು 4
3. ಭದ್ರಾಚಲದ ದಶರಥಾತ್ಮ ಜನ ಸೇವಕ 4
4. ಸುಸಂಸ್ಕೃತ ಮಹಾಕಳ್ಳ 3
6. ಹೂವಿನಂತಹ ಒಳ್ಳೆಯ ಮನಸ್ಸಿನವಳು 3
7. ಮಂಡಲದಲ್ಲಿ ವಿಧಾನ ಸಭೆ 4
8. ನಾಲಿಗೆಗೆ ಸವಿ ನೀಡುವಂತದ್ದು 3
10. ಕಿವಿಗೆ ಸುಮಧುರ ಮೂಗಿಗೆ ಸುವಾಸನೆ 4
12. ಮಹಾಪ್ರಯತ್ನಗಳನ್ನು ಮಾಡುವವ 3
14. ಕಾಲಕ್ಕೆ ಮುಂಚಿತವಾಗಿ ಬೀಳುವ ಮಳೆ 3
16. ಪ್ರತಿದಿನ ಗೋಚರವಾಗುವ ಭಗವಂತನೆತ್ತುವ ರೂಪ 5
18. ಭಾರತಕ್ಕೆ ಶಿಖರವಾಗಿರುವ ಮಂಜುಗಡ್ಡೆಯ ಬೆಟ್ಟ 4
19. ಬೆಟ್ಟದರಸನಿಗಿರುವ ಹೆಸರು 4
21. ಬಾನು ಭುವಿಯ ಸಮಾಗಮದಲ್ಲಿ ಹುಟ್ಟಿದ್ದು 3

ಎಡದಿಂದ ಬಲಕ್ಕೆ

1. ಹಾರಾಡುವ ಪಕ್ಷಿ ಓಡಾಡುವ ಪ್ರಾಣಿಗಳ ಸಂಕುಲ 4
3. ಅರಸರ ಚಾಣಾಕ್ಷ ಯೋಜನೆ 4
5. ಅನವರತ ನಮ್ಮನ್ನು ಕಾಪಾಡು 3
7. ಹೆಪ್ಪುಗಟ್ಟಿದ ಹಾಲು ಹುಳಿಯಾಗಿ ಕುಣಿಯುತ್ತದೆಯೆ? 5
9. ಹೊತ್ತಿಗೆ ಬೇಕಾಗುವ ತುತ್ತು 3
10. ಇಂಗದೆ ಚಲಿಸಲು ಬೇಕಾಗುವ ಶಕ್ತಿ 3
11. ತ್ಯಾಗರಾಜ ಕೃತಿಗಳಲ್ಲಿ ಓಗೊಡುವ ಅಂತರಾಳ 3
13. ತಮಿಳು ಭಾಷೆಯ ಕಪ್ಪು 3
14. ಕುಂಬಾರ ಮಣ್ಣು ತುಳಿಯುವ ಹೊತ್ತು 3
15. ಕಣ್ಣಿಂದ ಕೆಳಗಿಳಿವ ಹನಿ 3
17. ಎಂದೋ ನಡೆದದ್ದು ಮನಸ್ಸಿನಲ್ಲುಳಿದ ಮಧುರ ಸ್ಮೃತಿ 5
20. ಮಹಾಶಿವನ ಕಣ್ಣಿರುವ ಬೀಜ 3
22. ಕನ್ನಡದ ಯಮರಾಜ 4
23. ನೃತ್ಯದ ಮೇಳಕ್ಕೆ ಕೂಡುವ ದನಿಮೂಲ 4

ಪದಬಂಧ ಉತ್ತರ -2787

ಮೇಲಿಂದ ಕೆಳಕ್ಕೆ

1.ಕಾತ್ಯಾಯಿನಿ 2.ಗಾನಸುಧಾ 3.ಶರಬತ್ತು 4.ನವದ್ವಾರ 7.ಸರಿಸಮಾನ 8.ಮಧುರಸ್ವರ 9.ಹಣವಂತರು 10.ವಿಚಾರವಾದ 15.ಕಬಳಿಸು 16.ಬಗೆಬಗೆ 18.ಪಾದರಸ 19.ರವಿಸುತ

ಎಡದಿಂದ ಬಲಕ್ಕೆ

1.ಕಾವ್ಯಗಂಗಾ 3.ಶತಮಾನ 5.ನಗರೇಶ್ವರ 6.ನಿಸರ್ಗಧಾಮ 9.ಹತ್ತುಸಾವಿರ 11.ಧುರೀಣ 12.ಸರೋವರ 13.ವಂಶೋದ್ಧಾರ 14.ಸ್ವಗತ 15.ಕನಕಾಂಬರ 17.ರುಪಾಯಿದರ 20.ಬಸವೇಶ್ವರ 21.ಸುರಗಂಗೆ 22.ಸತ್ಯವಂತ

ಪ್ರತಿಮಾ ರಾಜಕೀಯಕ್ಕೆ ಅಧ್ಯಯನದ ಕನ್ನಡಿ

ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆ



ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ನಿರ್ಮಾಣವಾಗಿರುವ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಪ್ರತಿಮೆ

ಬಸವಣ್ಣ, ಬುದ್ಧ, ಗಾಂಧೀಜಿ, ಮದರ್ ತೆರೇಸಾ, ಅಂಬೇಡ್ಕರ್, ಕೆಂಪೇಗೌಡ, ಎ.ಪಿ.ಜೆ.ಅಬ್ದುಲ್ ಕಲಾಂ, ರಾಜ್‌ಕುಮಾರ್... ಹೀಗೆ ಸಮಾಜದ ಮೇಲೆ ಅಚ್ಚಳಿಯದ ಪ್ರಭಾವ ಬೀರಿದವರು ಈ ನಗರದಲ್ಲಿದ್ದಾರೆ. ಅವರ ಪ್ರತಿಮೆಗಳಿಗೆ ಕಲಾವಿದರು ಜೀವ ತುಂಬುವ ಕೆಲಸ ಮಾಡುತ್ತಿದ್ದಾರೆ. ಇತ್ತೀಚೆಗೆ ಒಂದು 'ಪ್ರತಿಮಾ ರಾಜಕಾರಣ'ವು ಸಾಂಸ್ಕೃತಿಕ ವಲಯದಲ್ಲಿ ವ್ಯಾಪಕವಾಗಿರುವುದು ಸ್ಪಷ್ಟ. 'ಇಂಡಿಯನ್ ಫೌಂಡೇಷನ್ ಫಾರ್ ದಿ ಆರ್ಟ್ಸ್' ಆಸಕ್ತಿಕರವಾದ ಸಂಶೋಧನೆಯೊಂದನ್ನು ಈ ನಿಟ್ಟಿನಲ್ಲಿ ನಡೆಸಿದೆ.

ವರುಣ ಹೆಗಡೆ

ರಾಜಧಾನಿ ಬೆಂಗಳೂರಿನಲ್ಲಿ ಅಗಲಿದ ಮಹಾನುಭಾವರಿಗೆ ಜೀವ ತುಂಬುವ ಕೆಲಸ ಕೆಲ ವರ್ಷಗಳಿಂದ ಭರದಿಂದ ಸಾಗಿದೆ. ಸಾಂಸ್ಕೃತಿಕ ರಾಜಕಾರಣದಿಂದಾಗಿ ಈ ನಗರವು 'ಪ್ರತಿಮೆಗಳ ರಾಜಧಾನಿ'ಯಾಗಿಯೂ ಮಾರ್ಪಾಡಾಗುತ್ತಿದೆ. ಮರೆಯಾದ ಮಹಾಪುರುಷರು ಎಲ್ಲೆಡೆ ರಾರಾಜಿಸುತ್ತಿದ್ದಾರೆ. ಯಾರು ಯಾರು ಯಾವ ಯಾವ ಕಾಲಕ್ಕೆ ಹೇಗೆಲ್ಲ ರಾರಾಜಿಸುತ್ತಾರೆ ಎನ್ನುವುದು ಆಸಕ್ತಿಕರ.

ಇಲ್ಲಿನ ಪ್ರತಿಮೆಗಳ ಬಗ್ಗೆಯೇ 'ಇಂಡಿಯನ್ ಫೌಂಡೇಷನ್ ಫಾರ್ ದಿ ಆರ್ಟ್ಸ್' ಸಂಶೋಧನೆ ನಡೆಸಿದೆ. ರವಿಕುಮಾರ್ ಕಾಶಿ, ಮಾಧುರಿ ರಾವ್ ಹಾಗೂ ಸಲೀಲಾ ವಂಕ 14 ತಿಂಗಳಲ್ಲಿ ರಾಜಧಾನಿಯ ಪ್ರತಿಮೆಗಳ ಬಗ್ಗೆ ಸಂಶೋಧನೆ ನಡೆಸಿದ್ದಾರೆ. 'ದೃಶ್ಯ ಸಂಸ್ಕೃತಿ ಮತ್ತು ಪ್ರಾದೇಶಿಕ ರಾಜಕೀಯದ ನಿರೂಪಣೆ: 1990ರ ನಂತರ ಬೆಂಗಳೂರಿನಲ್ಲಿ ಸಾರ್ವಜನಿಕ ಪ್ರತಿಮೆಗಳು ಮತ್ತು ಶಿಲ್ಪಗಳು' ಅವರ ಸಂಶೋಧನಾ ಶೀರ್ಷಿಕೆ. ಈ ಸಂಶೋಧನೆಯಡಿ ಅವರು 700 ಪ್ರತಿಮೆಗಳನ್ನು ಗುರುತಿಸಿದ್ದಾರೆ. ಇವುಗಳಲ್ಲಿ ಅರ್ಧದಷ್ಟು ಪ್ರತಿಮೆಗಳು ಕಳೆದ 10 ವರ್ಷಗಳಲ್ಲಿಯೇ ತಲೆಯೆತ್ತಿವೆ. ಕೆಂಪೇಗೌಡ ಹಾಗೂ ರಾಜ್‌ಕುಮಾರ್ ಅವರ ಪ್ರತಿಮೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

ಬೆಂಗಳೂರಿನಲ್ಲಿ 10–15 ವರ್ಷಗಳ ಹಿಂದೆ ಗಾಂಧೀಜಿ ಹಾಗೂ ಅಂಬೇಡ್ಕರ್ ಅವರ ಪ್ರತಿಮೆಗಳು ಹೆಚ್ಚಾಗಿ ಕಾಣಿಸುತ್ತಿದ್ದವು. ಇತ್ತೀಚಿನ ವರ್ಷಗಳಲ್ಲಿ ವಿವಿಧ ಸಮುದಾಯಗಳ ಓಲೈಕೆಗೆ, ಸಂಘ–ಸಂಸ್ಥೆಗಳ ಒತ್ತಾಯಕ್ಕೆ ಮಣಿದು ಪ್ರತಿಮೆಗಳನ್ನು ನಿರ್ಮಿಸಲಾಗುತ್ತಿದೆ. ವಿಧಾನಸೌಧದ ಮುಂದೆ ನಿರ್ಮಾಣವಾಗಿರುವ ಬಸವಣ್ಣನ ಪ್ರತಿಮೆಯನ್ನು 2023ರ ಮಾರ್ಚ್ ತಿಂಗಳಲ್ಲಿ ಅನಾವರಣ ಮಾಡಲಾಗಿತ್ತು. ಇದು ಕೊನೆಯದಾಗಿ ಅನಾವರಣಗೊಂಡ ಪ್ರತಿಮೆ. ಇನ್ನೂ ಕೆಲವು ನಿರ್ಮಾಣದ ಹಂತದಲ್ಲಿದ್ದು, ಮುಂದಿನ ದಿನಗಳಲ್ಲಿ ಅನಾವರಣಗೊಳ್ಳಲಿವೆ.

ಪ್ರತಿಮೆಗಳ ಬಗ್ಗೆ ಸಂಶೋಧನೆ ನಡೆಸಿದ ಮೂವರೂ ಆರ್.ವಿ. ಆರ್ಕಿಟೆಕ್ಚರ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಅವರು ಕಲೆ, ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಹಲವು ಸಂಶೋಧನೆಗಳನ್ನು ನಡೆಸಿದ್ದಾರೆ. ಪ್ರತಿಮೆ ಮತ್ತು ಶಿಲ್ಪಗಳು ನಗರದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯವನ್ನೂ ಪ್ರತಿಬಿಂಬಿಸುತ್ತವೆ ಎನ್ನುವುದನ್ನು ಈ ಸಂಶೋಧನೆ ದೃಢಪಡಿಸುತ್ತದೆ.

ರವಿಕುಮಾರ್ ಕಾಶಿ

'ಬೆಂಗಳೂರಿನ ಪ್ರತಿಮೆಗಳನ್ನು ದಾಖಲೀಕರಣ ಮಾಡಿದ್ದೇವೆ. ಗುರುತಿಸಲಾದ 700 ಪ್ರತಿಮೆಗಳಲ್ಲಿ 13 ಪ್ರತಿಮೆಗಳು ಮಾತ್ರ ಮಹಿಳೆಯರದ್ದಾಗಿವೆ. ಬೆಂಗಳೂರಿನಲ್ಲಿ ಇನ್ನೂ 100ರಿಂದ 150 ಪ್ರತಿಮೆಗಳು ಇರಬಹುದು. ಪ್ರತಿಮೆ ಸ್ಥಾಪಿಸಿದವರು ಯಾರು, ಸ್ಥಾಪಿಸಿದ್ದು ಯಾವಾಗ ಎನ್ನುವುದೂ ಸೇರಿ ವಿವಿಧ ಮಾಹಿತಿಗಳನ್ನೂ ದಾಖಲಿಸಿದ್ದೇವೆ' ಎನ್ನುತ್ತಾರೆ ದೃಶ್ಯ ಕಲಾವಿದರೂ ಆಗಿರುವ ರವಿಕುಮಾರ್ ಕಾಶಿ.

'ಬೆಂಗಳೂರಿನಲ್ಲಿ ರಾಜ್‌ಕುಮಾರ್ ಅವರ ಪ್ರತಿಮೆಗಳು 80ಕ್ಕಿಂತ ಅಧಿಕ ಇವೆ. ಅಂಬೇಡ್ಕರ್ ಅವರದ್ದು 60ಕ್ಕಿಂತ ಹೆಚ್ಚು. ಗಾಂಧೀಜಿ ಅವರ ಪ್ರತಿಮೆಗಳು ಇತ್ತೀಚೆಗೆ ನಿರ್ಮಾಣವಾಗಿಲ್ಲ. ಬಹುತೇಕ ಪ್ರತಿಮೆಗಳಲ್ಲಿ ಕಲಾವಿದರ ಹೆಸರನ್ನೂ ನಮೂದಿಸಿಲ್ಲ. ಕೆಲವು ರಾಜಕೀಯ ಪ್ರೇರಿತವಾಗಿ ನಿರ್ಮಿತವಾದರೆ, ಕೆಲವು ಜನರ ಅಭಿಮಾನದಿಂದ ತಲೆಯೆತ್ತಿವೆ' ಎಂಬುದು ಅವರ ವಿಶ್ಲೇಷಣೆ.

'ಕೆಂಪೇಗೌಡ, ವಿವೇಕಾನಂದರ ಪ್ರತಿಮೆಗಳನ್ನು ಹೆಚ್ಚಾಗಿ ನಿರ್ಮಿಸಲಾಗುತ್ತಿದೆ. ಅಮರ ಸೇನಾನಿಗಳ ಪ್ರತಿಮೆಯನ್ನೂ ನಿರ್ಮಾಣ ಮಾಡಲಾಗುತ್ತಿದೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪ್ರತಿಮೆಗಳೂ ಉದ್ಯಾನಗಳಲ್ಲಿ ಕಾಣಸಿಗುತ್ತವೆ. ರಾಜ್‌ಕುಮಾರ್ ಅವರ ಪ್ರತಿಮೆಗಳು ಇರುವ ಕಡೆ ಪುನೀತ್ ರಾಜ್‌ಕುಮಾರ್ ಅವರ ಪ್ರತಿಮೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ' ಎಂದು ಅವರು ಹೇಳುತ್ತಾರೆ.

ಛಾಯಾಚಿತ್ರ ಪ್ರದರ್ಶನ

ಇದೇ 12ರಿಂದ 14ರವರೆಗೆ ಬೆಂಗಳೂರಿನ ಎಂ.ಜಿ. ರಸ್ತೆಯಲ್ಲಿರುವ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ 'ಇಂಡಿಯನ್ ಫೌಂಡೇಷನ್ ಫಾರ್ ದಿ ಆರ್ಟ್ಸ್' ಸಂಶೋಧನಾ ಯೋಜನೆಯ ಬಗ್ಗೆ ಛಾಯಾಚಿತ್ರ ಪ್ರದರ್ಶನ ಹಮ್ಮಿಕೊಂಡಿದೆ. ಪ್ರತಿಮೆಗಳ ಬಗ್ಗೆ ಜಾಗೃತಿಯನ್ನೂ ಮೂಡಿಸಲಾಗುತ್ತದೆ. ಮೊದಲ ದಿನ ಸಂಜೆ 4ರಿಂದ 7 ಗಂಟೆ, ಎರಡು ಹಾಗೂ ಮೂರನೇ ದಿನ ಬೆಳಿಗ್ಗೆ 11ರಿಂದ ಸಂಜೆ 6ರವರೆಗೆ ಪ್ರದರ್ಶನ ಇರಲಿದೆ.

'ಜಿಐ' ಕೋಡು

ಮೊದಲ ಪುಟದಿಂದ...

'ನಮ್ಮ ಎಫ್‌ಪಿಒದಲ್ಲಿ 350ರಷ್ಟು ಬೆಳೆಗಾರ ಸದಸ್ಯರು ಇದ್ದಾರೆ. ಜಿಐ ಮಾನ್ಯತೆ ಸಿಕ್ಕಮೇಲೆ ಹೊಸ ಉತ್ಪನ್ನ ತಯಾರಿಸುವ ಹುಮ್ಮಸ್ಸು ದೊರೆತಿದೆ. ಈಗಾಗಲೇ ಪಲ್ಪ್ ಮಾಡಿ ಯಶಸ್ಸು ಕಂಡಿದ್ದೇವೆ. ಕರಿ ಇಶಾಡು ಕ್ಯಾಂಡಿ, ಹಣ್ಣಿನ ಬಾರ್ ಮೂಲಕ ಆಧುನಿಕ ಮಾರುಕಟ್ಟೆ ಪ್ರವೇಶಿಸುವ ಗುರಿ ನಮ್ಮದು' ಎನ್ನುವಾಗ ಅವರಲ್ಲಿ ಆತ್ಮವಿಶ್ವಾಸವನ್ನು ಕಂಡೆ. ಈ ಮಾವು ಹಣ್ಣಾದ ದಿನ ಬಳಸಿದರೆ ಉತ್ತಮ, ಮರುದಿನಕ್ಕೆ ಹಣ್ಣು ಹಳಸುತ್ತದೆ. ಉಳಿದ ಮಾವಿನ ತಳಿಗಳಿಗೆ ಹೋಲಿಸಿದರೆ ಇದರ ತಾಳಿಕೆ ಅವಧಿ ತುಸು ಕಡಿಮೆ. ಹೀಗಾಗಿ ಶೀತಲೀಕರಣ ಘಟಕ, ಸಂಸ್ಕರಣ ಘಟಕವೊಂದು ಬೇಕೇ ಬೇಕು ಎಂಬುದು ಅವರ ಬೇಡಿಕೆ.

ಜಿಐ ಬಂದಿದ್ದು ಹೇಗೆ?: ಕರಿ ಇಶಾಡಿಗೆ ಜಿಐ ಕೊಡಿಸಬೇಕೆನ್ನುವ ತೋಟಗಾರಿಕೆ ಇಲಾಖೆಯ ಪ್ರಸ್ತಾವಕ್ಕೆ ನೀರೆರೆದಿದ್ದು ನಬಾರ್ಡ್. ನಬಾರ್ಡ್ ಡಿಡಿಎಂ ರೇಜಿಸ್ ಇಮ್ಯಾನುಯೆಲ್ ಅವರ ವಿಶೇಷ ಮುತುವರ್ಜಿ, ಜಿಐ ಕನ್ಸಲ್ಟಂಟ್ ನಂದಿನಿ ದೋಲೆಪಟ್ ಅವರ ಶ್ರಮ, ಅಂಕೋಲಾದಲ್ಲಿ ವಕೀಲ ನಾಗರಾಜ ನಾಯ್ಕ ನೇತೃತ್ವದಲ್ಲಿ ನಡೆದ ಕರಿ ಇಶಾಡು ಮೇಳ, ಎಫ್‌ಪಿಒ ಕಾರ್ಯಚಟುವಟಿಕೆ ಈ ಎಲ್ಲವೂ ಭೌಗೋಳಿಕ ಚಿಹ್ನೆ ಪಡೆಯಲು ಸಹಕಾರಿಯಾಯಿತು.

ಆಗಬೇಕಾಗಿದ್ದು ಏನು?

ಜಿಐ ಎನ್ನುವುದು ರೈತರಿಗೆ ರಕ್ಷಾ ಕವಚ, ಇದು ಸಮುದಾಯದ ಹಕ್ಕು. ಪ್ರಾದೇಶಿಕ ಉತ್ಪನ್ನಕ್ಕೆ ಜಾಗತಿಕ ಮಾರುಕಟ್ಟೆಯ ರಹದಾರಿ ತೆರೆದಂತೆ. ಚಾಕೊಲೇಟ್, ಟೆಟ್ರಾ ಪ್ಯಾಕ್, ಬಾರ್, ಕ್ಯಾನ್ ಮೊದಲಾದ ಉತ್ಪನ್ನಗಳನ್ನು ತಯಾರಿಸಿ ರಫ್ತು ಮಾಡಬಹುದು. ಸಮುದಾಯದ ಆರ್ಥಿಕ ಮಟ್ಟ ಮೇಲೆತ್ತಲು ಇದು ಏಣಿಯಿದ್ದಂತೆ. ರಾಷ್ಟ್ರ ಮಟ್ಟದ ಮೇಳಗಳಲ್ಲಿ ಭಾಗವಹಿಸಲು ಜಿಐ ವೇದಿಕೆ ಒದಗಿಸಿದೆ. ರೈತರೇ ತಮ್ಮ ಉತ್ಪನ್ನಗಳಿಗೆ ದರ ನಿಗದಿಪಡಿಸಲು ದೊರೆತಿರುವ ಸುವರ್ಣಾವಕಾಶ. ಬೆಳೆಗಾರರು ಇವನ್ನೆಲ್ಲ ಸದುಪಯೋಗ ಪಡಿಸಿಕೊಂಡರಷ್ಟೇ 'ಜಿಐ' ಕಿರೀಟಕ್ಕೆ ವಜ್ರ ಪೋಣಿಸಿದಂತಾಗುತ್ತದೆ.

ಅಂಕೋಲಾ ಪಟ್ಟಣದಲ್ಲಿ ಕರಿ ಇಶಾಡು ಮಾವು ಮಾರುತ್ತಿರುವ ಹಾಲಕ್ಕಿ ಮಹಿಳೆ –ಸಂಗ್ರಹ ಚಿತ್ರ

ಇದು ಗುಳಿಗ ಗಳಿಗೆ

ಮೊದಲ ಪುಟದಿಂದ...

ಹಾಗೆ ನೋಡಿದರೆ, ಭಾರತೀಯ ಕಲಾಪ್ರಕಾರಗಳು ಭಕ್ತಿಪಥದಲ್ಲಿ ಆರಾಧನೆಯ ಭಾಗವಾಗಿಯೇ ಬೆಳೆಯುತ್ತ ಬಂದವು. ಆದರೆ ಪ್ರಾದೇಶಿಕವಾಗಿ ವಿಕಾಸಗೊಂಡ ಕಲಾಪ್ರಕಾರಗಳು ಜಾಗತೀಕರಣದ ಹಿನ್ನೆಲೆಯಲ್ಲಿ ದೊಡ್ಡ ಪ್ರೇಕ್ಷಕ ವರ್ಗವನ್ನು ತಲುಪುವುದಕ್ಕೆ ಕೆಲವು ಮಾಧ್ಯಮಗಳು ಹೆಚ್ಚು ಪೂರಕವೆನಿಸುತ್ತದೆ.

'ಶಿವದೂತೆ ಗುಳಿಗೆ' ತುಳು ನಾಟಕವಾದರೂ, 'ಕಾಂತಾರ' ಸಿನಿಮಾದ ಯಶಸ್ಸಿನ ಬಳಿಕ ಅದನ್ನು ಕನ್ನಡಕ್ಕೆ ಅನುವಾದಿಸಿಕೊಂಡು, ತುಳು ಭಾಷಾ ವಲಯವನ್ನು ಮೀರಿ ನಾಟಕವು ತನ್ನ ಪ್ರದರ್ಶನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ಸ್ವತಃ ಗುಳಿಗ ದೈವದ ಭಕ್ತರೂ ಆಗಿರುವ ಸ್ವರಾಜ್ ಶೆಟ್ಟಿ, ತಮ್ಮ ದೈವಶ್ರದ್ಧೆಯ ಬಗ್ಗೆಯೂ ತಮ್ಮ ಕಲಾಸಾಧನೆಯ ಹಾದಿಯಲ್ಲಿ ದೊರೆತ ಯಶಸ್ಸಿನ ಬಗ್ಗೆಯೂ ವಿನಮ್ರವಾಗಿ ಮಾತನಾಡುತ್ತಾರೆ. 'ಕಾಂತಾರ ಚಿತ್ರವು ತೆರೆಕಂಡ ಬಳಿಕ, ಹೊರಜಿಲ್ಲೆಗಳಿಂದ 'ಶಿವದೂತೆ ಗುಳಿಗೆ' ನಾಟಕಕ್ಕಾಗಿ ಬೇಡಿಕೆ ಹೆಚ್ಚಾಯಿತು. ದಾವಣಗೆರೆ ಮತ್ತು ಹುಬ್ಬಳ್ಳಿಯಂಥ ಪ್ರದೇಶಗಳಲ್ಲಿ ನಾಟಕ ಪ್ರದರ್ಶನಕ್ಕೆ ಕಿಕ್ಕಿರಿದ ಜನಸ್ತೋಮ ಜಮಾಯಿಸುತ್ತಿದೆ. ಈಗ ಅಲ್ಲಿನ ಪ್ರೇಕ್ಷಕರು ಕಥಾವಸ್ತುವಿನ ಬಗ್ಗೆ ಪೂರ್ವ ಮಾಹಿತಿಯುಳ್ಳವರಾಗಿದ್ದಾರೆ. 'ಕಾಂತಾರ' ಸಿನಿಮಾದ ಮೂಲಕ ಅವರು ಗುಳಿಗ ದೈವದ ಹಿನ್ನೆಲೆಯ ಬಗ್ಗೆ ಹಾಗೂ ದೈವಾರಾಧನೆಯ ಬಗ್ಗೆ ಸಾಕಷ್ಟು ಮಾಹಿತಿ ಪಡೆದುಕೊಂಡವರಾಗಿದ್ದಾರೆ. ಸಿನಿಮಾ ತೆರೆಕಾಣುವ ಮುನ್ನ ಗುಳಿಗ ದೈವ ಅಥವಾ ಪಂಜುರ್ಲಿ ದೈವದ ಪರಿಕಲ್ಪನೆಯ ಬಗ್ಗೆ ವಿವರವಾದ ಹಿನ್ನೆಲೆ ಪರಿಚಯ ಕೊಟ್ಟರಷ್ಟೇ ಈ ನಾಟಕವು ಅವರಿಗೆ ಅರ್ಥವಾಗುತ್ತಿತ್ತು. ಅಷ್ಟೇ ಏಕೆ, ಪರಿಚಯಾತ್ಮಕ ಮಾಹಿತಿ ಕೊಟ್ಟಾಗ್ಯೂ ಅದನ್ನು ಹೊಸ ಪ್ರೇಕ್ಷಕವರ್ಗ ಸ್ವೀಕರಿಸುವುದು ತಕ್ಕಮಟ್ಟಿಗಷ್ಟೇ ಇತ್ತು. ಆದರೆ ಈಗ ದೈವಾರಾಧನೆಯ ಬಗ್ಗೆ ಸಾಕಷ್ಟು ಅರಿವುಳ್ಳ ಹೊಸ ಪ್ರೇಕ್ಷಕವರ್ಗವು 'ಶಿವದೂತೆ ಗುಳಿಗೆ' ಪ್ರದರ್ಶನವನ್ನು ಕಾಣಲು ದೊಡ್ಡ ಸಂಖ್ಯೆಯಲ್ಲಿ ಧಾವಿಸಿ ಬರುತ್ತಿದೆ' ಎನ್ನುತ್ತಾರೆ. ಅಂದಹಾಗೆ, ನಾಟಕವು ಈಗ ಮಲಯಾಳಂ ಭಾಷೆಗೆ ಡಬ್ ಆಗುತ್ತಿದೆ. ಹಿಂದಿ ಸೇರಿದಂತೆ ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಳ್ಳುವ ಪ್ರಯತ್ನ ಸಾಗಿದೆ.

ನಾಟಕದ ಸಂಭಾಷಣೆಗಳನ್ನು ಮೊದಲೇ ಧ್ವನಿಮುದ್ರಿಸಿ ಅಭಿನಯ ಮತ್ತು ತುಟಿಚಲನೆಯ ಮೂಲಕ ಸಂಭಾಷಣೆ ಹೇಳುವ ನಾಟಕ 'ಶಿವದೂತೆ ಗುಳಿಗೆ'. ಈಗಾಗಲೇ ರಾಜ್ಯದಾದ್ಯಂತ 450ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡ ನಾಟಕಕ್ಕಾಗಿ ಸ್ವರಾಜ್ ಶೆಟ್ಟಿ ಎಂಟು ಸಿನಿಮಾಗಳ ಅವಕಾಶಗಳನ್ನು ಬಿಟ್ಟುಕೊಟ್ಟಿದ್ದಾರೆ. ಮುಂದಿನ ಜನ್ಮದಲ್ಲಿ ಗುಳಿಗ ದೈವದ ಸೇವಕನಾಗಬೇಕೆಂದು ಹೇಳುವಷ್ಟು ಅವರು ವಿನೀತರು.

• ಎಂ.ಎಸ್.ಪೂಜಾರ

ಡಣ್ಣ ಚಕ್ಕು ಕೀಶ್ರುಷ್ಣು ಕಥೆಯ ಯಾರನ್ನು ಕಾಪಾಡೋಣ!

